ವಿಧೇಯಕದ ಮಂಡನೆ

ಶ್ರೀ ವಿನಯ್ ಕುಮರ್ ಸೊರಕೆ (ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, 2015ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಯಿತು.

(ಅನುಬಂಧ–3)

9. ವಿತ್ತೀಯ ಕಾರ್ಯಕಲಾಪಗಳು

2015–16ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ

ಉಪಾಧ್ಯಕ್ಷರು: ಮಾನ್ಯ ರಮೇಶ್ ಕುಮಾರ್‌ರವರೆ, ತಮ್ಮ ಮಾತನ್ನು ಮುಂದುವರೆಸಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ): ಮಾನ್ಯ ಉಪಾಧ್ಯಕ್ಷರೆ, Forest ದು ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಬೇಕು. ಸದನದಲ್ಲಿ ಅನೇಕ ಸಲ ಚರ್ಚೆ ಮಾಡಿದ್ದೇವೆ, ಉಗ್ರವಾಗಿ ಕೆಲವು ಟೀಕೆಗಳನ್ನು ಮಾಡಿದ್ದೇವೆ. ಸರಳವಾಗಿ ಅವರಿಗೆ ಹೇಳುವುದು ಇಷ್ಟೇ. ನಮಗೆ ಕಾಡಿನ ಬಗ್ಗೆ ಹೆಚ್ಚು ಪರಿಚಯವಿಲ್ಲ. ಇದ್ದಬದ್ದ ಕಾಡು ನಮ್ಮಲ್ಲಿ ಎಲ್ಲಾ ಹೊರಟು ಹೋಗಿದೆ. ನೀಲಗಿರಿ, Eucalyptus ವಿಚಾರಕ್ಕೆ ಒಂದು ಸಲ ಈ ಸದನದಲ್ಲಿ ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಮಾಡಿದರು. ಇದು ಸರ್ಕಾರದ ನೀತಿ. ನೀಲಗಿರಿ ಅಥವಾ Eucalyptus ಗೆ ನಾವು ಪ್ರೋತ್ಸಾಹ ಕೊಡುವುದಿಲ್ಲ. plantations ಮಾಡುವುದಿಲ್ಲವೆಂದು ಹೇಳಿದರು. ಅವರು ಹೇಳಿದ ಸ್ವಲ್ಪ ದಿವಸಕ್ಕೆ ನಮ್ಮಲ್ಲಿ Forest Plantation Corporation ದವರು ಬಂದರು. ಅವರು ಬಂದು ನಮ್ಮ ಜನರಿಗೆ ಮತ್ತು ಅವರಿಗೆ ಘರ್ಷಣೆ ಆಯಿತು. ಆಮೇಲೆ ಅವರು ಹೇಳುತ್ತಾರೆ, ನಾವು ಈಗಾಗಲೇ seedlingsನ್ನು raise ಮಾಡಿಬಿಟ್ಟಿದ್ದೇವೆ. ಇದನ್ನು ನಾವು ಏನು ಮಾಡುವುದು? ನಾವು ನೆಡಲೇಬೇಕು ಎಂದು ಹೇಳುತ್ತಾರೆ. ನಾನು ವಿವರಗಳಿಗೆ ಹೋಗುವುದಿಲ್ಲ. ಅದು ನಮಗೆ

ಸಹಾಯಕ ಅಲ್ಲ. ನಮಗೆ ಅದರಿಂದ ಹಾನಿಯಾಗಿದೆ ಎನ್ನುವುದು ಈಗಾಗಲೇ ವೈಜ್ಞಾನಿಕವಾಗಿ ಸಾಬೀತಾಗಿದೆ. ಮಂತ್ರಿಗಳು ಇಲ್ಲಿ ಒಂದು ಸಲ ಹೇಳಿಕೆಯನ್ನು ಮಾಡಿದ ಮೇಲೆ Forest Plantation Corporationನವರು seedlings ನ್ನು raise ಮಾಡುತ್ತಾರೆ. ನಮ್ಮದರಲ್ಲಿ ಮಾಡುವುದಕ್ಕೆ ಬರುತ್ತೇವೆ ಎಂದು ಹೇಳಿದರೆ, ಏನಿದರ ಅರ್ಥ? ಒಂದು ವರ್ಷಕ್ಕೆ ನಮ್ಮಲ್ಲಿ ಆಗಲಿ, ತಮ್ಮಲ್ಲಿ ಆಗಲಿ 720 ಮಿಲಿಮೀಟರ್ average ಮಳೆ ಬರುತ್ತಿತ್ತು. That itself was very low. ಈಗ ಕಳೆದ ಮೂರು–ನಾಲ್ಕು ವರ್ಷಗಳಿಂದ 300 ಮಿಲಿಮೀಟರ್‌ಗಿಂತಲೂ ಕೆಳಗೆ ಬಂದುಬಿಟ್ಟಿದ್ದೇವೆ. ನೀವು ಯಾವ ಕಡೆಗಾದರೂ ಪ್ರಯಾಣ ಮಾಡಿ ನೋಡಿ, ಗೌರಿಬಿದನೂರು ಕಡೆಗೆ ಪ್ರಯಾಣ ಮಾಡಿ, ಕೋಲಾರ ಕಡೆಗೆ ಪ್ರಯಾಣ ಮಾಡಿ, ಅಥವಾ ಚಿಂತಾಮಣಿ ರಸ್ತೆ ಕಡೆಗೆ ಪ್ರಯಾಣ ಮಾಡಿ. ಅಲ್ಲಲ್ಲಿ patchesನಲ್ಲಿ eucalyptus ಮಾತ್ರ ಎದ್ದು ನಿಂತಿದೆ. Droughtಗೆ ಅದು survive ಆಗುವಂಥ species ಅಥವಾ ಎಲ್ಲಾ ನೀರನ್ನು ಹೀರಿಕೊಂಡು drought ಅನ್ನು confirm ಮಾಡಿ ಅದು ಉಳಿದುಕೊಳ್ಳುತ್ತದೋ, ನಮಗೆ ಇನ್ನೂ ಗೊತ್ತಾಗಿಲ್ಲ. See, not being totally qualified, academically I cannot speak about it. ಒಟ್ಟು ಪರಿಣಾಮ ಏನಾಗಿದೆ? ನಮಗೆ ಹಾನಿಯಂತೂ ಆಗಿಲ್ಲ. ನಾವು private ನವರಿಗೆ ನೀಲಗಿರಿಯನ್ನು ಬೆಳೆಸಬೇಡಿ ಅಥವಾ ಬೆಳೆಸಬಾರದು ಎಂದು ಸರ್ಕಾರ ನಿಲುವು ತಳೆಯುವುದಕ್ಕೆ ಮೊದಲು ಸರ್ಕಾರದ ನೀತಿ ಸ್ಪಷ್ಟವಾಗಬೇಕು. ಎರಡನೆಯದಾಗಿ ಕೆರೆಗಳಲ್ಲಿ plantation ತರಹ ಆ ಜಾಲಿಯನ್ನು ಮಾಡಿಬಿಟ್ಟಿದ್ದಾರೆ. ಇದು indigenous specieನಾ, ಇದು ನಮ್ಮ ದೇಶೀಯ ತಳಿಯೇ? ಇದರಲ್ಲೇನಾದರೂ ಟಿಂಬರ್ ಬರುತ್ತದೆಯೇ? ಯಾವುದಾದರೂ ಬಹಳ ರುಚಿಕರವಾದಂಥ ಹಣ್ಣು ಏನಾದರೂ ಬಿಡುತ್ತದೆಯೇ? ಯಾರು ಇದನ್ನು ಕಂಡುಹಿಡಿಯುತ್ತಾರೆಂದು ನಮಗೆ ಗೊತ್ತಾಗುವುದೇ ಇಲ್ಲ. ಇವರು ಉಳಿದದ್ದಕ್ಕೆಲ್ಲಾ Supreme Court ದ್ದು ಹೇಳುತ್ತಾರಲ್ಲಾ, ಬಹಳ ನಿರ್ದಾಕ್ಷಿಣ್ಯವಾಗಿ move ಮಾಡುತ್ತಾರಲ್ಲಾ, ಈ species ತಂದು ನೆಡಬೇಕು ಎಂದು ಇವರಿಗೆ ಹೇಳಿದವರು ಯಾರು? ಕರ್ನಾಟಕದ ಜನ ಏನಾದರೂ ಹೋಗಿ ಇವರಿಗೆ ಮನವಿ ಕೊಟ್ಟು, ನಮಗೆ

ಇದರ ಅಗತ್ಯ ಇದೆ, ಬಂದು ನಮ್ಮ ಕೆರೆಗಳಲ್ಲಿ ಇದನ್ನು ನೆಡಿ ಎಂದು ಹೇಳಿದರೇ? ಅಥವಾ ನಮ್ಮ ಹಿಂದಿನ ಪಾಳೇಗಾರರು, ಮೈಸೂರು ಮಹಾರಾಜರು, ಈ ದೇಶವನ್ನು ಆಳಿದವರು, ಅವರೇನಾದರೂ will ಬರೆದು ಹೋಗಿದ್ದಾರೆಯೇ? ಮುಂದಕ್ಕೆ ಪ್ರಜಾ ಸರ್ಕಾರ ಬಂದರೆ forest department ನವರು ಕೆರೆಗಳಲ್ಲಿ ಈ ಜಾಲಿಗಿಡ ಬೆಳೆಸಿ ಎಂದು ಹೇಳಿದ್ದಾರೆಯೇ? ನಮ್ಮ ಕೆರೆಗಳ ಸ್ವರೂಪ ಸರ್ವನಾಶವಾಗಿ ಹೋಯಿತು. ಇದು ಇವರಿಗೆ ಏಕೆ ತೋಚುವುದಿಲ್ಲ? ಇವರಿಗೆ ಏಕೆ ಅನ್ನಿಸುವುದಿಲ್ಲ? ಒಂದು ಕಡೆಗೆ silt up ಆಗಿರುತ್ತದೆ. ಅದರ ಜೊತೆಗೆ ಜಾಲಿ ಬೆಳೆದಿರುತ್ತದೆ. ಅಂದರೆ ನಮ್ಮ ಕೆರೆಗಳನ್ನು ಅನುಪಯುಕ್ತವಾಗಿ ಮಾಡುವುದಕ್ಕೆ ಸಹಕಾರಿಯಾಗಿರುವಂಥ ನಿರ್ಣಯವನ್ನು ಇವರು ತೆಗೆದುಕೊಂಡರೆ, ನಮ್ಮಲ್ಲಿ environmental balances ಅನ್ನು ಕಾಪಾಡುವುದಕ್ಕೆ ಒಂದು ಇಲಾಖೆ ಇರಬೇಕಲ್ಲವೇ? ಅವರೇನು ಮಾಡುತ್ತಿದ್ದಾರೆ? ಅವರು ಅಲ್ಲಿ, ಇಲ್ಲಿ, ಸಣ್ಣ ಪುಟ್ಟ ಜನರಿಗೆ ನೋಟೀಸ್ ಕೊಟ್ಟು ಹೆದರಿಸುತ್ತಾರಲ್ಲಾ? ಒಂದು ಕೆರೆಯೊಳಗೆ ಜಾಲಿ ಗಿಡಗಳನ್ನು ಬೆಳೆಸಿ, ಆ ಕೆರೆಯನ್ನು out of utility ಮಾಡುವಂಥ stageಗೆ ತಂದಾಗ ಅಲ್ಲಿ ecological imbalance ಆಗುತ್ತದೆಂದು Department of Environment Science and Technologyನವರಿಗೆ ಗೊತ್ತಾಗುವುದಿಲ್ಲವೇ? They invoke the presence of the environmental conditions only when it is required by them. ಹೇಗೆ ಇದೆ? ಇವರನ್ನು ಯಾರು ಕೇಳುವುದು ಬೇಡವೇ? ನಾವಿಲ್ಲಿ ಮಾತನಾಡುತ್ತೇವೆ. Paper ನವರಿಗೆ ಎಷ್ಟು ವಿಷಯಗಳೆಂದು ಅಚ್ಚು ಹಾಕುವುದಕ್ಕೆ ಆಗುತ್ತದೆ? ಕೆಲವರು ಹಾಕುತ್ತಾರೆ, ಕೆಲವರು ಬಿಟ್ಟುಬಿಡುತ್ತಾರೆ. ನಮ್ಮ ಬಗ್ಗೆ contempt. ಆ Departmentನ Officers ಗೆ ನಮ್ಮನ್ನು ನೋಡಿದರೆ ಹೇಸಿಗೆ. ಕೇಶವಾನಂದಭಾರತಿ ಕೇಸಿನಲ್ಲಿ Supreme Court ನಲ್ಲಿ ಒಂದು injunction ಕೊಟ್ಟಿರುವುದು ಅಷ್ಟೇ. Main suit dispose off ಆಗೇ ಇಲ್ಲ. ಅದನ್ನೇ ಶಾಸನವೇ ಆಗಿಬಿಟ್ಟಿದೆ ಎನ್ನುವ ರೀತಿ ವ್ಯಾಖ್ಯಾನ ಮಾಡಿ, ನಾವು ಮಾತನಾಡಿದರೆ Supreme Court Bench ಅನ್ನೇ ತಂದು ನಮ್ಮ ಮುಂದೆ ಇಟ್ಟುಬಿಡುತ್ತಾರೆ. ಇಷ್ಟು ಚಿಕ್ಕ ವಿಚಾರ ಅವರಿಗೆ ಗೊತ್ತಾಗುವುದಿಲ್ಲವೇ?

ಈ Acacia ಆಗಲಿ, ಜಾಲಿಯಾಗಲಿ, eucalyptus ಆಗಲಿ, I am repeating this in this House for the second time or third time. ನಮ್ಮ ಗುಬ್ಬಚ್ಚಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ನೆರಳು ಆಗುವುದಿಲ್ಲ, ಹಣ್ಣು ಇಲ್ಲ, ಟಿಂಬರ್ ಅಲ್ಲ, ಇದನ್ನು ನೀವು ಯಾರಿಗೋಸ್ಕರ ಬೆಳೆಸಿದಿರಪ್ಪ? ಆಯಿತು, ಇದನ್ನು ಅಲ್ಲಿಗೆ ಬಿಟ್ಟುಬಿಡುತ್ತೇನೆ. ನಿಸರ್ಗದ ವರದಿಂದ ತನ್ನಷ್ಟಕ್ಕೆ ತಾನೇ ಇದ್ದಂಥ ದೊಡ್ಡ ಕಾಡುಗಳು ದಟ್ಟ ಮಲೆನಾಡು ಪ್ರದೇಶಗಳಲ್ಲಿ ಮತ್ತು ಪಶ್ಚಿಮ ಘಟ್ಟಗಳಲ್ಲಿ ಇದೆ. ನಾನು ಮೊನ್ನೆ ಯಾವುದೋ ಒಂದು ಕೆಲಸಕ್ಕೆ ಚಿಕ್ಕಮಗಳೂರು ಕಡೆಗೆ ಹೋಗಿದ್ದೆ. ಆಶ್ಚರ್ಯ ಆಗುತ್ತದೆ ಉಪಾಧ್ಯಕ್ಷರೆ, ಈಗ ಅಲ್ಲಿ plantations ನಲ್ಲಿ complete soft wood ನೆಡುತ್ತಿದ್ದಾರೆ. ತನ್ನಷ್ಟಕ್ಕೆ ತಾನೇ ಬೆಳೆದು ನಿಂತಿದ್ದ ವೃಕ್ಷಗಳು ಕೆಲವು ಬಿದ್ದುಹೋದವು, ಕೆಲವು ಕಡಿದುಬಿಟ್ಟಿದ್ದಾರೆ. ಇವರ contribution.

ಶ್ರೀ ಡಿ.ಎನ್. ಜೀವರಾಜ್: ರಮೇಶ್ ಕುಮಾರ್‌ರವರೇ ತಾವು ಹೇಳಿದಿರಿ, ಹಣ್ಣು, ಹೂವು ಇಲ್ಲವೆಂದು ಉಳಿದದ್ದು ಹೋಗಲಿ, ಈ ಕಾಡಿನಲ್ಲಿ ಇಂಬಳ ಇರುತ್ತಿತ್ತಲ್ಲ, ಈ ನೀಲಗಿರಿ ಮತ್ತು ಅಕೇಷಿಯ ಇದ್ದ ಕಡೆ ಆ ಇಂಬಳ ಕೂಡ ಬರುವುದಿಲ್ಲ. ಆ ಇಂಬಳ ಸಹಿತ ಇಲ್ಲ. ಈಗ Ayurvedic doctors ಇಂಬಳಗಳನ್ನು ಅವರ shop ನಲ್ಲಿ ಸಾಕಿಕೊಂಡಿದ್ದಾರೆ. ಕಾಲಿನಲ್ಲಿ ಗಾಯವಾದವರಿಗೆ, ಗ್ಯಾಂಗ್ರಿನ ಆದವರಿಗೆ ಆ ಇಂಬಳದಲ್ಲಿ ಕಚ್ಚಿಸಿಬಿಟ್ಟು ಆಮೇಲೆ ರಕ್ತ ತೆಗೆದು ಮತ್ತೆ ಅದನ್ನು ಡಬ್ಬಕ್ಕೆ ಹಾಕಿ ಇಡುತ್ತಾರೆ. ಈ ಪರಿಸ್ಥಿತಿ ಮಲೆನಾಡಿನಲ್ಲಿ ಬಂದಿದೆ. ನಮಗೆ ಈಗ ಇವರು ನೆಟ್ಟಿರುವ ಗಿಡದಿಂದ ಹಣ್ಣಿರಲಿ, ಹೂವಿರಲಿ, ಇಂಬಳ ಕೂಡ ಇಲ್ಲ.

ಶ್ರೀ ಬಿ.ಬಿ. ನಿಂಗಯ್ಯ: ಸರ್ ಇಂಬಳ ಅಂದರೆ ಜಿಗಣೆ, ಆ ಭಾಗದಲ್ಲಿ ಜಿಗಣೆಗೆ ಇಂಬಳ ಎಂದು ಕರೆಯುತ್ತಾರೆ. ಅದನ್ನು ಇವರು Ayurvedic treatment ನಲ್ಲಿ ಬಳಸುತ್ತಾರೆ.

ಶ್ರೀ ಸಿ.ಟಿ. ರವಿ: ನಮ್ಮ ಭಾಗ dry land ಅಲ್ಲ. ಬೀಜ ಉಗ್ಗಿದರೂ ಕೂಡ ಎಂಥ ಕಾಡುಮರಗಳಾದರೂ ಬೆಳೆಯುತ್ತವೆ. ಅಲ್ಲಿ ನೀಲಗಿರಿ ತಂದು last year ಸಹ KFD ಇಂದ plant ಮಾಡಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾವು ಕೆಲವು ಸಲ ಸದನದಲ್ಲಿ ಏನೇನೆಲ್ಲಾ ಚರ್ಚೆ ಮಾಡುತ್ತೇವೆ. ನಿನ್ನೆ forest minister ಅಲ್ಲಿ ಕುಳಿತಿದ್ದರು. ಈ ಕಡೆಯಿಂದ ಯಾವಗಲ್ ಮತ್ತು ಇನ್ನೂ ಕೆಲವರು friends ನಮ್ಮ ಹಾವೇರಿಯ ಶಿವಣ್ಣನವರು ಜಿಂಕೆ ಹಾವಳಿ ಹೆಚ್ಚಾಗಿದೆ, ಅದಕ್ಕೆ ವಿದ್ಯುತ್ ತಂತಿ ಬೇಲಿ ಹಾಕಿ ಎಂದು ಹೇಳುತ್ತಾರೆ. ಇದು ಮೇನಕಾಗಾಂಧಿಯವರಿಗೆ ಗೊತ್ತಾದರೆ ಏನು ಗತಿ? ಜಿಂಕೆಗಳು ಅವುಗಳ ಉತ್ಪತ್ತಿ ಹೆಚ್ಚು. Animal world ನಲ್ಲಿ reproduction rate ಬಹಳ fast. ಅಲ್ಲಿಗೆ ಇವರು ಜಿಂಕೆಗಳನ್ನು indirect ಆಗಿ ಕೊಲ್ಲಿ ಎಂದು ಹೇಳುತ್ತಿದ್ದಾರೆ. ಆಮೇಲೆ ಅದು ಬಹಳ delicate ಪ್ರಾಣಿ, ಅದನ್ನು shift ಮಾಡುವುದಕ್ಕೆ ಆಗುವುದಿಲ್ಲವೆಂದು ಮಂತ್ರಿಗಳು ಹೇಳುತ್ತಾರೆ. ಮಾಡಿ, ಗೌರಿಬಿದನೂರಿನಂಥ ಕಡೆಯಲ್ಲಿ deer park ಮಾಡಿ. ನಿಮ್ಮ ಜಾಗ ಖಾಲಿ ಇಟ್ಟುಕೊಂಡಿರುವಿರಲ್ಲ ನೀಲಗಿರಿ ನೆಡುವುದಕ್ಕೆ, ಅಲ್ಲಿ ಸ್ವಲ್ಪ ಹುಲ್ಲು ಬೆಳೆಸಿ ಅಲ್ಲಿ ಬಿಡಿ ಯಾರಿಗೂ ತೊಂದರೆಯಾಗುವುದಿಲ್ಲ, ಬೇಲಿ ಹಾಕಿಕೊಳ್ಳಿ, ಮಕ್ಕಳು ಹೋಗಿ ನೋಡಿ ಆನಂದಪಡುತ್ತಾರೆ. ಇವರಿಗೆ ಕೆಲವು unproductive things ಅನ್ನು chase ಮಾಡುವುದನ್ನು ಬಿಟ್ಟರೆ ಒಳ್ಳೆಯ ಆಲೋಚನೆಗಳೇ ಬರುವುದಿಲ್ಲ. ಇನ್ನು ನವಿಲುಗಳನ್ನು ಕೊಂದು ಹಾಕಿ ಎಂದು ಕೇಳುತ್ತಿಲ್ಲ. True, ನಮ್ಮ ಬೆಳೆ ತೆಗೆದುಹಾಕುವಾಗ ನಮಗೆ ದುಃಖವಾಗುತ್ತದೆ. ಪಾಪ ಅಲ್ಲಿ ಕೃಷಿಕರಾಗಿ ಅವರ ಬೆಳೆಗೆ ಹಾನಿಯಾಗುತ್ತಿದೆ. Sowing ಆಗಿ ಸ್ವಲ್ಪ ತೊಂದರೆಯಾದಾಗ ಅವರ ಕಷ್ಟ ನಮಗೆ ಅರ್ಥವಾಗುತ್ತದೆ. ನಾನು ಅದಕ್ಕೆ ಆಕ್ಷೇಪಣೆ ಮಾಡುತ್ತಿಲ್ಲ.

ಶ್ರೀ ಬಸವರಾಜ್ ನೀಲಪ್ಪ ಶಿವಣ್ಣನವರ್: ಮಾನ್ಯ ಹಿರಿಯ ಸದಸ್ಯರಾದಂಥ ರಮೇಶ್‌ಕುಮಾರ್‌ರವರು ವಿದ್ಯುತ್ ತಂತಿಯನ್ನು ಅಳವಡಿಸಿ ಎಂದು ಶಿವಣ್ಣನವರ್ ಅವರು ಹೇಳಿದ್ದರು ಎಂದು ಈಗ ಹೇಳಿದರು. ನಾನು ವಿದ್ಯುತ್ ತಂತಿ ಎಂದು ಹೇಳಿಲ್ಲ. ಬ್ಯಾಟರಿ ಚಾಲಿತ ತಂತಿ ಬೇಲಿ ಹಾಕಿಸಿ

ಎಂದು ಹೇಳಿದ್ದೇನೆ. ಅದರಿಂದ ಯಾರ ಪ್ರಾಣಕ್ಕೂ ಅಷ್ಟು ಅಪಾಯವಾಗುವುದಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಆಯಿತಪ್ಪ, ಯಾವುದಾದರೂ ಆಗಲಿ, ನಾವು ನಾಗರಹಾವನ್ನು ಕೊಂದುಬಿಡುವುದು, ನಾಗರಕಲ್ಲಿಗೆ ಹಾಲೆರೆಯುವುದು, ಜಿಂಕೆಯನ್ನು ಕೊಂದುಬಿಟ್ಟು, ಜಿಂಕೆಯನ್ನು ಪೂಜೆ ಮಾಡುವುದು. ಇದು ನಮ್ಮ ಸಂಸ್ಕೃತಿಯಲ್ಲಿಯೇ ಬಂದಿರತಕ್ಕಂಥ ದ್ವಂದ್ವದ ನಿಲುವು ಆಗಿದೆ. ಅದು ಬ್ಯಾಟರಿ ಆಗಬಹುದು, ಮತ್ತೊಂದು ಆಗಬಹುದು. ನಾನು ತಮಗೆ ಏನು ಹೇಳುತ್ತೇನೆ, ನಾನೂ ರೈತಾಪಿ, ನಿಮಗೆ ತೊಂದರೆಯಾಗುತ್ತಿರುವ ವಿಚಾರದಲ್ಲಿ ಎರಡು ಅಭಿಪ್ರಾಯ ಇಲ್ಲ. ಅದಕ್ಕೆ ಇವರು ಯೋಚನೆ ಮಾಡಬೇಕಲ್ಲವೇ? ಈ ಕೆಟ್ಟ ಕೆಟ್ಟ ಆಲೋಚನೆಗಳೆಲ್ಲಾ ಬರುತ್ತಲ್ಲಾ, ಅವುಗಳನ್ನು ಹೇಗೆ shift ಮಾಡಬೇಕೆಂಬುದರ ಬಗ್ಗೆ ಆಲೋಚನೆ ಮಾಡಬಹುದಲ್ಲವೇ? ಗುಂಡ್ಲುಪೇಟೆ ಹತ್ತಿರ ಬಂಡೀಪುರದಲ್ಲಿ ಅಷ್ಟು ದೊಡ್ಡ ಅಭಯಾರಣ್ಯ ಇದೆ, deer park ಇದೆ. ಒಂದೆರಡು damages ಆದರೂ ಕೂಡ ಅಲ್ಲಿಗೆ shift ಮಾಡಿ. ಹೇಗಿದ್ದರೂ ನೂರಾರು ಎಕರೆ ಜಾಗವನ್ನು ಅದಕ್ಕಾಗಿ ಮೀಸಲು ಇಟ್ಟಿದ್ದೀರಿ. They never think about that. ಮಲೆನಾಡು ಪಶ್ಚಿಮ ಘಟ್ಟಗಳಲ್ಲಿರತಕ್ಕಂಥ ನಮ್ಮ ಎಲ್ಲಾ ಸ್ನೇಹಿತರು ಅಲ್ಲಿದ್ದಾರೆ. ಇವರಲ್ಲಿ 30 ವರ್ಷದ ಕೆಳಗಡೆ ಇದ್ದ ಕಾಡು ಇವತ್ತು ಇದೆಯೇ? ಮಾನ್ಯ ರವಿಯವರೆ ಇಲ್ಲಿ ಕೇಳಿ. ನಿಮ್ಮ ಮಾತು ಇದ್ದೇ ಇರುತ್ತದೆ. 30 ವರ್ಷದ ಕೆಳಗೆ ನೀವು ಚಿಕ್ಕವರಾಗಿದ್ದಾಗ ನಿಮ್ಮ ಪಶ್ಚಿಮ ಘಟ್ಟದಲ್ಲಿ ಏನು ಕಾಡುಗಳಿದ್ದವು? ಅವು ಇವತ್ತಿನ ದಿವಸ ಇದೆಯೇ? ಈ ಕಾಡುಗಳನ್ನು ಯಾರು ಕಡಿದು ಹಾಕಿದ್ದು? ಮರಗಳು ತಾವಾಗಿ ತಾವು ಬಿದ್ದು ಹೋದವೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ): ಮಾನ್ಯ ರಮೇಶ್ ಕುಮಾರ್‌ರವರೆ, ನಮ್ಮ ಜಿಲ್ಲೆ on record 80% forest district ಆಗಿದೆ. 1992–93ರಿಂದ ಅರಣ್ಯ ಇಲಾಖೆಗೆ ವಿದೇಶದ ಯಾವ್ಯಾವುದೋ ಹಣ ಕೊಡುವುದಕ್ಕೆ ಪ್ರಾರಂಭ ಆದಮೇಲೆ ಅವತ್ತಿನಿಂದ ಇವರು ಅಕೇಶಿಯಾ, ನೀಲಗಿರಿ ಅಂತಹ ಗಿಡಗಳನ್ನು ನೆಟ್ಟು ಇವತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿ

ಪ್ರಾಣಿಗಳ ಮತ್ತು ಮನುಷ್ಯರ ನಡುವೆ ಸಂಘರ್ಷ ಇದೆಯಲ್ಲ, ನಮ್ಮ ಕೃಷಿ ಬೆಳೆಗಳನ್ನು ಯಾವುದನ್ನೂ ಇಟ್ಟುಕೊಳ್ಳಲು ಆಗದೆ, ಅವುಗಳೇ ತಿಂದುಕೊಂಡು ಹೋಗುತ್ತಿವೆ. ಏಕೆಂದರೆ, ಕಾಡಿನಲ್ಲಿ ಪೂರ್ಣ ಅಕೇಶಿಯಾ ಗಿಡಗಳಿವೆ. ಇವರು ಬೇಗನೆ ಬೆಳೆಯುತ್ತದೆ ಎಂದು ಅದನ್ನು ತಂದು ನೆಟ್ಟು, ಇವರು timber ಮಾಡಿಕೊಂಡು ಮಾರುತ್ತಿದ್ದಾರೆ ಹೊರತು ಅಲ್ಲಿ ಪ್ರಾಣಿಗಳ ಹಾವಳಿಯಿಂದ ನಮಗೆ ರಕ್ಷಣೆ ಇಲ್ಲದೆ ಇರುವ ಸ್ಥಿತಿಗೆ ಬಂದಿದ್ದೇವೆ. ಈ ರೀತಿ ಒಂದು ಅವೈಜ್ಞಾನಿಕವಾದ ರೀತಿಯಲ್ಲಿ ಕಾಡನ್ನು ಬೆಳೆಸುತ್ತಿದ್ದಾರೆ. ಮೊದಲಿನ original forest ಇಲ್ಲ. ಅದಂತೂ ಹೋಯಿತು. ಈಗ ಈ ರೀತಿ artificial forest ಗಳನ್ನು ಬೆಳೆಸುತ್ತಿದ್ದಾರೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ, ಈ ಮನೆಯ ಸದಸ್ಯರಾಗಿ, ಮಂತ್ರಿಗಳಾಗಿದ್ದ ಮಾನ್ಯ ಜಾಲಪ್ಪನವರು ಚಿಕ್ಕಮಗಳೂರಿನಲ್ಲಿ charcoal business ಮಾಡುತ್ತಿದ್ದರು. ಅವರು 1967ರಿಂದ 1972 ವರೆಗೆ ಚಿಕ್ಕಮಗಳೂರಿನಲ್ಲಿದ್ದರಂತೆ. ಅವರ ಮಗ ಹೇಳಿದರಿಂದ ಇದು ನನಗೆ ಗೊತ್ತು. Charcoal business ಎಂದರೆ, ಕಾಡಿಗೆ ಬೆಂಕಿ ಹಾಕುವುದು, auction ಮಾಡುವುದು, ಇದ್ದಿಲು ತೆಗೆದುಕೊಂಡು ಮಾರುವುದು. ಎಲ್ಲಿ ಕಾಡಿಗೆ ಬೆಂಕಿ ಹಾಕಿ, auction ಮಾಡಿ ಇದ್ದಿಲು ಮಾಡಿದರೋ ಅಲ್ಲೆಲ್ಲ ಇವರು teakನ್ನು ಹಾಕಿದ್ದಾರೆ. ನೀವು ನೀಲಗಿರಿ, teak, ಅಕೇಷಿಯಾಗಳಲ್ಲಿ ಬೆಲೆ ಮಾತ್ರ ವ್ಯತ್ಯಾಸ ಇದೆ. ಆದರೆ, ಇವೆಲ್ಲಾ ಒಂದೇ ಜಾತಿ. Teak ಕೆಳಗಡೆಯೂ ಬೇರೆ ಏನೂ ಬೆಳೆಯುವುದಿಲ್ಲ, ನೀಲಗಿರಿ ಕೆಳಗಡೆನೂ ಸಹ ಬೇರೆ ಏನೂ ಬೆಳೆಯುವುದಿಲ್ಲ. ದಟ್ಟವಾದಂಥ ಹುಲಿ ಅಭಯಾರಣ್ಯ ಇರುವಂಥ ಮುತ್ತೋಡಿಯಲ್ಲಿ ಈ ರೀತಿ ಕಾಡು ಬೆಳೆಸುವ ಯೋಜನೆಗಳನ್ನು ಮಾಡಲಾಗಿತ್ತು. ಸಹಜವಾಗಿ ಇದ್ದಂಥ ಅರಣ್ಯವನ್ನು ಸರ್ವನಾಶ ಮಾಡಿ, ಈ ರೀತಿ ಕೃತಕ ಅರಣ್ಯ ಬೆಳೆಸಿ, ಅದಕ್ಕೆ ಪುನಃ ಪ್ರತಿವರ್ಷ ಎಲ್ಲಾ ವಿಶ್ವಬ್ಯಾಂಕಿನಿಂದ ಹಿಡಿದು ಜಪಾನ್ ನೆರವಿನ ಯೋಜನೆಯಿಂದ ಹಿಡಿದು ಎಲ್ಲಾ ಅನುದಾನಗಳನ್ನು ತೆಗೆದುಕೊಂಡಿದ್ದಾರೆ.

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ): ಮಾನ್ಯ ರಮೇಶ್‌ಕುಮಾರ್‌ರವರೆ, dead end fall ಎಂದು ತೆಗೆಯುತ್ತಿದ್ದರು. Dead end fall ಎಂದರೆ, ಕಾಡಿನಲ್ಲಿ ಗಾಳಿ ಬಂದು ಬಿದ್ದು ಹೋದಂಥ ಮರಗಳು ಅವು, ಬಹಳ ದೊಡ್ಡ ದೊಡ್ಡ ಮರಗಳು, ಅದನ್ನು ಇಲಾಖೆಯವರೇ ತೆಗೆದುಕೊಂಡು ಬಂದು ಡಿಪೋ ಹಾಕಿ auction ಮಾಡುತ್ತಿದ್ದರು. ಈಗ ಹೊಸ ಪರಿಸರ ಯೋಜನೆ ಮಧ್ಯದಲ್ಲಿ dead end fall ಬಿದ್ದುಹೋಗಿರುವಂಥ ಮರಗಳನ್ನು ತೆಗೆಯಬಾರದು ಎಂದು ಮಾಡಿರುವುದರಿಂದ ಜೀವಂತ ಇರುವ ಮರಗಳನ್ನು ಕಡಿದು ತೆಗೆಯುವ ಸ್ಥಿತಿ ನಿರ್ಮಾಣ ಮಾಡಿ, ಕಾಡು ಹಾಳಾಗುವುದಕ್ಕೆ ಇನ್ನೊಂದು ಕಾರಣ ಆಗಿದ್ದು. ಆ dead end fall ಎನ್ನುವಂಥದ್ದನ್ನು ವಾಪಸ್ಸು ತೆಗೆದುಕೊಂಡು ಬರಬೇಕು, ಆ dead end fall ತರುವುದರಿಂದ ದೊಡ್ಡ ದೊಡ್ಡ ಮರಗಳಿಂದ ಸರ್ಕಾರಕ್ಕೆ ಹಣ ಆಗುತ್ತದೆ. ಮನೆ ಕಟ್ಟುವವರಿಗೆ ಮರವೂ ಆಗುತ್ತದೆ. ಅದನ್ನು ಕೂಡ ಕೈಬಿಟ್ಟಿದ್ದು ಇನ್ನೊಂದು ದುರಂತ ಆಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಜೀವರಾಜ್‌ರವರೆ, ನಾನು ಏನು ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆಂದರೆ, ಕಾಡು ನಿರ್ಮೂಲನ ಆಗುತ್ತಿದೆ. ನಿಸರ್ಗದ ವರದಿಂದ ದಟ್ಟವಾಗಿದ್ದ ಕಾಡು ಕಡಿಮೆ ಆಗುತ್ತಿದೆ. ಅದರ ಕಡೆಗೆ ಇವರ ಗಮನ ಇಲ್ಲವೇ?

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ): ಮಾನ್ಯ ಕುಮಾರ್‌ರವರೆ, 1985ರಲ್ಲಿ ನಾನು ಶಾಸಕನಾದಾಗ ದಿವಂತ ಪೂರ್ಣಚಂದ್ರ ತೇಜಸ್ವಿ ಅವರನ್ನು ಒಂದು ಸಲ ವನಮಹೋತ್ಸವಕ್ಕೆ ಕರೆದಿದ್ದೆ. ವೀರಪ್ಪನ್ ಕತ್ತರಿಸಿದ DCF, ಶ್ರೀನಿವಾಸ ಅವರ ಮೂಲಕ ಗಿಡ ನೆಡಸಬೇಕೆಂದು ಅವರನ್ನು ಕರೆಸಲು ತೀರ್ಮಾನಿಸಿ ನಾನು ಅವರನ್ನು ಬರಬೇಕೆಂದು ಕೇಳಿಕೊಂಡಾಗ, ಅವರು ನಾನು ಬರುವುದಿಲ್ಲ, ನಾನು ಬಂದರೆ ಬೈಯುತ್ತೇನೆ, ಆಮೇಲೆ ನೀನು ಬೇಸರ ಮಾಡಿಕೊಳ್ಳುತ್ತೀಯ ಎಂದು ಹೇಳಿದರು. ಅದಕ್ಕೆ ನಾನು ಇಲ್ಲ ಎಂದು ಹೇಳಿದ್ದೆ. DCF ಅವರು ಬಹಳ ಒಳ್ಳೆಯವರಾಗಿದ್ದರು. ಅದು ತಮಗೆ ಗೊತ್ತಿದೆ. ನಂತರ ಅವರು ಆ ಸಭೆಗೆ ಬಂದು ಗಿಡ ನೆಟ್ಟು ಮಾತನಾಡುವಾಗ ಈ ಅರಣ್ಯ ಇಲಾಖೆ ಎಂದು ಬೋರ್ಡ್ ಯಾವಾಗಿನಿಂದ ಬಂತೋ ಆಮೇಲೆ

ಅವ್ಯಾಹತವಾಗಿ ಅರಣ್ಯ ನಾಶ ಆಗುವುದಕ್ಕೆ ಪ್ರಾರಂಭ ಆಯಿತು ಎಂದು ಹೇಳಿದರು.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಮ್ಮ ಕಡೆ ಶ ಮತ್ತು ಸ, ನ ಮತ್ತು ಣ, ಅ ಮತ್ತು ಹ ಇವುಗಳಿಗೆ ಹೆಚ್ಚು ವ್ಯತ್ಯಾಸ ಗೊತ್ತಾಗುವುದಿಲ್ಲ. ಹಕ್ಕಿ ಹಾರುತ್ತಿದೆ ಎನ್ನುವುದಕ್ಕೆ ಅಕ್ಕಿ ಹಾರುತ್ತಿದೆ ಎಂದು, ಅಕ್ಕಿ ಬೆಂದಿಲ್ಲ ಎನ್ನುವುದಕ್ಕೆ ಹಕ್ಕಿ ಬೆಂದಿಲ್ಲ ಎಂದು ಹೇಳುತ್ತಾರೆ. ಹಾಗೆ ನಮ್ಮಲ್ಲಿ ಒಬ್ಬರು ಅರಣ್ಯಾಧಿಕಾರಿಗಳಿದ್ದರು. ಅವರು ನನಗೆ ಸಾರ್, ತಾವು ಒಣಮಹೋತ್ಸವಕ್ಕೆ ಬರಬೇಕು ಎನ್ನುತ್ತಿದ್ದರು. ನಾನು ಅವರಿಗೆ ನಾನು ಬರುತ್ತೇನೆ, ತಾವು ಮಾಡುವುದೇ ಅದೇ ಕೆಲಸ ಅಲ್ಲವೇ ಎನ್ನುತ್ತಿದ್ದೆ. ವನಮಹೋತ್ಸವ ಅಲ್ಲ, ಒಣಮಹೋತ್ಸವೇ. ಮಾನ್ಯ ಅಧ್ಯಕ್ಷರೆ, ಅವರ staffing pattern ಅನ್ನು ತರಿಸಿ ನೋಡಿ. Principal Chief Conservator of Forest, Additional Chief Principal Chief Conservator of Forest, Chief Conservator of Forest, ಆಮೇಲೆ Conservator of Forest ಅದು ಎಷ್ಟು ಜನರಿದ್ದಾರೋ ದೇವರಿಗೇ ಗೊತ್ತು. ಮಾನ್ಯ ಮುಖ್ಯಮಂತ್ರಿಗಳಿಗೆ ಐಡಿಯಾ ಇದೆಯೋ ಏನೋ ಗೊತ್ತಿಲ್ಲ. All India quota ನಮಗೆ ಏನು ನಿಗದಿ ಮಾಡಿದ್ದಾರೆ IFS officersದ್ದು, to my understanding, ನಮಗೆ allocate ಆಗಿರುವಂಥ strengthಗಿಂತ ಹೆಚ್ಚಿನ ಜನ ಇಲ್ಲಿ IFS officers ಇದ್ದಾರೆ. ಅವರು ಅರಣ್ಯದಲ್ಲಿ ಕೆಲಸ ಇಲ್ಲದೆ youth serviceಗೆ, sportsಗೆ, ಜಿಲ್ಲಾ ಪಂಚಾಯತ್ CEO ಹುದ್ದೆಗಳಿಗೆಲ್ಲಾ ಬರುತ್ತಿದ್ದಾರೆ. ಕೆಳಗಡೆ guard ಇದ್ದಾನಲ್ಲ, guard strength increase ಮಾಡುವುದರ ಕಡೆಗೆ ಇವರು ಗಮನ ಕೊಡಲಿಲ್ಲ. Foresters strength ಅನ್ನು increase ಮಾಡಬೇಕೆಂದು ಇವರು ಆಲೋಚನೆ ಮಾಡಲಿಲ್ಲ. ಇವರೇ ತಾನೇ ದೊಡ್ಡ ದೊಡ್ಡವರು DPAR ನಲ್ಲಿ ಕುಳಿತುಕೊಂಡು ತೀರ್ಮಾನವನ್ನು ಮಾಡುವುದು. Time Bound promotions, ನಾನು ACS ಹೇಗೆ ಆಗುವುದು? C.S. ಹೇಗೆ ಆಗುವುದು? Departmental head ಹೇಗೆ ಆಗಬೇಕು? ನಿವೃತ್ತಿ ಹೊಂದುವ ವೇಳೆಗೆ ನಾನು ಎಲ್ಲಿ reach ಆಗಬೇಕು? ಎಂದು ಇರುತ್ತಾರೆ. Retire ಆದ ಮೇಲೆ further ..., ನಾವು

ದಡ್ಡರು ನಾವು ಜಗಳ ಮಾಡಿಕೊಳ್ಳುತ್ತೇವೆ. ನಮ್ಮದೆಲ್ಲಾ ಹೊರಗೆ ಬರುತ್ತದೆ. ಇವರ ಗುಟ್ಟು ಈಚೆಗೆ ಬರುವುದಿಲ್ಲ. Did they ever apply their mind? Ground level, field level staff ಇರಬೇಕೆನ್ನುವ ಯೋಚನೆ ಮಾಡಿದ್ದಾರೆಯೇ? Field level staff ಸರಿಯಾಗಿ ಇದ್ದಿದ್ದರೆ ಮರಗಳ್ಳತನ ಆಗುತ್ತಿತ್ತಾ? ವಿಶೇಷವಾಗಿ ಕೇರಳದ ಬಾರ್ಡರ್‌ನಲ್ಲಿ, ನಾವು ಇಲ್ಲಿ ಕುಳಿತು ಒಂದು ರಾಜ್ಯದ ಬಗ್ಗೆ ಮಾತನಾಡುವುದು ತಪ್ಪಾಗುತ್ತದೆ. ಆ ಬಾರ್ಡರ್ ಎಂದು ನಾನು ಬಹಳ ಜಾಗರೂಕತೆಯಿಂದ ಹೇಳುತ್ತಿದ್ದೇನೆ. ಮಾನ್ಯ ಬೋಪಯ್ಯನವರು ಹೇಳಬೇಕು. ಕೊಡಗಿನ ಸಂಪತ್ತು ನಾಶ ಆಗಬೇಕಾದರೆ ಆ border ಕಾರಣ. ನಾನು ಆಂಧ್ರದ ಗಡಿ ಅಂಚಿನಲ್ಲಿರುವವನು.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ): ಅವರಿಗೆ ಸಂಬಳವನ್ನು ಕೊಡುವುದಿಲ್ಲ. 6–6 ತಿಂಗಳಿಗೆ ಸಂಬಳ ಕೊಡುತ್ತಾರೆ. ಅವರಿಗೆ ಹೊಟ್ಟೆಪಾಡು ಆಗಬೇಕಲ್ಲ. ಇವರು ಅವರ ಜೊತೆಗೆ ಸೇರಿಕೊಂಡು ಕಾಡಿನ ಮರಗಳನ್ನು ಸರ್ವನಾಶ ಮಾಡುತ್ತಿದ್ದಾರೆ. ಅರಣ್ಯ ಭವನದಿಂದ ಆ ಬಿಳಿ ಆನೆಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಿಬಿಡಿ. ಅವರು ಬಾರ್ಡರ್‌ನಲ್ಲಿ ಸ್ವಲ್ಪ ದಿವಸ ಇರಲಿ. ಆಗ ಅವರಿಗೆ ಕಷ್ಟ ಏನು ಎಂದು ಗೊತ್ತಾಗುತ್ತದೆ. ಅರಣ್ಯವನ್ನು ಹಿರಿಯರು ಬೆಳೆಸಿ ಇಟ್ಟಿದ್ದಾರೆ. ಅವುಗಳನ್ನು ಇವರು ನಾಶ ಮಾಡುವುದಕ್ಕೆ ಹೊರಟಿದ್ದಾರೆ. ಅರಣ್ಯ ನಾಶ ಆಗುವುದು ಜನರಿಂದ ಅಲ್ಲ, ಇವರಿಂದ, ಇವರ ಪಾಲಿಸಿಯಿಂದ. ನಾನು ಇದರ ಬಗ್ಗೆ ಮಾತನಾಡುವಾಗ ಮಾತನಾಡುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಾವು ಕೊಡಗು ಅಥವಾ ಉತ್ತರ ಕನ್ನಡ ಜಿಲ್ಲೆ ಅಥವಾ ಚಿಕ್ಕಮಗಳೂರಿಗೆ ಹೋದರೆ ನಮಗೆ ಕಾಶ್ಮೀರಕ್ಕೆ ಹೋಗಿದ್ದ ಹಾಗೆ ಅನ್ನಿಸುತ್ತಿತ್ತು. ಮರ ಬೆಳೆಸುವುದು ಇವರ ಉದ್ಯೋಗ ಅಲ್ಲ. ಮರ ಉಳಿಸುವುದು ಇವರ ಉದ್ಯೋಗ ಅಲ್ಲ. ರೈತರಿಗೆ ಅಪಾಯಕಾರಿ ತಳಿಗಳನ್ನು ತಂದು ಬೆಳೆಸುವುದು ಇವರ ಮೂಲ ಉದ್ದೇಶ. ಇದರ ಜೊತೆಗೆ ಇವರಿಗೆ ಸಂಬಂಧವಿಲ್ಲದ ಜಾಗಗಳಿಗೆ ಹೋಗುವುದು. ನಿನ್ನೆ ದಿವಸ ಮಾನ್ಯ ಉಪಾಧ್ಯಕ್ಷರೆ ತಾವು ಪೀಠದಲ್ಲಿ ಇದ್ದಿರಿ. 65 ವರ್ಷದಿಂದ ಅನುಭವದಲ್ಲಿರತಕ್ಕಂಥ Industrial Area Development Board ನವರು

acquire ಮಾಡಿಕೊಂಡು ಪರಿಹಾರ ಕೊಟ್ಟಿರತಕ್ಕಂತದ್ದು, ಸಾಗುವಳಿ ಚೀಟಿಗಳು, ಪಹಣಿಗಳು, mutation ಇರುವ ಜಾಗಕ್ಕೆ ಇದ್ದಕ್ಕಿದ್ದಂತೆ ಅರಣ್ಯ ಎಂದು ಬರುತ್ತಾರೆ. Task Force Committee ಎಂದು ತಲೆಕೆಟ್ಟಿ ಮಾಡಿದರಲ್ಲ, ಅವರು ಯಾವುದೋ ಒಂದು ರೆಕಾರ್ಡ್ ನೋಡುವುದು, ಹೆದರಿಸುವುದು, ಬಾಯಿಗೆ ಬಂದ ಹಾಗೆ ಅವಾಚ್ಯ ಶಬ್ಧಗಳಿಂದ ಅಧಿಕಾರಿಗಳನ್ನು ಬೈಯ್ಯುವುದು. ಅವರು ನಾನು ಹಿಂದೆ ಒಬ್ಬ ದೊಡ್ಡ ನಿವೃತ್ತ ಅಧಿಕಾರಿ ಎಂದು ಹೆದರಿಸುವುದು. ಆ ಹೆದರಿಕೆಗೆ ಕೆಳಗಿನ ಅಧಿಕಾರಿಗಳು ಸರಿಯೋ, ತಪ್ಪೋ ಇವರ ಕೈಯಲ್ಲಿ ಯಾರು ಬೈಯಿಸಿಕೊಳ್ಳುವುದು, ನಮಗೆ ತೊಂದರೆ ಆಗುತ್ತದೆ ಎಂದು ಆ ರೀತಿ ಮಾಡುತ್ತಾರೆ. ಎಲ್ಲಾ ಅರಣ್ಯವೇ. ವಿಧಾನಸೌಧ ಒಂದು forest ಎಂದು ಬರೆದಿಲ್ಲ. ನಮ್ಮ eviction ಮಾಡುವುದಕ್ಕೆ ಆಗುವುದಿಲ್ಲ. C and D class forest ಏನಿದೆ, ನಮ್ಮಲ್ಲಿ ಬಯಲುಸೀಮೆಯೊಳಗೆ, ತಾವು ಅಧ್ಯಕ್ಷ ಪೀಠದಲ್ಲಿ ಕುಳಿತಿರುವವರು ಹೇಳಬೇಕು, ನಿಮ್ಮಲ್ಲಿ ಎಷ್ಟು ಮರಗಳನ್ನು ಬೆಳೆಸಿದ್ದಾರೆಂದು. ಎಲ್ಲಿಯಾದರೂ ಒಂದು ಕಡೆಗೆ, you must be around 60, ನಿಮಗೆ 20 ವರ್ಷ ಇದ್ದಾಗ ನೆಟ್ಟಿದ್ದರೂ ಕೂಡ, ಅದಕ್ಕೀಗ 40 ವರ್ಷವಾಗಿರಬೇಕಲ್ಲವೇ? Evidence ಕಾಣಬೇಕಲ್ಲವೇ? ನೀವು 20 ವರ್ಷವಿದ್ದಾಗ ನೋಡಿದ ಮರಗಳು ಮಾಯವಾಗಿದೆಯೇ ಹೊರತು ಹೊಸದಾಗಿ ಬೆಳೆಸಿರುವುದನ್ನು ಏನಾದರೂ ಕಂಡಿದ್ದೀರಾ? ಇವರನ್ನು ನಾವು ಏತಕ್ಕಾಗಿ ಇಟ್ಟುಕೊಳ್ಳಬೇಕು? ಅವರ demandsನ್ನು ಏತಕ್ಕಾಗಿ pass ಮಾಡಬೇಕು? ಇವರಿಗೆ ಸಂಬಳ ಕೊಡುವುದು ಇವರನ್ನು ಸಾಕುವುದಕ್ಕಾ? ಇವರೆಲ್ಲಾ ನಮಗೇನಾದರೂ ನೆಂಟರೇ? ನಮ್ಮ ಅಪ್ಪಂದಿರು ಇವರಿಗೆ ಬಾಕಿ ಕೊಡಬೇಕಿತ್ತೇ? ಅದಕ್ಕಾಗಿ ಕ್ಯೂನಲ್ಲಿ ನಿಂತು ಓಟ್ ಹಾಕಿಸಿಕೊಂಡು ಇವರ demand ಅನ್ನು pass ಮಾಡುವುದಕ್ಕೆ ನಾವು ಇಲ್ಲಿಗೆ ಬಂದಿದೆವೆಯೇ? ನಮ್ಮ ಕೆರೆ ಹಾಳು ಮಾಡಿ, ನಮ್ಮ ಮರಗಳನ್ನು ತೆಗೆದು, ನಮ್ಮ ಬಾಳು ಹಾಳು ಮಾಡಿದ್ದಕ್ಕೆ ನಿಮಗೆ ಕೋಟ್ಯಂತರ ರೂ.ಗಳನ್ನು ಕೊಡುತ್ತಿದ್ದೇವೆ ಪಾಸ್ ಮಾಡಿಕೊಳ್ಳಿ ಎಂದು ಹೇಳುವುದಕ್ಕೆ ನಾವು ಇಲ್ಲಿಗೆ ಬಂದಿದ್ದೇವೆಯೇ? Why should we vote this demand? ಎಷ್ಟು hurt ಆಗುತ್ತದೆ? ನಮ್ಮ ವನ್ಯಜೀವಿ

ಹಾಳಾಯಿತು, ಪರಿಸರ ಹಾಳಾಯಿತು, ನಮ್ಮ ವನಸಂಪತ್ತು ಹೋಯಿತು. ಎಷ್ಟು ಮಳೆ ಬೀಳುತ್ತಿತ್ತು, ನಮಗೆ ಅಷ್ಟೇ ಸಾಕಾಗಿತ್ತು. ಅದನ್ನು remove ಮಾಡುವುದಕ್ಕೆ ಈಗ, ನಮ್ಮ ಕೆರೆಗಳಲ್ಲಿ ಇರತಕ್ಕಂತಹದ್ದು, ಈಗ ಇಲ್ಲಿಯೇ ಒಂದು ಶಾಸನ ಮಾಡಿದೆವು. ಒತ್ತುವರಿ ತೆರವುಗೊಳಿಸಬೇಕು, ಕೆರೆಗಳನ್ನೆಲ್ಲಾ ನಾವು ಪುನಶ್ಚೇತನಗೊಳಿಸಬೇಕು ಎಂದು ಶಾಸನ ಮಾಡಿದೆವು. ಆ Plantation remove ಮಾಡುವುದು ಯಾರು? Minor irrigation ನವರು ನಮ್ಮ ಹತ್ತಿರ ಹಣವಿಲ್ಲಪ್ಪ ನಾವು ಯಾವ ಬಜೆಟ್ ತರೋಣ ಎನ್ನುತ್ತಾರೆ. ಇವರಿಗೆ time ಕೊಟ್ಟಿದ್ದಾರೆ. ತಾವೂ ಸಹ ಮೀಟಿಂಗ್‌ನಲ್ಲಿ ಇದ್ದಿರಿ. The time is over. Remove ಮಾಡಿದ್ದಾರೆಯೇ? ಬೇರೆ ವಿಚಾರಗಳಿದ್ದರೆ ಅಂದರೆ publicity ತೆಗೆದುಕೊಳ್ಳುವುದರಲ್ಲಿ, ಜನರನ್ನು ಸಿಕ್ಕಿಹಾಕಿಸುವುದರಲ್ಲಿ, Supreme Court judgment cite ಮಾಡುವುದರಲ್ಲಿ ಇವರು ನಿಷ್ಣಾತರಿದ್ದಾರೆ. ಇವರ ಇಲಾಖೆಯಲ್ಲಿ ದೊಡ್ಡ ಅಧಿಕಾರಿಗಳಿದ್ದಾರಲ್ಲಾ, ಯಾರಾದರೂ ಇವರ ಜೀವಮಾನದಲ್ಲಿ ಎಂದಾದರೂ ಒಂದು ಗಿಡ ನೆಟ್ಟು ಇದು ನಾನು ನೆಟ್ಟ ಗಿಡವಪ್ಪ, ಇದು ಬೆಳೆದಿದೆ ನೋಡು ಎಂದು ಇವರಿಗೆ ಹೇಳಿಕೊಳ್ಳುವುದಕ್ಕೆ ಆಗುತ್ತದೆಯೇ? Forest ನಲ್ಲಿ ಎಷ್ಟು tourism activities ಮಾಡಬಹುದು? Middle class peopleಗೆ below middle class people ಗೆ ಬೇಸಿಗೆ ರಜೆ ಬರುತ್ತದೆ, ಹೀಗೆ ಬೇರೆ ಯಾವುದಾದರೂ ಸಮಯ ಸಂದರ್ಭ ಬರುತ್ತದೆ, ಸಣ್ಣ ಮಕ್ಕಳಿರುತ್ತಾರೆ, ದುಬಾರಿಯಾಗದಂತೆ ಅಲ್ಲಿ ಏನಾದರೂ ಒಂದು sports, activity ಇನ್ನೊಂದು, ಮತ್ತೊಂದು, ಒಂದು zoo ಮತ್ತೊಂದು ಮಾಡಿ ಅಲ್ಲಲ್ಲಿ ಮಾಡಿದರೆ ಹೇಗಿರುತ್ತದೆ? ನಾವು ಏನು ಸೌಭಾಗ್ಯ ಕೇಳುತ್ತೇವೆ ಹೇಳಿ. ಮಕ್ಕಳಿಗೆ ಆ remote, T.V., ಅದರಲ್ಲಿ ಆ ಹೊಲಸು ಬಿಟ್ಟುಬಿಟ್ಟರೆ ಏನಾದರೂ entertainment ಇದೆಯೇ? ನಾಟಕಗಳು ನಿಂತು ಹೋದವು, ಸರ್ಕಸ್ಸುಗಳು ಬರುವುದಿಲ್ಲ, ಸಿನಿಮಾಕ್ಕೆ ಹೋಗುವುದಕ್ಕೆ ಆಗುವುದಿಲ್ಲ. ಏನು ಹೇಳಿ? ಸಾಮಾನ್ಯ ಮನುಷ್ಯನಿಗೆ ಇಂತಹ entertainment ಇದೆಯಪ್ಪ, ಇವರು 10 ನಿಮಿಷ ಕುಟುಂಬದ ಜೊತೆಗೆ ನೆಮ್ಮದಿಯಾಗಿ ಕಾಲ ಕಳೆಯಬಹುದು ಎಂದು ಏನಾದರೂ ಇದೆಯೇ ಪುಟ್ಟಣ್ಣಯ್ಯನವರೆ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ನಾವು ಇದ್ದೀವಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಸತ್ಯ ಮಾತನಾಡಿದಿರಿ. ಇಲ್ಲಿ ಈ ಸದನಲ್ಲಿ ಲೂಷಿಂಗ್ ಟನ್ ಎಂಬುವವರು ಒಬ್ಬರು ಮಾರ್ಷಲ್ ಇದ್ದರು. ಅದಕ್ಕೆ ಪಿ.ವೆಂಕಟರಮಣರವರು ಅಧ್ಯಕ್ಷರಾಗಿದ್ದರು. ಅವರು ಒಳಗಡೆ ಬಂದಾಗ ಸನ್ಮಾನ್ಯ ಸಭಾಧ್ಯಕ್ಷರು ಎಂದು ಹೇಳಬೇಕಲ್ಲವೇ? ಆ ಲೂಷಿಂಗ್ ಟನ್‌ರವರಿಗೆ 'ಸಭಾಧ್ಯಕ್ಷರು' ಎಂದು ಹೇಳುವುದಕ್ಕೆ ಬರುತ್ತಿರಲಿಲ್ಲ. ಸನ್ಮಾನ್ಯ 'ಸಭಾ ಅದಕ್ಷರು' ಎಂದು ಹೇಳುತ್ತಿದ್ದರು. ಆಗ ಮಾನ್ಯ ಜೆ.ಹೆಚ್.ಪಟೇಲ್‌ರವರು, ಇವನು ಒಬ್ಬ ಈ ಅಸೆಂಬ್ಲಿಯಲ್ಲಿ ಸತ್ಯ ಹೇಳುತ್ತಾನೆ ಎಂದು ಹೇಳುತ್ತಿದ್ದರು. ನೀವು ಈಗ ನಾವು ಇದ್ದೀವಲ್ಲಾ ಎಂದರೆ, ನಾವು entertainment ಗೆ substitute ಆಗಿದ್ದೇವೆಯೇ?

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ರಮೇಶ್ ಕುಮಾರ್‌ರವರೆ, ಯಾರೋ foreigner ಒಬ್ಬರು ಆಟೋ ರಿಕ್ಷಾದಲ್ಲಿ ಕುಳಿತುಕೊಂಡು take me to Legis slaughters House ಎಂದರಂತೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನೋಡಿ, ಇವರಿಗೆ ಏನೋ ಬೆಂಗಳೂರಿನಲ್ಲಿ ಮನೆಯಿದೆ. ನಾವು ಅಲ್ಲಿ ಇರುವುದು. ಇವರು ಹೇಳಿದ commentary ಯಿಂದ ಇನ್ನು ನಾನು ಅಲ್ಲಿಗೆ ಹೋಗುವ ಆಗಿಲ್ಲ. ನಾನು ಈಗ I should make arrangements for another establishment now. C and D class ನಿಮ್ಮ ಕೈಯಲ್ಲಿ maintain ಮಾಡುವುದಕ್ಕೆ ಆಗುವುದಿಲ್ಲವೇ? ನಿಮಗೆ field staff ಇಲ್ಲವೇ? ಸಾಕಷ್ಟು ಜನರು youngsters ಇದ್ದಾರೆ, ಉತ್ಸಾಹಿಗಳಿದ್ದಾರೆ, ಕರೆಯಿರಿ, Ownership ನೀವೇ ಇಟ್ಟುಕೊಳ್ಳಿ. Lease ಗೆ ಕೊಡಿ, ಕಂಡೀಷನ್ಸ್ ಹಾಕಿ, ಇಂತಿಂಥ species ಬೆಳೆಯಬೇಕೆಂದು ಹೇಳ್ರಿ. ಆಗ forest ತಾನಾಗಿಯೇ ಬೆಳೆಯುತ್ತದೆ. ಮಂತ್ರಿಗಳು reply ಮಾಡುವಾಗ ಎಷ್ಟು ಕೋಟಿ ರೂಪಾಯಿಗಳು ಎಂದು ಒಂದು sentence ಆದರೂ ಹೇಳಬೇಕು. ವಿಶೇಷವಾಗಿ ಬಯಲುಸೀಮೆಯ ಕೋಲಾರ, ಚಿಕ್ಕಬಳ್ಳಾಪುರ, ಬಳ್ಳಾರಿ, ರಾಯಚೂರು, ಇಂತಹ dry lands ಭಾಗಗಳಲ್ಲಿ ನೀವು ಎಷ್ಟು ಕೋಟಿ

ರೂಪಾಯಿಗಳನ್ನು ಖರ್ಚು ಮಾಡಿ ಎಷ್ಟು ವನಸಂಪತ್ತನ್ನು ಬೆಳೆಸಿದ್ದೀರಿ ಎಂದು ಲೆಕ್ಕ ಕೊಡಬೇಕಲ್ಲವೇ? ಹಾಗಾದರೆ ಈ ಅಸೆಂಬ್ಲಿಯಲ್ಲಿ ಖರ್ಚು ಮಾಡುವುದಕ್ಕೆ ಮಾತ್ರ ನಮ್ಮ ವೋಟ್ ಬೇಕು, ಲೆಕ್ಕ ತೆಗೆದುಕೊಳ್ಳುವುದಕ್ಕೆ ನಮಗೆ ಅರ್ಹತೆಯಿಲ್ಲವೇ? ಈ C & D class, ಈ Range Forest Officers ಗೆ demand ಎಲ್ಲಿ ಜಾಸ್ತಿಯೆಂದರೆ, ಕಾಡುಗಳು ಇರುವ ಕಡೆಗಳಲ್ಲಿ ಅಲ್ಲ, ಈ ಕಡೆಗೇ ಅವರಿಗೆ ಹೆಚ್ಚು ಡಿಮ್ಯಾಂಡ್‌ಯಿದೆ. ಮಾನ್ಯ ರಮಾನಾಥ ರೈರವರು individually, he is a very honest man. I compliment him. ವರ್ಗಾವರ್ಗಿ, ಇನ್ನೊಂದು, ಮತ್ತೊಂದು ಇಂತಹದ್ದರಲ್ಲಿ ಕಚಡಾ ಕೆಲಸ ಮಾಡುವಂತಹ ಮನುಷ್ಯನಲ್ಲ, ಬಹಳ ಪ್ರಾಮಾಣಿಕ. ಆದರೆ, ಅವರಿಗೆ ಓಡಾಡುವುದಕ್ಕೆ ಆಗುತ್ತಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಇದಕ್ಕಿಂತ ಅಪಾಯಕಾರಿ. ಪ್ರಾಮಾಣಿಕ ಎಂದು ಹೇಳಿದರೆ ಅದಕ್ಕಿಂತ ಅಪಾಯಕಾರಿ. . ..

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್: ನನಗೆ ಕೆಲವೇ ಹೇಳುವುದಕ್ಕೆ ಬರುವುದು. ಇನನು ಕೆಲವು ಹೇಳುವುದಕ್ಕೆ ಬರುವುದಿಲ್ಲ. ಅದನ್ನು ಅವರು ಯಾರಾದರೂ ಹೇಳಿದಾಗ ನಾನು ಒಪ್ಪಿಕೊಳ್ಳುತ್ತೇನೆ. ನಿಮ್ಮ ಪ್ರಾಮಾಣಿಕತೆಯ ಪ್ರಯೋಜನ ನೀವು ಒಂದು ಅಧಿಕಾರ ಸ್ಥಾನದಲ್ಲಿದ್ದಾಗ ರಾಜ್ಯಕ್ಕೆ ಮುಟ್ಟಬೇಕಲ್ಲವೇ? ವರ್ಗಾವರ್ಗಿಗೆ ದುಡ್ಡು ತೆಗೆದುಕೊಳ್ಳುವ ಮಂತ್ರಿ ಇರುವುದಕ್ಕಿಂತಲೂ you are better. ನಾವು ಒಪ್ಪುತ್ತೇವೆ, ಸಂತೋಷಪಡುತ್ತೇವೆ. ಆದರೆ, ಕಾಡನ್ನು ಬೆಳೆಸುವ ವಿಚಾರದಲ್ಲಿ, ಸಂರಕ್ಷಣೆ ಮಾಡುವ ವಿಚಾರದಲ್ಲಿ I think, we are not very happy. Home department ವಿಚಾರಕ್ಕೆ ಸಂಬಂಧಿಸಿದಂತೆ ನಾಲ್ಕೈದು ಸಲಹೆಗಳಿವೆ. Crime rate ಹೆಚ್ಚಾಗಿಲ್ಲ. communal clashes ಆಗಿಲ್ಲ. ಹೆಚ್ಚು firing ಆಗಿಲ್ಲ. ನಿಜವಾಗಲೂ we compliment the Government. ಆದರೆ, ಇವು ಆದರೆ

ಮಾತ್ರ Law and Order ಕೆಟ್ಟಿದೆ ಎಂದು ಏನೂ ಅಲ್ಲ. ಇವೆಲ್ಲಾ ಆಗದೇನೂ ಕೂಡ Law and Order ಕೆಡಬಹುದು. ತಪ್ಪು ಮಾಡತಕ್ಕಂತಹವನಿಗೆ ಭಯವಿಲ್ಲದೇ ಇರತಕ್ಕಂತಹ ವಾತಾವರಣ ಸಮಾಜದಲ್ಲಿದ್ದಾಗ, ಅದಕ್ಕಿಂತಲೂ ಬೇರೆ material evidence, all is not well ಎನ್ನುವುದಕ್ಕೆ ಬೇಕಾಗಿಲ್ಲ, ಎಷ್ಟು Departments ಇವೆ? Narcoticsಗೇ ಒಂದು, ಆಮೇಲೆ internal securityಗೇ ಒಂದು, ಬೆಂಕಿ ಬಿದ್ದರೆ ನಂದಿಸುವುದಕ್ಕೆ ಒಂದು ಇಲಾಖೆ, ಪೋಲೀಸ್‌ನವರಿಗೆ ಮನೆ ಕಟ್ಟುವುದಕ್ಕೆ ಮತ್ತೊಂದು, ಈ ಮಾಮೂಲಿ ತಪ್ಪುಗಳಲ್ಲದೇ extra ತಪ್ಪುಗಳನ್ನು ಮಾಡಿದರೆ ನಾವೆಲ್ಲಾ ಗಲಾಟೆ ಮಾಡಿದರೆ, ಒಪ್ಪಿಸಿ ನೋಡುವುದಕ್ಕೆ COD ಒಂದು, ಆಮೇಲೆ Director General ಒಬ್ಬರು. ಅಲ್ಲಿಯೂ ಅಷ್ಟೇ. Forest ನಲ್ಲಿ ಇದ್ದಹಾಗೆ. ಒಬ್ಬ IG ಇರುತ್ತಿದ್ದ, ಈಗ IG ಗಳು ಹೋಗಿ, DG ಗಳಾಗಿ, ADG ಗಳಾಗಿ, ಲೋಕಾಯುಕ್ತಕ್ಕೆ ಒಬ್ಬರು, ಇನ್ನೊಂದು ಕಡೆಗೆ ಒಬ್ಬರು, ಇವರೆಲ್ಲರೂ ಸೇರಿ ಬೆಂಗಳೂರಿನಲ್ಲಿ traffic ಅನ್ನು ಕೂಡ ಇನ್ನೂ streamline ಮಾಡುವುದಕ್ಕಾಗಿಲ್ಲ. ಬೇರೆ ಎಲ್ಲಾ ಕಡೆಗಳಲ್ಲಿ ಬಿಟ್ಟುಬಿಡಿ. ಇವರೂ ಕೂಡ ಅಷ್ಟೇ ಬಹಳ ಜಾಗೃತರು. Police Housing Corporation ಇದೆಯೆಲ್ಲಾ, ಕೆಳಗಿನ ಹಂತದಲ್ಲಿರತಕ್ಕಂತಹ Police personnel, Constables, Head Constables and ASI ಗಳಿದ್ದಾರಲ್ಲಾ, ಅವರಿಗೆ ರಾಜ್ಯದ ಎಲ್ಲಾ ಕಡೆಗೆ ಕನಿಷ್ಠ Housing facility ಕೊಟ್ಟಿದ್ದಾರೆಯೇ? ಕೊಡುವುದಕ್ಕೆ ಆಗದೇ ಇದ್ದ ಮೇಲೆ ಕಾರ್ಪೊರೇಷನ್ ಏಕೆ? ಕೆಲಸಕ್ಕೆ ಬಾರದವನನ್ನು, influence ಇರದವನನ್ನು ಅಲ್ಲಿ ತೆಗೆದುಕೊಂಡು ಹಾಕುವುದಕ್ಕೆ ಇದೆ, ಅಷ್ಟೇ ತಾನೆ? See postings ನಲ್ಲಿ crime postings, un-wanted postings ಎಂದು ಇರುವವರೆಗೆ whether the incumbent in the office is corrupt or not; whether he is short of integrity or not is a different thing. The very creation of such posts or creation of that atmosphere itself is a very serious reflection. ಈಗ ಮೀಟರ್ ಬಡ್ಡಿ ವಿಚಾರ. I compliment the Hon'ble Chief Minister ಕೇವಲ ಕೆಟ್ಟದ್ದನ್ನೇ ಹೇಳುತ್ತಿದ್ದರೆ ಅವರಿಗೂ ಬೇಸರವಾಗುತ್ತದೆ. ಇವನು ಯಾವ ರೀತಿಯ ಸ್ನೇಹಿತನಪ್ಪ ಎಂದು

ತಿಳಿದುಕೊಳ್ಳುತ್ತಾರೆ. ಎರಡು ಒಳ್ಳೆಯ ಮಾತುಗಳನ್ನೂ ಹೇಳಬೇಕಲ್ಲವೇ? ಏಕೆಂದರೆ, ಅವರು ಎದ್ದು ಹೋಗದೇ ಇನ್ನೂ ಸ್ವಲ್ಪ ಹೊತ್ತು ಕುಳಿತುಕೊಂಡಿರಬೇಕು. ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆದರೆ, ನಿಮ್ಮ ಪೊಲೀಸ್ ಆಫೀಸರ್ಸ್‌ಗೆ down the line, ಮಾನ್ಯ ಅಶೋಕ್‌ರವರೆ, ಯಾರ್‍ಯಾರು ಮೀಟರ್ ಬಡ್ಡಿ ಮಾಡುವವರು ಎಂದು ಅಂದಾಜಿರುವುದಿಲ್ಲವೇ? You were also in that Department. ಮಾನ್ಯ ಉಪಾಧ್ಯಕ್ಷರೆ, ಅವರಿಗೆ ಇಷ್ಟೇ. ಭಾರತ ದೇಶದ ಮೇಲ್ಕೈ ಲಕ್ಷಣಗಳು ಯಾವ್ಯಾವು? ಪೂರ್ವದಲ್ಲಿ ಏನಿದೆ? ಪಶ್ಚಿಮದಲ್ಲಿ ಏನಿದೆ? ಉತ್ತರದಲ್ಲಿ ಏನಿದೆ? ದಕ್ಷಿಣದಲ್ಲಿ ಏನಿದೆ? ರೌಡಿಗಳು ಮೀಟರ್ ಬಡ್ಡಿ ಕಲೆಕ್ಟ್ ಮಾಡತಕ್ಕಂತಹವರು ಹೇಗಿರುತ್ತಾರೆ? ದಪ್ಪಗೆ ಇರುತ್ತಾರೆ, ಹೊಟ್ಟೆ ಬಿಟ್ಟುಕೊಂಡಿರುತ್ತಾರೆ, ಉಗುರುಗಳಿಗೆ ಹುಲಿ ಉಗುರುಗಳನ್ನು ನೇತಾಕಿಕೊಂಡಿರುತ್ತಾರೆ, ಬಟನ್ ಎಲ್ಲಾ ಬಿಟ್ಟುಕೊಂಡಿರುತ್ತಾರೆ, side buns ಮುಖದ ಮೇಲೆ ಇಟ್ಟಿರುತ್ತಾರೆ, ವಿಭೂತಿ ಹಚ್ಚಿರುತ್ತಾರೆ, ದಪ್ಪವಾದ ಮೂರು ಚೈನ್‌ಗಳನ್ನು ಹಾಕಿರುತ್ತಾರೆ, ಬಲಗಡೆ ಕೈಯಲ್ಲಿ ದೇವರಿಗೆ ಪೂಜೆ ಮಾಡಿರುವ ಹಗ್ಗ ಕಟ್ಟಿರುತ್ತಾರೆ. ಈ ಕಡೆಗೆ ಬಂಗಾರದ ಕಡಗ ಹಾಕಿರುತ್ತಾರೆ, ಇಡೀ ರಾಜ್ಯವೇ ನಮ್ಮದು ಎನ್ನುವ ರೀತಿ ಅವರು ಹೀಗೆ ಬರುತ್ತಾರೆ. ಒಂದು ಅಂದಾಜಿನ ಮೇಲೆ ಅಂತಹವರು ಎಷ್ಟು ಜನ ಇದ್ದಾರೆಂದು ಹುಡುಕಿದರೆ ಲಿಸ್ಟ್ ಸಿಕ್ಕಿಬಿಡುತ್ತದೆ. ನನ್ನ ಕರ್ಮ ನಾನು ಪೊಲೀಸ್ ಇಲಾಖೆಗೆ ಹೋಗಬೇಕಾಗಿತ್ತು, ಇಲ್ಲಿಗೆ ಬಂದುಬಿಟ್ಟೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಇಷ್ಟು ಕರಾರುವಕ್ಕಾಗಿ ಹೇಳುತ್ತಿದ್ದೀರಲ್ಲ, ಈ ತರಹದ ಗುಣ ಲಕ್ಷಣಗಳಿರುವುದು ನಿಮಗೆ ಹೇಗೆ ಗೊತ್ತಾಯಿತು?

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾನು ನಿಮ್ಮ ಆತ್ಮೀಯ ಸ್ನೇಹಿತ. ಕಾರಣವನ್ನು ಬೇರೆ ಹೇಳಿ ನಿಮಗೆ ಅಪಮಾನ ಮಾಡುವುದಕ್ಕಾಗುತ್ತದೆಯೇ?

ಶ್ರೀ ಡಿ.ಎನ್. ಜೀವರಾಜ್: ನೀವು ಹೇಳಿದ್ದು ಕರಾರುವಕ್ಕು ಎಂದು ಪುಟ್ಟಣ್ಣಯ್ಯನವರಿಗೆ ಗೊತ್ತಾಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮೊದಲಿಗೆ rogues gallery ಎಂದು ಇರುತ್ತಿತ್ತು. ಪ್ರತಿ ಸ್ಟೇಷನ್‌ನಲ್ಲಿ ಅಲ್ಲಿರುವಂತಹ ವಿಧವಿಧವಾದ ಅಪರಾಧಗಳನ್ನು ಮಾಡುವಂತಹ ಅಪರಾಧಿಗಳ ಫೋಟೋ ಇರುತ್ತಿತ್ತು. ಒಬ್ಬ Sub Inspector or Inspector ತನ್ನ ವರ್ಗಾವಣೆ ಆಗಿ next ಬರುವಂತಹವರಿಗೆ ಚಾರ್ಜ್ ಕೊಟ್ಟು ಹೋಗಬೇಕಾದರೆ, ಎಲ್ಲವನ್ನೂ hand over ಮಾಡಿ, pick pocket ಮಾಡುವವರು ಇಂತಹವರು, eve-teasing ಮಾಡುವವರು ಇಂತಹವರು, labour leaders ಇಂತಹವರು, student leaders ಇಂತಹವರು, ಬಡ್ಡಿ ವ್ಯಾಪಾರ ಮಾಡುವವರು ಇಂತಹವರು ಎಂದು ಹೇಳಿ ಹೋಗುತ್ತಿದ್ದ. ಈಗಿನವರು ಏನು ಪಟ್ಟಿ ಕೊಡುತ್ತಾರೆಂದು ಗೊತ್ತೇ? ಬಸ್‌ಗಳಲ್ಲಿ, ಹೋಟೆಲ್‌ಗಳಲ್ಲಿ, ಲಾಟರಿಗಳಲ್ಲಿ, ವೇಶ್ಯಾವಾಟಿಗೆ ನಡೆಸುವವರಿಂದ ಎಷ್ಟು ಬರುತ್ತದೆಂದು ಹೇಳಿ ಹೋಗುತ್ತಾರೆ. ಇವೆಲ್ಲಾ ನಡೆಯುತ್ತಿಲ್ಲವೇ? ನಿಂತು ಹೋಗಿದೆಯೇ? Then how are you running a good stay? Again ಇಲ್ಲೂ ಕೂಡ same question. When it comes to the last man in the field, we have not done justice. ಪೊಲೀಸ್ ಸಿಬ್ಬಂದಿಗಳಿಗೆ ಆರೋಗ್ಯ ಭಾಗ್ಯವೆಂಬ ಸ್ಕೀಮ್ ಇಟ್ಟಿದ್ದಾರೆ. ಕೆಲವು ಖಾಸಗಿ ಆಸ್ಪತ್ರೆಗಳಿಗೆ ನಾವು ಹಣ ತುಂಬಿಲ್ಲ. ಅವರು ನಿಮ್ಮ ಇಲಾಖೆಯಿಂದ ಹಣ ಬಂದಿಲ್ಲ, ನಿಮಗೆ ಟ್ರೀಟ್‌ಮೆಂಟ್ ಕೊಡುವುದಿಲ್ಲವೆಂದು ವಾಪಸ್ಸು ಕಳುಹಿಸುತ್ತಿದ್ದಾರೆ. Suppose, DG ರವರ ಮನೆಯಲ್ಲಿ ಯಾರಾದರೂ ಖಾಯಿಲೆ ಬಿದ್ದಾಗ no, no we don't treat you ಎಂದು ಖಾಸಗಿ ಆಸ್ಪತ್ರೆಯಲ್ಲಿ ಹೇಳಿದರೆ DG ಗೆ ಹೇಗೆ ಅನ್ನಿಸಬಹುದು? ಅಥವಾ ಚಾರ್ಜ್ ಸಾಹೇಬ್ರಿಗೆ ಹೇಳಿದರೆ ಏನನ್ನಿಸಬಹುದು? ಹಾಗಾದರೆ ನಮ್ಮದೊಂದು ಬದುಕು, ಅವರದೊಂದು ಬದುಕೇ? is it fair? ಇದು ಹೇಗೆ? ಅವರಿಗೆ ಮನೆ ಕೊಡುವುದಿಲ್ಲ, ಆರೋಗ್ಯ ಭಾಗ್ಯ ಅವರಿಗೆ ಸೇರುವುದಿಲ್ಲ. In-service ನಲ್ಲಿದ್ದಾರೆ, ಕಾನ್ಸಟೇಬಲ್‌ಗಳನ್ನು recruitment ಮಾಡಿದಾಗ ಅವನು post graduate ಆಗಿರುತ್ತಾನೆ ಯಾವುದೋ ಒಂದು ಕೆಲಸ ಸಿಕ್ಕಿದರೆ ಸಾಕೆಂದು ಪರೀಕ್ಷೆ ಪಾಸ್ ಮಾಡಿ ಆತ ಕೆಲಸಕ್ಕೆ ಬರುತ್ತಾನೆ. 10 ವರ್ಷಗಳ ಕಾಲ service ಮಾಡಿದ್ದಾನೆ, otherwise he has all the entitlement to be a

Sub Inspector, Civil Sub Inspector. 10 ವರ್ಷ ಸರ್ವೀಸ್ ಆದ ನಂತರ in-service ನಲ್ಲಿ written exam ಬರೆದು ಅವರು ಬರಬಹುದು, ಅವರಿಗೆ ಇಷ್ಟು ಕೋಟಾ ಎಂದು ಇಡಬೇಕು. Chief Minister is very generous. On the file ಇವರು approve ಮಾಡಿದ್ದಾರೆ. Chief Minister approve ಮಾಡಿದ ನಂತರ ಕೂಡಾ that is not being enforced. ಈಗ recruitmentಗೆ ಅದನ್ನು ಬಿಟ್ಟು ಹೋಗುವುದಕ್ಕೆ ತಯಾರಾಗಿದ್ದಾರೆ. Then, why should the Chief Minister endorse? Civil Sub Inspector ಗಳನ್ನು ನೇಮಕ ಮಾಡಿಕೊಳ್ಳುವಾಗ 10 ವರ್ಷ ಇಲಾಖೆಯಲ್ಲಿದ್ದು ಎಲ್ಲಾ ಅರ್ಹತೆಯಿದ್ದು, ಕಾನ್ಸ್‌ಟೇಬಲ್ ಲೇವಲ್‌ನಿಂದ ಕೆಲಸ ಮಾಡಿ ಅನುಭವವಿದ್ದಂತವನು ದೇಹದಾರ್ಡ್ಯತೆ ಇದ್ದು, ಯೋಗ್ಯತೆಯಿದ್ದವನು ಕೂಡ ಟೆಸ್ಟ್ ಬರೆಯಲೇಬೇಕು. ನೀವೇನು ಹಾಗೇ Sub Inspector ಎಂದು ಹೇಳಿ ಸ್ಟಾರ್ ಕೊಡುವುದಿಲ್ಲ. ಅವರಿಗೆ ಸ್ವಲ್ಪ ಮೀಸಲಾತಿ ಇಡುತ್ತಿಲ್ಲ, ಅಶೋಕ್, is it fair or unfair? ನಿಮ್ಮ ಮನಸ್ಸಿನಲ್ಲಿದೆ, ನೀವು fair ಎಂದು ಹೇಳುತ್ತಿರೆಂದು ಮುಖ್ಯಮಂತ್ರಿಗಳಿಗೆ ಗೊತ್ತು, ಅವರು approve ಮಾಡಿದ್ದಾರೆ. ಅವರ ದೌರ್ಭಾಗ್ಯ enforce ಆಗಲೇ ಇಲ್ಲ. Recruitment ನಲ್ಲಿ ಅವರಿಗೆ ಈ ರೀತಿ ಅನ್ಯಾಯ, ಆರೋಗ್ಯ ಭಾಗ್ಯದಲ್ಲಿ ಆ ರೀತಿ ತೊಂದರೆ, ಹೌಸಿಂಗ್ ಇರುವುದಿಲ್ಲ. ಗಲಾಟೆ ಆದರೆ DG, IG ರವರು ಬರುವುದಿಲ್ಲ. ನಾವು ಕಲ್ಲು ಬಿಸಾಡಿದರೆ ಹೊಡೆತ ತಿನ್ನುವವರು ಕಾನ್ಸ್‌ಟೇಬಲ್‌ಗಳು, ಲಾಠಿ ಚಾರ್ಜ್‌ಗೆ order ಮಾಡಿದರೆ ಬರುವವರು ಕಾನ್ಸ್‌ಟೇಬಲ್‌ಗಳು.

ಶ್ರೀ ಸಿ.ಟಿ. ರವಿ: ಮಾನ್ಯ ಉಪಾಧ್ಯಕ್ಷರೆ, ಅಧಿಕಾರಿಗಳ ಮನೆಯ ಅಡಿಗೆಗಳ, ಬಟ್ಟೆ ತೊಳೆಯುವುದಕ್ಕೆ ಎಲ್ಲದಕ್ಕೂ 8–10 ಜನರನ್ನು ನಿಯುಕ್ತಿ ಮಾಡಿಕೊಂಡಿರುತ್ತಾರೆ. ಇವತ್ತು 20 ಜನರವರೆಗೂ ನಿಯುಕ್ತಿ ಮಾಡಿಕೊಂಡಿರುತ್ತಾರೆ. ಪೊಲೀಸ್ ಕಾನ್ಸ್‌ಟೇಬಲ್‌ಗಳ ವಸತಿ ಪ್ರದೇಶಕ್ಕೆ ಹೋಗಿ ನೋಡಿದರೆ ಅಲ್ಲಿ ಸ್ವೀಪರ್ಸ್ ಇಲ್ಲ, clean ಮಾಡುವಂತಹ system ಅಲ್ಲಿಲ್ಲ. ಇವತ್ತಿಗೂ ಸಿಸ್ಟಂ ಇಲ್ಲ, ಆ ಸ್ಥಿತಿ ಇದೆ. ಅವರು ಕೂಡ ಮನುಷ್ಯರಲ್ಲವೇ? ಕನಿಷ್ಟವಾಗಿ ಯೋಚನೆ ಮಾಡಬೇಕಲ್ಲವೇ? ನಿನ್ನೆ ಗಮನ

ಸೆಳೆಯುವ ಸೂಚನೆಯಲ್ಲಿ ತಂದಿದ್ದೆ. ಸಂಬಳದಲ್ಲಿ 250 ರೂಪಾಯಿ water bill deduct ಮಾಡಿಕೊಂಡಿದ್ದಾರೆ, ಆದರೆ ಅಧಿಕಾರಿಗಳು ಜಲಮಂಡಳಿಗೆ ಕಟ್ಟಿಲ್ಲ, ಅಧಿಕಾರಿಗಳು ಕಟ್ಟದಿರುವ ತಪ್ಪಿಗೆ ಪೊಲೀಸ್ ಕನ್ಸ್‌ಟೇಬಲ್‌ಗಳಿಂದ 10,000 ರಿಂದ 12,000 ರೂ.ಗಳ ದುಡ್ಡು ಕೊಡಬೇಕೆಂದು ಹೇಳುತ್ತಿದ್ದಾರೆ. ಅವರು ಸಂಬಳದಲ್ಲಿ ಜೀವನ ನಡೆಸುವವರು, ಆ ಹಣವನ್ನು ಎಲ್ಲಿಂದ ತರುತ್ತಾರೆ?

ಶ್ರೀ ಡಿ.ಎನ್. ಜೀವರಾಜ್: ಬಿ.ಟಿ.ಎಸ್ ಬಸ್‌ಗಳಲ್ಲಿ ಪೊಲೀಸ್‌ನವರಿಗೆ ಮುಂಚೆ ಪಾಸ್ ಇತ್ತು. ಈಗ ಪಾಸ್ ತೋರಿಸಿದರೆ ಡ್ರೆಸ್‌ನಲ್ಲಿ ಬಂದರೆ ಮಾತ್ರ ನಿನಗೆ ಫ್ರೀ, ಬಸ್‌ನಲ್ಲಿ ಹತ್ತಿಸುತ್ತೇವೆಂದು ಹೇಳುತ್ತಾರೆಂದು ಇವತ್ತು ಬೆಳಿಗ್ಗೆ ಹೊರಗೆ ಗೇಟ್‌ನಲ್ಲಿ ನಿಂತವರೊಬ್ಬರು ಹೇಳುತ್ತಿದ್ದರು. ದಯಮಾಡಿ ತಮ್ಮ ಮುಖಾಂತರ ಮಂತ್ರಿಗಳು ಈ ವಿಷಯವನ್ನು ಸ್ವಲ್ಪ ಗಮನಿಸಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್: ವಿಷಯ ಅದಲ್ಲ. It is not that simple. Public ಆಗಿ ಡ್ರೆಸ್ ಹಾಕಿಕೊಂಡು ಬಸ್‌ನಲ್ಲಿ ಹತ್ತುವುದಕ್ಕೆ he feels bad. ನಾವು ಕೂಡ ಇಲ್ಲೆಲ್ಲಾದರೂ ಬಂದಾಗ ಖಾದಿ ಬಟ್ಟೆ ಹಾಕಿಕೊಂಡು ಬರುತ್ತೇವೆ. ಸಂಜೆಯಾದರೆ ಟೀ ಶರ್ಟ್ ಅಥವಾ ಬಣ್ಣದ ಬಟ್ಟೆಗಳನ್ನು ಹಾಕಿಕೊಳ್ಳುತ್ತೇವೆ. ಈಗ ಕಾವಿಗೆ, ಖಾದಿಗೆ ಮತ್ತು ಖಾಕಿಗೆ ಸಾರ್ವಜನಿಕವಾಗಿ ಗೌರವ ಹೋಗಿದೆ. ಅವನು ಕೂಡ ಪಾಪ he feels shy. ಅವರಿಗೂ ಕೂಡ ಲಜ್ಜೆಯೆನ್ನುವುದು ಇರುತ್ತದೆ. ನಾವಂತೂ ಬಿಡಿ, ನೀವು ಎಲ್ಲಾ ಕಡೆ ಖಾದಿ ಹಾಕಿಕೊಂಡು ಓಡಾಡುತ್ತೀರಾ? ನಾನಂತೂ ಇಲ್ಲ. ಉಪಾಧ್ಯಕ್ಷರೆ ತಾವು? More or less ಎಲ್ಲಾ same, ಎಲ್ಲರದೂ ಅದೇ fate ನೋಡಿ, ಮುಖ್ಯಮಂತ್ರಿಗಳು ಮೊದಲು ಖಾದಿ ಟವಲ್ ಹಾಕುತ್ತಿದ್ದರು. ಈಗ ಅವರೂ ಕೂಡ ಸಿಲ್ಕ್‌ಗೆ ಬಂದಿದ್ದಾರೆ. Gradually, ಇನ್ನೇನು transformation ಆಗುತ್ತದೆಯೋ ಗೊತ್ತಿಲ್ಲ. Private causes ಗೆಲ್ಲಾ ನೀವು ಹೋಗಬಾರದು. You are an opposition man, only we have the right as party members to know about him. You can't talk about him. Why he is switched over to Dhoti. ಅದೆಲ್ಲ ನಿಮಗೆ ಸಂಬಂಧವಿಲ್ಲ. ನಿಮ್ಮ ಪಾರ್ಟಿಯಲ್ಲಿ ನೀವು

ಮಾತನಾಡಿಕೊಳ್ಳಿ, ನೀವು ಹೇಳುವ ರೀತಿ ನೋಡಿದರೆ ಮತ್ತೆ ಲೀಡರ್ ಏಕೆ facial ಮಾಡಿಸಿಕೊಳ್ಳುತ್ತಾರೆ. ಅದು ನಿಮ್ಮ ಹಕ್ಕು.

ಶ್ರೀ ಬಸವರಾಜ ಬೊಮ್ಮಾಯಿ: ನಿಮ್ಮ ಪ್ರೀತಿ ಎಷ್ಟು ಹೆಚ್ಚಾಗಿದೆಯೆಂದರೆ ಮತ್ತೆ ಪ್ಯಾಂಟಿಗೆ ಕಳುಹಿಸಬೇಡಿಯೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಹೈದರಾಬಾದ್ ಕರ್ನಾಟಕ ಏರಿಯಾದ 371 (ಜೆ) ಪ್ರಕಾರ ನೇಮಕಾತಿ ಮಾಡುವ ಜಾಗದಲ್ಲಿ 800 ಪೋಸ್ಟ್ ಬೇಕಾಗಿದ್ದರೆ ಕಳೆದ ಬಾರಿ ನೇಮಕಾತಿ ಮಾಡುವಾಗ ಅವರಿಗೆ ವಯೋಮಿತಿಯನ್ನು increase ಮಾಡಿದ್ದರು. ಅದನ್ನು 50% ಗೆ extend ಮಾಡಿದರು. ಈಗ remianing 50% ಗೆ ಕಟ್ ಮಾಡಿಬಿಟ್ಟರು. I don't know? ಏಕೆ How these funny ideas come in the heads of these people. ಇವೆಲ್ಲಾ ಯಾರಿಗೆ ಸ್ಟ್ರಿಂಗ್ ಆಗುತ್ತದೆಯೋ ಗೊತ್ತಿಲ್ಲ. ಯಾರಾದರೂ ಒಬ್ಬ Neurologist ಕರೆಸಿ, ಇವರದು ಯಾವ ರೀತಿಯ ಬ್ರೈನ್ ಎಂದು ರಿಸರ್ಚ್ ಮಾಡಿಸಬೇಕು. ಯಾವ್ಯಾವ ತರಹದ ಜನ ಸಿಗುತ್ತಾರೆಂದು ನೋಡಿ. ಫಾರೆಸ್ಟ್‌ನಲ್ಲಿ ಅಂತಹವರು, ಪೋಲೀಸ್‌ನಲ್ಲಿ ಇಂತಹವರು. ಇವರನ್ನೆಲ್ಲಾ ಇಟ್ಟುಕೊಂಡು ಆಡಳಿತ ನಡೆಸಿ, ಈ ರಾಜ್ಯವನ್ನು ಮುಂದಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರಲ್ಲ, ಮುಖ್ಯಮಂತ್ರಿಗಳದು ಏನು ಅದೃಷ್ಟ! I think the Government should be considerate, ಆ remaining people ಗೂ ಕೂಡ this year they should extend that facility. GAD ಬಗ್ಗೆ ನಾಲ್ಕು ಮಾತುಗಳನ್ನು ಹೇಳಿ conclude ಮಾಡುತ್ತೇನೆ. I will not take much time. General administration always stays with the Chief Minister 1972 ನೇ ಇಸವಿಯಲ್ಲಿ ಮೊದಲನೆ ಬಾರಿಗೆ ಈ ರಾಜ್ಯದಲ್ಲಿ ದೇವರಾಜು ಅರಸು ರವರು ಮುಖ್ಯಮಂತ್ರಿಯಾದಾಗ ಐತಿಹಾಸಿಕವಾದಂತಹ ರಾಜಕೀಯ ಬದಲಾವಣೆಯಾಯಿತು. ರಾಜ್ಯದ ಎರಡು ಪ್ರಮುಖ, ಪ್ರಬಲ ಸಮಾಜಗಳಿಗೆ ಸೇರದಿರುವಂತಹ ಒಬ್ಬ ಮನುಷ್ಯ.....

ಶ್ರೀ ಜೆ.ಟಿ. ಪಾಟೀಲ್: ರಮೇಶ್ ಕುಮಾರ್ ರವರೆ ಒಂದು ನಿಮಿಷ, ಇದುವರೆಗೆ IPS, IFS, IAS ನವರ್‍ಯಾರು ನಿಮ್ಮ ಲಕ್ಷ್ಯಕ್ಕೆ ಬರಲಿಲ್ಲವೆಂದು ಕಾಣಿಸುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಇವರು ಬಾಗಲಕೋಟೆ ಮೆಸೇಜ್ ರೀಚ್ ಆಗುವುದು ಸ್ವಲ್ಪ ತಡವಾಗುತ್ತದೆ. ಈಗ General administration ಗೆ ಬಂದೆ ಇವರು ಅಪ್ಪರಲ್ಲಿ ಹೋಗಿ ಪುನರ್ ವಸತಿ ಎಂದು ಕುಳಿತುಬಿಟ್ಟರು, ಬರುತ್ತಿದ್ದೇನೆ. I am coming to it. Change ಅನ್ನು sudden ಆಗಿ accept ಮಾಡುವಂತಹ state of mind ನಮಗಿರುವುದಿಲ್ಲ. Resist ಮಾಡುತ್ತೇವೆ, ನಾವು ಒಪ್ಪುವುದಿಲ್ಲ. First time ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಹೊಸದಾಗಿ ಮುಖ್ಯಮಂತ್ರಿಯಾದ ಪ್ರಾರಂಭದ 2–3 ವರ್ಷದಲ್ಲಿ ಎಷ್ಟು ಟೀಕೆ ಮಾಡಿದರೆಂದರೆ, ಟೀ ಶಾಪ್ ಹೋಗಿ, ಕ್ಷೌರಿಕನ ಅಂಗಡಿಗೆ ಹೋಗಿ, ಬಸ್‌ಸ್ಟ್ಯಾಂಡಿಗೆ ಹೋಗಿ, ಸಿನಿಮಾಗೆ ಹೋಗಿ ಅಥವಾ ಹಿರಣ್ಣಯ್ಯನವರ ನಾಟಕಕ್ಕೆ ಹೋಗಿ, ದೇವರಾಜ್ ಅರಸು, ಅವರ ಹೆಂಡತಿ, ಅವರ ಮಕ್ಕಳು ಇವರೇ subject. ಅಂದರೆ ಅವರಿಗೆ ಮೊದಲು ಭ್ರಷ್ಟಾಚಾರ ಇರಲಿಲ್ಲವೆಂದು ಅಲ್ಲ. ಅವರಿಗೆ ಮಾಡುವುದಕ್ಕೆ right ಇತ್ತು. ಏಕೆಂದರೆ ಅವರೆಲ್ಲರೂ ಪ್ರಬಲ ಸಮಾಜಗಳಿಗೆ ಸೇರಿದವರಾಗಿದ್ದರು. ಯಾವನೊಬ್ಬ ದಿಕ್ಕಿಲ್ಲದವನು, ಅವರ ವರ್ಗಕ್ಕೆ ಸೇರಿದ 300 ಮನೆಗಳಿರುವವನು ಬಂದು ಮುಖ್ಯಮಂತ್ರಿಯಾಗಿ ಇವನು ಮಾಡಬಹುದೇ ಎನ್ನುವ ಧೋರಣೆ. But to agree with the reality, to accept him for what he has worked, ಅವರು ಸಾಯಬೇಕಾಗಿ ಬಂತು. ಬದುಕಿನಲ್ಲಿ ಎಂತಹ ದೃಷ್ಟಾಂತಗಳು ನಡೆಯುತ್ತದೆ ಎಂದರೆ, ಅವರು ಅಧಿಕಾರ ಕಳೆದುಕೊಂಡ ಮೇಲೆ ಇವರನ್ನು ಮತ್ತು ಎ.ಕೆ. ಸುಬ್ಬಯ್ಯ ಅವರನ್ನು meet ಮಾಡಿಸುವ ಪ್ರಯತ್ನ ಮಾಡಿದ್ದೆವು. ಎ.ಕೆ. ಸುಬ್ಬಯ್ಯ ಅವರು ಬಹಳ ಖಾರವದ ಮನುಷ್ಯ, Acidic. ದೇವರಾಜ್ ಅರಸು ಅವರು ಮೀಟ್ ಆದಾಗ ಅವರಿಗೆ, ನೀವು ಮುಖದ ನೇರಕ್ಕೆ ಭ್ರಷ್ಟ ಎಂದು ಹೇಳಿ shake hand ಕೊಡಲು ಎ.ಕೆ. ಸುಬ್ಬಯ್ಯ ಅವರು ಒಪ್ಪಲಿಲ್ಲ. ಆಗ ಅರಸು ಅವರ ಕಣ್ಣಲ್ಲಿ ನೀರು ಹರಿಯುತ್ತಿತ್ತು. ಆಯಿತಪ್ಪಾ, ನಾನು ನಿಮಗೆ ದೂರದಿಂದಲೇ ನಮಸ್ಕಾರ

ಮಾಡುತ್ತೇನೆ. ನೀವು ನನಗೆ shake hand ಮಾಡಿ ಮಲಿನರಾಗುವುದು ಬೇಡ. ಸುಬ್ಬಯ್ಯನವರೇ ಒಂದು ಮಾತನ್ನು ನಿಮಗೆ ಹೇಳಿರುತ್ತೇನೆ. ಮಕ್ಕಳ ಪೋಷಣೆಗೆ ವಯಸ್ಸಿನಲ್ಲಿದ್ದಂತಹ ಒಂದು ಹೆಣ್ಣಿಗೆ ನಾನು ವೇಶ್ಯೆ ಆಗಿದ್ದೇನೆ. ನಿಮಗೆ ಕೈ ಜೋಡಿಸಿ ಕೇಳಿಕೊಳ್ಳುವುದೇನೆಂದರೆ, ದಯಮಾಡಿ ನನ್ನ ಮಕ್ಕಳನ್ನು ವೇಶ್ಯೆಯರ ಮಕ್ಕಳು ಎಂದು ಕರೆಯಬೇಡಿ. ನನ್ನನ್ನು ವೇಶ್ಯೆ ಎಂದು ಕರೆಯಿರಿ. ಕೆಲವರಿಗೆ ಸಾಮಾಜಿಕ ನ್ಯಾಯವನ್ನು ಕೊಡುವ ಸಲುವಾಗಿ Yes, I have compromised ಎನ್ನುವ ಮಾತನ್ನು ಹೇಳಿದರು. ಈ ಪೀಠಿಕೆಯನ್ನು ಇಲ್ಲಿ ಏಕೆ ಹಾಕುತ್ತಿದ್ದೇನೆಂದರೆ, ಈ humiliation ಅನ್ನು ಅನುಭವಿಸಿ ಒಂದು ಹೊಸ ಅಧ್ಯಾಯವನ್ನು ರಾಜ್ಯದಲ್ಲಿ ಪ್ರಾರಂಭ ಮಾಡಿ, ಅಧಿಕಾರವನ್ನು ಕಳೆದುಕೊಂಡು he paved way for a new chapter in the history of the Karnataka politics. ನಂತರದ ದಿನಗಳಲ್ಲಿ ಗುಂಡೂರಾಯರಿರಬಹುದು, ರಾಮಕೃಷ್ಣಹೆಗಡೆಯವರಿರಬಹುದು. Brahmins ಆಗಿದ್ದರೂ ಕೂಡ, they did not belong to major communities, ಬಂಗಾರಪ್ಪನವರೂ, ವೀರಪ್ಪ ಮೊಯ್ಲಿ ಅವರೆಲ್ಲರೂ ಮುಖ್ಯಮಂತ್ರಿಗಳಾದರು. 2013 ರ ಮೇ ತಿಂಗಳಿನಲ್ಲಿ ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳಾದರು. 1978 ರಿಂದ ಅಂದರೆ 22+13 ಒಟ್ಟಾರೆ 35 ವರ್ಷಗಳಾಗಿತ್ತು. ಆ ಮನುಷ್ಯ ಅಂದು ಮಾಡಿದ sacrifice ಹಾಗೂ ಅವರು ಹಾಕಿದ ಬುನಾದಿಯ ಫಲ, ನಿಮ್ಮನ್ನು ಇವತ್ತು ಹೆಚ್ಚು resistance ಇಲ್ಲದೆ ಮುಖ್ಯಮಂತ್ರಿಯೆಂದು ಒಪ್ಪಿಕೊಂಡಿದ್ದಾರೆ. ಆವತ್ತು ದೇವರಾಜ್ ಅರಸು ಅವರ ಮೇಲೆ ಟೀಕೆ, ವಿಮರ್ಶೆಗಳೇನು ಬಂತೋ ಅದು ಇವತ್ತು ನಿಮ್ಮ ಮೇಲೆ ಬರುತ್ತಿಲ್ಲ. ಇದಕ್ಕೆ ಕಾರಣ ಬೇರೆಯವರನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗಿದೆ. Now, we are conditioned to that state, Conditioning of mind. ಈ advantage ನಲ್ಲಿ ಮಾನ್ಯ ಸಿದ್ದರಾಮಯ್ಯನವರು ಬಂದು he has occupied the office of the Chief Minister. Qualitatively to bring about a change, ಒಂದು ಪ್ರಯೋಗವನ್ನು ಮಾಡಲಿಕ್ಕೆ he is in very advantageous position. ಹಾಗಾಗಿ ಅವರು ಮಾಡಬೇಕೆಂದು ನನ್ನ ವಿನಂತಿ. ನಿಮಗೆ ಈ historical advantage

ಸಿಕ್ಕಿತು. ನೇರ ನೇಮಕಾತಿ ವಿಷಯದ ಬಗ್ಗೆ ಮಾತನಾಡುವುದಾದರೆ, ಇವರು ಯಾವ ರೀತಿಯ ಕಂಡೀಷನ್ ಹಾಕುತ್ತಾರೆಂದರೆ, Karnataka Government ನಲ್ಲಿ ಪರೀಕ್ಷೆ ಬರೆಯುವುದಕ್ಕೆ ಅಥವಾ recruitment ಆಗುವುದಕ್ಕೆ ಕೆಲವೊಂದು ಇಲಾಖೆಗಳಲ್ಲಿ ಶೇ.60 ರಷ್ಟು ಅಂಕಗಳಿರಬೇಕು. IAS, IPS ಬರೆಯಬೇಕಾದರೆ ಎಷ್ಟು ಅಂಕಗಳಿರಬೇಕು? ಅದಕ್ಕೆ passing marks fix ಮಾಡಿರುವುದೆಷ್ಟು? 35% ಮಾತ್ರ, IAS, IPS ಮಾಡುವುದಕ್ಕೆ 35%. ಆದರೆ ಯಾವುದೋ ಇಲಾಖೆಗೆ ಗುಮಾಸ್ತರ ಕೆಲಸಕ್ಕೆ ಹೋಗುವುದಕ್ಕೆ 60% ಇರಬೇಕು. ಶಾಸಕರಾಗುವುದಕ್ಕೆ ಅಂದರೆ ನಮಗೆ ಅಕ್ಷರಜ್ಞಾನ ಕೂಡ ಬೇಕಾಗಿಲ್ಲ. ಎಂ.ಎಲ್.ಎ. ಆಗುವುದಕ್ಕೆ voter list ನಲ್ಲಿ ಹೆಸರಿರಬೇಕು, ನಾವು insolvent ಆಗಿರಬಾರದು, ಜೈಲಿಗೆ ಹೋಗಿರಬಾರದು, ಹುಚ್ಚು ಹಿಡಿದಿರಬಾರದು. ಇಷ್ಟಿದ್ದರೆ ರಾಷ್ಟ್ರಪತಿ ಕೂಡ ಆಗಬಹುದು. ಶಾಸನ ಮಾಡುವವರಿಗೆ ಈ ಸವಲತ್ತು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಹುಚ್ಚು ಇರಬಾರದು, ಬೇಕಾದರೆ ಹುಚ್ಚು ಹಿಡಿಸಬಹುದು.

ಶ್ರೀ ಕೆ.ಆರ್. ರಮೇಶ್ ಕುಮಾರ್: ಯಶಸ್ವಿಯಾಗಿ ಆ ಕೆಲಸವನ್ನು ಮಾಡುತ್ತಿದ್ದೇವೆ. ಯಾರು ಇವರಿಗೆ ಈ ideas ಕೊಡುತ್ತಾರೆ? ಅದೇಕೆ 60% ಮಾಡಿದಿರಿ, 59% ಏಕೆ ಮಾಡಲಿಲ್ಲ? 63% ಏಕೆ ಮಾಡಲಿಲ್ಲ? ಈಗ ಈ private institutions, deemed universities ಇವೆಲ್ಲಾ ಬಂದು ನಮ್ಮ ಹಳ್ಳಿಯಿಂದ ಬಂದ ಹುಡುಗರು ಏನು ಮಾಡುವುದು? ಕೆಪಿಎಸ್‌ಸಿಗೆ ಹೋಗುತ್ತಾರಲ್ಲ, ಅಲ್ಲಿ ಮತ್ತೆ ಇಲ್ಲ. ಕೆಪಿಎಸ್‌ಸಿನಲ್ಲಿ 60% ಕೇಳುವುದಿಲ್ಲ. Class-1, Class-2 ಆಗುವುದಕ್ಕೆ ಬೇಕಾಗಿಲ್ಲ. I think sir ,...

ಇದನ್ನು Government should disband forthwith. This is my prayer to the Hon'ble Chief Minister. It is not fair, in the interest of equality and justice, untenable . . . .

ಶ್ರೀ ವೈ.ಎಸ್.ವಿ. ದತ್ತಾ: ರಮೇಶ್ ಕುಮಾರ್ ಅವರೆ, ನಾನು ಈ ವಿಷಯದಲ್ಲಿ ಎಲ್ಲಾ ಇಲಾಖೆಗಳಲ್ಲಿ ನೇರ ನೇಮಕಾತಿ ಎಂದು ಬಂದ ಸಂದರ್ಭದಲ್ಲೆಲ್ಲಾ ಸಂಬಂಧಪಟ್ಟ ಮಂತ್ರಿಗಳು, Principal Secretaryಗಳು, ಮುಖ್ಯಮಂತ್ರಿಗಳ ಆದಿಯಾಗಿ ಗಮನಕ್ಕೆ ತಂದಿದ್ದೇನೆ. ನೇರ ನೇಮಕಾತಿ ಎಂದು ಮಾಡಿದರೆ ಎಲ್ಲಿಯವರೆಗೆ ನೀವು ಏಕ ರೂಪ ಶಿಕ್ಷಣ ಕೊಡುವುದಿಲ್ಲವೋ, ನಮ್ಮ ಹಳ್ಳಿ ಮಕ್ಕಳು ಮತ್ತು ಪಟ್ಟಣದ ಮಕ್ಕಳಿಗೆ ಸರಿಸಮಾನವಾದ ವ್ಯವಸ್ಥೆ ಇಲ್ಲ, ಅಲ್ಲಿಯವರೆಗೂ ಸಹ ಇದು fair ಆಗಿರುವುದಿಲ್ಲ ಎಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ನೇರ ನೇಮಕಾತಿ ಎನ್ನುವ ಪದ್ಧತಿ ಈ ಡಿಪಾರ್ಟ್‌ಮೆಂಟ್‌ಗಳಲ್ಲಿ ಸಿ ಮತ್ತು ಡಿ ವರ್ಗದ ಹುದ್ದೆಗಳಿಗೆ ಯಾವತ್ತೂ ಇರಕೂಡದು ಎನ್ನುವುದನ್ನು ನಾನು ಸುಮಾರು ಬಾರಿ ಹೇಳಿದೆ. ಆದರೆ, ಮುಖ್ಯಮಂತ್ರಿಗಳು ಕೆಲವು ಸಲ ಆದೇಶ ಮಾಡಿ, ಹೌದು ಇದನ್ನು ಪರಿಶೀಲನೆ ಮಾಡಿ ಎಂದು ಹೇಳಿದರು. ಕೆಲವು ಸೆಕ್ರೆಟರಿಗಳಿದ್ದಾರೆ, ಅವರ ಬಗ್ಗೆ ಮಾತನಾಡಬೇಕು. ಈ ಐ.ಎ.ಎಸ್.ನ Principal Secretary ಗಳ ಹೇಳಬೇಕು. ಅವರು ಎಂತಹುದನ್ನು ಹೇಳುತ್ತಾರೆಂದರೆ, ನಾವು ಕೇಳುವಂತಹ ಪದಗಳಿಗೆ ಅವರು ಕೊಡುವಂತಹ ವಿವರಣೆಗಳು, ನೇರ ನೇಮಕಾತಿ ಏಕೆ ಬೇಡವೆಂದು ಹೇಳಿದರೆ ಸಾಕು, ಅದಕ್ಕೆ ಅವರು ಒಂದು ದೊಡ್ಡ ವ್ಯಾಖ್ಯಾನವನ್ನೇ ಕೊಡುತ್ತಾರೆ. ಆದರೆ ನೀವು ಇವರೆಲ್ಲರೂ 35% ನಿಂದ ಬಂದ ಗಿರಾಕಿಗಳು ಎಂದು ಚೆನ್ನಾಗಿ ಹೇಳಿದಿರಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಆಡಳಿತದಲ್ಲಿ ಬಿಗಿಯಾಗಬೇಕು. File ಒಂದು department ಗೆ ಹೋಗುತ್ತದೆ. File ಯಾವಾಗ ಹೋಯಿತು? ಯಾರಿಗೆ ಹೋಯಿತು? ಆ ಫೈಲ್‌ನಲ್ಲಿ ಏನಿದೆ? ಅದು ಯಾರಿಂದ ಯಾರಿಗೆ ಹೋಯಿತು? ಇತ್ಯರ್ಥ ಏನಾಯಿತೆಂದು ತಿಳಿದುಕೊಳ್ಳುವುದಕ್ಕೆ ಸಾಧ್ಯವಿದೆಯೇ? ಇವರು To and From Register maintain ಮಾಡುತ್ತಾರೆ. ಅದನ್ನು ಹುಡುಕಿಕೊಂಡು ಹೋಗಬೇಕು. ಇದರ ಜೊತೆಗೆ ಈಗ computer numbers ಬಂದಿವೆ. number ಸಿಗುತ್ತದೆ ಅಷ್ಟೇ. Administration ನಲ್ಲಿ 5 bundle system ಎಂದು ಇದೆ. ಎಷ್ಟು ಜನ

Principal Secretaries, various departmentಗಳವರುಗಳು ಇವರ ಇಲಾಖೆಯಲ್ಲಿರುವ ಫೈಲ್‌ಗಳನ್ನು 5 bundle system ಮಾಡಿದ್ದಾರೆ? ಇವರುಗಳು surprising ಆಗಿ table inspection ಮಾಡಬೇಕು. ಇವರ ಆಫೀಸಿನಲ್ಲಿ ಇವರು table-table ಗೆ ಹೋಗಿ inspection ಮಾಡಿದರೆ To and From ಪ್ರಕಾರ ಎಷ್ಟು ಕಡತಗಳು ಬಂದಿವೆ? ಅವು ಬಂದು ಎಷ್ಟು ದಿವಸಗಳಾಯಿತು? ಯಾವಾಗ ಕ್ಲಿಯರ್ ಮಾಡಿದ್ದಾರೆ? ಕ್ಲಿಯರ್ ಏಕೆ ಮಾಡಿಲ್ಲ? Land acquisition ಗೆ ಸಂಬಂಧಿಸಿದ particular file ಹಿಡಿದಿಟ್ಟುಕೊಂಡಿರುವುದು ಏಕೆ? Medical collegeಗೆ seat enhance ಮಾಡುವ ಕಡತವನ್ನು ಹಿಡಿದಿಟ್ಟುಕೊಂಡಿರುವುದೇಕೆ ಎಂದು ಕೇಳಿದ್ದಾರೆಯೇ? Principal Secretary ಕೇಳುವುದಿಲ್ಲ. 5 bundle system ಇಲ್ಲ, classification of files ಇಲ್ಲ, ಕೆಲವು ಫೈಲ್ಸ್ ಹೋಗುತ್ತವೆ, ಕೆಲವು ಫೈಲ್ಸ್ ಹೋಗುವುದಿಲ್ಲ. ಫೈಲ್ ಹೋಗಬೇಕಾದರೆ ಅದಕ್ಕೆ mobility ಬೇಕು. ಹಳೆಯ ಎತ್ತಿನಗಾಡಿಗಳು ಅಂದರೆ ನಿಮ್ಮ ನಮ್ಮ ಗಾಡಿಗಳು ಹೋಗಬೇಕಾದರೆ ಅದಕ್ಕೇನು ಹಾಕುತ್ತಿದ್ದರು? ನಾವು ತೆಲುಗು ಭಾಷೆಯಲ್ಲಿ ಕಂದಿನಿ ಹೇಳುತ್ತೇವೆ. ಕಂದಿನಿ ಹಾಕಿದರೇ ಚಕ್ರ move ಆಗುವುದು. ಅದೇ ರೀತಿಯಲ್ಲಿ ಫೈಲ್‌ಗೆ ಕಂದಿನಿ ಹಾಕಬೇಕು. ಇಲ್ಲದಿದ್ದರೆ ಅದು ಬರೋ ಅನ್ನುತ್ತದೆ. Wheel move ಆಗಬೇಕಾದರೆ ಅದಕ್ಕೆ oil, lubricant ಹಾಕಬೇಕು. ದಯವಿಟ್ಟು ಮಾನ್ಯ ಮುಖ್ಯಮಂತ್ರಿ ಮಾತನಾಡುತ್ತಿರುವ ಶಾಸಕರು ಈ ಕಡೆಗೆ ಬರಬೇಕು.

ಅವರ attention ಡ್ರಾ ಮಾಡಬೇಕೆಂದು ನಾನು ಸಾಯುತ್ತಿದ್ದರೆ, ನೀವು ಏನ್ರೀ ಈ ರೀತಿ ಮಾಡುತ್ತೀರಿ?

ಉಪಾಧ್ಯಕ್ಷರು: ಮಾನ್ಯ ಅಶೋಕ್ ಅವರೆ, ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಶಾಸಕರು ಬರುವುದನ್ನು ಸ್ವಲ್ಪ ಕಂಟ್ರೋಲ್ ಮಾಡಿ.

ಶ್ರೀ ಅಶೋಕ್ ಎಂ. ಪಟ್ಟಣ (ಸರ್ಕಾರಿ ಮುಖ್ಯ ಸಚೇತಕರು): ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತಿದ್ದರೆ ಅವರಿಗೆ ಅರ್ಥವೇ ಆಗುತ್ತಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, Lubrication of files should stop.

ಸಿದ್ದರಾಮಯ್ಯನವರೆ ನಮಗೆ ಮನಃಪೂರ್ವಕವಾಗಿ ಹೃದಯಾಂತರಾಳದಿಂದ ಹೆಮ್ಮೆ ನೀವು ಮುಖ್ಯಮಂತ್ರಿಯಾಗಿರುವುದು. ದೇವರಾಜ ಅರಸುರವರ ತ್ಯಾಗದ ಫಲ ಇವತ್ತು ನೀವು ಧೈರ್ಯವಾಗಿ, ಸ್ಥೈರ್ಯದಿಂದ, ಹೆಮ್ಮೆಯಿಂದ ಅಲ್ಲಿ ಕುಳಿತುಕೊಳ್ಳುವಂತೆ ಆಗಿದೆ. That day it look speculative, today it has become as a matter of right. ಅವರಿಗೆ ನೀವು tributes pay ಮಾಡಬೇಕಾಗಿದೆ. GADಯನ್ನು ನಿಮ್ಮ ಕೈಯಲ್ಲಿಟ್ಟುಕೊಂಡು ಈ ಆಡಳಿತವನ್ನು ನೀವು ಸುಧಾರಣೆ ಮಾಡದೇ ಹೋದರೆ, ಬಹುಶಃ ಅದಕ್ಕಿಂತಲೂ ದೌರ್ಭಾಗ್ಯದ ದಿನ ನಮಗೆ ಇನ್ನೊಂದು ಇರಲಿಕ್ಕೆ ಇಲ್ಲ. Principal Secretary, ಅದಾದ ಮೇಲೆ Secretary, ಅದರ ಪಕ್ಕದಲ್ಲಿ Additional Secretary, ಅದರ ಕೆಳಗೆ Joint Secretary, ಆಮೇಲೆ Deputy Secretary, ಆಮೇಲೆ Under Secretary, ಅದಾದ ಮೇಲೆ SectionOfficer. Case worker is the most important man. How many of these officers in the apex level have the patience to read the file? ಎಷ್ಟು ಜನ ಫೈಲ್‌ನ್ನು ಓದುತ್ತಾರೆ? ಒಂದು ಗೃಹ ನಿರ್ಮಾಣ ಸಹಕಾರ ಸಂಘದವರು ಜಮೀನನ್ನು ರೈತರ ಹತ್ತಿರ ಮಾತನಾಡಿ consent award ಎಲ್ಲಾ ಮಾಡಿಕೊಂಡು process ಮಾಡಿ ಕಳುಹಿಸಿದರು. Award pass ಆಗಬೇಕಾಗಿದ್ದರೆ Revenue Secretary sign ಹಾಕಬೇಕಾಗಿತ್ತು. Acquisition proceedings ಪ್ರಕ್ರಿಯೆ ಪ್ರಾರಂಭಿಸಿದ ಮೇಲೆ 4(1) ಆದ ತಾರೀಖಿನಿಂದ ಎರಡು ವರ್ಷದೊಳಗೆ ಅದು complete ಆಗಬೇಕು. ಇಲ್ಲದೇ ಹೋದರೆ ಅದು vitiate ಆಗುತ್ತದೆ. ಆ ಎರಡನೇ ವರ್ಷ ಆಗುವುದಕ್ಕೆ ಎರಡು ದಿವಸ ಇರೋವರೆಗೂ ಆ Under Secretary ಆ ಫೈಲ್‌ನ್ನು ಮುಂದಕ್ಕೆ ಕಳುಹಿಸಲಿಲ್ಲ. ಆ ಹೌಸಿಂಗ್ ಸೊಸೈಟಿಯವರು ಬಂದು ಅವನಿಗೆ ದುಡ್ಡು ಕೊಟ್ಟ ಮೇಲೆ ಆ ಫೈಲ್ ಮುಂದಕ್ಕೆ ಹೋಗುತ್ತದೆ. Revenue Secretary sign ಮಾಡುತ್ತಾರೆ. ಈ Revenue Secretary ಅಲ್ಲ, ನಾನು ಯಾವತ್ತಿನದೋ ಕಥೆ ಹೇಳುತ್ತಿದ್ದೇನೆ.

ಪಾಪ ಎಲ್ಲರೂ ಇವರ ಮೇಲೆ ಹೋಗಿ ಬಿದ್ದಾರು. ಅವರು ಇವತ್ತೋ ನಾಳೆಯೋ retiring stage ನಲ್ಲಿದ್ದಾರೆ. It does not apply to him. ರಾಜಶೇಖರ್‌ಮೂರ್ತಿಯವರು Revenue Minister ಆಗಿದ್ದರು. ಒಂದು ಕೇಸ್‌ನಲ್ಲಿ ಅವರು ದುಡ್ಡು ಕೊಡಲಿಲ್ಲ. vitiate ಆಗಿ ಹೋಯಿತು. I went and met Rajashekar Murthy. ಏನಪ್ಪಾ ಮಾಡುವುದು, legally ಅಸಹಾಯಕನಾಗಿದ್ದೇನೆ, vitiate ಆಗಿಬಿಟ್ಟಿತ್ತಲ್ಲ, amend ಮಾಡಬೇಕು ಎಂದರು. ಹೈಕೋರ್ಟ್‌ಗೆ ಹಾಕಿ, ಹೈಕೋರ್ಟ್‌ನಿಂದ direction ತೆಗೆದುಕೊಂಡು ಬಂದು ಮತ್ತೆ ಅದನ್ನು ನಾವು ಮಾಡಿಸಿದ್ದಾಯಿತು. ಎಂತೆಂಥ ಅನಾಹುತಗಳಾಗುತ್ತದೆ. Secretarial staffಗೆ transfers ಇಲ್ಲ. ಬಹಳ ಸಂತೋಷ. ಅವರೇ ಬಹುತೇಕ ಜನ ಇದರಲ್ಲಿ ಇರುವುದು. ಒಬ್ಬ ಭ್ರಷ್ಟ ಅಧಿಕಾರಿಗೆ ಗಂಡ-ಹೆಂಡತಿ ಇಬ್ಬರ ಮೇಲೂ prosecution ಆಗಬೇಕಾಗಿತ್ತು. ಲೋಕಾಯುಕ್ತದಲ್ಲಿ matter pending ಇತ್ತು. ನೀವು ಬರೆಯಬೇಕ್ರಿ ಎಂದು ಹೇಳಿ 6 ತಿಂಗಳ ಕೆಳಗೆ concerned departmentಗೆ ನಾನೇ ಹೋಗಿ ಕುಳಿತುಕೊಂಡೆ. ನಾವು ಹೇಳಿದ್ದನ್ನೆಲ್ಲಾ ಕೇಳಿ ಕೊಡುವುದಕ್ಕಾಗುವುದಿಲ್ಲವೆಂದು ಬರೆದರು. Officically on record, the Deputy Secretary of the concerned department wrote that permission cannot be given to prosecute an officer who had not filed the statement of assets and liabilities as required under law. ಯಾವಾಗ ಇದು ನಿಮಗೆ ಗೊತ್ತಾಗುವುದು? Respective Department in-charge ಇರುವಂಥ Ministers review ಮಾಡುತ್ತಿದ್ದರೆ, ಆಡಳಿತ ನಿಮಗೆ ಅರ್ಥವಾಗಿದ್ರೆ files ತರಿಸುತ್ತಿದ್ದರೆ, surprise inspections ಮಾಡುತ್ತಿದ್ದರೆ, ಒಂದು ಕಡೆಯಿಂದ broom ಮಾಡುತ್ತಿದ್ದರೆ you will come to know everything. How otherwise? See, this is the tragedy. ಏಕೆ, ಗುಂಡೂರಾಯರಿದ್ದರು, ಗುಂಡೂರಾಯರೇನು ಬಹಳ ದೊಡ್ಡ ವಿದ್ಯಾವಂತರೇನೂ ಅಲ್ಲ. ಆಡಳಿತದಲ್ಲೇನು ಬಹಳ ದೊಡ್ಡ ಅನುಭವ ಇದ್ದವರಲ್ಲ. I don't know, one day he declared. File clearance ಎಂದು ಒಂದು programme ಕೊಟ್ಟರು. 1000 file ಇರಲಿ, ಆ dateಗೆ ಆ

departmentನದ್ದು ಎಲ್ಲಾ complete clear ಆಗಲೇಬೇಕು ಎಂದು ಮಾಡಿದರು. ಮಾಡಿ ಸಾರ್, do something like that. Record rooms, ಕೆಳಗಿನ ಹಂತದಲ್ಲಿ record rooms ಏನೇನಾಗೋಗಿದೆಯೋ ನಮಗೆ ಗೊತ್ತೇ ಇಲ್ಲ. Promotions, ಕೆಲವು departmentsನಲ್ಲಿ 100% posts are filled up by promotion. Recruitment ಗೆ ಅವಕಾಶವೇ ಇಲ್ಲ. Excise Departmentನಲ್ಲಿ Is there a provision for recruitment of Superintendents of Excise directly? Cabinet compositions ಇದೆಯೆಪ್ಪಾ, ಕೆಲವರು ಹಳಬರು, ಕೆಲವರು ಹೊಸಬರು, ಸಮಾಜದ ಎಲ್ಲಾ ವರ್ಗಗಳಿಗೆ ಸೇರಿದವರು, ಸಾಧ್ಯವಾದಷ್ಟು ಮಟ್ಟಿಗೆ ರಾಜ್ಯದ ಎಲ್ಲಾ ಭಾಗದಿಂದ ಬಂದವರು ಇದ್ದರೆ ತಾನೇ ಅದೊಂದು balanced Cabinet ಆಗುವುದು? ಈಗ ಮನುಷ್ಯನ physiological system ಸಹ ಹಾಗೇ ತಾನೇ? ಕಾಲು, ಕೈ, ತಲೆ, ಮೂಗು ಎಲ್ಲವೂ ಒಂದಕ್ಕೊಂದು proportionate ಆಗಿದ್ದರೆ you look like a moderate man and an ordinary man. Otherwise, abnormal ಆಗಿರುತ್ತೇವೆ. How is that, ಕೆಲವು ಇಲಾಖೆಗಳಲ್ಲಿ 100ಕ್ಕೆ 100 ಹುದ್ದೆಗಳನ್ನು promotionನಿಂದಲೇ fill up ಮಾಡುತ್ತೀರಿ, ಯಾರು, who permitted this? Why should not the DPAR look into this? Why should not they bring it to the notice of the Hon'ble Chief Minister? Is it not required? young and old servicesನಲ್ಲಿರಬೇಕು. ಕೆಲವು departments ಇವರೇನು privileged departmentಗಳಾ? Vacancies ಎಷ್ಟಿದೆ? ಮುಖ್ಯಮಂತ್ರಿಗಳೇ declare ಮಾಡಿರುವ ಪ್ರಕಾರ ಸುಮಾರು 2 ಲಕ್ಷಕ್ಕೂ ಮೇಲ್ಪಟ್ಟು vacancies ಇವೆ. Probably 1994 last recruitment ಆಗಿರುವುದೆಂದು ಕಾಣುತ್ತದೆ. ಇವತ್ತು ರಾಜ್ಯದ ಜನಸಂಖ್ಯೆ ಎಷ್ಟಿದೆ? ಈ ಜನಸಂಖ್ಯೆಗೆ ಹೊಂದಿಕೊಂಡು ಪ್ರತಿ ಸರ್ಕಾರಗಳು ಬದಲಾದಂತೆ ಹೊಸ ಹೊಸ ಯೋಜನೆಗಳನ್ನು ರೂಪಿಸಿದ್ದೀರಿ, ಹೊಸ ಹೊಸ ಇಲಾಖೆಗಳನ್ನು ತೆರೆಯುತ್ತಿದ್ದೀರಿ. ನೀವು ಯೋಜನೆಗಳನ್ನು ಘೋಷಣೆ ಮಾಡಿ, ಅದನ್ನು ಅನುಷ್ಠಾನಗೊಳಿಸುವುದಕ್ಕೆ ಅಗತ್ಯವಿರುವಂಥ ತರಬೇತಿ ಹೊಂದಿರುವ staff ಇಲ್ಲದೇ ಹೋದರೆ ನಿಮ್ಮ ಯೋಜನೆಗಳು

ಗಾಳಿಯಲ್ಲಿ ತೇಲಿಕೊಂಡು ಹೊರಟು ಹೋಗುತ್ತದೆ. ಇವತ್ತು ರಾಜ್ಯದ ಜನಸಂಖ್ಯೆ ಅಂದಾಜು 6 ಕೋಟಿಯೆಂದು ಕಾಣುತ್ತದೆ. ಎಷ್ಟು vacancies ಇವೆ? Survey Departmentನಲ್ಲಿ vacancy, Revenue Departmentನಲ್ಲಿ D-group servants vacancy, Health departmentಗೆ ಹೋದರೆ vacancy, Urban Development Departmentಗೆ ಹೋದರೆ vacancy, Staff ಇಲ್ಲ ಎಂದು ಬರೆದು ಕೊಡುತ್ತಾರೆ. ಮಾಡಿ ಸಾರ್. . . . .

ಶ್ರೀ ವೈ.ಎಸ್.ವಿ. ದತ್ತಾ: ಈಗ Out source ಎನ್ನುವುದು start ಆಗಿದೆ. ಈ out source ಇದೆಯಲ್ಲಾ, ಇದು most dangerous.

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾನು prompt ಮಾಡುತ್ತೇನೆ, ಒಬ್ಬರು ಎದ್ದು ಹೇಳಲಿ ಎಂದು. I am Thankful to you. Outsource ಎನ್ನುವುದು, it is a very dangerous thing. ಅವರಿಗೆ ಏನು responsibility ಇರುತ್ತದೆ? serviceನಲ್ಲೇ ಇರುವಂಥವನಿಗೆ you can fix him, you can charge him, you can extract work from him. Out source ಮಾಡಿ ಬಂದವರಿಗೆ ಜವಾಬ್ದಾರಿ ಇರುತ್ತದೆಯೇ? And it is adhoc arrangement. ಮದುವೆ ಮಾಡಿಕೊಳ್ಳವುದು ಹೇಗೆ ಇರುತ್ತದೆ? ಹಾಗೇ ಕಾಲ ಕಳೆಯುವುದು ಹೇಗೆ ಇರುತ್ತದೆ?

(ಈ ಹಂತದಲ್ಲಿ ಸದನದ ಸದಸ್ಯರೆಲ್ಲರೂ ನಗುತ್ತಿದ್ದರು)

ಮದುವೆ ಎಂದರೆ ನಿಮಗೊಂದು ನಿರ್ಬಂಧ ಅಲ್ಲವೇ? ಯಾಕಪ್ಪಾ ಅಪ್ಪಚ್ಚು ರಂಜನ್ ಅಷ್ಟೊಂದು ನಗುತ್ತಿದ್ದೀಯಾ? ಸುರೇಶ್ ಎಷ್ಟು serious ಆಗಿ ಇದ್ದಾರೆ ನೋಡು. ಇಲ್ಲಿ ಉತ್ತರ ಕರ್ನಾಟಕದ ಪ್ರಭುಗಳು ಹೇಳುತ್ತಿದ್ದಾರೆ, it is accepted ಅಂತೆ human relationshipನಲ್ಲಿ. ಇವರದ್ದು ಅದೇ ಉದ್ಯೋಗ ತಾನೇ. ನಾವು ಆ ರೀತಿ ಇಲ್ಲಪ್ಪಾ, ನಮಗೆ ಊಟಕ್ಕೆ ನಡೆಯುವುದಿಲ್ಲ, ಬರಗಾಲದವರು. ಕಟ್ಟಿಕೊಂಡವರನ್ನು ಸಾಕುವುದೇ ಕಷ್ಟವಾಗಿರಬೇಕಾದರೆ ಇನ್ನು ಇಟ್ಟುಕೊಳ್ಳುವುದಕ್ಕೆ ಎಲ್ಲಿಗೆ ಹೋಗೋಣ? ಈ out sourcing ಇದೆಯಲ್ಲಾ.. . . .

ಶ್ರೀ ಬಸವರಾಜ ಬೊಮ್ಮಾಯಿ: ಅದನ್ನೆಲ್ಲಾ ಬೇರೆ ಯಾರೂ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: I did not offend you at all. I am very generous so far you are concerned.

ಶ್ರೀ ಬಸವರಾಜ ಬೊಮ್ಮಾಯಿ: We are also equally concerned about you. ಆದ್ದರಿಂದ ನೀವು geographically ಬೇರೆಯವರಿಗೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾನು ಮಾಡುವುದಿಲ್ಲ. ಆದರೆ, ನಮ್ಮಲ್ಲಿ gentlemanly understanding ಇದೆ. ನಾನು ನಿಮ್ಮ ತಂದೆಯವರ ನೆರಳಲ್ಲಿ ಬೆಳೆದವನು. ಎಂದೂ ನಿಮ್ಮ ವಿಚಾರದಲ್ಲಿ ಏನೂ ಆ ರೀತಿ ಅಪಾಯಕಾರಿಯಾದ ವರದಿಯನ್ನು ಬಹಿರಂಗಪಡಿಸುವುದಿಲ್ಲ.

(ಈ ಹಂತದಲ್ಲಿ ಸದನದ ಸದಸ್ಯರೆಲ್ಲರೂ ನಗುತ್ತಿದ್ದರು)

ಶ್ರೀ ಬಸವರಾಜ ಬೊಮ್ಮಾಯಿ: ನೀವು ಬಹಳ ಸತ್ಯ ಹೇಳಿದಿರಿ. ನಾನೂ ಸಹ ಇದಕ್ಕಿಂತ ಸಣ್ಣ ವಯಸ್ಸಿನಲ್ಲಿ ನೀವು ರಾಜಕಾರಣ ಮಾಡುವುದನ್ನು ನೋಡಿದ್ದರಿಂದ, ನಮ್ಮ ತಂದೆಯವರ ಜೊತೆಗೆ ಇದ್ದವರು ಎನ್ನುವ ಕಾರಣಕ್ಕಾಗಿ ನಾನೂ ಸಹ ನೀವು ಯಾವ ರೀತಿ ನನಗೆ ಯಾವ ಆದರ ಭಾವನೆಯಿಂದ ನೀವು ಏನೂ ಹೇಳುವುದಿಲ್ಲವೆಂದು ಹೇಳಿದಿರಿ, ನಾನೂ ಪ್ರಮಾಣ ಮಾಡಿ ಹೇಳುತ್ತೇನೆ. ನನಗೆ ಎಲ್ಲಾ ಗೊತ್ತಿದ್ದರೂ ಸಹ ನಾನು ಏನೂ ಹೇಳುವುದಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಆ ವಿಶ್ವಾಸದ ಮೇಲೆ ನಾನು ನನ್ನ ಎಲ್ಲಾ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದೇನೆ.

(ಈ ಹಂತದಲ್ಲಿ ಸದನದ ಸದಸ್ಯರೆಲ್ಲರೂ ನಗುತ್ತಿದ್ದರು)

ಶ್ರೀ ಸಿ.ಟಿ. ರವಿ: ಇವರಿಬ್ಬರ ಬಗ್ಗೆ ಏನೂ ಹೇಳದೇ ಇದ್ದರೂ ನಮಗೆ ಅರ್ಥವಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ: ರವಿಯಿಂದ ಬಹಳ ತಿಳಿದುಕೊಳ್ಳಬೇಕಾಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನಾನೂ, ಬೊಮ್ಮಾಯಿ ರವಿ categoryಗೆ ಸೇರುವುದಿಲ್ಲ. ನಾವು, we are a different category. ನಿನ್ನದು dangerous category. Vacancies ಅನ್ನು fill up ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ. Let it be a historic decision. ಅಷ್ಟು ಜನ ಮಕ್ಕಳಿಗೆ ಉದ್ಯೋಗ ಸಿಗುತ್ತದೆ. Roster maintain ಮಾಡಿ. Go all out, make arrangements. ಈಗ ಡಾ|| ಅಂಬೇಡ್ಕರ ಅಭಿವೃದ್ಧಿ ನಿಗಮ, Scheduled caste ಗೆ finance ಮಾಡುವುದಕ್ಕೆ ಅವರ ಅಭಿವೃದ್ಧಿ ಚಟುವಟಿಕೆಗಳಿಗೆ ಹಣಕಾಸು ಸಹಾಯ ಮಾಡುವುದಕ್ಕೆ ಎಂದು ನಿಗಮ ಏರ್ಪಾಡು ಮಾಡಿದ್ದಾರೆ. ನೀವು ಯಾವ ಜಿಲ್ಲೆಗಾದರೂ ಹೋಗಿ ನೋಡಿ. ಒಬ್ಬರು District Manager ಅನ್ನು ಹಾಕಿ ಬಿಡುತ್ತಾರೆ. ಅಲ್ಲಿ ಬೇರೆ staff ಇರುವುದಿಲ್ಲ. ನೀವು ಹೇಗೆ ಮಾಡುತ್ತೀರಿ? Sir, you are heading GAD, ತಾವು ದಯಮಾಡಿ ಈ ಕಡೆ ಗಮನ ಕೊಡಬೇಕು. Last item, Ministers ವಿಚಾರಕ್ಕೆ ಬಂದು ಮುಗಿಸಿಬಿಡುತ್ತೇನೆ. ಮಂತ್ರಿಗಳಾದವರು they are the Government. Governance is different, administration is different. ಪರಿಪಾಲನೆ ಬೇರೆ, ಆಡಳಿತ ಬೇರೆ. ಆಡಳಿತಕ್ಕಾಗಿ ಅಧಿಕಾರಿಗಳು. ನೀತಿ–ನಿರೂಪಣೆಗೆ, ಪರಿಪಾಲನೆಗೆ ನಾವು. ನೀತಿ–ನಿರೂಪಣೆ ಮಾಡುವವರು ನೀತಿವಂತರಾಗಿಯೂ ಇರಬೇಕಾಗುತ್ತದೆ. ಮಂತ್ರಿಗಳಾದವರು tour ನಲ್ಲಿ ಇದ್ದ ಹೊರತು ಅಥವಾ ಬೇರೆ ಇನ್ನಾವುದೋ ಕಾರ್ಯಕ್ರಮಗಳಲ್ಲಿ ಇದ್ದ ಹೊರತು, ಬೆಳಿಗ್ಗೆ 10.30 ಗಂಟೆಗೆ ವಿಧಾನಸೌಧದಲ್ಲಿರುವ ತಮ್ಮ ಕಚೇರಿಗೆ ಬರಬೇಕು. ಭವ್ಯವಾದ ಕಚೇರಿಗಳನ್ನು ಅವರಿಗೆ ಕೊಟ್ಟಿದ್ದಾರೆ. ಆದರೂ ಏಕೆ ಬರುವುದಿಲ್ಲ ಇವರು? ಏನು ಕಷ್ಟ ಇವರಿಗೆ? ನಾನು ಮೊನ್ನೆ ಒಬ್ಬರು ಮಂತ್ರಿಗಳ ಕಚೇರಿಗೆ ಫೋನ್ ಮಾಡಿದೆ. ನಮಸ್ಕಾರ. . ಎಂದಾಕ್ಷಣ ನಾನು ನರೇಂದ್ರ ಮಾತನಾಡುವುದು ಯಾರು ಬೇಕು ನಿಮಗೆ? ಎಂದರು. ನಾನು ಮೊದಲು ಮಂತ್ರಿಗಳನ್ನು ಕೇಳಿದೆ. ಆತ ಊರಲ್ಲಿ ಅವರಿಲ್ಲ ಎಂದ. Private Secretary ಎಂದೆ, ಅವರು ಸಿಗುವುದಿಲ್ಲವೆಂದ. ಹೋಗಲಿ, ತಾವ್ಯಾರು ಮಹಾಸ್ವಾಮಿ

ಎಂದು ಕೇಳಿದೆ. ನಾನು ಇಲ್ಲಿ Peon ಎಂದ. ನಮ್ಮ ಹಣೆಬರಹ ಅವನು ಫೋನ್ ಎತ್ತಿಕೊಂಡು ನಾನು ಇಂತಹ ಮಂತ್ರಿ ಕಚೇರಿಯಿಂದ ಮಾತನಾಡುತ್ತಿದ್ದೇನೆ ಎಂದು ಹೇಳುವುದಿಲ್ಲ, ಅವರಪ್ಪನ office, ನರೇಂದ್ರನ office. ಇದಕ್ಕೇನು budgetary provision ಬೇಕೇ? ಬೆಳಿಗ್ಗೆ 10.30 ಗಂಟೆಗೆ ಬೆಂಗಳೂರಿನಲ್ಲಿದ್ದರೆ ಕಚೇರಿಗೆ ಬಂದು ಕುಳಿತುಕೊಳ್ಳುವುದು ಬೇಡವೇನು? ನಂತರ Private staff. It is not private staff, it is the personal establishment of the Hon'ble Minister. ನಿಮ್ಮ personal establishment ನಲ್ಲಿ unimpeachable integrity ಇರುವವರು Private Secretaries ಆಗಿರಬೇಕು. Private Secretary should be more dearer to you, than your life partner. ನೀವು ಎಲ್ಲಾ ವಿಚಾರಗಳನ್ನು ಅವರಲ್ಲಿ ಗೌಪ್ಯತೆ ಹಾಗೂ ವಿಶ್ವಾಸದಿಂದ ಇಡುವಂತಹ ವ್ಯಕ್ತಿ ಆಗಿರಬೇಕು. Private Secretary ಯಾರಿರುತ್ತಾರೆ, ಅವರನ್ನು supersede ಮಾಡುವ PA ಗಳು establishment ನಲ್ಲಿರಬಾರದು. ನಿಮ್ಮನ್ನು taken for granted ಎಂದು ಮಾತನಾಡುವ Gun men ಗಳು ನಿಮ್ಮ ಬಳಿ ಇರಬಾರದು. ನಾನು ವಿಶೇಷವಾಗಿ ಅಧ್ಯಕ್ಷ ಪೀಠಕ್ಕೆ ವಿನಂತಿ ಮಾಡುತ್ತೇನೆ. Parliamentary Affairs Minister ಜೊತೆಗೆ ಮಾತನಾಡಿ Legislature ನಲ್ಲಿಯೇ ಒಂದು Section ಅನ್ನು open ಮಾಡಿ Legislators ಗೆ PA ಗಳಾಗಿ ಬರುವವರು, ಮುಖ್ಯಮಂತ್ರಿಗಳಾದಿಯಾಗಿ ಎಲ್ಲ ಮಂತ್ರಿಮಂಡಲದ ಸದಸ್ಯರಿಗೆ personal staff ಆಗಿ ಬರುವವರು, Opposition Leader ಗೆ, Chief Whip ಗೆ ಇವರಿಗೆಲ್ಲಾ personal staff ಆಗಿ ಬರುವವರು, they should be specially trained. ಆ pool ಮಾಡಬೇಕು. ಆ poolನಲ್ಲಿಯೇ select ಮಾಡಿಕೊಳ್ಳಬೇಕು. ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಆಯಾ ಮಂತ್ರಿಗಳು ಆಯಾ ಜಾತಿಗೆ ಸಂಬಂಧಿಸಿದ Private Secretary ಗಳನ್ನು ತೆಗೆದುಕೊಳ್ಳಬಾರದೆಂದು ಒಂದು ಆದೇಶ ಹೊರಡಿಸಿದರು. ಮೊನ್ನೆ ಯಾವಾಗಲೋ ರಾಯರೆಡ್ಡಿ, Caesar's wife ಅನ್ನು quote ಮಾಡುತ್ತಿದ್ದರು. I am not going into the entire history. The quote is very simple. 'It is not enough if Caesar's wife is

above suspicion, she shall appear to be so.' The context is different. I don't want to go in to the details. Apparently, ಎಲ್ಲಾ ವರ್ಗದ ಜನರಿಗೆ ನಿಮ್ಮ office ಗೆ ಬಂದು approach ಮಾಡುವುದಕ್ಕೆ, ನಿರ್ಭೀತ ವಾತಾವರಣ ಇರಬೇಕು, ನಿರ್ಮಲ ವಾತಾವರಣ ಇರಬೇಕು, Staff ದು ಆಯಿತು. ಇದಾದ ಮೇಲೆ ಎಷ್ಟು ಜನ ಮಂತ್ರಿಗಳು ಪ್ರವಾಸ ಮಾಡಿದ್ದಾರೆ? ನಮಗೆ reply ಕೊಡಲಿ. ಕಳೆದ ಎರಡು ವರ್ಷದಲ್ಲಿ ಪ್ರವಾಸ ಭತ್ಯವನ್ನು ಎಷ್ಟು claim ಮಾಡಿದ್ದಾರೆ? ಮೊದಲು ನಮಗೆ total ಅದು ಬೇಕು. ಇಷ್ಟು ಪ್ರವಾಸ ಭತ್ಯವನ್ನು ನೀವು ತೆಗೆದುಕೊಂಡಿದ್ದೀರಲ್ಲಪ್ಪ, ಇಡೀ ರಾಜ್ಯವನ್ನು ಸುತ್ತಿರುವಂತಹವರು ಎಷ್ಟು ಜನ? ಈಗ ನಮ್ಮ friend, Textile Minister, map ನಲ್ಲಿ ಶ್ರೀನಿವಾಸಪುರ ಎಲ್ಲಿದೆ ಎಂದು ಅವರಿಗೆ ಕೇಳಿ. ನಮ್ಮ ಊರಿನಲ್ಲಿ ನಾವು ಬಟ್ಟೆ ಹಾಕಿಕೊಳ್ಳುವುದಿಲ್ಲವೇನು? ನಮ್ಮೂರಿನಲ್ಲಿ ಒಂದು Textile Park ಮಾಡಬೇಕೆನ್ನುವ ಜವಾಬ್ದಾರಿ ಇವರಿಗೆ ಇಲ್ಲವೇನು? ಕೋಲಾರದವರು ಬೀದರ್‌ಗೆ ಹೋಗುವಂತಿಲ್ಲ, ಬೀದರ್‌ದವರು ಧಾರವಾಡಕ್ಕೆ ಬರುವಂತಿಲ್ಲ. ಧಾರವಾಡದವರು ಸಕಲೇಶಪುರಕ್ಕೆ ಬರುವಂತಿಲ್ಲ. ಅಂದರೆ ನೀವು ಮಂತ್ರಿಯಾಗುವುದು ನಿಮ್ಮ ಕುಟುಂಬಕ್ಕೆ, ನಿಮ್ಮ staff ಗೆ, ನಿಮ್ಮ constituency ಗೆ ಇಷ್ಟಕ್ಕೆ ಏನು? ಎಷ್ಟು ಜನ ಮಂತ್ರಿಗಳು ಅವರವರ ಇಲಾಖೆಗೆ ಸಂಬಂಧಿಸಿದಂತೆ . . .

ಶ್ರೀ ಬಾಬುರಾವ್ ಚಿಂಚನಸೂರ್ (ಜವಳಿ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ...

ಶ್ರೀ ಕೆ.ಆರ್. ರಮೇಶ್ ಕುಮಾರ್: Yes sir.

ಶ್ರೀ ಬಾಬುರಾವ್ ಚಿಂಚನಸೂರ್: ಕುಟುಂಬದ ಸಲುವಾಗಿ ನಾನು ಮಂತ್ರಿಯಾಗಿಲ್ಲ. ಆ ಮಾತನ್ನು ನೀವು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ತೆಗೆದುಕೊಂಡೆ, ಅವರು ಹೇಳಿದ ಮೇಲೆ ತೆಗೆದುಕೊಳ್ಳಬೇಕಲ್ಲವೇ? ಮತ್ತೆ ಇನ್ನೊಂದು caseಗೆ ಸಿಕ್ಕಿ ಹಾಕಿಕೊಳ್ಳುವುದಕ್ಕೆ ನಾನು ತಯಾರಿಲ್ಲ.

ಶ್ರೀ ಬಾಬುರಾವ್ ಚಿಂಚನಸೂರ್: ಜನರಿಗಾಗಿ ಮಂತ್ರಿಯಾಗಿದ್ದೇನೆ, ಕುಟುಂಬದ ಸಲುವಾಗಿ ನಾನು ಮಂತ್ರಿಯಾಗಿಲ್ಲ. ಒಂದು ಆಸ್ಪತ್ರೆಗೆ ಹೋಗಬೇಕಾದರೂ private car ತೆಗೆದುಕೊಂಡು ಹೋಗುತ್ತೇವೆ ನಾವು. ಇಲ್ಲಿಯತನಕ ಸರ್ಕಾರಿ ಗಾಡಿ ತೆಗೆದುಕೊಂಡು ಹೋಗಿಲ್ಲ.

ಉಪಾಧ್ಯಕ್ಷರು: ಅವರು ನಿಮ್ಮನ್ನಲ್ಲ . .

ಶ್ರೀ ಬಾಬುರಾವ್ ಚಿಂಚನಸೂರ್: ನಾವು ಜನರ ಸಲುವಾಗಿ ಕೆಲಸ ಮಾಡಿದ್ದೇವೆ. 6–6 ಸಲ ಗೆದ್ದು ಬಂದಿದ್ದೇವೆ, ಇನ್ನು ಮುಂದೆಯೂ ಗೆಲ್ಲತ್ತೇವೆ. ನಾವು ಜನರ ಸಲುವಾಗಿ ಮಂತ್ರಿಯಾಗಿದ್ದೇವೆ. ಕುಟುಂಬದ ಸಲುವಾಗಿ ಮಂತ್ರಿಯಾಗಿಲ್ಲ.

ಉಪಾಧ್ಯಕ್ಷರು: ಅವರು general ಆಗಿ ಹೇಳಿದರು.

ಶ್ರೀ ಕೆ.ಆರ್. ರಮೇಶ್ ಕುಮಾರ್: ಸಾಯುವವರೆಗೂ ಗೆಲ್ರಪ್ಪ, ಯಾರು ಬೇಡವೆಂದರು. ನೀವು ಗೆಲ್ಲುವುದಕ್ಕೆ ಹುಟ್ಟಿದ್ದೀರಿ, ನಾವು ಸೋಲುವುದಕ್ಕೆ ಹುಟ್ಟಿದ್ದೇವೆ. ನಿಮ್ಮ ಎದುರಿಗೂ ಸೋತು ಬಿಟ್ಟೆನಪ್ಪ ಹೋಗುತ್ತ. ನಾನು ಹೇಳಿದ್ದು ನೀವು ಪ್ರವಾಸ ಭತ್ಯೆ ತೆಗೆದುಕೊಳ್ಳುತ್ತೀರಿ ಎಂದಲ್ಲ. ನಮ್ಮ ಊರಿಗೆ ನೀವು ಬಂದಿದ್ದೀರಾ? ನೀವು ಚಿಂಚೋಳ ಮಂತ್ರಿಯೇ ಅಥವಾ ಕರ್ನಾಟಕ ರಾಜ್ಯದ ಮಂತ್ರಿಯೇ? ಕೋಲಾರಕ್ಕೆ ನೀವು ಬಂದಿದ್ದೀರಾ? ನಾನು ಹೇಳಿದ್ದು ರಾಜ್ಯದ ಮಂತ್ರಿಗಳೂ ಮಂತ್ರಿಗಳಾದವರು. Surprise inspections ಮಾಡಬೇಕು. Offices visit ಮಾಡಬೇಕು. Supposing, Home Minsiter ಆಗಿರುವವರು, surprising ಆಗಿ ಒಂದು Police Station ಗೆ ಹೋಗುತ್ತಾರೆ. Health Minsiter ಆಗಿರುವವರು ಒಂದು Hospital visit ಮಾಡುತ್ತಾರೆ. Urban Development Minister ಒಂದು Corporation Office, Municipality Office ಗೆ ಹೋಗುತ್ತಾರೆ. Revenue Minister ತಹಶೀಲ್ದಾರ್ ಕಚೇರಿಗೆ ಹೋಗುತ್ತಾರೆ. Food Minister ತಕ್ಷಣ ಹೋಗುತ್ತಾರೆ, ಎಲ್ಲೋ ಒಂದು ಕಡೆಗೆ DD Office ಮತ್ತೊಂದು complaint. . . ಹೇಗಿರುತ್ತದೆ ಆಡಳಿತ? ನಿಮಗೆ ಕಷ್ಟವೇನು? ನೀವು ಆಚೆ ಬಂದರೆ Gun man,

ಕುಳಿತುಕೊಂಡರೆ ಎ.ಸಿ. ಕಾರು, ಓಡಾಡಿದರೆ T.A. ಕಷ್ಟವೇನು? ಏಕೆ ಓಡಾಡಲಿಲ್ಲ? ಸಿ.ಎಂ. ಏನಾದರೂ ಓಡಾಡಬೇಡಿ, ನೀವೆಲ್ಲಾ ನನಗಿಂತ ಜಾಸ್ತಿ popular ಆಗಿಬಿಡುತ್ತೀರಿ, ನನಗೆ ಅಪಾಯ ಎಂದು ಹೇಳಿದ್ದಾರೆಯೇ? ಆ ರೀತಿ Condition ಹಾಕಿದ್ದಾರೆಯೇ? ಅಥವಾ High Command ನಿಂದೇನಾದರೂ ಹೇಳಿದ್ದಾರೆಯೇ ಏ ಯಾರು ಓಡಾಡಬಾರದು ಎಂದು. High Command ಹೇಳಿಲ್ಲ, ಸಿ.ಎಂ. ಹೇಳಿಲ್ಲ, ಜನರೂ ಇವರಿಗೆ ಅರ್ಜಿ ಬರೆದು ಹೇಳಿಲ್ಲ, ಆದರೂ ಇವರು ಹೋಗಲಿಲ್ಲ. ಆದರೆ T.A. draw ಆಗಿದೆ.

Departure Bangalore, arrival Constituency. Departure Constituency, arrival Bangalore. ಅಂದರೆ ನೀವು constituency ಮಂತ್ರಿಗಳೇ? ನೀವು ಕೂಡಾ ಹಾಗೆ ಮಾಡಿರುವುದು. ಉಮೇಶ್ ಕತ್ತಿ ಏಕೆ ನಗುವುದು? ಏನು ನೀವು ಬಂದಿದ್ದಿರಾ ನಮ್ಮ ಊರಿಗೆ?

ಶ್ರೀ ಉಮೇಶ್ ವಿ. ಕತ್ತಿ: You can check it. ನಾನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಹೋಗಿದ್ದೇನೆ. ಆಮೇಲೆ ಜವಳಿ ಮಂತ್ರಿಗಳು ನಿಮ್ಮ ಶ್ರೀನಿವಾಸಪುರದಲ್ಲಿ ಹತ್ತಿ ಇಲ್ಲ, ಯಾವುದೂ mill ಇಲ್ಲ, ಏಕೆ ಹೋಗಬೇಕಲ್ಲಿಗೆ?

ಶ್ರೀ ಕೆ.ಆರ್. ರಮೇಶ್ ಕುಮಾರ್: ಏ ನಾನಿದ್ದೀನಲ್ರಿ.

ಶ್ರೀ ಉಮೇಶ್ ವಿ. ಕತ್ತಿ: ನೀವಿದ್ದೀರಿ ಆ ವಿಷಯ ಬೇರೆ. ಜವಳಿ ಇಲ್ಲ, ಹತ್ತಿ mill ಇಲ್ಲ ಮತ್ತೇಕೆ ಹೋಗಬೇಕು ಅಲ್ಲಿಗೆ?

ಶ್ರೀ ಕೆ.ಆರ್. ರಮೇಶ್ ಕುಮಾರ್: ಏನು ಮಜಾ ಬೇಕು ಮಾಡಿಸಿ ಕಳುಹಿಸಿಕೊಡುತ್ತಿದ್ದೆ ನಾನು ತಂದು. ನೀವೇನು? ನೀವು ನಮ್ಮನ್ನು underestimate ಮಾಡಿದ್ದೀರಿ. ನಮಗೆ ನೀರಿಲ್ಲದೆ ಇರಬಹುದು, ಬೆಳೆ ಇಲ್ಲದಿರಬಹುದು, ಬಡತನ ಇರಬಹುದು, ನಿಮ್ಮನ್ನು ಖುಷಿಯಾಗಿ ಕಳುಹಿಸುತ್ತೇವೆ. ಬನ್ರಿ ನಮ್ಮ ಬಳಿ ಎಲ್ಲಾ ವ್ಯವಸ್ಥೆ ಇದೆ. ಬರದೆ ಕೆಟ್ಟಿದ್ದೀರಿ ನೀವು.

ಶ್ರೀ ಆರ್. ಜಗದೀಶ ಕುಮಾರ್: ರಮೇಶ್ ಕುಮಾರ್ ಸಾಹೇಬರೆ. ಈ surprise inspection ಕಳೆದ 10 ವರ್ಷದಿಂದ ಏಕೆ ಆಗುತ್ತಿಲ್ಲ ಎಂದರೆ, ಈ private establishment staff ಜೊತೆಗೆ Gun man ಇರುತ್ತಾರೆ. ಬಹಳ ಜನ ಮಂತ್ರಿಗಳ ಹತ್ತಿರ ಮತ್ತು ದೊಡ್ಡ ದೊಡ್ಡ leader ಬಳಿ Gun man ಆಗುವುದಕ್ಕೆ demand ಏಕೆ ಎಂದರೆ ಇದಕ್ಕೆ. ಇವರು ಯಾವುದೂ surprise ಮಾಡುವುದಕ್ಕೆ ಆಗುವುದಿಲ್ಲ. ಇವರು ಅವರಿಗೂ ಹೇಳದೆ ರಾತ್ರಿ ಎದ್ದು ಹೋಗಬೇಕು ಅಷ್ಟೇ ಹೊರತು, ಇಲ್ಲದಿದ್ದರೆ ಹೋಗುವುದಕ್ಕೆ ಮೊದಲೇ ಎಲ್ಲಾ ಫೋನ್ ಹೋಗಿ ಬಿಡುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನಂತರ ಹೋದ ಕಡೆಗಳಲ್ಲಿ ನೀತಿಯಲ್ಲಿ ಇಲ್ಲದೆ ಇರುವುದು, declared policy ಯಲ್ಲಿ ಇಲ್ಲದೆ ಇರುವುದು, implement ಮಾಡುವುದಕ್ಕೆ ಸಾಧ್ಯವಿಲ್ಲದ assurances ಅನ್ನು irresponsible ಆಗಿ ಕೊಡುವಂತಹುದು ಇವೆಲ್ಲಾ ತಪ್ಪು. ಇನ್ನು time, honeymoon period ಕಳೆದಿದೆ, ನಿಮ್ಮಿಂದ ಈ ರಾಜ್ಯ ಬಹಳ ನಿರೀಕ್ಷೆ ಮಾಡುತ್ತಿದೆ. ತಾವು GAD ಯನ್ನು head ಮಾಡುತ್ತಿದ್ದೀರಿ. ಮಂತ್ರಿಮಂಡಲದ ನಾಯಕತ್ವ ವಹಿಸಿಕೊಂಡಿದ್ದೀರಿ. ಈಗಲಾದರೂ ಇವರೆಗೆಲ್ಲ ಕಿವಿ ಹಿಂಡಿ. ಏನಾಯಿತು, ನಾವೂ ಅವರು ಒಂದು understanding ಗೆ ಬಂದಿದ್ದೇವೆ. ಏನು ಮಾಡುವುದು, ಸ್ವಲ್ಪ delicacy ನೇರವಾಗಿ ನಾನು ಹೇಳುವುದಕ್ಕಾಗುವುದಿಲ್ಲ ಎಂದು ಹೇಳಿದರು. ಬಿಡಿ ನಿಮಗ್ಯಾಕೆ ನಾನಿದ್ದೇನೆ, I am prepare to take that. ಇವು ಯಾವ ಒಂದು ಮಾತೂ ನನ್ನದಲ್ಲ. ಎಲ್ಲಾ ಅವರ ಮಾತು. But, ನಮ್ಮ ತರಹ ಯಾರಾದರೂ ಒಬ್ಬರು cushion ಇರಬೇಕಾಗುತ್ತದೆ. I am prepared to play that role. I am ready to make the sacrifice for my leader.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಇಷ್ಟೆಲ್ಲಾ ಮಾತನಾಡಿದರೂ ಮಂತ್ರಿ ಪದವಿ ಕೊಡಲಿಲ್ಲ. ನನಗೇನನಿಸುತ್ತದೆ, ಇದು ನನ್ನ ಮಾತಲ್ಲ, ಬೇರೆಯವರ ಮಾತು ಎಂದು ಹೇಳುತ್ತೀರಿ. ಇಷ್ಟೆಲ್ಲಾ ಆದರೂ ಮಂತ್ರಿ ಕೊಡಲಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಪುಟ್ಟಣ್ಣಯ್ಯನವರೆ, ಇದರಲ್ಲಿ ಎರಡು ವಿಷಯ ಇದೆ. ನನಗೆ ಮಂತ್ರಿ ಆಗಿ ಕೆಲವು ಸುಖಗಳನ್ನು ಅನುಭವಿಸಬಹುದಾಗಿದ್ದ ವಯಸ್ಸಿನಲ್ಲಿ ಮಂತ್ರಿಗಿರಿ ಸಿಗಲಿಲ್ಲ. ಈಗ ಅದೇನು ಹೆಚ್ಚು ಪ್ರಯೋಜನವಾಗುವುದಿಲ್ಲ. ಈಗ ನನಗೆ at least ಏನೋ ಒಂದು ಚೂರು publicity ಸಿಗುತ್ತಿದೆ. This gives me a better kick than being a Minister. ಇವರು ನನ್ನ well-wishers, ನೀವು ಹೀಗೆಯೇ ಮುಂದುವರೆಯಿರಿ ಎಂದು ಹೇಳುತ್ತಿದ್ದರು.

ಶ್ರೀ ಬಿ.ಬಿ. ನಿಂಗಯ್ಯ: ನಿಮಗೆ ಮಂತ್ರಿ ಪದವಿ ಸಿಕ್ಕಿದ್ದರೆ ರಾಜ್ಯಕ್ಕೆ ಒಳ್ಳೆಯದಾಗುತ್ತದೆ ಎಂಬ ಭಾವನೆಯಿಂದ ಹೇಳುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ರಾಜ್ಯಕ್ಕೆ ಇವರೆಲ್ಲಾ ಸೇರಿ ಮಾಡಿದರೆ ನಾವು ಬೇಡವೆಂದು ಹೇಳುತ್ತೇವೆಯೇ, ಎಲ್ಲಾ ನಮ್ಮ ಮಕ್ಕಳಿದ್ದಾರೆ. ಯಾರ್ಯಾರ ತಂದೆಯವರು ನಮ್ಮ colleagues ಆಗಿದ್ದರು, ಅವರ ಮಕ್ಕಳೆಲ್ಲಾ ನಮ್ಮ ಎದುರಿಗೆ ಆಡಳಿತ ನಡೆಸುತ್ತಿದ್ದಾರೆ. ನಮಗೆ ಅದಕ್ಕಿಂತ ಆನಂದ ಬೇರೆ ಇಲ್ಲ. ನನ್ನ ಮಗ ಇದ್ದರೆ ಎಷ್ಟು ಸಂತೋಷವೋ ಅಷ್ಟೇ ಸಂತೋಷ. ನಮ್ಮ ಆಸೆ ಏನೆಂದರೆ, ಎಚ್ಚೆತ್ತುಕೊಳ್ಳಿ, ಅಧ್ಯಕ್ಷರೆ ಕೊನೆಗೆ ಆಡಳಿತ ಸುಧಾರಿಸಬೇಕೆಂಬ ಮಾತನ್ನು ಹೇಳಿ conclude ಮಾಡುತ್ತೇನೆ. 60ರ ದಶಕದಲ್ಲಿ 'ತೀಸ್ರಿ ಕಸಂ' ಎಂಬ ಒಂದು ಹಿಂದಿ ಸಿನಿಮಾ ಬಂದಿತ್ತು, ರಾಜ್‌ಕಪೂರ್ starring, ಅದರ ಸಂಗೀತ ಶಂಕರ್ ಜಯಕಿಶನ್, ಸಾಹಿತ್ಯ ಬರೆದಿದ್ದು ಶೈಲೇಂದ್ರ, ಮುಖೇಶ್ ಹಾಡಿದ್ದು. 'ಸಜನರೆ ಝೂಟ್ ಮತ್ ಬೋಲೋ ಖುದಾ ಕೆ ಪಾಸ್ ಜಾನಾ ಹೈ, ನ ಹಾತೀ ಹೈ, ನ ಘೋಡಾ ಹೈ ವಹಾ ಪೈದಲ್ ಹಿ ಜಾನಾ ಹೈ' ಸುಳ್ಳು ಹೇಳಬೇಡಿ, ದೇವರ ಹತ್ತಿರಕ್ಕೆ ಹೋಗಬೇಕಾಗುತ್ತದೆ, ಅಲ್ಲಿಗೆ ಹೋಗುವುದಕ್ಕೆ ಕುದುರೆನೂ ಇಲ್ಲ, ಆನೆಯೂ ಇಲ್ಲ, ನಡೆದುಕೊಂಡು ಹೋಗಿ ಸಾಯಬೇಕಾಗುತ್ತದೆ. 'ತೇರಿ ಮೆಹೆಲ್ ಚೌಪರಸ್ ಸಬ್ ಯಹೀ ಪೆ ರಹೆ ಜಾಯೆ,' ನಿಮ್ಮ ಮನೆ, ಬಂಗಲೆ ನಿನ್ನ ಸರ್ವಸ್ವ ಎಲ್ಲಾ ಇಲ್ಲಿಯೇ ಉಳಿದು ಬಿಡುತ್ತದೆ. ಏನೂ ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. 'ಭಲಾ ಸೇ

ಭಲಾ ಹೀ ಹೋಗಾ, ಬುರಾ ಸೇ ಬುರಾ ಹೀ ಹೋಗಾ'. . ..ನಾಳೆ ಸಾಯಂಕಾಲ House adjourn ಆಗುತ್ತದೆ, I will provide the entertainment.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ತಾವು ಹೇಳಿದ ಹಾಗೆ ನಮ್ಮೂರಿನಲ್ಲಿ ಒಬ್ಬನಿಗೆ ಏಕೋ ಇಷ್ಟು ಸುಳ್ಳು ಹೇಳುತ್ತೀಯ ಎಂದರೆ, ನಿಜ ಹೇಳುವುದಕ್ಕೆ ಬೇಜಾರು ಕಣಣ್ಣ, ಅದಕ್ಕೆ ಸುಳ್ಳು ಹೇಳುತ್ತೇನೆಂದು ಹೇಳುತ್ತಾನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಇಷ್ಟನ್ನು ಹೇಳಿ ದಯಮಾಡಿ ಮಾನ್ಯ ಮುಖ್ಯ ಮಂತ್ರಿಗಳು, ಜೀವನದಲ್ಲಿ ಅವಕಾಶ ಬಯಸಿದವರಿಗೆಲ್ಲ ಬರುವುದಿಲ್ಲ. ಹನುಮಂತಯ್ಯನವರು ವಿಧಾನಸೌಧ ಕಟ್ಟಿದರು, ಆದರೆ ಒಳಗೆ ಬರುವುದಕ್ಕಾಗಲಿಲ್ಲ. ನಾವೆಲ್ಲಾ ಹೋರಾಟ ಮಾಡಿ ಬಹಳ ಆಸೆಯಿಂದ ಮಾನ್ಯ ದೇವೇಗೌಡರನ್ನು ಮುಖ್ಯ ಮಂತ್ರಿಗಳನ್ನಾಗಿ ಮಾಡಿದೆವು. ನಿಜವಾಗಿ that was a very good Government. ಏನೇನೋ ಕಾರಣಗಳು, ನಮ್ಮದಲ್ಲದ ಕಾರಣಗಳಿಂದಾಗಿ ಅವರು ಇಲ್ಲಿಂದ ಹೋಗಬೇಕಾಗಿ ಬಂದಿತು. ರಾಜ್ಯವೂ ಕೆಟ್ಟಿತು, ಅವರೂ ಕೆಟ್ಟರು, ನಾವೂ ಎಲ್ಲಾ ಕೆಟ್ಟಿವಿ. ನಿಮಗೆ rich experience ಇದೆ, ನಮಗೆ ಗೊತ್ತಿದೆ, ಇವರು Finance Minister ಆಗಿದ್ದಾಗ ಇವರು maintain ಮಾಡಿದ financial discipline, ಆ ಸರ್ಕಾರಗಳು efficient ಆಗಿ ನಡೆಯುವುದಕ್ಕೆ ಅವಕಾಶ ಆಯಿತು. ಈಗ, you are the Chief Minister, you are the Finance Minister. ಏಕೆ ಹೀಗೆ ಆಗಿ ಹೋಯಿತು? ಹೀಗಾಗಬಾರದು. ಬರುವ ವರ್ಷದ demands ಮೇಲೆ GAD ಮೇಲೆ ಮಾತನಾಡುವಾಗ ನಾವು ಎದೆ ತಟ್ಟಿಕೊಂಡು ಮಾತನಾಡಬೇಕು, ಖುಷಿಯಿಂದ ಮಾತನಾಡಬೇಕು, ಹೆಮ್ಮೆಯಿಂದ ಮಾತನಾಡಬೇಕು. ನಾನು ಕೆಲವು ಸಲ ಭಾವುಕನಾಗುತ್ತೇನೆ. ರಾಜಕೀಯವಾಗಿ ನನ್ನನ್ನು ಪೋಷಿಸಿದವರು, ಬೆಳೆಸಿದವರು, ಆಶೀರ್ವಾದ ಮಾಡಿದವರು ದೇವರಾಜ ಅರಸ್‌ರವರು. ಅವರ ಆತ್ಮಕ್ಕೆ ಶಾಂತಿ ಸಿಗಬೇಕಾಗಿದ್ದರೆ ಮಾನ್ಯ ಸಿದ್ದರಾಮಯ್ಯನವರೆ, ಅವರ ತ್ಯಾಗದ ಫಲಶೃತಿ ಇವತ್ತು ನೀವು ಈ ಸ್ಥಾನದಲ್ಲಿ ಕೂತಿದ್ದೀರಿ. ನಿಮ್ಮನ್ನು ಸಮಾಜ ಒಪ್ಪಿಕೊಳ್ಳಲೇಬೇಕಾದ ಸ್ಥಿತಿ ಬಂದಿದೆ. ಅವರು ಅರ್ಧದಲ್ಲಿ ನಿಲ್ಲಿಸಿದ ಪ್ರಯೋಗಗಳನ್ನು ಮುಂದುವರೆಸಿಕೊಂಡು ಹೋಗಿ ಎಂದು ನಿಮಗೆ ಹಾರೈಸಿ,

ಬರುವ ವರ್ಷ ಇನ್ನೂ ಉತ್ತಮ ಮಾನಸಿಕ ಸ್ಥಿತಿಯಲ್ಲಿ ನಾವು ಇದ್ದು ಸಭೆ ನಡೆಸಿಕೊಡುವುದಕ್ಕೆ ಅವಕಾಶ ಮಾಡಿ ಕೊಡಿ ಎಂದು ಹೇಳಿ, ಎಲ್ಲ ನಮ್ಮ ಸಲಹೆಗಳನ್ನು ಸದ್ಭಾವನೆಯಿಂದ ಸ್ವೀಕರಿಸಬೇಕೆಂದು ಹೇಳಿ. ಬಹಳ ತಾಳ್ಮೆಯಿಂದ ನನಗೆ ಸಮಯ ಕೊಟ್ಟಿದ್ದೀರಿ, ನಿಮಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಉಪಾಧ್ಯಕ್ಷರು: ಜಗದೀಶ್ ಕುಮಾರ್ ಹತ್ತು ನಿಮಿಷದಲ್ಲಿ ಮುಗಿಸಿ.

ಶ್ರೀ ಆರ್. ಜಗದೀಶ ಕುಮಾರ್ (ಹೆಬ್ಬಾಳ): ಮಾನ್ಯ ಅಧ್ಯಕ್ಷರೆ, ನಾನು ಸಮಾಜ ಕಲ್ಯಾಣ ಇಲಾಖೆ ಬೇಡಿಕೆ ಮೇಲಿನ ಚರ್ಚೆಯಲ್ಲಿ ಪಾಲ್ಗೊಳ್ಳುತ್ತೇನೆ. ಕಳೆದ ಎರಡು ವರ್ಷಗಳಲ್ಲಿ ನಾನು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸದಸ್ಯನಾದ ಸಮಯದಲ್ಲಿ ಬೈಲಹೊಂಗಲದ ವಸತಿ ಶಾಲೆಗೆ ನಮ್ಮ ಅಧ್ಯಕ್ಷರ ಜೊತೆ ಅನಿರೀಕ್ಷಿತ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಅಲ್ಲಿ ಮಕ್ಕಳಿಗೆ ಕುಡಿಯುವುದಕ್ಕೆ ನೀರು ಇರಲಿಲ್ಲ. ಅಲ್ಲಿ ಒಂದು ಫಲಕದ ಮೇಲೆ ಅವರಿಗೆ ಏನೇನು ಕೊಡುತ್ತೇವೆಂದು ಸೂಚನಾ ಪಟ್ಟಿಯಲ್ಲಿ menu chart ಎಂದು ಬರೆದಿದ್ದರು. ನಮ್ಮ ಅಧ್ಯಕ್ಷರು ಮತ್ತು ನಾವು ಹೋಗಿ ಕೇಳಿದಂತಹ ಸಂದರ್ಭದಲ್ಲಿ, ಆ menu chart ನಲ್ಲಿರುವಂತಹ ಆಹಾರವನ್ನು ತಯಾರು ಮಾಡಲು ಬೇಕಾದಂತಹ ಸಾಮಗ್ರಿಗಳೇ ಅಲ್ಲಿ ಇರಲಿಲ್ಲ. ಈ ಬಗ್ಗೆ ಕೇಳಿದರೆ, ಸಾರ್ ಅಲ್ಲಿ ಬರೆದಿರುತ್ತೇವೆ ಅಷ್ಟೆ, ಆದರೆ ಅದನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಬೇರೆ ಏನೂ ಬೇಡ, ಅಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಆ ಮಕ್ಕಳಿಗೆ ಹೊದ್ದುಕೊಳ್ಳುವುದಕ್ಕೆ ಸರಿಯಾದ ಹೊದಿಕೆ ಇರಲಿಲ್ಲ. ಆ ಮಕ್ಕಳನ್ನು ಕೇಳುವಂತಹ ಸಂದರ್ಭದಲ್ಲಿ, ಸಾರ್ ದಯವಿಟ್ಟು ನಮ್ಮನ್ನು ಕೇಳಬೇಡಿ, ಇಲ್ಲಿ ತಾವು ಏನಾದರೂ ಕೇಳಿದ್ದನ್ನು ನಾವು ಹೇಳಿದರೆ, ನೀವು ಹೋದ ಮೇಲೆ ನಮಗೆ ತೊಂದರೆಯಾಗುತ್ತದೆ ಎಂದು ಹೇಳಿದರು. ಇದು ಬೈಲಹೊಂಗಲದ ಒಂದೇ ಹಾಸ್ಟೆಲ್ ಅಲ್ಲ, ಮತ್ತೆ ಅಲ್ಲಿ ಸಾಯಂಕಾಲ ಎಂಟು ಗಂಟೆಗೆ ಕೊಡಬೇಕಾದ ಚಪಾತಿ ನಾಲ್ಕು ಗಂಟೆಗೇ ready ಮಾಡಿ ಇಟ್ಟಿದ್ದಾರೆ. ಅದು ಒಳ್ಳೆ rubber ಇದ್ದ ಹಾಗೆ ಇದೆ. ಈ ರೀತಿಯಾದ ಪರಿಸರ ಅಲ್ಲಿ ಇದೆ. 16,000 ಕೋಟಿ ರೂ.ಗಳನ್ನು ನಾನು ಮಾಡುತ್ತೇನೆ, ಮುಂದಿನ

ಬಾರಿ 20,000 ಕೋಟಿ ರೂ.ಗಳನ್ನು ಮಾಡುತ್ತೇವೆ, ಅದಲ್ಲ, ಮಾಡುವಂತಹ ಹಣದಿಂದ ಸರಿಯಾದಂತಹ ಉಪಯೋಗವಾಗುವುದಕ್ಕೆ ಆ ನಿಟ್ಟಿನಲ್ಲಿ ತಾವು ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅದೇ ರೀತಿ, ಈ ಸಮಾಜ ಕಲ್ಯಾಣ ಇಲಾಖೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಲ್ಲಾ contractor ಗಳಿಗೂ 24% ಇವರಿಗೂ ಕೊಡಬೇಕೆಂದು ಹೇಳಿದಂತಹ ಸಂದರ್ಭದಲ್ಲಿ ಇನ್ನು mining ನಲ್ಲಿ ಆಗಿಲ್ಲ. Mining ನಲ್ಲಿ ತರುವಂತಹ ಯತ್ನಕ್ಕೆ ಸಮಾಜ ಕಲ್ಯಾಣ ಮಂತ್ರಿಗಳು ಅದರ ಬಗ್ಗೆ ಸ್ವಲ್ಪ ಕಾಳಜಿ ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಮಾತನಾಡಬೇಕು. ಇಲ್ಲದಿದ್ದರೆ ಏನು ಮಾಡುತ್ತಾರೆ, ಈ ಅಧಿಕಾರಿಗಳು mining ತುಂಬ ದೊಡ್ಡ sector, ನೂರಾರು ಕೋಟಿ ರೂ.ಗಳ investment ಹಾಕಬೇಕಾಗುತ್ತದೆ, ಅದಕ್ಕಾಗಿ ಅಲ್ಲಿ reservation ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. Mining ಮಾಡುವಂತಹ areaಗಳಲ್ಲಿ ಬಹಳಷ್ಟು areaಗಳು SC/ST lands ಇರುತ್ತದೆ, ಆದರೆ ಅಲ್ಲಿ ಅವರು investment ಮಾಡುವುದಕ್ಕಾಗುವುದಿಲ್ಲವೆಂದರೆ, ಅವರ Co-operative societies ಮಾಡಿಸಿ, ಅದರ ಮೂಲಕ mining permission ಕೊಟ್ಟರೆ, resources of the state ಏನಿದೆ, ಅದನ್ನು 24% ಅವರಿಗೂ ಸಹ ಕೊಡುವುದಕ್ಕಾಗುತ್ತದೆ, ಅದರ ಬಗ್ಗೆ ಸ್ವಲ್ಪ ಕಾಳಜಿ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. Food and Civil Supplies Minister ಇದ್ದಾರೆ. SC/ST colonyಗಳಲ್ಲಿ ಈ BPL cardಗಳನ್ನು ಕೊಟ್ಟಿದ್ದೀರಿ. ಅಲ್ಲಿ ಬಹಳ ಕಡೆ Food Distribution System ಅವರ ಕೈಯಲ್ಲಿ ಇಲ್ಲ. ಅದಕ್ಕಾಗಿ ಒಂದು ಸಲಹೆ ಏನೆಂದರೆ, ಎಲ್ಲಿ SC/ST colony ಇದೆ, ಅವರದೇ ಒಂದು Co-operative Society ಮಾಡಿ ಆ food Distribution System ಅವರಿಗೆ ಕೊಡಿ. ಅವರು ಅದನ್ನು manage ಮಾಡಿಕೊಳ್ಳುತ್ತಾರೆ. ಆಗ ಬೇರೆಯವರು ಹೋಗಿ ಅವರನ್ನು exploit ಮಾಡುವಂತಹ ಕೆಲಸ ನಡೆಯುವುದಿಲ್ಲ. ರಾಮನಗರದಲ್ಲಿ ಒಬ್ಬರು District Social Welfare Officer ಏನೋ, ನಾಗರಾಜಪ್ಪ ಎಂದು, ಎಲ್ಲಾ ಹಾಸ್ಟೆಲ್‌ಗಳಿಗೆ ಹೋಗುವುದು, ಅವರು

ಆಯುಷ್ ಡಾಕ್ಟರ್., deputation ಮೇಲೆ Social Welfare Department ಗೆ ಬಂದಿದ್ದಾರೆ. ಅವರು ಪ್ರತಿ ಹಾಸ್ಟೆಲ್‌ಗೆ ಹೋಗುವುದು ಆ ಹೆಣ್ಣುಮಕ್ಕಳಿಗೆ ಕಿರುಕುಳ ಕೊಡುವುದು, ಇವೆಲ್ಲಾ ಮಾಡುತ್ತಿದ್ದರು. ಅದರ ಬಗ್ಗೆ ಮಾನ್ಯ ಡಿ.ಕೆ. ಶಿವಕುಮಾರ್‌ರವರಿಗೂ ಗೊತ್ತಾಯಿತು, ಅವರ ಸಹೋದರನಾದಂಥ ಡಿ.ಕೆ. ಸುರೇಶ್‌ರವರಿಗೂ ಗೊತ್ತಾಯಿತು, ಅವರ ಬಗ್ಗೆ ಹೇಳಿ ಅವರನ್ನು ಟ್ರಾನ್ಸ್‌ಫರ್ ಮಾಡಿಸಿದರೆ, actually ಅವರನ್ನು parent department ಗೆ ವಾಪಸ್ಸು ಕಳುಹಿಸಿ ಎಂದು file ತಮ್ಮ ಹತ್ತಿರ ಬಂದರೆ ಮಂತ್ರಿಗಳೆ, ಅವರನ್ನು Assistant Director ರನ್ನಾಗಿ KREIS ಸಂಸ್ಥೆಯಲ್ಲಿ ಬೆಂಗಳೂರಿನಲ್ಲಿ ಹಾಕಿಕೊಂಡಿರಿ. ಅವರು ಯಾವಾಗಲೂ ತಮ್ಮ ಮನೆಯ ಹತ್ತಿರ ಕಾಣುತ್ತಿರುತ್ತಾರೆ. ಅವರು ನಿಮಗೆ ಆಪ್ತರು ಎಂದು ನಾನು ಹೇಳುವುದಿಲ್ಲ. ಆದರೆ ಹೆಣ್ಣುಮಕ್ಕಳಿಗೆ ಕಿರುಕುಳ ಕೊಟ್ಟು ಬಂದವರು ನಿಮ್ಮ ಮನೆಯ ಹತ್ತಿರ ಕಾಣಿಸಿಕೊಳ್ಳುವುದು, ನಿಮ್ಮ ಆಫೀಸ್‌ನಲ್ಲಿ ಕಾಣಿಸಿಕೊಳ್ಳುವುದು, ಈ ರೀತಿಯಾದರೆ ನಿಮ್ಮ ಬಗ್ಗೆ ಏನಾಗುತ್ತದೆ, ಅದಕ್ಕಾಗಿ ಅಂಥವರನ್ನು ಸ್ವಲ್ಪ ದೂರವಿಡಿಯೆಂದು ಕೇಳಿಕೊಳ್ಳುತ್ತೇನೆ. ಈ KREIS ಸಂಸ್ಥೆಯನ್ನು ಮ್ಯಾನೇಜ್ ಮಾಡುವುದಕ್ಕೆ ಒಂದು Body ಯನ್ನೇನೋ ಮಾಡಿಕೊಂಡಿದ್ದೀರಿ. ಅದಕ್ಕೆ ತಾವೇ ಅಧ್ಯಕ್ಷರು, ಉಪಾಧ್ಯಕ್ಷರು social welfare department Principal Secretary ಆಗಬೇಕಾಗಿತ್ತು. 80% of the funds ಬರುವುದೇ social welfare department ನಿಂದ. ಆದರೆ ತಾವು ಇನ್ನೂ ಆ ಬೈಲಾವನ್ನು ಕೂಡ amendment ಮಾಡಿಕೊಳ್ಳದೆ, backward classes department ನವರನ್ನು ತಾವು Vice president ಮಾಡಿದ್ದೀರಿ, ಅದನ್ನು ಮಾಡಬೇಡಿ ಎಂದು ನಾನು ಸಲಹೆ ಕೊಡಲು ಇಚ್ಛೆಪಡುತ್ತೇನೆ. ಇನ್ನು ಈಗಾಗಲೇ ಕಳೆದ ಎರಡು ವರ್ಷಗಳಿಂದ ಅಬಕಾರಿ ಇಲಾಖೆಯಲ್ಲಿ CL-2, CL-9 ಲೈಸನ್ಸ್‌ಗಳನ್ನು ಕೊಡುವಂಥ ಸಂದರ್ಭದಲ್ಲಿ ಯಾವ ರೀತಿ ಅನ್ಯಾಯವಾಗಿದೆಯೆಂದು ಈ ಸರ್ಕಾರದ ಗಮನಕ್ಕೆ ನಾವು ತಂದಿದ್ದೇವೆ. ಇಡೀ ರಾಜ್ಯದಲ್ಲಿ 1991 ರ ಜನಗಣತ್ತಿಯ ಆಧಾರದ ಮೇಲೆ CL-2, CL-9 ಲೈಸನ್ಸ್‌ಗಳನ್ನು ಕೊಟ್ಟರು. 4 ಸಾವಿರ CL-2 ಇದೆ ಮಾನ್ಯ ಸಮಾಜ ಕಲ್ಯಾಣ ಸಚಿವರೆ, ಅದರಲ್ಲಿ

ಅನುಸೂಚಿತ ಜಾತಿಗೆ 56 ಕೊಟ್ಟಿದ್ದೀರಿ, ಅನುಸೂಚಿತ ಪಂಗಡಕ್ಕೆ 46 ಕೊಟ್ಟಿದ್ದೀರಿ. 4 ಸಾವಿರ ಲೈಸೆನ್ಸ್ ಕೊಟ್ಟಂಥ ಸಂದರ್ಭದಲ್ಲಿ, ಆಮೇಲೆ ಇದರಿಂದ 1000 ಲೈಸೆನ್ಸ್‌ನ್ನು ಜಾಸ್ತಿ ಮಾಡಿ ಅವರಿಗೆ ಕೊಡಿ ಎಂದು ಹೇಳಿದರೆ, ಆ ಇಲಾಖೆಯಲ್ಲಿ ಒಂದು ಪ್ರಪೋಸಲ್ ರೆಡಿ ಮಾಡಿದ್ದಾರೆ. ಒಂದು ಸಾವಿರ ಲೈಸೆನ್ಸ್ ಕೊಡುವುದು, ಅದರಲ್ಲಿ 240 ಮಾತ್ರ ಎಸ್‌ಸಿ/ಎಸ್‌ಟಿಗೆ ಕೊಡಬೇಕೆಂದು. ಏಕಪ್ಪಾ ಎಂದರೆ ಈಗ ಹೊಸದಾಗಿ ಕೊಡುವುದರಲ್ಲಿ ಮಾತ್ರ 24% ಕೊಡುತ್ತಾರಂತೆ. ಈಗಾಗಲೇ ಕೊಟ್ಟಿರುವುದರಲ್ಲಿ 24% ಕೊಡುವುದಕ್ಕಾಗುವುದಿಲ್ಲ, ಕೋರ್ಟಿಗೆ ಹೋಗಿಬಿಡುತ್ತಾರೆ ಎನ್ನುತ್ತಾರೆ. ಕೋರ್ಟಿಗೆ ಹೋಗುವ ಹಾಗೆ ಮಾಡುವವರು ಇವರೇ. ಏಕೆಂದರೆ ಇವರ ಮನಸ್ಥಿತಿಯಲ್ಲಿ 4 ಸಾವಿರ ಲೈಸೆನ್ಸ್ ಕೊಡುವಂಥ ಸಂದರ್ಭದಲ್ಲಿ ಈ ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಅನ್ಯಾಯವಾಗಿದೆ, ಆ ಅನ್ಯಾಯವಾಗಿರುವಂಥ ಸಮುದಾಯಕ್ಕೆ ಅದೂ ಕೂಡ ಬ್ಯಾಕ್‌ಲಾಗ್ ಇದ್ದಂತೆ ಅಲ್ಲವೆ, ಏಕೆಂದರೆ excise license is nothing but a privilege given by the State ಎಂದು Court order ಆಗಿದೆ. ಆದ್ದರಿಂದ ಅದರಲ್ಲಿ backlog ಇದ್ದಂತಲ್ಲವೇ ಈಗ ನಾವು Contract ಕೊಡುವುದು ಬಿಡಿ, Contract ನಲ್ಲಿ ಇನ್ನು ಮುಂದಕ್ಕೆ ಬರುವಂಥ Contract ನಲ್ಲಿ ಕೊಟ್ಟಿರಿ. Correct. ಆದರೆ, ಈ license ವಿಚಾರದಲ್ಲಿ it is like a privilege ಎಂದಾಗ ಆ ವರ್ಗದ ಜನರಿಗೆ ಕೊಟ್ಟಿಲ್ಲ ನಾವು ಕೊಡಿ ಎಂದರೆ, ಅದರಿಂದ ಯಾವ ಆರ್ಥಿಕ ಹೊರೆಯೂ ಆಗೋಲ್ಲ. ಈಗಾಗಲೇ ಮೇಲ್ಮನೆಯಲ್ಲಿ ಆಗಿದ್ದಂಥ ಅಬಕಾರಿ ಮಂತ್ರಿಗಳು ಇದರ ಬಗ್ಗೆ ಒಪ್ಪಿಕೊಂಡರು. ಏಕೋ ಆ ಫೈಲೇ ಮೂವ್ ಆಗುತ್ತಿಲ್ಲ. ಏಕೆ file move ಆಗೋಲ್ಲವೆಂದರೆ ಈ ಬಲಾಢ್ಯ ಜನರು ಯಾರು ಲೈಸೆನ್ಸ್‌ನ್ನು ಹೊಂದಿದ್ದಾರೋ, ಅವರು ಅದಕ್ಕೆ ಹೋಗದೇ ಇರುವ ಹಾಗೆ ಮಾಡಿದ್ದಾರೆ. ಅದರ ಜೊತೆಯಲ್ಲಿ, ಈಗ ಇಲ್ಲಿ ಮುಖ್ಯಮಂತ್ರಿಗಳು ಎದ್ದುಹೋದರು, ಅಬಕಾರಿ ಮಂತ್ರಿಗಳು ಇಲ್ಲ, ಅಬಕಾರಿ ಡಿಪಾರ್ಟ್‌ಮೆಂಟ್‌ನವರು ಯಾರಾದರೂ ಇದ್ದರೆ ಬರೆದುಕೊಳ್ಳಬೇಕು. ಏನೆಂದರೆ ಅಲ್ಲಿ ಒಂದು ರಿಜಿಸ್ಟರ್ ಇಟ್ಟಿದ್ದಾರೆ. 1991 ರಲ್ಲಿ ಎಲ್ಲರಿಗೂ ಲೈಸೆನ್ಸ್ ಕೊಟ್ಟಾದ ಮೇಲೆ ಇನ್ನು ಕೆಲವರು

apply ಮಾಡಿರುವವರ ನಾಲ್ಕು ನೂರೋ, ಐದು ನೂರರದ್ದೋ ಒಂದು ರಿಜಿಸ್ಟರ್ ಇಟ್ಟಿದ್ದಾರೆ. ಅದರಲ್ಲಿ 4(ಎ) ನಲ್ಲಿ ರಿಜಿಸ್ಟರ್‌ನಲ್ಲಿ ಬರೆದುಕೊಳ್ಳಬೇಕೆಂದಿದೆ. ಅವರು ಯಾರಿಗೂ ಲೈಸೆನ್ಸ್ ಕೊಟ್ಟಿಲ್ಲ. ರಿಜೆಕ್ಟ್ ಕೂಡ ಮಾಡಿಲ್ಲ. ಆ ರಿಜಿಸ್ಟರ್ ಮೇನ್‌ಟೇನ್ ಮಾಡುತ್ತಾ ಬಂದಿದ್ದಾರೆ. ನೀವೇನಾದರೂ ಒಂದು ಸಾವಿರ ಲೈಸೆನ್ಸ್ ಕೊಟ್ಟರೆ ಮೊದಲನೇ ಆರು ನೂರು ಲೈಸೆನ್ಸ್ ಅವರಿಗೆ ಹೊರಟು ಹೋಗುತ್ತದೆ. ಅದಕ್ಕಾಗಿ ಆ ರಿಜಿಸ್ಟರ್‌ನಲ್ಲಿರುವುದನ್ನು, ಆ Rule ಅನ್ನು withdraw ಮಾಡಿ, ಆ ರಿಜಿಸ್ಟರ್‌ನಲ್ಲಿ ಯಾರು ಯಾರಿದ್ದಾರೋ ಅವರುಗಳಿಗೆಲ್ಲರಿಗೂ ಹಣವನ್ನು ವಾಪಸ್ ಕೊಟ್ಟು ಮೊದಲು ಈ ಸಾವಿರ ಲೈಸೆನ್ಸ್‌ನ್ನು ಎಸ್‌ಸಿ/ಎಸ್‌ಟಿ ಜನಾಂಗದವರಿಗೆ ಕೊಟ್ಟುಬಿಡಲಿ. ಅದನ್ನು ಕೊಡಿ ಎಂದರೆ ಏನು ಹೇಳುತ್ತಾರೆಂದರೆ ಜನಸಂಖ್ಯೆ ಆಧಾರದ ಮೇಲೆ ಎನ್ನುತ್ತಾರೆ. 1991 ರ ಜನಸಂಖ್ಯೆ ಬೇರೆ, 2011 ರ ಜನಸಂಖ್ಯೆ ಬೇರೆ, 2011 ರ ಜನಸಂಖ್ಯೆಗೆ ಅನುಗುಣವಾಗಿ ಸಿಟಿಯಲ್ಲಿ 7500 ಕ್ಕೆ ಒಂದು ಲೈಸೆನ್ಸ್ ಅಂದರೆ urban area ಎಂದರೆ 7500, Rural area ಎಂದರೆ 15000. ಈ ರೀತಿ ನಿಗದಿ ಮಾಡಿ ಮೊದಲು ಒಂದು ಸಾವಿರ ಲೈಸೆನ್ಸ್‌ಗಳನ್ನು ಅವರಿಗೆ ಕೊಟ್ಟುಬಿಟ್ಟರೆ 5000 ಲೈಸೆನ್ಸ್ ಆಗುತ್ತದೆ. ಅದರಲ್ಲಿ 24% ಅವರಿಗೆ ಸರಿಹೋಗುತ್ತದೆ. ಅದಾದ ಮೇಲೆ ಬೇಕಾದರೆ ಮತ್ತೆ ಒಂದು ಸಾವಿರ ಲೈಸೆನ್ಸ್ ಜಾಸ್ತಿ ಮಾಡಿ ಎಲ್ಲರಿಗೂ ಕೊಡಲಿ ಬೇಡವೆಂದು ಹೇಳುವುದಿಲ್ಲ. ನನಗೆ ಅಧಿಕಾರಿಗಳು ಹೇಳಿದ್ದು, ಇಲ್ಲಾ ಸಾರ್, ಮುಖ್ಯಮಂತ್ರಿಗಳು ಇದಕ್ಕೆ ಒಪ್ಪುವುದಿಲ್ಲ, ಏಕೆಂದರೆ ಎಸ್‌ಸಿ/ಎಸ್‌ಟಿ ಯಲ್ಲ, OBC, ಎಂಥದ್ದೋ ಅಹಿಂದ ವರ್ಗದ್ದು, ಇದೇನಿದು, ಎಸ್‌ಸಿ/ಎಸ್‌ಟಿ ಗೆ ಅನ್ಯಾಯವಾಗಿದೆ, ನ್ಯಾಯ ಕೊಡಿಸಿ ಎಂದರೆ ಮುಖ್ಯಮಂತ್ರಿಗಳು ಒಪ್ಪಲ್ಲ, ಮುಖ್ಯಮಂತ್ರಿಗಳಿಗೆ ಬೇಜಾರಾಗುತ್ತದೆ, ಅವರು ಅಹಿಂದ ವರ್ಗಕ್ಕೆ ಸೀಮಿತ ಮಾಡಿ ಎಂದು ಹೇಳುತ್ತಾರೆನ್ನುತ್ತಾರೆ. ಅವರು ಆ ರೀತಿ ಹೇಳಿಯೇ ಇಲ್ಲ, ಇವರೇ ಅದನ್ನು ಅವರ ಕಿವಿಯಲ್ಲಿ ಬೇಕಾದರೆ ಹೇಳುತ್ತಾರೆ. ಅಣ್ಣ, ಅವರಿಗೆಲ್ಲಾ ಕೊಟ್ಟುಬಿಟ್ಟರೆ ಈ ಕಡೆಯವರು ಬೇಜಾರು ಮಾಡಿಕೊಂಡುಬಿಡುತ್ತಾರೆಂದು. ಅದಕ್ಕಾಗಿ ಆ ರೀತಿ ಮಾಡಬಾರದು. ಕಳೆದ ಎರಡು ವರ್ಷದಿಂದ, ಆಮೇಲೆ ಒಂದೊಂದು ಲೈಸೆನ್ಸ್

ಒಂದು ಕೋಟಿ ರೂ.ಗಳಿಗೆ sale ಆಗುತ್ತಿದೆ. ಒಂದು ಕೋಟಿ ರೂ.ಗಳಿಗೆ sale ಆಗುವಂಥ ಲೈಸೆನ್ಸ್‌ನ್ನು ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಕೊಟ್ಟರೆ, ಒಂದು ಲೈಸೆನ್ಸ್ ಇಟ್ಟುಕೊಂಡರೆ 5 ರಿಂದ 6 ಜನರು ಅವರ ಜೀವನವನ್ನು ನಡೆಸಬಹುದು. ಆದ್ದರಿಂದ ಇಡೀ ರಾಜ್ಯದಲ್ಲಿ ಒಂದು ಸಾವಿರ ಲೈಸೆನ್ಸ್ backlog ಆಗಿದೆಯೆಂದು ಹೇಳಿ ಅದನ್ನು ಕೊಟ್ಟರೆ ಸುಮಾರು 5 ರಿಂದ 6 ಸಾವಿರ ಎಸ್‌ಸಿ/ಎಸ್‌ಟಿ ಕುಟುಂಬಗಳಿಗೆ ಅವರ ಕಾಲ ಮೇಲೆ ಅವರು ನಿಂತುಕೊಳ್ಳುವಂಥ ಒಂದು ಶಕ್ತಿಯನ್ನು ಕೊಟ್ಟಂತಾಗುತ್ತದೆ. ಇನ್ನು ಕೆಎಸ್‌ಎಫ್‌ಸಿಯಲ್ಲಿ ಸಾಲ ಕೊಡುವ ವ್ಯವಸ್ಥೆಯಿದೆ. 2 ಕೋಟಿ ರೂ.ಗಳಿಗಿಂತಲೂ ಹೆಚ್ಚಾಗಿ ಸಾಲ ಕೊಡುವಂಥ ಸಂದರ್ಭದಲ್ಲಿ collateral security ಕೇಳುತ್ತಾರೆ. ಎಸ್‌ಸಿ/ಎಸ್‌ಟಿ ಗಳು ಅವರಿಗೆ collateral ಇಲ್ಲದೆ, ನಾವೇನು ಸಮಿತಿಯಲ್ಲಿ ಹೇಳಿದೆವೆಂದರೆ, ಇವರೇನು ಹೇಳಿದರೆಂದರೆ, ಅವರಿಗೆ ಗ್ರಾಮಾಂತರ ಪ್ರದೇಶದಲ್ಲಿ ಜಮೀನಿದ್ದರೆ ಅವರಿಗೆ collateral ಆಗಿ ಅದನ್ನೇ ತೆಗೆದುಕೊಳ್ಳುವುದೆಂದು. ನಾನು ಒಂದು step ಮುಂದೆ ಹೋಗಿ ಏನು ಹೇಳುತ್ತೇನೆಂದರೆ, ಪ್ರತಿ ಜಿಲ್ಲೆಗೆ ಒಂದ್ಹತ್ತು ಜನ ಎಸ್‌ಸಿ/ಎಸ್‌ಟಿ ಯುವಕರು ನಿರುದ್ಯೋಗಿಗಳು ಯಾರಿದ್ದಾರೋ ನೀವು ಅವರ ಬಗ್ಗೆ ಮಾರ್ಕ್ ಮಾಡಿಕೊಳ್ಳಿ, ಪ್ರತಿ ವರ್ಷ ಅವರಿಗೆ 2 ಕೋಟಿ ರೂ.ಗಳ ಸಾಲವನ್ನು ಕೆಎಸ್‌ಎಫ್‌ಸಿ ಯವರು ಕೊಡಲಿ, ಅದಕ್ಕೆ ಗ್ಯಾರಂಟಿ State Government ಕೊಡಲಿ. ಎಲ್ಲರೂ defaulter ಏನೂ ಆಗುವುದಿಲ್ಲ. ಯಾರೋ ಒಬ್ಬರೋ, ಇಬ್ಬರೋ defaulter ಆದರೆ ಆ ಇಂಡಸ್ಟ್ರಿಯ ಎಲ್ಲಾ assets ಏನಿರುತ್ತದೋ ಅದನ್ನೆಲ್ಲವನ್ನು ಮುಟ್ಟುಗೋಲು ಹಾಕಿಕೊಂಡು, ಸ್ವಲ್ಪ loss ಆದರೂ ರಾಜ್ಯ ಸರ್ಕಾರ ತೆಗೆದುಕೊಳ್ಳಲಿ, 16 ಸಾವಿರ ಕೋಟಿ ರೂ.ಗಳು ಇದೆ. ಅದರಲ್ಲಿ ಇವರಿಗೇನೂ ಅತಿ ಹೆಚ್ಚು, ನೀವೇನಾದರೂ Finance Department ನವರನ್ನು ಕೇಳಿದರೆ, ಸಾರ್ ಅದು ದೊಡ್ಡ burden ಆಗಿಬಿಡುತ್ತದೆ, ಹತ್ಹತ್ತು ಜನಕ್ಕೆ ಒಂದೊಂದು ಜಿಲ್ಲೆಗೆ ಕೊಟ್ಟರೆ 20 ಕೋಟಿ X 30 district 600 ಕೋಟಿಯೆಂದು, 600 ಕೋಟಿ default ಆಗುವುದಿಲ್ಲ ಮಂತ್ರಿಗಳೆ, default ಆದರೆ ಒಂದೈದು ಕೋಟಿಯೋ ಹತ್ತು ಕೋಟಿಯೋ ಆಗುತ್ತದೆ,

ಅದರಲ್ಲಿಯೂ assets ಇರುತ್ತದೆ. ಆ assets ತೆಗೆದುಕೊಂಡರೂ ಒಂದ್ಹತ್ತು ಕೋಟಿ ರೂಪಾಯಿಗಳೋ, ಹದಿನೈದು ಕೋಟಿ ರೂ.ಗಳ ಹೊರೆ ಬರುತ್ತದೆ. ಆದರೆ ಆ ಎಸ್‌ಸಿ/ಎಸ್‌ಟಿ ಜನಾಂಗದ ನಿರುದ್ಯೋಗಿ ಯುವಕರಿಗೆ ಒಂದು ಮಾನಸಿಕವಾದಂಥ ಶಕ್ತಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಬಿ.ಡಿ.ಎ. ಯಲ್ಲಿ ಕಳೆದ ಐದು ವರ್ಷಗಳಿಂದ ಯಾವುದೇ ರೀತಿಯಾದಂಥ ಭೂ ಸ್ವಾಧೀನವಾಗಿಲ್ಲ. ಬಹಳಷ್ಟು ಕಡೆ ಭೂ ಸ್ವಾಧೀನವಾಗುವುದರಲ್ಲಿ ಭೂಮಿಯನ್ನು ಕಳೆದುಕೊಳ್ಳುವವರು ಎಸ್‌ಸಿ/ಎಸ್‌ಟಿಗಳು. ಈಗ ನಮ್ಮಲ್ಲಿ ಯಾವ ಸ್ಥಿತಿ ಬಂದಿದೆಯೆಂದರೆ, ಬಿ.ಡಿ.ಎ., ಬಿ.ಎಂ.ಆರ್.ಡಿ.ಎ., ಇವರೆಲ್ಲಾ ಅಕ್ವೈರ್ ಮಾಡಿಕೊಂಡು ಸೈಟ್ ಮಾಡಿಕೊಡುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ they have to pay the compensation as per the New Act. ಆದರೆ ನಾವು ಏನು ಹೇಳುತ್ತೇವೆ, ರೈತನಿಗೆ ನ್ಯಾಯ ಒದಗಿಸಬೇಕು, ಅದಕ್ಕಾಗಿ ಅವರಿಗೆ New Act ಪ್ರಕಾರ compensation ಕೊಡಬೇಕು ಎಂದು ಅಲ್ಲಿ ಹೇಳಿ ಸರ್ಕಾರದಿಂದ ಮಾಡುವಂಥ ಸೈಟ್‌ಗಳನ್ನು ನಿಲ್ಲಿಸಿಬಿಟ್ಟೆವು. ಪ್ರೈವೇಟ್ ಡೆವಲಪರ್ ಅವನ ಪಾಡಿಗೆ ಅವನು ತೆಗೆದುಕೊಳ್ಳುತ್ತಲೇ ಇದ್ದಾನೆ, conversion ಮಾಡಿಸುತ್ತಲೇ ಇದ್ದಾನೆ, ಅಪ್ರೂವ್ ಮಾಡಿಸಿಕೊಂಡು ಸೈಟ್‌ಗಳನ್ನು ಮಾರುತ್ತಲೇ ಇದ್ದಾನೆ. ಪ್ರೈವೇಟ್ ಡೆವಲಪರ್‌ಗೆ ಭೂಮಿ ಕೊಟ್ಟಂಥ ಈ ಎಸ್‌ಸಿ/ಎಸ್‌ಟಿ ಜನಾಂಗದ ಜನರು ಯಾರಿದ್ದಾರೋ ಅವರಿಗೆ ಅನ್ಯಾಯವಾಗುವುದಿಲ್ಲವೇ? ಅದಕ್ಕಾಗಿ ಇದಕ್ಕೇನಾದರೂ ಒಂದು ಸಮತೋಲನವನ್ನು ಮಾಡುವಂಥ ಒಂದು ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಈ ನೈಸ್ ಪ್ರಾಜೆಕ್ಟ್‌ನಲ್ಲಿ 21 ಸಾವಿರ ಎಕರೆ ಅಕ್ವೈರ್ ಮಾಡಿದ್ದಾರೆ. ನಾನು ಆ ಪ್ರಾಜೆಕ್ಟ್ ಬಗ್ಗೆ ಹೋಗುವುದಿಲ್ಲ. ನಾನು ಸಮಾಜ ಕಲ್ಯಾಣ ಇಲಾಖೆಯಲ್ಲಿ, ಅಂದರೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ಕಲ್ಯಾಣ ಸಮಿತಿಯ ಸದಸ್ಯನಾಗಿ ಒಂದೇ ಒಂದು ಸಲಹೆಯನ್ನು ಮಾಡುತ್ತೇನೆ. ಆ 21 ಸಾವಿರ ಎಕರೆಯಲ್ಲಿ ಯಾವ ಎಸ್‌ಸಿ/ಎಸ್‌ಟಿ ಜನಾಂಗದ ಜಮೀನುಗಳನ್ನು preliminary acquisition ಮಾಡಿ 1994 ರಲ್ಲಿ, 1996 ರಲ್ಲಿ ಬಿಟ್ಟುಬಿಟ್ಟಿದ್ದಾರೆಯೋ ಅವರಿಗೆ, ಇವು ಈಗ 28(1) ಆಗಿದೆ,

28(4) ಮಾಡೇ ಇಲ್ಲ, ಅವನು ಮಾರಿಕೊಳ್ಳುವುದಕ್ಕೂ ಬರುವುದಿಲ್ಲ, ಇಟ್ಟುಕೊಳ್ಳುವುದಕ್ಕೂ ಬರುವುದಿಲ್ಲ, ನೀವು 28(4) ಮಾಡಿದರೂ ಮಾಡಿಕೊಳ್ಳಿ, ಆದರೆ ಒಂದೇ ಒಂದು ಕಳಕಳಿ ಏನೆಂದರೆ ಸಮಾಜ ಕಲ್ಯಾಣ ಇಲಾಖೆಯವರು ಹೇಳಬೇಕು, ಅವರಿಗೆ ಇವತ್ತು ನೀವೇನಾದರೂ final notification ಮಾಡಿ ಅವರಿಗೆ compensation ಕೊಡುವುದನ್ನು ಹೊಸ Act ಪ್ರಕಾರ ಕೊಟ್ಟರೂ ಸಹ preliminary notification ದಿವಸ ಇದ್ದಂಥ guidance value ತೆಗೆದುಕೊಳ್ಳಬಾರದು, ಏಕೆಂದರೆ Land Acquisition Act ನಲ್ಲಿ ಆ ರೀತಿಯಿದೆ.

ಶ್ರೀ ಕೆ. ಶಿವಮೂರ್ತಿ: Retrospective effect ಇದೆಯೇ?

ಶ್ರೀ ಜಗದೀಶ್ ಕುಮಾರ್: ಅಲ್ಲ, ನಾನು retrospective ಎಂದು ಹೇಳುವುದಿಲ್ಲ. ನಾನು ಹೇಳುವುದೇನೆಂದರೆ, New Act ಪ್ರಕಾರ four times compensation is allowed, but what is to be given is with reference to the preliminary acquisition date. So, I would only request this Government. ಸಮಾಜ ಕಲ್ಯಾಣ ಇಲಾಖೆಯವರು ಆ ಪ್ರಾಜೆಕ್ಟ್‌ಗೆ final notification ಆಗುವಂತಹ ಸಂದರ್ಭದಲ್ಲಿ ಯಾವ್ಯಾವ SC/ST ಜನಾಂಗದ ರೈತರ ಜಮೀನಿದೆ, ಅವರಿಗೆ ಇವತ್ತಿನ guidance value ನಲ್ಲಿ ನಾಲ್ಕು ಪಟ್ಟು compensation ಕೊಟ್ಟು, ತೆಗೆದುಕೊಳ್ಳುವುದಕ್ಕೆ ಏನು ಬೇಕು ಆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾ, ಇಲ್ಲದಿದ್ದರೆ ಅಲ್ಲಿ ಯಾವ ಎಸ್‌ಸಿ/ಎಸ್‌ಟಿ ಜನಾಂಗದ ಜಮೀನು ಹೋಗುತ್ತದೆ, ಅವರಿಗೆ ಅನ್ಯಾಯವಾಗುತ್ತದೆ, ಅದಕ್ಕಾಗಿ ಅವರಿಗೆ ರಕ್ಷಣೆ ಕೊಡಬೇಕು. ಸಮಾಜ ಕಲ್ಯಾಣ ಇಲಾಖೆಯಲ್ಲಿ 16,0000 ಕೋಟಿ ರೂಪಾಯಿಗಳನ್ನು ಎಸ್‌ಸಿ/ಎಸ್‌ಟಿಗೆ ಖರ್ಚು ಮಾಡುವುದು ಒಂದು ಕಡೆಯಾದರೆ, ಅವರಿಗೆ ಯಾವುದೇ ರೀತಿ ಅನ್ಯಾಯವಾದರೂ ಸಹ ಈ ಇಲಾಖೆಯವರೇ ಅದಕ್ಕೆ ಜವಾಬ್ದಾರಿಯಾಗಿರುತ್ತಾರೆ. ಅದಕ್ಕಾಗಿ ಈ ನೈಸ್ ರಸ್ತೆಯಲ್ಲಿ ಯಾವ ಎಸ್‌ಸಿ/ಎಸ್‌ಟಿ ಜನಾಂಗದ ಜಮೀನು ಹೋಗಿದೆ, ಅವರ ರಕ್ಷಣೆಗೂ ಸಹ ಈ ಇಲಾಖೆಯ ಮಂತ್ರಿಗಳು ಏನಾದರೂ ಕ್ರಮ

ತೆಗೆದುಕೊಳ್ಳಬೇಕೆಂದು ಹೇಳಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ನಿಂಗಯ್ಯನವರು ಹತ್ತು ನಿಮಿಷ ಮಾತನಾಡಿ.

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ): ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಹೇಳುತ್ತೇನೆ. ಬೆಳಿಗ್ಗೆ ಬೇಡಿಕೆಗಳ ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ ನಮ್ಮ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಈ ಸದನಕ್ಕೆ ಕೊಟ್ಟಿರುವಂತಹ ಎರಡು ಮೂರು ವರದಿಗಳ ಬಗ್ಗೆ ವಿಸ್ತೃತವಾಗಿ ಅವರು ವಿಚಾರ ಮಂಡನೆ ಮಾಡಿದ್ದಾರೆ. ಅದನ್ನು ಒಪ್ಪಿಕೊಂಡು ಅತ್ಯಂತ ಹಿರಿಯರು, ಸಮರ್ಥನೀಯವಾಗಿ ಬೇಡಿಕೆಗಳ ಮೇಲೆ ಮಾತನಾಡಿದಂತಹ ಮಾನ್ಯ ರಮೇಶ್ ಕುಮಾರ್ ಕೂಡ ಹೇಳಿದ್ದಾರೆ. ಇವತ್ತು ನಮ್ಮ ಭಾರತೀಯ ಸಮಾಜದ ವ್ಯವಸ್ಥೆ ನಮಗೆಲ್ಲರಿಗೂ ಗೊತ್ತಿದೆ. ಸಹಸ್ರಾರು ವರ್ಷಗಳ ಇತಿಹಾಸವಿರುವಂತಹ ಭಾರತದ ಇತಿಹಾಸದಲ್ಲಿ ಈ ಸಮಾಜ ಸಾವಿರಾರು ವರ್ಷಗಳಿಂದ ಶೋಷಣೆಗೆ ಸಿಕ್ಕಿ ಅನುಭವಿಸಿದ ಯಾತನೆಯನ್ನು ಸ್ವತಃ ಅಂಬೇಡ್ಕರ್ ಕೂಡ ಅನುಭವಿಸಿ, ಭಾರತ ಸ್ವತಂತ್ರ ಆದಮೇಲೆ, ಈ ದೇಶಕ್ಕೆ ಅವರು ಸಂವಿಧಾನವನ್ನು ಕೊಟ್ಟಮೇಲೆ ಈ ಸಮಾಜದಲ್ಲಿ ಇರುವಂತಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿಯನ್ನು ಕೊಟ್ಟರು. ಆ ಮೀಸಲಾತಿ ಜಾರಿ ಮಾಡುವಂತಹ ಸಂದರ್ಭದಲ್ಲಿ ಆಗಿರುವಂತಹ ಲೋಪಗಳ ಬಗ್ಗೆ, ಅನ್ಯಾಯಗಳ ಬಗ್ಗೆ, ಸರ್ಕಾರ ಸರಿಪಡಿಸಬೇಕು ಎನ್ನುವುದರ ಬಗ್ಗೆ ಮಾನ್ಯ ನರೇಂದ್ರಸ್ವಾಮಿಯವರು ನಾವು ಸಮಿತಿಯಲ್ಲಿ ಏನು ಚರ್ಚೆ ಮಾಡಿ ವರದಿಯನ್ನು ಕೊಟ್ಟಿದ್ದೆವು, ಅದರ ಬಗ್ಗೆ ವಿಸ್ತೃತವಾಗಿ ಬೆಳಕನ್ನು ಚೆಲ್ಲಿದ್ದಾರೆ. ನಾನು ಇನ್ನು ಹೆಚ್ಚಿಗೆ ಹೇಳುವುದಕ್ಕೆ ಹೋಗದೆ, ನಮಗೆ ಇವತ್ತು ಅದು ಬರುವುದಕ್ಕೆ ಮೊದಲು ವಿಶೇಷವಾಗಿ ಶ್ರೀಮಾನ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾದ ಮೇಲೆ, ಅವರೂ ಕೂಡ ನಮ್ಮೊಟ್ಟಿಗೆ ಬೆಳೆದು, ಈ ಸಮಾಜದ ಕಷ್ಟಸುಖಗಳನ್ನು ಅರಿತುಕೊಂಡು, ಬಾಬಾ ಸಾಹೇಬ್ ಅಂಬೇಡ್ಕರ್‌ರವರ ವಿಚಾರವನ್ನು ಕೂಡ ಅರ್ಥ ಮಾಡಿಕೊಂಡು ಬಹುಶಃ

ಅವರು ಮುಖ್ಯಮಂತ್ರಿಗಳಾದ ಮೇಲೆ 2011ರ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ಸುಮಾರು 24.1% ಜನಸಂಖ್ಯೆ ಇದೆ ಎಂದು ಅಂಕಿ ಅಂಶಗಳು ಹೇಳುತ್ತವೆ, ಅದಕ್ಕೆ ಅನುಗುಣವಾಗಿ ರಾಜ್ಯದ ಬಜೆಟ್‌ನಲ್ಲಿ ಶೇಕಡ 24.1% ಹಣವನ್ನು ತೆಗೆದು ಇರಿಸಿದ್ದಾರೆ. ಇದು ಬಹಳ ದೊಡ್ಡ ಮೊತ್ತದ ಹಣ. ಅದಕ್ಕೆ ಪೂರಕವಾಗಿ ಎಸ್‌ಸಿ/ಎಸ್‌ಟಿ ಗೆ ಒಂದು ಬಿಲ್ ತರಬೇಕೆಂದು ಹೇಳಿ, ನಾವೂ ಕೂಡ ಸಮಿತಿಯಲ್ಲಿ ಚರ್ಚೆ ಮಾಡಿದೆವು. ಆನಂತರ ನಮ್ಮ ಸಹೋದರ ಸಚಿವರು ಬೆಳಗಾವಿ ಅಧಿವೇಶನದಲ್ಲಿ ಆ ಬಿಲ್‌ನ್ನು ತಂದಿರುವುದರ ಹಿನ್ನೆಲೆಯನ್ನು ಕೂಡ ಮಾನ್ಯ ಹಿರಿಯ ಸದಸ್ಯರಾದ ರಮೇಶ್ ಕುಮಾರ್‌ರವರು ಹೇಳಿದರು. ಆ ಬಿಲ್ ಮೊದಲಿಗೆ ಆಂಧ್ರದಲ್ಲಿ ಜಾರಿಗೆ ಬಂತು. Karnataka stands second. ಆ ಹಿನ್ನೆಲೆಯಲ್ಲಿ ನಮ್ಮ ಸಚಿವರು ಕೂಡ ಮುಂದಾಗಿ ಒಪ್ಪಿ, ಆ ಬಿಲ್ ತಂದಿರುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಅದು ಬಹಳ ದೊಡ್ಡ ಮೊತ್ತದ ಹಣ. ಕಳೆದ ಬಾರಿ 15,830 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ನಿನ್ನೆ ನಮ್ಮ ಸಹೋದರ ಗೋವಿಂದ ಕಾರಜೋಳರವರು ಮಾತನಾಡುತ್ತಾ, 58% ಹಣ ಮಾತ್ರ ಖರ್ಚಾಗಿದ್ದು, ಇನ್ನೂ ಸುಮಾರು 42% ಹಣ ಖರ್ಚಾಗಿಲ್ಲವೆಂದು ಹೇಳಿದರು. ಅದಕ್ಕೆ ಹಣ ತೆಗೆದಿಟ್ಟರಷ್ಟೇ ಸಾಲದು. ಅದನ್ನು ಯಾವ ಉದ್ದೇಶಕ್ಕಾಗಿ ಇಟ್ಟಿದ್ದೀರಿ, ಅದು ಆ ಜನರಿಗೆ ತಲುಪುವ ಹಾಗೆ ಕಾರ್ಯಕ್ರಮಗಳನ್ನು ಮಾಡಬೇಕು. ನಾನು ಬೆಳಗಾಂ ಅಸೆಂಬ್ಲಿಯಲ್ಲಿ ಮಾತನಾಡುತ್ತಾ ಬಹಳ ಒಳ್ಳೆಯ ಬಿಲ್ ತಂದಿದ್ದೀರಿ, ಬಹಳ ದಿನಗಳ ನಿರೀಕ್ಷೆಯ ಮೇಲೆ ಬಂದಿದೆ ಎಂದು ಹೇಳಿದ್ದೆ. ಅದಕ್ಕಾಗಿ ನಿಮಗೆ ಅಭಿನಂದಿಸುತ್ತೇನೆ. ನೀವು ಆಯ್ದ ರಚನಾತ್ಮಕ ಕಾರ್ಯಗಳಲ್ಲಿ ಈ ಸಮುದಾಯಕ್ಕೆ total development ಎಂದು ಏನು ಕರೆಯುತ್ತೀರಿ, ಆ ಹಿನ್ನೆಲೆಯಲ್ಲಿ ಕಾರ್ಯಕ್ರಮ ಹಾಕಿಕೊಂಡು ನೀವು ಇಡೀ ಕರ್ನಾಟಕ ರಾಜ್ಯವನ್ನು ಸುತ್ತಿ, 224 ಕ್ಷೇತ್ರದಲ್ಲಿ ಪ್ರಯಾಣ ಮಾಡಿ, ಅಲ್ಲಿನ ದಲಿತರಿಗೆ ಇದರ ಅನುಕೂಲ ತಲುಪಿದೆಯೇ ಇಲ್ಲವೇ ಎನ್ನುವಂತಹ ತಪಾಸಣೆ ಮಾಡಬೇಕೆಂದು ಸಲಹೆ ಕೊಡುತ್ತೇನೆ. Asset creation ಮಾಡುವಂಥಾದ್ದು

ಆಗಬೇಕು. ಈ ಬಾರಿ ಕೂಡ ಸುಮಾರು 16,356 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. It is a very good amount. ಆದರೆ ಮಧ್ಯದಲ್ಲಿ ನಮ್ಮ ಸಮಿತಿ ಒಂದು findings ಮಾಡಿದೆ. ಅದನ್ನು ನಾನು ಇಲ್ಲಿ ತಮಗೆ ಹೇಳಬೇಕಾಗುತ್ತದೆ. ಅನುದಾನವನ್ನು ನಿಗದಿ ಪಡಿಸುವಾಗ ಆರ್ಥಿಕ ಇಲಾಖೆಯು ರಾಜ್ಯದ ಒಟ್ಟು ಆಯವ್ಯಯ ಮೊತ್ತದಲ್ಲಿ Borrowings, World Bank Schemes, Externally Aided projects ಇತ್ಯಾದಿಗಳಿಗೆ ಕೊಡುವಂಥ ಹಣ ಏನಿದೆ, ಅದನ್ನು ಕಡಿತಗೊಳಿಸಿ ಉಳಿದ ಮೊತ್ತಕ್ಕೆ ಶೇಕಡ 24.1% ಅನ್ನು ಅನುದಾನದಲ್ಲಿ ಲೆಕ್ಕ ಹಾಕುತ್ತಿದ್ದಾರೆ. This is wrong. Actually ಇವತ್ತು ಭಾರತ ದೇಶದ Planning Commision ಏನು ಹೇಳುತ್ತದೆ ಎಂದರೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಕೊಡತಕ್ಕಂಥ ಸಂದರ್ಭದಲ್ಲಿ Borrowings, World Bank Schemes, Externally Aided projects ಹಣವನ್ನು ಸೇರಿಸಿಕೊಂಡು ಅದರಲ್ಲಿ ಒಟ್ಟು 24.1% ಎತ್ತಿ ಇಡಬೇಕೆಂದು ಹೇಳಿದೆ. ಆದರೆ ಇಲ್ಲಿ ಹಾಗೆ ಆಗಿಲ್ಲ. ಅದನ್ನು ನಾವು ಈ ಸಮಿತಿಯ findings ನಲ್ಲಿ ತೋರಿಸಿದ್ದೇವೆ. ಅದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಒಟ್ಟಾರೆ ಅದಕ್ಕೆ ತಾವು allocate ಮಾಡುವಾಗ ಇದನ್ನೂ ಸೇರಿಸಿ ಈ ಜನಾಂಗಕ್ಕೆ 24.1% ಬರುವ ಹಾಗೆ ನೋಡಿಕೊಳ್ಳಬೇಕೆನ್ನುವ ಸಲಹೆಯನ್ನು ಕೊಟ್ಟಿದ್ದೇನೆ. ಬಹಳಷ್ಟು findings ಇದೆ, ಅದನ್ನು ನಾನು ಹೆಚ್ಚು ವಿಸ್ತೃತವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಈ ರೀತಿಯಾದಾಗ ಬಹುಶಃ ನಾವು ಏನು ಅಂದುಕೊಂಡಿದ್ದೇವೆ, ಆ ರೀತಿ ಒಂದು total growth ಆಗಬೇಕು. ಈ ಸಮುದಾಯದ ಕಲ್ಯಾಣವಾಗಬೇಕು. ಈ ಸಮುದಾಯಕ್ಕೆ ಒಳ್ಳೆಯದು ಆಗಬೇಕೆನ್ನುವುದಕ್ಕೆ ಜಾರಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಬೆಳಿಗ್ಗೆ ನಮ್ಮ ಹಿರಿಯ ಸದಸ್ಯರಾದ ಮಾನ್ಯ ರಮೇಶ್ ಕುಮಾರ್‌ರವರು ಮಾತನಾಡುತ್ತಾ, you should respond to the sentiments of SC/ST people ಎಂದು ಹೇಳಿದರು. ಇದು ಬಹಳ ಮುಖ್ಯವಾದುದು. ಅವರನ್ನು ನಾವು ಬಹಳ ಸಾರಿ ಟೀಕೆ ಮಾಡುತ್ತಾ ಹೇಳುತ್ತೇವೆ. ಇಷ್ಟೆಲ್ಲ ಉತ್ತಮವಾಗಿ ಸಲಹೆ ಕೊಡುತ್ತೀರಿ, ನಮ್ಮ ಸದನ ಮಾನ್ಯ ರಮೇಶ್ ಕುಮಾರ್ ರವರು ಮಾತನಾಡುವುದಕ್ಕೆ ಎದ್ದು ನಿಂತರು ಎಂದರೆ

ಅವರ ಮಾತುಗಳನ್ನು ಕೇಳುವುದಕ್ಕೆ ಕಾಯುತ್ತಾರೆ. ಅವರ ಅಪಾರ ಜ್ಞಾನ ಹಾಗೂ ಅನುಭವವನ್ನು ಅವರ ಭಾಷಣದಲ್ಲಿ ನಮ್ಮ ಮುಂದೆ ತೆರೆದಿಡುತ್ತಾರೆ. ಅದಕ್ಕೆ ಅವರು ಹೇಳಿದರು, ಮಾನ್ಯ ಬಸವಲಿಂಗಪ್ಪನವರು ಮುಖ್ಯಮಂತ್ರಿಯಾಗದೆ ಹೋಗಿರಬಹುದು, ಅವರನ್ನು ಭಾರತ ದೇಶ ಅಥವಾ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಮರೆಯುವುದಕ್ಕೆ ಸಾಧ್ಯವಿಲ್ಲ. ನೀವು ಚಳುವಳಿಯಲ್ಲಿ ಬಂದಂಥವರು, ಹೋರಾಟದ ಮೂಲಕ ಬಂದಂಥವರು. ನೀವು ಯಾರು ಮುಂದೆ ಹೋಗುತ್ತೀರಿ, ಒಮ್ಮೆ ತಿರುಗಿ ನೋಡಿ, ಎಷ್ಟು ದೂರ ಬಂದಿದ್ದೀರಿ, ಎಲ್ಲಿಂದ ಬಂದಿರಿ, ಆಗ ಹೇಗಿದ್ದೆವು, ಈಗ ಹೇಗಿದ್ದೇವೆ, ಎನ್ನುವುದನ್ನು ನೆನೆಸಿಕೊಳ್ಳಿ ಎನ್ನುವ ಮಾತನ್ನು ನೆನಪಿಸಿದರು. ಬಿ. ರಾಚಯ್ಯ, ಎನ್. ರಾಚಯ್ಯ, ಕೆ.ಹೆಚ್. ರಂಗನಾಥ್‌ನಂಥವರನ್ನು ಬಹುಶಃ ಈ ಸದನ ಹಾಗೂ ಈ ರಾಜ್ಯ ಮರೆಯುವುದಕ್ಕೆ ಸಾಧ್ಯವಿಲ್ಲ. ಅವರು ಅಂತಹ ಒಳ್ಳೆಯ ನೆನಪುಗಳನ್ನು ಹೆಜ್ಜೆಗಳನ್ನು ಬಿಟ್ಟು ಹೋಗಿದ್ದಾರೆ. ಆದ್ದರಿಂದ ಹೋರಾಟದ ಫಲ ನಿಮಗೆ ಸಿಕ್ಕಿದೆ, ಅವಕಾಶ ಸಿಕ್ಕಿದೆ, ಇದನ್ನು ಜನರಿಗೆ ತಲುಪಿಸುವಂತಹ ಕೆಲಸವಾಗಬೇಕೆಂದು ನಿಮ್ಮ ಕಿರಿಯ ಸಹೋದರನಾಗಿ ಹೇಳುತ್ತೇನೆ. ತಾವು ಚಾಟಿ ತೆಗೆದುಕೊಳ್ಳಬೇಕೆನ್ನುವ ಮಾತನ್ನು ಹೇಳಿದಿರಿ. ಅದಕ್ಕೆ ಏನು ಭಯ? ಅಂಜಿಕೆ ಏಕೆ? You are the Government ಎನ್ನುವುದನ್ನು ಕೂಡ ಅವರು ನೆನಪಿಸಿದರು. ಅದಕ್ಕೆ ನಾನು ವಿನಂತಿ ಮಾಡುತ್ತೇನೆ. ಏಕೋ ಗೊತ್ತಿಲ್ಲ, ಅಷ್ಟು ಕೂಗಾಡುತ್ತಿದ್ದ ನೀವು ಅಧಿಕಾರಕ್ಕೆ ಬಂದಾಗ ಗುಬ್ಬಚ್ಚಿ ತರಹ ಆಗಿದ್ದೀರಿ ಏಕೆ? ಬಹಳ ಪ್ರಚಾರ ಮಾಡುತ್ತೀರಿ. ಎಲ್ಲಾ ಕಡೆ ಹೋಗುತ್ತೀರಿ, ನನ್ನ ಕ್ಷೇತ್ರಕ್ಕೂ ಬಂದು ಗಿರಿಜನರ ಹಾಡಿಯಲ್ಲಿ ಮಲಗಿದ್ದಿರಿ. ಆದರೆ ಇವತ್ತು ಆಗಿರುವಂತಹ ಲ್ಯಾಪ್ಸ್‌ಸ್ ಬಗ್ಗೆ ಬೆಳಿಗ್ಗೆ ಅವರು ನೆನಪಿಸಿದರು. ಡಾ|| ಅಂಬೇಡ್ಕರ್ ರವರಿಗೆ ಬಹಳ ಪ್ರಿಯವಾದ್ದದ್ದು ಶಿಕ್ಷಣ. ಅವರು ಪ್ರೈಮರಿ ಶಿಕ್ಷಣ, ಸೆಕೆಂಡರಿ ಸ್ಕೂಲ್ ಬಗ್ಗೆ ಹಾಗೂ ಹೈಯರ್ ಎಜುಕೇಷನ್ ಬಗ್ಗೆ ಮಾತನಾಡುತ್ತಾ ಬಹಳ ಸ್ಪಷ್ಟವಾಗಿ ಹೇಳಿದರು. ಇವತ್ತು ಕಡ್ಡಾಯ ಶಿಕ್ಷಣ ಕಾಯ್ದೆ ಜಾರಿಗೆ ಬಂದಿದೆ. ಅದನ್ನು ಮಾನ್ಯ ಮನಮೋಹನ್ ಸಿಂಗ್‌ರವರು ಇದ್ದಾಗಲೇ ಅದನ್ನು ಜಾರಿಗೆ ಕೊಟ್ಟರು. ಅದರಲ್ಲಿ drop outs ಎಷ್ಟಾಗಿದೆ? ಏಕೆ ಆಗುತ್ತಿದೆ? ನಾನು ಮೊನ್ನೆ

ಒಂದು ಯೋಜನೆ ಬಗ್ಗೆ ಕೇಳಿದೆ. ಭೂ ಒಡೆತನ ಯೋಜನೆ ಮಾಡುವಾಗ ಇಡೀ ರಾಜ್ಯದಲ್ಲಿ ಎಷ್ಟು SC/ST ಕುಟುಂಬಗಳಿವೆ? ಎಷ್ಟು ಭೂಮಿಯನ್ನು ಹೊಂದಿದ್ದಾರೆ? ಎಷ್ಟು ಜನ ಕೂಲಿಕಾರರಿದ್ದಾರೆ? ಎಂಬ ಮಾಹಿತಿ ಇದೆಯೇ? ಎಂದು ಕೇಳಿದರೆ, ಉತ್ತರದಲ್ಲಿ ಇದು ನನಗೆ ಸಂಬಂಧಿಸಿದ್ದಲ್ಲವೆಂದು ಹೇಳುತ್ತೀರಿ. Ofcourse, revenue department ಸಂಬಂಧಪಟ್ಟದ್ದು ಇರಬಹುದು. ಆ ಮಾಹಿತಿಯನ್ನು ತಾವು ತೆಗೆದುಕೊಳ್ಳಬಹುದಲ್ಲವೇ? ಯೋಜನೆಗಳನ್ನು ರೂಪಿಸುವಾಗ, ಆ ಮಾಹಿತಿಗಳು ನಿಮಗೆ ಇದ್ದರೆ, ತಾವು ಸರಿಯಾಗಿ ಯೋಜನೆಯನ್ನು ರೂಪಿಸುವುದಕ್ಕೆ ಆಗುತ್ತದೆ. ಆ ದೃಷ್ಟಿಯಿಂದ ಶಿಕ್ಷಣ ಇಲಾಖೆ ಬಹಳ ಪ್ರಮುಖವಾದದ್ದು. ಇವತ್ತು ಹಾಸ್ಟೆಲ್‌ಗಳ ಪರಿಸ್ಥಿತಿ ಬಗ್ಗೆ ಬಿಡಿಸಿ ಹೇಳಿದ್ದಾರೆ, ನಾನು ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ, ಇದಕ್ಕೆ ವಿಶೇಷ ಒತ್ತು ಕೊಡಿ. ನಮ್ಮ ಸಹೋದರ ಹೇಳಿದ ಹಾಗೆ SC/ST MLA, MLCಗಳ meeting ಕರೆಯಿರಿ. You take our suggestions. ನಾವು ಕುಳಿತು ಹರಿಜನ-ಗಿರಿಜನರಿಗೆ ಏನಾಗಬೇಕೆಂಬ ಬಗ್ಗೆ ಮಾತನಾಡೋಣ. ಇದಕ್ಕೆ ವಿಶೇಷ ಒತ್ತು ಕೊಟ್ಟು ಕಾಯಿದೆಯನ್ನು ತಂದು, ಅದು ಸರಿಯಾದ ರೀತಿಯಲ್ಲಿ ಜಾರಿಯಾಗದೇ ಹೋದರೆ, ಉದ್ದೇಶ ಈಡೇರುವುದಿಲ್ಲ. ತಾವು ಅಂದುಕೊಂಡದ್ದು ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ಆ ದಿಶೆಯಲ್ಲಿ ನಿಮ್ಮ ಆಲೋಚನೆಗಳು ಕೃತಿಗಿಳಿಯಬೇಕು, ಆಲೋಚನೆಗಳು ಬರೀ ಆಲೋಚನೆಯಾಗುವಂಥದ್ದು ಆಗಬಾರದು. ತಾವು ಬರೀ ನನ್ನ ಹಾಗೆ ಎಂ.ಎಲ್.ಎ. ಆಗಿದ್ದರೆ ಬೇರೆ ವಿಚಾರ, you are a minister. ಇದು ತಮ್ಮ ಜವಾಬ್ದಾರಿ, ತಾವು ಈ ಬಗ್ಗೆ serious ಆಗಿ ಅಲೋಚಿಸಬೇಕೆಂದು ಹೇಳುತ್ತೇನೆ. ಇನ್ನು KREIS ವಸತಿ ಶಾಲೆಗಳ ಬಗ್ಗೆ, actually ಇವತ್ತು cry ಮಾಡುವಂಥ ಪರಿಸ್ಥಿತಿ ಇದೆ. On par with Doon schools, ನವೋದಯ ಶಾಲೆಗಳ ರೀತಿಯಲ್ಲಿ ಆಗಬೇಕೆಂಬ ಸದುದ್ದೇಶವನ್ನು ಇಟ್ಟುಕೊಂಡು ಈ ವಸತಿ ಶಾಲೆಗಳನ್ನು ಜಾರಿಗೆ ತಂದಿದ್ದೆವು. ರಾಜ್ಯದಲ್ಲಿ ಸುಮಾರು 940 ಸಂಸ್ಥೆಗಳನ್ನು ತೆಗೆದಿದ್ದೀರಿ, ಇವತ್ತು ಎಷ್ಟು ಸಂಸ್ಥೆಗಳಿಗೆ ಹಾಸ್ಟೆಲ್‌ಗಳಿಲ್ಲ? ಅಲ್ಲಿಯ ಪರಿಸ್ಥಿತಿ ಏನಾಗಿದೆ? ನಾನು ಎರಡು ವರ್ಷಗಳಿಂದ ಈ

ಸಮಿತಿಯಲ್ಲಿದ್ದೇನೆ. ನಾನು ಸಮಿತಿಯ ಮುಂದೆ ಪ್ರಾರಂಭದಲ್ಲಿ ಮಾತನಾಡುವಾಗ ಹೇಳಿದೆ. ನನ್ನ ಕ್ಷೇತ್ರದಲ್ಲಿ ಕೊಟ್ಟಿಗೆರ ಬಹಳಷ್ಟು ಸಾರಿ ಧರ್ಮಸ್ಥಳಕ್ಕೆ ಹೋಗುವಾಗ, ಶೃಂಗೇರಿಗೆ ಹೋಗುವಾಗ ಮತ್ತು ಕಳಸಕ್ಕೆ ಹೋಗುವಾಗ ನೋಡಿದ್ದೀರಿ. ಅದು ಒಂದು ಜಂಕ್ಷನ್. ಈಗ ಮಳೆಯಲ್ಲಿ ಮಕ್ಕಳು ಇರುವುದಕ್ಕೆ ಆಗುವುದಿಲ್ಲ. ಅಲ್ಲಿ ಅಂಥ ಚಳಿ ಇರುತ್ತದೆ, mist ಬರುತ್ತದೆ, ಕಾಫಿ ತೋಟಗಳಿಗೂ ಸರಿಯಾಗುವುದಿಲ್ಲ. ನಮ್ಮ major crop ಕಾಫಿ ಬೆಳೆ, ಅಲ್ಲಿ ಒಳಗೆ ಹೋಗಿ ನೋಡಿದರೆ ಜಿಗಣೆಗಳು, ಅದನ್ನು ಪುಣ್ಯಾತ್ಮರು ಯಾರು ಕಟ್ಟಿದ್ದಾರೋ ನಮ್ಮ ಕಾಲದಲ್ಲಿ ಕಟ್ಟಿದ್ದು ಅಲ್ಲ, ಹಿಂದೆ ಕಟ್ಟಿರುವಂಥದ್ದು. ಈ ವಿಷಯವನ್ನು ಸಮಿತಿಯ ಮುಂದೆ ಎರಡು ಬಾರಿ ಪ್ರಸ್ತಾಪ ಮಾಡಿದೆ. ತಾವು ಪುನಃ 1.62 ಕೋಟಿ ರೂ.ಗಳನ್ನು ರಿಪೇರಿಗೆಂದು ಕೊಟ್ಟಿದ್ದೀರಿ. ಅಲ್ಲಿ ನೋಡುವುದಕ್ಕೆ ಆಗುವುದಿಲ್ಲ, ಬಾಗಿಲುಗಳಿಲ್ಲ, ಹಾಸಿಗೆ-ಹೊದಿಕೆಗಳಿಲ್ಲ. ಅಲ್ಲಿಗೆ ಮಕ್ಕಳು ಎಲ್ಲಿಂದ ಬಂದಿದ್ದಾರೆಂದರೆ, ನಿಮ್ಮ ಚಿತ್ರದುರ್ಗದಿಂದ, ಹೊಸದುರ್ಗದಿಂದಲೂ ಬಂದಿದ್ದಾರೆ. ನಮ್ಮ ಮಲೆನಾಡಿನ ಮಕ್ಕಳು ಹೇಗೋ ಹೊಂದಿಕೊಳ್ಳುತ್ತಾರೆ. ಬಯಲುಸೀಮೆಯ ಮಕ್ಕಳಿಗೆ ಕಷ್ಟ. ಅಂಥ ಕೊರೆಯುವ ಚಳಿಯಲ್ಲಿ ಕಟ್ಟಿದ್ದಾರೆ. ಏಕಲವ್ಯ ಶಾಲೆಯೆಂದು ಹೆಸರಿಗೆ ತಕ್ಕಂತೆ ಕಾಡಿನಲ್ಲಿ ಕಟ್ಟಿದ್ದಾರೆ. ಅಲ್ಲಿನ ಪರಿಸ್ಥಿತಿ ಹೇಳತೀರದು. ಈಗ ಯಾರಿಗೋ ಕಂಟ್ರಾಕ್ಟ್ ಕೊಟಿದ್ದೀರಿ. ಅದು ನಮಗೆ ಗೊತ್ತೇ ಆಗುವುದಿಲ್ಲ. ಅವರು ಕಂಟ್ರಾಕ್ಟರ್ ಯಾರೆಂಬುದು ಗೊತ್ತಾಗುವುದಿಲ್ಲ, ಇದು centralized, ನಮ್ಮನ್ನು ಕೇಳುವವರಿಲ್ಲ. ನಾನು ಗಲಾಟೆ ಮಾಡಿದ ಮೇಲೆ ಅಲ್ಲಿಗೆ ಹಣವನ್ನು ಕೊಟ್ಟಿದ್ದೀರಿ. ಅಲ್ಲಿ ಸುಣ್ಣ-ಬಣ್ಣ ಹೊಡೆದು ಬಿಲ್ ತೆಗೆದುಕೊಂಡು ಬಿಟ್ಟಿದ್ದಾರೆ. ಅಲ್ಲಿ ಮತ್ತೆ ಅದೇ ಪರಿಸ್ಥಿತಿ ಇದೆ. ದಯಮಾಡಿ ಇವೆಲ್ಲವನ್ನೂ ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಿ, ನಮ್ಮ ಜೊತೆಗೆ interact ಮಾಡಿ, ಇಲ್ಲಿ ಏನಾಗಬೇಕೆಂಬ ಬಗ್ಗೆ ಸಲಹೆಗಳನ್ನು ತೆಗೆದುಕೊಳ್ಳಿ. ಆಗ, you will be a better minister, ನಾನು ಸಣ್ಣ ಹುಡುಗನಾಗಿದ್ದಾಗ ಮಾನ್ಯ ಎನ್.ರಾಚಯ್ಯನವರು Social Welfare Minister ಆಗಿದ್ದಾಗ ಮೂಡಿಗೆರೆಗೆ ಬಂದಿದ್ದರು. ಅವರನ್ನು

ನೋಡಿದರೆ ಅಧಿಕಾರಿಗಳು ನಡುಗುತ್ತಿದ್ದರು, ತಾವು ಆ ದಿಶೆಯಲ್ಲಿ ಕೆಲಸ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು: ತಾವು conclude ಮಾಡಿ.

ಶ್ರೀ ಬಿ.ಬಿ. ನಿಂಗಯ್ಯ: ಮಾನ್ಯ ಉಪಾಧ್ಯಕ್ಷರೆ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ, ಇನ್ನು 5–10 ನಿಮಿಷಗಳಲ್ಲಿ ಮುಗಿಸುತ್ತೇನೆ. ಏಕೆಂದರೆ, ಇದು ಬಹಳ ಪ್ರಮುಖವಾದಂಥ ಇಲಾಖೆಯಾಗಿದ್ದು, ನಾನು ಸುಮ್ಮನೆ ಏನೋ ಮಾತನಾಡಿ ಆಯಿತೆನ್ನುವ ದೃಷ್ಟಿಯಿಂದ ಮಾತನಾಡುತ್ತಿಲ್ಲ. ತಾವು ಈ ಇಲಾಖೆಗೆ ಹೆಚ್ಚು ಸಮಯವನ್ನು ಕೊಡಬೇಕಾಗುತ್ತದೆ. ನನಗೆ ಗೊತ್ತು ಸಮಯವಿಲ್ಲ, ನಾಳೆ ಒಂದೇ ದಿವಸವಿರುವಂಥದ್ದು, ನಾವೆಲ್ಲರೂ ಮನಸ್ಸು ಮಾಡಿದರೆ ಈ ತಿಂಗಳ ಕೊನೆಯವರೆಗೂ houseನ್ನು extend ಮಾಡಿ, ಇನ್ನೂ 23 ಇಲಾಖೆಗಳ ಮೇಲೆ ಚರ್ಚೆಯಾಗುತ್ತಿದೆ. ಇನ್ನೂ ಬಹಳ ಜನ ಶಾಸಕರಿಗೆ ಅವರ ಅಭಿಪ್ರಾಯಗಳನ್ನು ಹೇಳಬೇಕೆಂಬ ಭಾವನೆ ಇದೆ, ಆದರೆ ಅವಕಾಶವಿಲ್ಲ. ಆ ದೃಷ್ಟಿಯಿಂದ ಇಲ್ಲಿ ಸುಮ್ಮನೆ ಒಟ್ಟಿಗೆ demand pass ಮಾಡಿಕೊಂಡು ಹೋದರೆ, ಚರ್ಚೆಯಾಗದೇ ಇದ್ದರೆ, ಅಲ್ಲಿರುವಂಥ ನ್ಯೂನ್ಯತೆಗಳು, ತೊಂದರೆಗಳು ಮತ್ತು ತಾಪತ್ರಯಗಳ ಬಗ್ಗೆ, ನಾವು ನಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶಗಳು ಇಲ್ಲದೇ ಹೋದರೆ, it goes without recognition. ಅದು ಆಗಬಾರದು. ಇನ್ನು ಅಭಿವೃದ್ಧಿ ನಿಗಮಗಳ ಬಗ್ಗೆ ಹೇಳುವುದಾದರೆ, ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ವಾಲ್ಮೀಕಿ ಮಹರ್ಷಿ ಪರಿಶಿಷ್ಟ ಪಂಗಡಗಳ ನಿಗಮ, ಹಾಗೂ ಡಾ॥ ಬಾಬು ಜಗಜೀವನರಾಂ ಚರ್ಮ ಅಭಿವೃದ್ಧಿ ನಿಗಮ, ಬಂಜಾರ ಅಭಿವೃದ್ಧಿ ನಿಗಮ, ಬೋವಿ ಅಭಿವೃದ್ಧಿ ನಿಗಮ, ಹೀಗೆ ಐದಾರು ನಿಗಮಗಳಿವೆ. ಅದಕ್ಕೂ ಮೀರಿ ಇವತ್ತು ಡಾ॥ ಅಂಬೇಡ್ಕರ್ ಅಧ್ಯಯನ ಸಂಸ್ಥೆಗೆ ಒಬ್ಬ ಡೈರೆಕ್ಟರ್ ಅನ್ನು ಹಾಕಿದ್ದೀರಿ. ಅವರು ಯಾರು? ಇದರ ಬಗ್ಗೆ ತಾವು ವಿಶೇಷ ಗಮನವನ್ನು ಕೊಡಬೇಕಾಗುತ್ತದೆ. ಈ ಬಾರಿ ಡಾ॥ ಅಂಬೇಡ್ಕರ್‌ರವರ 125ನೇ ಜನ್ಮ ಜಯಂತಿಯನ್ನು ಆಚರಣೆ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರ ಇಡೀ ವರ್ಷ

ಆಚರಣೆ ಮಾಡಬೇಕೆಂದು 200 ಕೋಟಿ ರೂ.ಗಳನ್ನು ತೆಗೆದಿರಿಸಿದೆ. ನಿಮ್ಮ ಹೈಕಮಾಂಡ್ ಶ್ರೀಮತಿ ಸೋನಿಯಾ ಗಾಂಧಿಯವರು ಮತ್ತು ಶ್ರೀ ರಾಹುಲ್ ಗಾಂಧಿಯವರು ಅಂಬೇಡ್ಕರ್‌ರವರು ಹುಟ್ಟಿದ ಮಧ್ಯಪ್ರದೇಶದ Mhow ಎಂಬ ಸ್ಥಳಕ್ಕೆ ಹೋಗಿ ಕುಳಿತು, ಅಲ್ಲಿ programme ಮಾಡಿ ಬರುತ್ತಾರೆ. ಕಾಂಗ್ರೆಸ್ ನೇತೃತ್ವದ ಸರ್ಕಾರ ಇಲ್ಲಿದೆ, ತಾವು ಮಾನ್ಯ ಮಂತ್ರಿಯಾಗಿದ್ದೀರಿ, ತಾವು ಇದನ್ನು ಗಮನಿಸಿದ ಹಾಗೆ ಇಲ್ಲ. ಕೇಂದ್ರ ಸರ್ಕಾರ ವರ್ಷ ಪೂರ್ತಿ ಆಚರಿಸಬೇಕೆಂದು ಮಾಡಿದೆ. ನೀವು ಏನು ಮಾಡುತ್ತೀರಿ? ನಮ್ಮನ್ನೆಲ್ಲಾ ಇಲ್ಲಿ ಕೂರಿಸುವುದಕ್ಕೆ ಅವರು ಕಾರಣ, ಅವರ ಬಗ್ಗೆ ಬರೀ ಮಾತನಾಡಿದರೆ ಸಾಲದು. ಅವರು ಏನು ಹೇಳಿದ್ದಾರೆಂಬುದನ್ನು ಓದಿ ಅರ್ಥ ಮಾಡಿಕೊಂಡು, ಅದನ್ನು ಕಾರ್ಯಕ್ರಮದ ರೂಪದಲ್ಲಿ ತರುವುದಕ್ಕೆ ಅವಕಾಶವಿದೆ, ಅದನ್ನು ಮಾಡಿ. ಅದನ್ನು ವಿಶೇಷವಾಗಿ ಆಚರಣೆ ಮಾಡಬೇಕು, ಅಂಬೇಡ್ಕರ್ ಅಧ್ಯಯನ ಸಂಸ್ಥೆ ಬಗ್ಗೆ ಬೆಳಿಗ್ಗೆ ಮಾತನಾಡುವಾಗ ಹೇಳಿದರು, fake caste certificate ಅಂದರೆ ಸುಳ್ಳು ಜಾತಿ ಪ್ರಮಾಣ ಪತ್ರಗಳ ಬಗ್ಗೆ ಹೇಳಿದೆವು. ಇಲ್ಲಿ ಡೈರೆಕ್ಟರ್ ಆಗಿರುವಂಥವರು, ಅಕ್ರಮವಾಗಿ ಪರಿಶಿಷ್ಟ ಜಾತಿಯ ಬೇಡ, ಬುಡುಗ ಜನಾಂಗದವರು, ಬೇಡ ಜಂಗಮ ಎಂದು ಸುಳ್ಳು ಜಾತಿ ಪತ್ರವನ್ನು ಪಡೆದಿರುವ ಪದವಿ ಪೂರ್ವ ಕಾಲೇಜು ಶಿಕ್ಷಣ ಪ್ರಾಂಶುಪಾಲರಾಗಿದ್ದಂಥ ಡಾ॥ ಬಾಲಗುರುಮೂರ್ತಿ, ಅವರನ್ನು ಕಾನೂನು ಬಾಹಿರವಾಗಿ ಸಮಾಜ ಕಲ್ಯಾಣ ಇಲಾಖೆಯ ಅಂಗ ಸಂಸ್ಥೆಯಾದ ಡಾ॥ ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆಯಲ್ಲಿ ಆಡಳಿತಾಧಿಕಾರಿಯಾಗಿ ನೇಮಿಸಿರುವುದನ್ನು ನಾವು ಕಾಣಬಹುದು. Fake caste certificate ತೆಗೆದುಕೊಂಡವರನ್ನು ನೀವು ಅಲ್ಲಿ ಅಂಬೇಡ್ಕರ್ ಬಗ್ಗೆ ಅಧ್ಯಯನ ಮಾಡಿ ಎಂದು ಕೂರಿಸಿದ್ದೀರಿ. ಇದು ನ್ಯಾಯವೇ? First ಅವರನ್ನು ಅವರನ್ನು immediate ಆಗಿ change ಮಾಡಿ. ಈ ಸಂಸ್ಥೆ ಮಾಡಿ 12 ವರ್ಷಗಳಾಯಿತು. ಇದುವರೆಗೂ ಏನು ಅಧ್ಯಯನವಾಗಿದೆ? ಏನು ಕಾರ್ಯಕ್ರಮಗಳನ್ನು ಕೊಟ್ಟಿದ್ದೀರಿ? ಆದ್ದರಿಂದ ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಸಾವಿರಾರು certificates ಅನ್ನು ವಿತರಣೆ ಮಾಡಿದ್ದಾರೆ.

ನಾನು ಮತ್ತು ಮಾನ್ಯ ಗೋವಿಂದ ಕಾರಜೋಳರವರು ಮತ್ತು ಮಾನ್ಯ ನರೇಂದ್ರಸ್ವಾಮಿಯವರು last year committeeಯಲ್ಲಿದ್ದು ಎಲ್ಲೆಲ್ಲಿ ಈ ರೀತಿ ಸುಳ್ಳು caste certificateಗಳನ್ನು ತೆಗೆದುಕೊಂಡಿದ್ದಾರೆ, ಅದನ್ನು ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ paperಗಳಲ್ಲಿ ಜಾಹೀರಾತು ಕೊಟ್ಟು, ಅವರು ಹೌದೋ, ಅಲ್ಲವೋ ಎಂಬ ಬಗ್ಗೆ ಸಾರ್ವಜನಿಕರ ಎದುರಿಗೆ ವಿಚಾರಣೆಯಾಗಬೇಕೆಂದು ನಾವು ಸಲಹೆ ಮಾಡಿದ್ದೆವು. That also you have to take it seriously. ಇದರಲ್ಲಿ ಬಹಳಷ್ಟು ಅನ್ಯಾಯವಾಗುತ್ತಿದೆ, ಇದನ್ನು ತಡೆಯಬೇಕು. ಇನ್ನು CRE cell ಬಗ್ಗೆ ಹೇಳುವುದಾದರೆ, ಇದು ಇದ್ದೂ ಇಲ್ಲದ ಹಾಗೆ ಆಗಿದೆ, ಲೋಕಾಯುಕ್ತರಿಗೆ ಹೇಳಿದ ಹಾಗೆ ಅವರನ್ನು ಹಿಡಿದುಕೊಡುವುದು, ಆದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನೂ ಅಧಿಕಾರವಿಲ್ಲ. ಇವತ್ತು ಬಹಳಷ್ಟು ರಾಜಿಯಾಗಿ ಹೋಗುತ್ತಿದ್ದಾರೆ. ಅದಕ್ಕೂ ಕೂಡ ನಾವು ಸಲಹೆ ಮಾಡಿದ್ದೇವೆ. ಅವರಿಗೆ ಜಿಲ್ಲಾ ಮಟ್ಟದಲ್ಲಿ ಹೆಚ್ಚು ಅಧಿಕಾರ ಕೊಟ್ಟು, ಅದು ಸರಿಯಾದ ರೀತಿಯಲ್ಲಿ ಕೆಲಸವಾಗುವ ರೀತಿಯಲ್ಲಿ ಆಗಬೇಕೆಂದು ಹೇಳಿದ್ದೇವೆ. ಇದರ ಬಗ್ಗೆ ಇನ್ನೂ ಹೆಚ್ಚು ವಿಷಯವನ್ನು ನಮ್ಮ ಸ್ನೇಹಿತರು ಮಾತನಾಡುತ್ತಾರೆ.

ಇನ್ನು ಸ್ವಯಂ ಉದ್ಯೋಗದಡಿಯಲ್ಲಿ ಒಂದು ಲಕ್ಷ ರೂ.ಗಳ ಸಹಾಯಧನವನ್ನು ಇಟ್ಟಿದ್ದಾರೆ. ಇದು ಇವತ್ತಿನ ಕಾಲದಲ್ಲಿ ಸಾಕಾಗುವುದಿಲ್ಲ, ಇದನ್ನು ಹೆಚ್ಚು ಮಾಡಿ, ಈಗ ಸುಮಾರು ಹಣ ನಿಮ್ಮ ಹತ್ತಿರವಿದೆ. ಈ ವರ್ಷದ 16,500 ಸಾವಿರ ಕೋಟಿ ರೂ.ಗಳು ಮತ್ತು ಕಳೆದ ವರ್ಷದ್ದು 7,500 ಕೋಟಿ ರೂ.ಗಳು ಸೇರಿ ಇವತ್ತು ಒಟ್ಟು ಸುಮಾರು 24,500 ಕೋಟಿ ರೂ.ಗಳು ನಿಮ್ಮ ಕೈಯಲ್ಲಿದೆ. ಇದನ್ನು ಜಾಸ್ತಿ ಮಾಡಿ, ಇದನ್ನು ಒಂದು ಲಕ್ಷ ರೂ.ಗಳಿಗೆ ಇಟ್ಟಿದ್ದೀರಿ, ಇದನ್ನು ಮೂರು ಲಕ್ಷ ರೂ.ಗಳಿಗೆ ಹೆಚ್ಚಿಸಿ, ಇನ್ನು ಭೂ-ಒಡೆತನ ಯೋಜನೆಯದ್ದು, 1990-91ರಲ್ಲಿ ಇವತ್ತು ದಿವಂಗತ ಮುಖ್ಯಮಂತ್ರಿಯಾದ ಶ್ರೀಮಾನ್ ಬಂಗಾರಪ್ಪನವರನ್ನು ನೆನಪು ಮಾಡಿಕೊಳ್ಳಬೇಕು. ಅವರ ಕಾಲದಲ್ಲಿ ಅದು ಜಾರಿಗೆ ಬಂತು. ಅವತ್ತಿನಿಂದ ಇವತ್ತಿನವರೆಗೆ ನಾವು ಸುಮಾರು 32,555 ಕುಟುಂಬಗಳಿಗೆ ಜಮೀನನ್ನು ಕೊಟ್ಟಿದ್ದೇವೆ. ಅದು ಎಷ್ಟು

ಕೊಟ್ಟಿದ್ದೇವೆಂದರೆ 56,685 ಎಕರೆ ಕೊಟ್ಟಿದ್ದೇವೆ. ಸುಮಾರು 25 ವರ್ಷಗಳಲ್ಲಿ ಅಂದರೆ ಒಂದು ವರ್ಷದಲ್ಲಿ ಎಷ್ಟು ಕೊಟ್ಟ ಹಾಗೆ ಆಯಿತೆಂದರೆ 2,000 ಎಕರೆ ಕೊಟ್ಟ ಹಾಗೆ ಆಯಿತು. ಮಾನ್ಯ ಮಂತ್ರಿಯವರೆ, ಈ ಯೋಜನೆಗೆ ಇಲಾಖೆಯಲ್ಲಿ 1,000 ಕೋಟಿ ರೂ.ಗಳನ್ನು ಇಡಿ.

Assets create ಮಾಡಿ. ನಾನು ಆಗಲೇ ಹೇಳಿದೆ, ಸುಮ್ಮನೆ ಕುರಿ, ಕೋಳಿ ಅವುಗಳಿಗೆಲ್ಲ ಕೊಟ್ಟು, ನೆಂಟರು ಬಂದಾಗ ಅವುಗಳನ್ನೆಲ್ಲ ಕಡಿದು ತಿಂದು ಲೆಕ್ಕ ಬರೆಯತಕ್ಕಂಥಾದ್ದು ಆಗಬಾರದು. ಅದರ ಬದಲು assets create ಮಾಡಿ. ಚೈನಾದಲ್ಲಿ ಒಂದು ಪಾಲಿಸಿ ಇದೆ. ಮೀನು ಕೊಡಬೇಡಿ, ಅವರಿಗೆ ಮೀನು ಹಿಡಿಯತಕ್ಕಂಥ ಕಲೆಯನ್ನು ಕಲಿಸಿ, ಬಲೆಯನ್ನು ಕೊಡಿ. ಅವರೇ ಮೀನು ಹಿಡಿದುಕೊಂಡು ತಿನ್ನತಕ್ಕಂಥಾದ್ದನ್ನು ಮಾಡಿ ಎಂದು ಇದೆ. ಅದರಲ್ಲಿ ಎಷ್ಟು ಅರ್ಥವಿದೆ. ಇವತ್ತು ನಾವು ಅನ್ನಭಾಗ್ಯ ಯೋಜನೆಯನ್ನು ಕೊಡುತ್ತಿದ್ದೇವೆ. ಎಷ್ಟು ಕಾಲದವರೆಗೆ ಹೀಗೇ ಕೊಡುತ್ತೀರಿ? ಸ್ವಾಭಿಮಾನದಿಂದ, ಗೌರವದಿಂದ ಅವರೇ ದುಡಿದು ಬದುಕತಕ್ಕಂಥಾದ್ದಕ್ಕೆ ಅವಕಾಶ ಮಾಡಿಕೊಡಿ. ಭೂ ಒಡೆತನ ಯೋಜನೆಯನ್ನು ಜಾಸ್ತಿ ಮಾಡಿ. ಎಲ್ಲೆಲ್ಲಿ ಭೂಮಿ ಲಭ್ಯವಿದೆಯೋ ಕೊಂಡು ಅವರಿಗೆ ಕೊಡಿ. ಅದಕ್ಕೆ ನೀವು ವಿಶೇಷವಾಗಿ ಆಸ್ಥೆ ವಹಿಸಿ. Assets create ಮಾಡಿ. ಆ ಸಮುದಾಯಕ್ಕೆ ಲಭ್ಯವಾಗುತ್ತದೆ. ಭೂ ಒಡೆತನ ಯೋಜನೆಯಲ್ಲಿ ಮೊದಲು ಏಳೂವರೆ ಲಕ್ಷ ರೂಪಾಯಿಗಳಿತ್ತು. ನಾವು ಬಂದ ಮೇಲೆ ಅದನ್ನು ಹತ್ತು ಲಕ್ಷ ರೂ.ಗಳಿಗೆ ಏರಿಸಿದ್ದೇವೆ. ನಮ್ಮ ಭಾಗದಲ್ಲಿ ಒಂದು ಎಕರೆ ಕಾಫಿ ತೋಟದ ಬೆಲೆ ಹದಿನೈದು ಲಕ್ಷ ರೂ.ಗಳಾಗಿದೆ. ಅದನ್ನು ಜಾಸ್ತಿ ಮಾಡಿ ಎಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಬಯಲುಸೀಮೆಯಲ್ಲಿ ಎಸ್.ಆರ್. ರೇಟ್ ಮೇಲೆ ಎರಡು ಲಕ್ಷ ರೂ.ಗಳಿಗೆ ಒಂದು ಎಕರೆ ಭೂಮಿ ಸಿಗಬಹುದು. ಆದರೆ ಮಲೆನಾಡಿನಲ್ಲಿ ಹಾಗಿಲ್ಲ. ಕಾಫಿ ವಾಣಿಜ್ಯ ಕೃಷಿಯಾಗಿದ್ದು, ಅಲ್ಲಿ ಬೇರೆ ಭೂಮಿ ಸಿಗುವುದಿಲ್ಲ. ಗದ್ದೆಗಳೆಲ್ಲಾ ಪಾಳು ಬಿದ್ದಿವೆ ಅಥವಾ ತೋಟಗಳಾಗುತ್ತಿವೆ. ನಮ್ಮ ಭಾಗಕ್ಕೆ ನೀವೂ ಬಂದಿದ್ದೀರಿ, ಕೃಷ್ಣ ಭೈರೇಗೌಡರೂ ಬಂದಿದ್ದಾರೆ. ಅಲ್ಲಿ ಒಂದು ಎಕರೆ ಭೂಮಿಯ ಬೆಲೆ ಕನಿಷ್ಟವೆಂದರೂ

ಹದಿನೈದು ಲಕ್ಷ ರೂ.ಗಳಿದೆ. ಕನಿಷ್ಟ ಒಂದು ಎಕರೆ ಭೂಮಿಯಾದರೂ ಅವರಿಗೆ ಸಿಗಲಿ. ಅದಕ್ಕಾಗಿ, ಅದಕ್ಕಿಟ್ಟಿರುವ ಹಣವನ್ನು ಜಾಸ್ತಿ ಮಾಡಿ, ಅದನ್ನು ಹದಿನೈದು ಲಕ್ಷ ರೂ.ಗಳಿಗೆ ಏರಿಸಿ. ಆ ಮೂಲಕ ಅಲ್ಲೇ ಹುಟ್ಟಿದಂಥವರಿಗೆ ನೀವು ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ. ಅವರು ಬದುಕು ಕಟ್ಟಿಕೊಳ್ಳುತ್ತಾರೆ. ಇನ್ನು, ಗಂಗಾ ಕಲ್ಯಾಣ ಯೋಜನೆಯ ಬಗ್ಗೆ ಹೇಳಬೇಕೆಂದರೆ, ನಮ್ಮೆಲ್ಲರಿಗೂ ಆದ ಅನುಭವವೆಂದರೆ, ಕಳೆದ ಅಧಿವೇಶನದಲ್ಲಿ ಇಲ್ಲಿ ಚರ್ಚೆಯ ಸಂದರ್ಭದಲ್ಲಿ ಹೇಳಿದರು, ಎಸ್.ಸಿ.ಯವರಿಗೆ ಸುಮಾರು 14,000, ಎಸ್.ಟಿ.ಯವರಿಗೆ 7,500, ಒಟ್ಟು ಸುಮಾರು 22,000 ಬೋರ್‌ವೆಲ್‌ಗಳನ್ನು ಈ ಯೋಜನೆಯಲ್ಲಿ ಇನ್ನೂ ಕೊರೆದಿಲ್ಲ. ಬೋರ್‌ವೆಲ್‌ಗಳನ್ನು ಕೊರೆಯಲು centralized contract ಏಕೆ? ಎಲ್ಲ ಜಿಲ್ಲೆಗಳಲ್ಲಿಯೂ ಇವತ್ತು ರಿಗ್‌ಗಳಿವೆ. ಆದ್ದರಿಂದ, ಅದನ್ನು decentralize ಮಾಡಿ. ತಾಲ್ಲೂಕು ಮಟ್ಟದಲ್ಲಿಯೇ ಕೊಡಿ. ನಾವು ನೋಡಿಕೊಂಡು ಮಾಡಿಸುತ್ತೇವೆ. ಈ ಯೋಜನೆಯಲ್ಲಿ ಸುಮ್ಮನೆ ಅನೌನ್ಸ್ ಮಾಡಿರುವುದನ್ನು ಬಿಟ್ಟರೆ ಬೋರ್‌ವೆಲ್‌ಗಳನ್ನು ಕೊರೆಯುತ್ತಿಲ್ಲ. ಬೋರ್‌ವೆಲ್‌ಗಳನ್ನು ಕೊರೆದಿರುವ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಪುಟ್ಟಣ್ಣಯ್ಯನವರಿಗೆ ಗೊತ್ತು, ಅವರಿಗೆ ಇದರ ಅನುಭವವಾಗಿರುತ್ತದೆ, ಅಂಕಿ ಅಂಶಗಳನ್ನು ನೋಡಿದರೆ ನಿಮಗೆ ಆಶ್ಚರ್ಯವಾಗುತ್ತದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸಂಬಂಧಿಸಿದಂತೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಕೊರೆಯಲಾದ ಕೊಳವೆಬಾವಿಗಳು 12,586. ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ 2,947, ಒಟ್ಟಾರೆಯಾಗಿ 15,533 ಕೊಳವೆಬಾವಿಗಳನ್ನು ಕೊರೆಯಲಾಗಿದೆ ಎಂದು ಹೇಳುತ್ತಾರೆ. ಇವುಗಳಿಗೆ ಇನ್ನೂ ಕೂಡ power connection ಆಗಿಲ್ಲ. K.P.T.C.L.ನಲ್ಲಿ 200 ಕೋಟಿ ರೂ.ಗಳು ಬಿದ್ದಿದೆ. ನೀವು ಅವರಿಗೆ ಹೇಳಿ, ತಕ್ಷಣ connection ಕೊಡಲು ಏನು ಸಮಸ್ಯೆಯಿದೆ? ತಕ್ಷಣ ಆ ಕೆಲಸ ಆಗಬೇಕು. ಅದನ್ನು ತಾವು ಬಹಳ ಗಂಭೀರವಾಗಿ ತೆಗೆದುಕೊಂಡು

ಮಾಡಿಕೊಡಬೇಕು ಎನ್ನುವ ವಿನಂತಿಯನ್ನು ಮಾಡುತ್ತೇನೆ. ಅದರ unit cost 2 ಲಕ್ಷ ರೂ.ಗಳಾಗಿದೆ. ಅದು ಸಾಕಾಗುವುದಿಲ್ಲ. ಅದನ್ನು 4 ಲಕ್ಷ ರೂ.ಗಳಿಗೆ ಏರಿಸಿ. ಆಗ ಅವರು ಬಂದು ಬೋರ್‌ವೆಲ್‌ಗಳನ್ನು ಕೊರೆಯುತ್ತಾರೆ. ಇಲ್ಲವೆಂದರೆ ಅದು ಸಮ್ಮನೆ ಪುಸ್ತಕದಲ್ಲಿರುತ್ತದೆ, ಯಾವ ದಲಿತರಿಗೂ ಗಂಗಾ ಕಲ್ಯಾಣ ಯೋಜನೆ ತಲುಪುವುದಿಲ್ಲ. ನಾನು ನೆನಪಿಸಿಕೊಳ್ಳುತ್ತೇನೆ, ಗಂಗಾ ಕಲ್ಯಾಣ ಯೋಜನೆ ಬಂದದ್ದೇ ಮಾಜಿ ಪ್ರಧಾನ ಮಂತ್ರಿಗಳಾದ ದೇವೇಗೌಡರ ಕಾಲದಲ್ಲಿ, ಅವರು Irrigation Minister ಆಗಿದ್ದಾಗ ಈ ಯೋಜನೆ ಬಂತು. First time in the History of Karnataka, it was introduced. ಅದನ್ನು ಯಾರಾದರೂ ಮಾಡಿರಲಿ, ಮಾಡಿದಂಥವರನ್ನು ನೆನಪಿಕೊಳ್ಳಬೇಕಾಗುತ್ತದೆ. ಅದನ್ನು ಹೆಚ್ಚು ವಿಸ್ತೃತವಾಗಿ ಮಾಡಿ ಇಡೀ ಹಳ್ಳಿಹಳ್ಳಿಗೆ ತಲುಪುವ ಹಾಗೆ, ಜಮೀನಿರುವವರಿಗೆ ಅನುಕೂಲ ಆಗುವ ಹಾಗೆ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ. ಇನ್ನು, ನಿವೇಶನ ಮತ್ತು ಮನೆಗಳ ಬಗ್ಗೆ ಹೇಳಿದಿರಿ. ಈ ವರ್ಷ ಒಟ್ಟು ಒಂದೂವರೆ ಲಕ್ಷ ಮನೆಗಳನ್ನು ಅಂದರೆ ಹಳ್ಳಿಗಳಲ್ಲಿ ಒಂದು ಲಕ್ಷ, urban areaದಲ್ಲಿ ಐವತ್ತು ಸಾವಿರ ಮನೆಗಳನ್ನು ಮಾಡುತ್ತೇವೆ, ಅದರ ಜೊತೆಗೆ ಹಳ್ಳಿಗಳಲ್ಲಿ unit cost ಒಂದೂವರೆ ಲಕ್ಷ ರೂ.ಗಳು ಎಂದು ಮಾಡುತ್ತೇವೆ, urban areaಗಳಿಗೆ 1.80 ಲಕ್ಷ ರೂ.ಗಳು ಮಾಡುತ್ತೇವೆಂದು ಹೇಳಿದ್ದೀರಿ. ಅದು ಒಳ್ಳೆಯ ತೀರ್ಮಾನ. ಅದು ಜಾರಿಗೆ ಬರುವ ಹಾಗೆ ನೋಡಿಕೊಳ್ಳಿ, ಜೊತೆಗೆ, 50,000 ನಿವೇಶನಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. 35,000 ನಿವೇಶನಗಳನ್ನು ಹಳ್ಳಿಗಳಲ್ಲಿ, 15,000 ನಿವೇಶನಗಳನ್ನು ಪಟ್ಟಣದಲ್ಲಿ ಕೊಡುತ್ತೇವೆ ಎಂದು ಹೇಳಿದ್ದೀರಿ. ಅದನ್ನೂ ಜಾರಿಗೆ ಕೊಡಬೇಕೆನ್ನುವ ಮಾತನ್ನು ನಾನು ಹೇಳುತ್ತೇನೆ. ಇನ್ನು, ವಿಶೇಷವಾಗಿ, I congratulate the Government. ಉದ್ದಿಮೆದಾರರಿಗೆ ಕೆ.ಎಸ್.ಎಫ್.ಸಿ.ಯಿಂದ 2 ಕೋಟಿ ರೂಪಾಯಿಗಳ ಸಾಲವನ್ನು 4% ಬಡ್ಡಿಯಲ್ಲಿ ಕೊಡುತ್ತಿದ್ದು, ಉಳಿದ 13% ಬಡ್ಡಿಯನ್ನು ಸಮಾಜ ಕಲ್ಯಾಣ ಇಲಾಖೆಯವರು ತುಂಬಿ ಕೊಡಬೇಕೆಂದು ಶ್ರೀಮಾನ್ ಯಡಿಯೂರಪ್ಪನವರ ಕಾಲದಲ್ಲಿ ತೀರ್ಮಾನ ಮಾಡಿದರು. ಈಗ ಅವರನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಈ ಸರ್ಕಾರದವರು

ಅದನ್ನು ಮುಂದುವರೆಸಿದ್ದಾರೆ. 2 ಕೋಟಿ ರೂ.ಗಳು ಎಂದು ಇದ್ದುದನ್ನು 5 ಕೋಟಿ ರೂ.ಗಳಿಗೆ ಏರಿಸಿ ಎಂದು ನಾವು ಅನುಸೂಚಿತ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿಯಿಂದ ಶಿಫಾರಸ್ಸು ಮಾಡಿದ್ದೆವು. ಅದನ್ನು ಸರ್ಕಾರ ಒಪ್ಪಿಕೊಂಡು 5 ಕೋಟಿ ರೂ.ಗಳಿಗೆ ಏರಿಸಿದೆ. ಅದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಇದರ ಜೊತೆಗೆ, ಬ್ಯಾಂಕುಗಳವರನ್ನು ಕರೆದು ಮಾತನಾಡಿ. ಕೆ.ಎಸ್.ಎಫ್.ಸಿ.ಯಿಂದ ಕೊಡುತ್ತಿರುವುದು ಸಾಕಾಗುತ್ತಿಲ್ಲ, 5 ಕೋಟಿ ರೂ.ಗಳು ಬ್ಯಾಂಕುಗಳಲ್ಲೂ ಸಿಗುವ ಹಾಗೆ ಮಾಡಿ. ಅದಕ್ಕೆ collateral securityಗೆ ಸರ್ಕಾರವೇ ಗ್ಯಾರಂಟಿ ಆಗಬೇಕು. ಆಗ ಅನುಕೂಲವಾಗುತ್ತದೆ ಎನ್ನುವುದನ್ನು ತಮ್ಮ ಮೂಲಕ ಅವರಿಗೆ ಹೇಳುತ್ತೇನೆ. ಇನ್ನು, mining areaದಲ್ಲಿ ಲೀಸ್ ಕೊಡುವಂಥಾದ್ದನ್ನು ಈವರೆಗೂ Scheduled Casteನವರಿಗೆ ಕೊಟ್ಟಿಲ್ಲ. ಅದನ್ನು ಕೊಡುತ್ತೇವೆ ಎನ್ನುವುದನನ್ನು ಬಜೆಟ್‌ನಲ್ಲಿ ಹೇಳಿಸಿದ್ದೀರಿ. ಆದರೆ ಇನ್ನೂ Government Order ಆಗಿಲ್ಲ. Civil Worksನಲ್ಲಿ ಯಾವುದೇ ಇಲಾಖೆಯಲ್ಲಿ 50 ಲಕ್ಷ ರೂ. ಒಳಗೆ ಕೆಲಸ ತೆಗೆದುಕೊಂಡಾಗ, ಎಸ್.ಸಿ/ಎಸ್.ಟಿ. ಕಂಟ್ರಾಕ್ಟರ್‌ಗಳಿಗೆ ಮೀಸಲಾತಿ ಕೊಡಬೇಕು ಎಂದು ಬಜೆಟ್‌ನಲ್ಲಿ ಹೇಳಿಸಿದ್ದೀರಿ. ಆದರೆ ಇವತ್ತಿನವರೆಗೆ ಅದು Government Order ಆಗಲಿಲ್ಲ. ಅದು ಬರುತ್ತದೆ ಎಂದು ನಮ್ಮ ಹುಡುಗರು ಬೆಂಗಳೂರಿನ ಕಡೆ ನೋಡುತ್ತಾ ಕುಳಿತಿದ್ದಾರೆ. ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ ಅದನ್ನು ತಕ್ಷಣ ಮಾಡಿ. S.C.P./T.S.P.ಗೆ Karnataka SC/ST Development Council ಎಂದು ಮಾಡಿದ್ದೀರಿ. ಅದಕ್ಕೆ ಮುಖ್ಯಮಂತ್ರಿಗಳೇ ಅಧ್ಯಕ್ಷರು, ಅದರಲ್ಲಿ ನೀವು ಇರುತ್ತೀರಿ, ಕಂದಾಯ ಮಂತ್ರಿಗಳಿರುತ್ತಾರೆ. ನೀವು ಎಷ್ಟು ಸಾರಿ ಸಭೆ ಸೇರಿದಿರಿ? ಅದಕ್ಕೆ Rules frame ಆಗಿದೆಯೇ? ಹಳೆಯ ಕಾರ್ಯಕ್ರಮಗಳನ್ನು ಬಿಟ್ಟರೆ ಹೊಸದು ಯಾವುದೂ ಆಗಿಲ್ಲ. ಆ ದೃಷ್ಟಿಯಿಂದ ಆ ದಿಸೆಯಲ್ಲಿ ಕೆಲಸ ಆಗಬೇಕು. ಅಲ್ಲಿ ಇವುಗಳಿಗೆಲ್ಲಾ ನೀವು ತೀರ್ಮಾನ ಕೊಡಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯದಾಗಿ, Excise Department CL-2 license ಕೊಡುವುದರ ಬಗ್ಗೆ ಮಾನ್ಯ ಜಗದೀಶ್ ಕುಮಾರ್‌ರವರು ಮಾತನಾಡುತ್ತಾ ಹೇಳಿದರು. ಅದು ಆಗಿಲ್ಲ. ಅದನ್ನು ಆದಷ್ಟು

ಬೇಗನೆ ಮಾಡಿ ಅವರಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಮ್ಮ K.I.A.D.B. layoutsನಲ್ಲಿ ಕೂಡ ಅವರಿಗೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ವಿಶೇಷವಾಗಿ ಅರಣ್ಯ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನಾಡುತ್ತೇನೆ. ಇವತ್ತು ಇಡೀ ಮಲೆನಾಡಿನಲ್ಲಿ ಆನೆಗಳ ಹಾವಳಿಯಿಂದ ಬಹಳ ತೊಂದರೆಯಾಗುತ್ತಿದೆ. ವಿಶೇಷವಾಗಿ, ಸಕಲೇಶಪುರ, ಮೂಡಿಗೆರೆ ಮತ್ತು ಕೊಡಗು ಈ ಮೂರು ಜಿಲ್ಲೆಗಳಲ್ಲಿ ಹಾವಳಿಯಾಗುತ್ತಿದೆ. ಇವತ್ತು ಮಾನವ ಮತ್ತು ವನ್ಯಜೀವಿಗಳ ಸಂಘರ್ಷ ವಿಪರೀತವಾಗಿದೆ. ಸಾವುನೋವುಗಳೂ ಆಗುತ್ತಿದೆ, ಆಸ್ತಿಪಾಸ್ತಿಗೆ ನಷ್ಟವಾಗುತ್ತಿದೆ. ಇದಕ್ಕೆ ಒಂದು permanent solution ಆಗಬೇಕು. ಆ ದಿಸೆಯಲ್ಲಿ ಕೆಲಸ ಮಾಡಬೇಕು ಎನ್ನುವುದನ್ನು ಹೇಳುತ್ತೇನೆ. ಕುದುರೆಮುಖ ಅಭಯಾರಣ್ಯ ಅಥವಾ National Parkನಲ್ಲಿ K.I.O.C.L. ಯೋಜನೆಯಿತ್ತಲ್ಲ, ಆಗ ಅಲ್ಲಿ ಸುಮಾರು ಎರಡೂವರೆ ಸಾವಿರ ಜನ ವಾಸಿಸುತ್ತಿದ್ದಂಥ layout ಇದೆ. ಇವತ್ತು ಅದು ಹಾಳು ಹಂಪೆಯಾಗಿದೆ. ಅದಕ್ಕೆ ನಾನು ತಮ್ಮ ಮುಖಾಂತರ ಸಲಹೆ ಕೊಡುವುದೇನೆಂದರೆ, ಅಲ್ಲಿ ಒಂದು ಅರಣ್ಯ ಕಾಲೇಜನ್ನು ತೆಗೆಯುವಂಥಾದ್ದನ್ನು ಮಾಡಿ, ಅದರ ಉಪಯೋಗವಾಗಲಿ. ಸುಮಾರು 700–800 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿರುವಂಥ ಸಾಕಷ್ಟು ಕಟ್ಟಡಗಳು ಅಲ್ಲಿ ಖಾಲಿ ಇವೆ. ಅಲ್ಲಿ Forest University ಮಾಡುತ್ತಿರೋ ಅಥವಾ ಕಾಲೇಜು ಮಾಡುತ್ತೀರೋ ನಿಮಗೆ ಬಿಟ್ಟಿದ್ದು, ಅದಕ್ಕೆ ವಿಶೇಷವಾದ ಒತ್ತು ಕೊಡಿ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಲ್ಲದಿದ್ದರೆ ಅದು ಮತ್ತೊಂದು ಹಾಳು ಹಂಪೆಯಾಗುತ್ತದೆ. ಕುದುರೆಮುಖ ಕಂಪನಿ ಇದ್ದಾಗ ಅಲ್ಲಿ ಲಕ್ಯಾ ಡ್ಯಾಂ ಎಂದು ಮಾಡಿ ಆವತ್ತು ಅಲ್ಲಿ ಎಲ್ಲ wasteಅನ್ನು dump ಮಾಡಿದ್ದಾರೆ. ಅದು earthern dam, ಯಾವುದೇ ಘಳಿಗೆಯಲ್ಲಿ ಒಡೆದು ಹೋದರೆ ಅದು ಎಲ್ಲ ನದಿಗಳಿಗೆ ಸೇರಿ ಬಹಳ ತೊಂದರೆಯಾಗುವಂಥ ಸಾಧ್ಯತೆಗಳಿವೆ. ಅದಕ್ಕೆ ಆದಷ್ಟು ಜರೂರಾಗಿ ಅರಣ್ಯ ಇಲಾಖೆಯವರು ಒತ್ತು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು, ಇಲ್ಲಿ ಕಂದಾಯ ಸಚಿವರಿದ್ದಾರೆ. ಇಷ್ಟು ವರ್ಷಗಳ ಕಾಲ ಎಸ್.ಸಿ/ಎಸ್.ಟಿ.ಗಳಿಗೆ ಜಮೀನನ್ನು ಕೊಟ್ಟಿದ್ದಾರೆ, ಬಹಳ ಕಡೆಗಳಲ್ಲಿ

ಪೋಡಿಯಾಗಿಲ್ಲ, ಅವರಿಗೆ ಜಮೀನು ಎಲ್ಲಿದೆ ಎನ್ನುವುದು ಗೊತ್ತಿಲ್ಲ. ಅದಕ್ಕೆ ಒಂದು special drive ಮಾಡಬೇಕೆಂದು ಹಿಂದಿನ ಸಾರಿ ಕೂಡ ತಮ್ಮ ಹತ್ತಿರ ಕೇಳಿಕೊಂಡಿದ್ದೆ. ಒಂದು Special drive ಮಾಡಿ ಎಸ್.ಸಿ/ಎಸ್.ಟಿ.ಗಳ ಜಮೀನಿಗೆ ಹದ್ದುಬಸ್ತನ್ನು ತೋರಿಸತಕ್ಕಂಥಾದ್ದು ಮತ್ತು ಅವರ ಜಮೀನಿಗೆ ಸಂಬಂಧಿಸಿದಂತೆ ಏನೇನು ತೊಂದರೆಯಿದೆ ಅದನ್ನು ಸರಿಪಡಿಸುವಂಥ ಕೆಲಸವನ್ನು ತಾವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಸಮಾಜ ಕಲ್ಯಾಣ ಮಂತ್ರಿಗಳಿಗೆ ಬಹಳ ಉತ್ಸಾಹದಿಂದ ಕೆಲಸ ಮಾಡುವಂಥ ಮನಸ್ಸಿದೆ. ಈ ದಿಸೆಯಲ್ಲಿ ತಾವು ಹೆಚ್ಚು ಒತ್ತು ಕೊಟ್ಟು, ನಮ್ಮ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ದಲಿತರಿಗೆ ಅನುಕೂಲವಾಗುವ ಹಾಗೆ ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಪುಟ್ಟಣ್ಣಯ್ಯನವರು.

ಶ್ರೀ ಅಶೋಕ್ ಖೇಣಿ: ಮಾನ್ಯ ಉಪಾಧ್ಯಕ್ಷರೆ, ನಾನು ಇವತ್ತು ಮೂರು ವಿಷಯಗಳ ಮೇಲೆ ಮಾತನಾಡಬೇಕೆಂದಿದ್ದೇನೆ.

ಉಪಾಧ್ಯಕ್ಷರು: ಖೇಣಿಯವರೆ, ಕುಳಿತುಕೊಳ್ಳಿ, ಎಲ್ಲರಿಗೂ ಅವಕಾಶ ಕೊಡುತ್ತೇನೆ. ಈಗ ಪುಟ್ಟಣ್ಣಯ್ಯನವರನ್ನು ಕರೆದಿದ್ದೇನೆ. ಆಮೇಲೆ ರೇವಣ್ಣನವರು, ಅವರದ್ದಾದ ಮೇಲೆ ನೀವು ಮಾತನಾಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ): ಸನ್ಮಾನ್ಯ ಉಪಾಧ್ಯಕ್ಷರೆ, 23 ಇಲಾಖೆಗಳ ಮೇಲೆ ಯಾರ್‍ಯಾರು ಮಾತನಾಡುತ್ತಾರೋ, ಅವರು ಇಲಾಖೆಗಳ ಮೇಲೆ ಚೆನ್ನಾಗಿ ಬೆಳಕು ಚೆಲ್ಲುತ್ತಾರೆ, ಅದನ್ನು ಕೇಳೋಣ ಎಂದುಕೊಂಡಿದ್ದೆ. ನಾನು ಮಾತನಾಡುವದಕ್ಕಿಂತ ಬೇರೆಯವರ ಮಾತುಗಳನ್ನು ಕೇಳಬೇಕೆಂದಿದ್ದೆ. 23 ಇಲಾಖೆಗಳ ಬಗೆಗಿನ ಚರ್ಚೆಯನ್ನು ಎರಡು ದಿವಸಗಳಲ್ಲಿ ಮುಗಿಸುತ್ತಿದ್ದೇವೆ ಎಂದರೆ ಸರ್ಕಾರಕ್ಕೆ ಆಸಕ್ತಿ ಇಲ್ಲವೋ ಅಥವಾ ವಿರೋಧ ಪಕ್ಷಗಳಿಗೆ ಆಸಕ್ತಿ ಇಲ್ಲವೋ ಗೊತ್ತಿಲ್ಲ. ನಾವಂತೂ ಒಂಟಿ ಸಲಗ ಇದ್ದ ಹಾಗೆ. ನಮ್ಮದು ಯಾವ ಗುಂಪೂ ಇಲ್ಲ. ಈ 23 ಬೇಡಿಕೆಗಳಲ್ಲಿ

ಯಾವುದರ ಮೇಲೆ ಮಾತನಾಡಬೇಕು ಎಂದು ನನಗೆ ಗೊತ್ತಾಗುತ್ತಿಲ್ಲ. ಏಕೆಂದರೆ, ನಾನು ಮೇಲುಕೋಟೆ ಕ್ಷೇತ್ರದಿಂದ ಬಂದವನು. ನಾಮಕ್ಕೇ Supreme Court ಗೆ ಹೋಗಿದ್ದ ಜಾಗವದು. ನಾನು ಒಂದೊಂದು ಸಾರಿ ಇದಕ್ಕೇನಾದರೂ ಮಂತ್ರ ಹೇಳಿಬಿಡೋಣ ಎಂದು ಯೋಚಿಸುತ್ತಿದ್ದೆ. ಆರ್ಥಿಕ ಇಲಾಖಾಯ ನಮಃ, ಸಿಬ್ಬಂದಿ, ಆಡಳಿತ ಸುಧಾರಣಾಯ ನಮಃ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖಾಯ ನಮಃ, ಇಂಧನಾಯ ನಮಃ ಎಂದು ಹೇಳಿಬಿಟ್ಟರೆ, ಸುಮ್ಮನೆ 23ಕ್ಕೂ 23 ಮಂತ್ರ ಹೇಳಿ ಕುಳಿತುಬಿಡುವುದು ಒಳ್ಳೆಯದು. ಆರ್ಥಿಕ ಮತ್ತು ಆಡಳಿತ ಸುಧಾರಣೆ ಈ ಎರಡೂ ಇಲಾಖೆ ಬಹಳ ಮುಖ್ಯವಾದುದು. ಹಿಂದಿನ ವರ್ಷ ಎಷ್ಟು ಹಣ ಖರ್ಚಾಯಿತು? ಯಾವ್ಯಾವ ಇಲಾಖೆಗಳು ಕರ್ತವ್ಯ ನಿರ್ವಹಣೆ ಮಾಡಿವೆ? Negative ಎಷ್ಟು? Positive ಎಷ್ಟು? ಇದರ ಬಗ್ಗೆ ಸದನಕ್ಕೆ ಮಾನ್ಯ ಮುಖ್ಯಮಂತ್ರಿ ಬೆಳಕು ಚೆಲ್ಲಬೇಕು. ಆಡಳಿತ ಎಂದರೆ ಯಾವುದು? ಕಾಲಮಿತಿಯೊಳಗೆ ಆಡಳಿತ. ಆಡಳಿತದ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. 2006ನೇ ಇಸವಿಯಲ್ಲಿ ಪಾಂಡವಪುರಕ್ಕೆ UGD sanction ಆಗಿದೆ. ಈಗ 2015 ಆಗಿದೆ. ಆಗ ಅದಕ್ಕೆ 6 ಕೋಟಿ ರೂಪಾಯಿಗಳು. ಇಂದು 11 ಕೋಟಿ ರೂಪಾಯಿಗಳು ಆಗುತ್ತದೆ. ಏಕಾಗಲಿಲ್ಲ? ಸರ್ಕಾರಿ middle school ಖಾಲಿ ಬಿದ್ದಿದೆ. First grade college ಅನ್ನು ಕ್ಯಾತನಹಳ್ಳಿಗೆ ಕೊಟ್ಟಿದ್ದಾರೆ. ಆ ಸ್ಕೂಲ್‌ಗೂ, ಕಾಲೇಜ್‌ಗೂ 300 ಮೀಟರ್ ದೂರವಿದೆ. ಅಲ್ಲಿ ಅದಕ್ಕೆ ಆ ಕಾಲೇಜ್‌ನಲ್ಲಿರುವವರಿಗೆ ಜಾಸ್ತಿ building ಇಲ್ಲದೇ ಇರುವುದರಿಂದ ಆ middle school ಅನ್ನು ಅವರಿಗೆ ಕೊಟ್ಟರು. ಆರೂವರೆ ತಿಂಗಳಾಯಿತು. ಇನ್ನೂ ಆಗಿಲ್ಲ. ಆಡಳಿತ ಎಂದರೆ ಯಾವುದು? ಮಾನ್ಯ ಮುಖ್ಯಮಂತ್ರಿಯವರಿಗೆ ಅರ್ಜಿ ಕೊಡುವುದಕ್ಕೆ ಒಬ್ಬ ಗುಲ್ಬರ್ಗಾದಿಂದ ಬರುತ್ತಾನೆ. ಉಸ್ತುವಾರಿ ಮಂತ್ರಿಗಳೇನು ಮಾಡುತ್ತಿದ್ದಾರೆ? ಏಕೆ ಒಂದು ತಿಂಗಳಲ್ಲಿ ಒಂದು ದಿವಸ ಇಡೀ ಜಿಲ್ಲೆಯಲ್ಲಿ ಜನರನ್ನು ಕರೆದು ಜಿಲ್ಲಾಡಳಿತ ಹೇಗೆ ನಡೆಯುತ್ತಿದೆ? ಜಿಲ್ಲಾ ಪಂಚಾಯಿತಿ ಹೇಗೆ ನಡೆಯುತ್ತಿದೆ? ತಾಲ್ಲೂಕು ಆಡಳಿತ ಹೇಗೆ ನಡೆಯುತ್ತಿದೆ? ಸಮಸ್ಯೆ ಏನು? ಎಂದು ಅರ್ಜಿ ಸ್ವೀಕಾರ ಮಾಡುವುದಕ್ಕೇನು ತೊಂದರೆ? ಜಿಲ್ಲಾ ಪಂಚಾಯಿತಿಯದ್ದನ್ನು

ಅಲ್ಲಿಯೇ clear ಮಾಡುವುದು. DC ಗೆ ಸಂಬಂಧಪಟ್ಟಿದ್ದನ್ನು ಅಲ್ಲಿಯೇ clear ಮಾಡುವುದು. ಸರ್ಕಾರಕ್ಕೆ ಸಂಬಂಧಪಟ್ಟ ಅರ್ಜಿಯನ್ನು ತಾವು ತಂದು ಈ ಸರ್ಕಾರದಲ್ಲಿ ಏನು ಮಾಡಬೇಕು, ಆ ಜನರಿಗೆ ಮುಂದಿನ ತಿಂಗಳಷ್ಟರಲ್ಲಿ ಈ ಸಮಸ್ಯೆ ಪರಿಹಾರ ರೆಡಿಯಾಗಿದೆ ಎಂದು ಹೇಳಬೇಕು. ಇದು ಆಡಳಿತ. ಗುಲಬರ್ಗಾದಿಂದ ಬಂದು ಅರ್ಜಿ ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರ ಮನೆ ಹತ್ತಿರ ಕಾಯುತ್ತಾನೆಂದರೆ ಎಲ್ಲಿದೆ ನಿಮ್ಮ ಆಡಳಿತ? ಮತ್ತೆ ಈ ವಿಧಾನಸೌಧ ಯಾರಿಗಾಗಿ? ವಿಕೇಂದ್ರೀಕರಣವೋ ಇಲ್ಲ ವಿಕೃತೀಕರಣವೋ? ಆಡಳಿತ ಸುಧಾರಣೆ ಎಂದರೆ ಏನು? ಅರ್ಜಿ ಸ್ವೀಕಾರ ಮಾಡುವುದೇ? ಅರ್ಜಿಯನ್ನು ಯಾವಾಗಲೂ ಸ್ವೀಕಾರ ಮಾಡುವುದೇ? ಪ್ರಜಾಪ್ರಭುತ್ವ ಬಂದ ಕೂಡಲೇ ಅರ್ಜಿ ಎನ್ನುವುದು ಒಂದು ಗುಲಾಮಗಿರಿಯ ಸಂಕೇತ ಅದು. ಇನ್ನೂ ಸಾಹೇಬರೆ ಎಂದು ನಾವು ಅರ್ಜಿ ಬರೆಯುತ್ತಿದ್ದೇವೆ. ಸಾಹೇಬರೆ ಎಂದು ನಾವು ಯಾವಾಗ ಅರ್ಜಿ ಬರೆಯುತ್ತೇವೆ. . . . ಸಾರ್, ನೀವು ಮಾತನಾಡಿದಾಗ ನಾವು ಸುಮ್ಮನೆ ಕುಳಿತಿದ್ದೆವು. ಏನೂ ಕೇಳದಿದ್ದರೂ ಪರವಾಗಿಲ್ಲ ಸುಮ್ಮನಾದರೂ ಕುಳಿತುಕೊಳ್ಳಿ, ಗೊತ್ತು. ಕಿವುಡರ ಮುಂದೆ ಆಟಂಬಾಂಬ್ ಹಾಕುತ್ತಿದ್ದೇವೆ. ಕಿವುಡರ ಮುಂದೆ ಢಂ ಎಂದರೆ ಶಬ್ಧವೇ ಬರಲಿಲ್ಲ ಎನ್ನುತ್ತಾರೆ. ಹಾಗಾಗಿದೆ, ಏನೂ ಮಾಡುವುದಕ್ಕಾಗುವುದಿಲ್ಲ. ಹೌದು. ಎಲ್ಲಿಯ ಆಡಳಿತ ಸುಧಾರಣೆ ನಿಮ್ಮದು? ಇದು ಈ ಸರ್ಕಾರ, ಆ ಸರ್ಕಾರ, ನಾನು, ನೀವು ಎನ್ನುವ ಪ್ರಶ್ನೆಯಲ್ಲ. ನಾನು ನೋಡುತ್ತಿದ್ದೇನೆ. Taluk Office, AC, DC Office ಗೆ ಬಂದರೆ, ಕಾರಿನಲ್ಲಿ ಬಂದವರನ್ನು ಕೂರಿಸುತ್ತಿದ್ದೇವೆ. ಪಂಚೆ ಉಟ್ಟಿದ್ದವನು, ಚಡ್ಡಿ ಹಾಕಿರುವವನನ್ನು ಸೌಜನ್ಯದಿಂದ ಒಂದು ಚೇರ್ ಮೇಲೆ ಕೂರಿಸಿ ಮಾತನಾಡಿಸಿ ಆಡಳಿತ ಮಾಡುತ್ತಿದ್ದೇವೆಯೇ? ಅವರನ್ನೆಲ್ಲ ಬೀದಿಯಲ್ಲಿ ನಿಲ್ಲಿಸಿರುತ್ತೇವೆ. ಆಡಳಿತ ಎಂದರೆ ಏನು? ಕಾಲಮಿತಿಯೊಳಗೆ ಸಮಸ್ಯೆಯನ್ನು ಬಗೆಹರಿಸುವುದು. ಅರ್ಜಿ ಕೊಟ್ಟ ಕೂಡಲೇ, 5 ದಿವಸಗಳೊಳಗೆ ನಿನ್ನ ಕೆಲಸ ಆಗುತ್ತದೆ, ಬಂದು ಅರ್ಜಿ ಸ್ವೀಕಾರ ಮಾಡು, ನಿನ್ನ ಸಮಸ್ಯೆ ಬಗೆಹರಿಯುತ್ತದೆಂದು ಅವನಿಗೆ ಕೊಡಬೇಕು. ಎಲ್ಲಿದೆ? ಚೈನಾದಲ್ಲಿ 11 days ನಲ್ಲಿ ಯಾವುದಾದರೂ file clear ಮಾಡದಿದ್ದರೆ ಅವರ

ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಸುಧಾರಣೆ ಎಂದರೇನರ್ಥ? ನಾನು ಕೊಟ್ಟಂಥ 1 ರೂಪಾಯಿ ಯಾವ ರೀತಿ ಎಲ್ಲ ಇಲಾಖೆಗಳು ಕ್ರಮಬದ್ಧವಾಗಿ ಕೆಲಸ ಮಾಡಬೇಕು. ಮಾನ್ಯ ಮುಖ್ಯಮಂತ್ರಿಯವರು review ಮಾಡಬೇಕು. Health Department ನವರನ್ನು ಕರೆಯಬೇಕು. ಕೃಷಿ ಇಲಾಖೆಯವರನ್ನು ಕರೆಯಬೇಕು. 3,383 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ. ಏನಾಗಿದೆ ಎಂದು ಕೇಳಬೇಕು. ನೀರಾವರಿ ಇಲಾಖೆಯವರನ್ನು ಕರೆಯಬೇಕು, review ಮಾಡಬೇಕು. ಎಲ್ಲಿದೆ ನಿಮ್ಮ review? ಯಾವ ಇಲಾಖೆ review ಮಾಡುತ್ತಿದ್ದೀರಿ? ಆ ಹಣ ಯಾರದು? ಗ್ರಾಮೀಣಾಭಿವೃದ್ಧಿ ಇಲಾಖೆ ಮಾಡಬೇಕು. ಪಂಚಾಯಿತಿಯಲ್ಲೂ ಕುಡಿಯುವ ನೀರಿನ ಸುದ್ದಿ, ಜಿಲ್ಲಾ, ತಾಲ್ಲೂಕು ಪಂಚಾಯಿತಿಯಲ್ಲೂ ಕುಡಿಯುವ ನೀರಿನ ಸುದ್ದಿ, ವಿಧಾನಸೌಧದಲ್ಲೂ ಕುಡಿಯುವ ನೀರಿನ ಸುದ್ದಿ. ಇದೇನಾ? ಸ್ವಾತಂತ್ರ್ಯ ಬಂದು 65 ವರ್ಷಗಳು ಆಯಿತು. 110 TMC ನೀರನ್ನು ನಮಗೆ ಕೊಡಲಿಕ್ಕಾಗಲಿಲ್ಲ. ಇವರು ಹೇಳುತ್ತಾರೆ, ಆಸ್ಪತ್ರೆ ಕಟ್ಟಬೇಕು, ಇನ್ನೂ 10 ಆಸ್ಪತ್ರೆ ಕಟ್ಟಬೇಕು, Hitech hospital ಕಟ್ಟಬೇಕು, Nursing Home ಕಟ್ಟಬೇಕೆನ್ನುತ್ತಾರೆ. ಏಕೆ ಕಟ್ಟುತ್ತಿದ್ದೀರಿ? ಯಾವ ಕಾರಣಕ್ಕೆ ಕಟ್ಟುತ್ತಿದ್ದೀರಿ? ಕಾಯಿಲೆ ಬರದ ಹಾಗೆ ನೋಡಿಕೊಳ್ಳಿ ಎಂದು ನಾವು ಹೇಳಿದರೆ ನಾನು ಆಸ್ಪತ್ರೆ ಕಟ್ಟುತ್ತೇನೆ ಎನ್ನುತ್ತೀರಲ್ಲ. ಯಾವ್ಯಾವ ಕಾರಣಕ್ಕೆ ಕಾಯಿಲೆ ಬರುತ್ತಿದೆ? ತಾವು ಯೋಚನೆ ಮಾಡಿದ್ದೀರಾ? ಶುದ್ಧವಾದ ನೀರು, environment, ಆಹಾರ ಈ ಮೂರೇ. 37% sugar disease ಬರುತ್ತಿದೆ. 5 ವರ್ಷದ ಮಕ್ಕಳಿಗೆ ಕಿಡ್ನಿ ಹೋಗುತ್ತಿದೆ. 5 ವರ್ಷದ ಮಕ್ಕಳಿಗೆ ಷುಗರ್ ಇದೆ. ನಾವಿಲ್ಲಿ ಕುಳಿತುಕೊಂಡು ಡಾಕ್ಟರ್ ಹುದ್ದೆ ತುಂಬುತ್ತಿದ್ದೇವೆ, Hospital ಕಟ್ಟುತ್ತಿದ್ದೇವೆ. Nursing Home ಗಳಿಗೆ licence ಕೊಡುತ್ತಿದ್ದೇವೆ. ಕಾಯಿಲೆಯನ್ನು ಬರಮಾಡಿಕೊಳ್ಳುತ್ತೇವೆ. 100 ತರಹದ ವಿಷ ಕುಡಿಯುತ್ತಿದ್ದೇವೆ. 100 ತರಕಾರಿ load ಲಾರಿ ಕೇರಳಕ್ಕೆ ಹೋಗುತ್ತಿತ್ತು. ಅವರು ban ಮಾಡಿದ್ದಾರೆ. ಏಕೆಂದರೆ, highest pesticides ಹೊಡೆದಿದ್ದಾರೆಂದು, ಆ ತರಕಾರಿಯನ್ನು ಕೇರಳ ರಾಜ್ಯ ತಿರಸ್ಕರಿಸಿದೆ. ನಮ್ಮದೆಲ್ಲಿದೆ? ಆಡಳಿತ ಎಂದರೇನು? ಜನರ ಆರೋಗ್ಯ ರಕ್ಷಣೆ ಮಾಡುವುದು ಆಡಳಿತದ ಪ್ರಥಮ

ವಿಷಯ. ಯಾವ ಕಾಲೇಜಿನಲ್ಲಿ ಚರ್ಚೆ ನಡೆಯುತ್ತಿದೆ? Health awarencess create ಮಾಡುವುದಕ್ಕೆ ಯಾವುದು? ಯಾವತ್ತು ನೀವು ಮಾತನಾಡಿದ್ದೀರಿ? ಕ್ರೀಡಾ ಇಲಾಖೆ ಮತ್ತು ನೀವು ಕುಳಿತು ಯಾವತ್ತು ಮಾತನಾಡಿದ್ದೀರಿ? ಕ್ರೀಡಾ ಮಂತ್ರಿ ಮತ್ತು ಆರೋಗ್ಯ ಮಂತ್ರಿ ಇಬ್ಬರೂ ಕುಳಿತು ಯಾವತ್ತಾದರೂ ಒಂದು ದಿವಸ ಮಾತನಾಡಿದ್ದೀರಾ? ನಾನು ಅಮೆರಿಕಾಗೆ ಹೋಗಿದ್ದೆ. ಅಲ್ಲಿ 12 ಗಂಟೆ ರಾತ್ರಿಯಲ್ಲಿ ವ್ಯಾಯಾಮ ಮಾಡುತ್ತಾರೆ. ಇವತ್ತು ಕ್ರೀಡಾ ರಂಗ ಮತ್ತು ಆರೋಗ್ಯ ರಂಗ ಎರಡೂ ಜೊತೆಯಲ್ಲಿರಬೇಕು. ಇಡೀ ದೇಹವನ್ನು ಅತ್ಯಂತ ಸುಂದರವಾಗಿಟ್ಟುಕೊಂಡರೆ, ನಾನು ಇವತ್ತೂ ಹೇಳುತ್ತೇನೆ. 7ನೇ ತರಗತಿಯಿಂದ 12 ತರಗತಿವರೆಗೆ 10 marks free, ಆಟಕ್ಕೆ, ಕ್ರೀಡೆಗೆ, ದೇಹ ಚೆನ್ನಾಗಿಟ್ಟುಕೊಂಡರೆ 15 marks free ಎಂದು ಹೇಳಿ. 5 ವರ್ಷಗಳಲ್ಲಿ ಕರ್ನಾಟಕದ ಆರೋಗ್ಯ ನೋಡಿ. ನೀವು ಕುಳಿತುಕೊಂಡು ambulance ಮಾಡುವುದು, ಜನರನ್ನು ಹೇರಿಕೊಂಡು ಬರುವುದು, injection ಕೊಡುವುದು, ಅಲ್ಲಿ Homeopathy ಮತ್ತು allopathic ಮತ್ತು ಇವರೆಲ್ಲ ಮಲಗಿಕೊಳ್ಳುವ ಮನೆಯಪತಿ, ಮಲಗಿಕೊಂಡಿರುವವರಿಗೆಲ್ಲ ಈ ಪತಿಗಳು ಔಷಧಿ ಕೊಡುತ್ತಿರುವುದು. ಅರೆ, ಕಿಸ್‌ಕೇಲಿಯೆ ಆಪ್ ಹೆಲ್ತ್ ಮಿನಿಸ್ಟರ್ ಬನಾಯ ಹೈ? ಹೆಲ್ತ್ ರಕ್ಷಣ್ ಕರನೆ ಕೇಲಿಯೆ preventive meausre ಹೋನಾ ಯಾ ನಾ? ಯಾವತ್ತು ಮಾತನಾಡಿದ್ದೇವೆ ನಾವು? ಅಕಸ್ಮಾತ್ ನಾನು parliament ಗೆ ಹೋದರೆ ಇರಲಿ ಎಂದು ಇವತ್ತಿನಿಂದ practice ಮಾಡುತ್ತಿದ್ದೇನೆ. ನಾನು parliamentಗೆ ಹೋದಾಗ ಬೇಕಲ್ಲ, ಅರ್ಜೆಂಟಾಗಿ ಮಾತನಾಡಬೇಕಲ್ಲ. ಅದಕ್ಕೆ ಅಲ್ಲಲ್ಲಿಯೇ ಒಂದೊಂದು ಚೂರು practice ಮಾಡಿಕೊಳ್ಳುತ್ತಿದ್ದೇನೆ. ಬೇಜಾರು ಮಾಡಿಕೊಳ್ಳಬೇಡಿ. ಆರೋಗ್ಯದ ಬಗ್ಗೆ ಯೋಚನೆ ಮಾಡಬೇಕು. ಅಲ್ಲಿ Homeopathy ಅವರೆಲ್ಲ ಚಳುವಳಿ ಮಾಡುತ್ತಿದ್ದಾರೆ. ನಮ್ಮ ಡಾಕ್ಟರು ಹೇಳುತ್ತಾರೆ, ಅದು Central Government Scheme, ಜಾಸ್ತಿ ಹಣ ಕೊಡುವುದಕ್ಕೆ ಅವರಿಗೆ ಬರೆಯುತ್ತೇನೆ, ಅವರಿಂದ ಬಂದ ಮೇಲೆ ಇವರನ್ನು ನೇಮಕ ಮಾಡುತ್ತಾರಂತೆ. ಯಾವಾಗ? 8–10 ವರ್ಷಗಳಿಂದ ಕೆಲಸ

ಮಾಡಿದಂಥ ಆಯುಷ್ ಡಾಕ್ಟರುಗಳು ಅಲ್ಲಿ ಕುಳಿತುಕೊಂಡಿದ್ದಾರೆ, ಮಲಗಿಕೊಂಡಿದ್ದಾರೆ.

ಶ್ರೀ ಯು.ಟಿ. ಖಾದರ್ (ಆರೋಗ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಅವರು (ಆಯುಷ್ ಡಾಕ್ಟರುಗಳು) strike withdraw ಮಾಡಿ ಮನೆಗೆ ಹೋಗಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಹೌದು, ಮನೆಗೆ ಕಳುಹಿಸಿದ್ದಾರೆ, ಏನೂ ಮಾಡಲಿಕ್ಕೆ ಆಗಲಿಕ್ಕಾಗುವುದಿಲ್ಲ, ಹೋಗು ಎಂದು.

ಉಪಾಧ್ಯಕ್ಷರು: Solve ಮಾಡಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: Solve ಮಾಡಿಲ್ಲ. ನಾನು ಅವರನ್ನು ಕೇಳಿದ್ದೇನೆ.

ಶ್ರೀ ಯು.ಟಿ. ಖಾದರ್: Solve ಮಾಡಿದ್ದೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಮಾನ್ಯ ಉಪಾಧ್ಯಕ್ಷರೆ, 25 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಕೇಂದ್ರ ಸರ್ಕಾರಕ್ಕೆ recommend ಮಾಡುತ್ತೇನೆ, ನಂಬಿ ನನ್ನನ್ನು ಎಂದು ಅವರು ಹೇಳಿ ಕಳುಹಿಸಿದ್ದಾರೆ. ಇಲ್ಲ, ನಿಮ್ಮನ್ನು permanent ಮಾಡುತ್ತೇವೆಂದು ಹೇಳಿದ್ದೀರಾ? ಆದ್ದರಿಂದ ತಾವು ಆಲೋಚನೆ ಮಾಡಬೇಕು. ಇನ್ನು ಮಾನ್ಯ ಸಮಾಜ ಕಲ್ಯಾಣ ಸಚಿವರೆ, ಅಂಬೇಡ್ಕರ್ ಭವನವನ್ನು 5 ಲಕ್ಷ ರೂಪಾಯಿಗಳೊಳಗೆಯೇ ಕಟ್ಟುತ್ತೇನೆಂದು ಏಕೆ ಹೇಳುತ್ತೀರಿ? ಅಂಬೇಡ್ಕರ್ ಭವನವನ್ನು ಅಲ್ಲಿಯ ಜನಸಂಖ್ಯೆಯ ಆಧಾರದ ಮೇಲೆ ಕಟ್ಟಿಸಿ. ತಿರುಪತಿಯಲ್ಲಿ ಜನರು ಬರುವುದರ ಮೇಲೆ ದೇವಸ್ಥಾನ ಕಟ್ಟಿದ್ದಾರೆ. ಮೇಲುಕೋಟೆಯಲ್ಲಿ ಜನ ಬರುವುದರ ಮೇಲೆ ದೇವಸ್ಥಾನ ಕಟ್ಟಿದ್ದಾರೆ. ಅಂಬೇಡ್ಕರ್ ಭವನ ಆ ಊರಿನಲ್ಲಿ ಯಾರ್‍ಯಾರು ಇದ್ದಾರೆ ಅವರ ಲೆಕ್ಕದಲ್ಲಿ ಕಟ್ಟಿ, 5 ಸಾವಿರ ಜನ ಇರುವವರಿಗೂ 5 ಲಕ್ಷ ರೂ.ಗಳನ್ನು ಕೊಡುತ್ತೀರಿ, 50 ಜನ ಇರುವವರಿಗೂ 5 ಲಕ್ಷ ರೂಪಾಯಿಗಳ ಅಂಬೇಡ್ಕರ್ ಭವನ ಕಟ್ಟಿಸುತ್ತೀರಿ. ಅವರಿಗೆ 25 ಲಕ್ಷ ರೂ.ಗಳನ್ನು ಕೊಡಿರಿ.

ಬಡವರು 2 in 1 ಕೆಲಸ ಮಾಡಿಕೊಳ್ಳುತ್ತಾರೆ. ಸಣ್ಣಪುಟ್ಟ ಕಾರ್ಯಕ್ರಮ, ಮನೆ ಕಾರ್ಯಕ್ರಮಗಳನ್ನು ಅವರು ಮಾಡಿಕೊಳ್ಳುತ್ತಾರೆ. ಕೊನೆಗೆ ವಿಶ್ವ ಮಾನವರ ಭವನವನ್ನಾದರೂ ಎಲ್ಲಾ ಕಡೆ ಒಂದೊಂದು ಕಟ್ಟಿ, ಜಾತಿ ಭವನವನ್ನು ಕಟ್ಟುವುದನ್ನು ಸ್ವಲ್ಪ ಕಡಿಮೆ ಮಾಡಿ, ವಿಶ್ವಮಾನವರ ಭವನವನ್ನು ಕಟ್ಟಿಸಿ. ಕನಿಷ್ಠ ಅವರ ಫೋಟೋವನ್ನಾದರೂ ಒಂದು ಕಡೆ ಹಾಕಿ ಮಹರಾಯರೆ.

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಸಚಿವರು): ಅಂಬೇಡ್ಕರ್‌ರವರನ್ನು ವಿಶ್ವಮಾನವರೆಂದು ಭಾವಿಸಿ ಕಟ್ಟಡ ಕಟ್ಟಿದ್ದೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಅಂಬೇಡ್ಕರ್ ಜೊತೆಯಲ್ಲಿ ಬಸವಣ್ಣನವರನ್ನೂ ಕೂರಿಸಿ, ಬುದ್ಧರನ್ನೂ ಕೂರಿಸಿ, ಕನಕದಾಸರನ್ನೂ ಕೂರಿಸಿ, ಮಹಮ್ಮದ್ ಪೈಗಂಬರ್‌ನ್ನೂ ಕೂರಿಸಿ, ಎಲ್ಲರನ್ನೂ ಕೂರಿಸಿ, ಯಾರು ಬೇಡವೆಂದರು? ಏನು ಫೋಟೋಗಳು ಎದ್ದು ಹೊಡೆದಾಡುತ್ತವೆಯೇ? ವಿಶ್ವಮಾನವರ ಭವನವನ್ನೂ ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಒಂದು ಸಮಾಜ ಕಲ್ಯಾಣ ಇಲಾಖೆ ಎಂದರೆ ಜಾತ್ಯಾತೀತವಾಗಿ ಆಲೋಚನೆ ಮಾಡಬೇಕು. ಜಾತಿಯನ್ನು permanent ಇಡಬೇಡಿ. ಅಂತರ್‌ಜಾತಿ ಮದುವೆಗೆ ಪ್ರೋತ್ಸಾಹಧನ ಘೋಷಣೆ ಮಾಡಿ. ಜಾಸ್ತಿ ಹಣ ಕೊಡಿ, ಮದುವೆ ಮಾಡಿಕೊಳ್ಳಲಿ. ಆರೋಗ್ಯ ಸಚಿವರೆ, ಒಂದೇ ಜಾತಿಯಲ್ಲಿ ಮದುವೆಯಾದರೆ ಮಕ್ಕಳೆಲ್ಲ ಊನವಾಗಿ ಹುಟ್ಟುತ್ತಾರೆ. ಇಂಥ 13.5 ಲಕ್ಷ ಮಕ್ಕಳನ್ನು ಹುಟ್ಟಿಸಿದ್ದಾರೆ. ಗೊತ್ತಾಯಿತೇ? ಬೆರಕೆ ಕಾಳು ಉಪಯೋಗಿಸಿದರೆ ಚೆಂದ ಎಂದು ನಮ್ಮ ಹಳ್ಳಿ ಕಡೆಗೆ ಹೇಳುತ್ತಾರೆ, ಹಾಗೆಂದರೆ ಏನು ಎಂದು ಗೊತ್ತೇ? ಭೂಮಿಗೆ ಒಂದೇ ತರಹ ಬಿತ್ತನೆ ಹಾಕಬಾರದು, ಸರಿಯಾಗಿ ಬೆಳೆ ಬೆಳೆಯಲಿಕ್ಕಿಲ್ಲ ಎಂದು ಹೇಳುತ್ತಾರೆ. ಅದು ಗೊತ್ತಿದೆಯೇ? ಅನುಷ್ಠಾನಕ್ಕೆ ತನ್ನಿ.

ಶ್ರೀ ಯು.ಟಿ. ಖಾದರ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರು ಸಲಹೆ ಕೊಡುತ್ತಿದ್ದಾರೆ. ಅದನ್ನು ಬಹುಶಃ ಅರ್ಥಮಾಡಿಕೊಳ್ಳಬೇಕು. ನಮ್ಮ ಸಮಾಜದಲ್ಲಿ ಕಾನೂನನ್ನು ತುಂಡು ಮಾಡಬಹುದು, ಸಂಪ್ರದಾಯ ತುಂಡು ಮಾಡಲಿಕ್ಕೆ ಬಹಳ ಕಷ್ಟವಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಅರೇ, ಕದ್ದು love ಮಾಡುತ್ತಾರೆ. ನೀವು ಏನು ಮಾಡುತ್ತೀರಿ, ನೀವು ಚೆನ್ನಾಗಿ ಹೇಳುತ್ತೀರಿ. ನಮ್ಮ ಮನೆಯಲ್ಲಿಯೇ ಒಬ್ಬ ನಮ್ಮ ಹುಡುಗನೇ love ಮಾಡಿ ಅಂತರ್‌ಜಾತಿ ಹುಡುಗಿಯನ್ನು ಮದುವೆ ಮಾಡಿಕೊಂಡಿದ್ದಾನೆ. ನಮ್ಮ ಎರಡು ಹೆಣ್ಣುಮಕ್ಕಳು ಒಂದೇ ಜಾತಿಯಲ್ಲಿ ಮದುವೆ ಆಗಿದ್ದಾರೆ. ಅಂತರ್‌ಜಾತಿ ಮದುವೆ ಆಗಿರುವವರಿಗೆ ಮಗ ಹುಟ್ಟಿದೆ, ಎರಡರಷ್ಟು ಗುಂಡಗೆ ಹುಟ್ಟಿದ್ದಾನೆ. ಅಂದರೆ, ಆರೋಗ್ಯವಾಗಿ ಹುಟ್ಟಿದೆ ಮತ್ತು ಚೆನ್ನಾಗಿದೆ. ಹಾಗಾಗಿ ಅಂತರ್‌ಜಾತಿ ಮದುವೆಗೆ ಹೆಚ್ಚು ಒತ್ತು ಕೊಡತಕ್ಕಂಥ ಕೆಲಸವನ್ನು ಮಾಡುವಂಥ ಕಾರ್ಯಕ್ರಮವನ್ನು ತಾವು ಮಾಡಬೇಕು. ಆಮೇಲೆ, ನೀವು ಏನು ಸವಲತ್ತು ಕೊಡುತ್ತೀರಿ, ದಲಿತರ ಹೆಸರಿನಲ್ಲಿ ಕೆಲವರು ಭ್ರಷ್ಟಾಚಾರ ಮಾಡಿ ಸವಲತ್ತನ್ನು ಹೊಡೆಯತಕ್ಕಂಥವರ ಬಗ್ಗೆ ಸ್ವಲ್ಪ ಹುಷಾರಾಗಿರಿ. Agent ಗಳು ಇರಬಾರದು. ನಿಜವಾದ ಬಡವ ದಲಿತನಿಗೆ ಸೌಲಭ್ಯ ತಲುಪಬೇಕು. ಬರೀ ಅಂಬೇಡ್ಕರ್ ಬಗ್ಗೆ ಮಾತನಾಡುವುದು ಮಾತ್ರವಲ್ಲ, ಅಂಬೇಡ್ಕರ್‌ರವರ ಆಶಯ, ಹೃದಯದ ಆಸೆ ಬಗ್ಗೆ ಆಲೋಚನೆ ಮಾಡಬೇಕು. ಹೊಸ ಹೊಸ ಚಿಂತನೆ ಆಗಬೇಕು. ಅಸ್ಪೃಶ್ಯತೆ ವರನೂ ಅಲ್ಲ ಶಾಪವೂ ಅಲ್ಲ. ನಾವು ಮಾಡಿರುವ ಮೂರ್ಖತನ. ನಮ್ಮ ಅವ್ವನ ಹೊಟ್ಟೆಯಲ್ಲಿ ಹುಟ್ಟಿದಾಗ ನಾನು ಒಕ್ಕಲಿಗರಾಗಿ ಹುಟ್ಟಬೇಕೆಂದು ನಾನು ನನ್ನ ಅವ್ವನಿಗೆ ಎಲ್ಲಿ ಹೇಳಿದ್ದೆ? ನಾನು ಒಕ್ಕಲಿಗ ಎಂದು ಇವರು ನಾಮಕರಣ ಮಾಡು ಎಂದು ಯಾರು ಹೇಳಿದ್ದಾರೆ ನನಗೆ. ಜಾತಿಯ ಕ್ರೌರ್ಯ ಸಮಾಜದಲ್ಲಿ ಕೆಲವೇ ವ್ಯಕ್ತಿಗಳ ಸ್ವಾರ್ಥಕ್ಕೆ ಸೃಷ್ಟಿಯಾಗಿದೆ. ಆದ್ದರಿಂದ, ತಾವು ಆಲೋಚನೆ ಮಾಡಬೇಕು. ಸಮಾನ ಶಿಕ್ಷಣ ಇದ್ದಿದ್ದರೆ ಜಾತಿ ಇಷ್ಟೊತ್ತಿಗೆ 75 ಭಾಗ ನಾಶವಾಗಿಬಿಟ್ಟಿರುತ್ತಿತ್ತು. ಸ್ವತಂತ್ರ ಬಂದ ಮೇಲೆ ಏಕೆ ಮಾಡಲಿಲ್ಲ? ಅಮೆರಿಕಾ ಶ್ರೀಮಂತರ ಮತ್ತು ಬಂಡವಾಳಶಾಹಿಗಳ ದೇಶ. 1ನೇ ತರಗತಿಯಿಂದ 12ನೇ ತರಗತಿಯವರೆಗೆ ಆ ದೇಶದ ಅಧ್ಯಕ್ಷರ ಮಗ, ಒಬ್ಬ ಬಡವನ ಮಗ ಎಲ್ಲರೂ ಒಂದೇ ಶಿಕ್ಷಣ ಸಂಸ್ಥೆಯಲ್ಲಿ ಓದುತ್ತಾರೆ. ಇಲ್ಲಿ 8 ತರಹದ ಶಿಕ್ಷಣ. ಇನ್ನು ನಮ್ಮ ಊರಿನಲ್ಲಿ ಅಂಗನವಾಡಿ, ಅಂಗನವಾಡಿಗೆ 4.5 ಲಕ್ಷ ರೂ. ಕೊಡುವುದಕ್ಕೆ ಏನು ಕಷ್ಟ? ಅದೂ ಏನು ಅನಾಥ ಮಕ್ಕಳು ಬಿದ್ದು

ಒದ್ದಾಡಬೇಕು, ಹಾಗೆ ಕೊಟ್ಟಿದ್ದರು. ಗಲಾಟೆ ಮಾಡಿದ ಮೇಲೆ 13.5 ಲಕ್ಷ ಕೊಟ್ಟಿದ್ದಾರೆ. ಈಗ ಮಕ್ಕಳು ಸ್ವಲ್ಪ ಲವಲವಿಕೆಯಿಂದ ಇದ್ದಾರೆ. ಬಾಲ್ಡ್‌ವಿನ್ ಕಾನ್ವೆಂಟ್, ಎಷ್ಟು ತರಹದ ಶಿಕ್ಷಣ ಇದೆ? ಆಮೇಲೆ ಸಮಾನತೆ ಬಗ್ಗೆ, ಜಾತ್ಯಾತೀತ ಮತ್ತು ಧರ್ಮಾತೀತ ಎಂದು ಮಹಾನ್ ಭಾಷಣಗಳು, ಪುರುಷೊತ್ತು ಇಲ್ಲ ಆ ಭಾಷಣಗಳಿಗೆ. ಎಲ್ಲ ಜಾತಿ ಮೇಲೆ ಕಟ್ಟುವುದು, ಜಾತಿ ಸುದ್ದಿ, ಜಾತ್ಯಾತೀತ ಸುದ್ದಿ ಮಾತನಾಡುತ್ತಾ ಕುಂತಿರುವುದು. ದಯವಿಟ್ಟು 16 ಸಾವಿರ ಕೋಟಿ ರೂ.ಗಳ ಜೊತೆಗೆ ಇನ್ನೂ 2 ಸಾವಿರ ಕೋಟಿ ರೂ.ಗಳನ್ನು ತೆಗೆದುಕೊಳ್ಳಿ. ಯಾರೂ ಪುಗ್ಸಟ್ಟೆ ಏನೂ ಕೊಡಬೇಕಾಗಿಲ್ಲ. ಅದು ಹಕ್ಕು. ಮನುಷ್ಯನನ್ನು ಕೀಳು ಎಂದು ಹೇಳತಕ್ಕಂಥ ಕೆಲಸ ಜಗತ್ತಿನಲ್ಲಿ ಎಲ್ಲೂ ಆಗಬಾರದು. ಲಿಂಗಾಯಿತರ ಎಮ್ಮೆ, ಒಕ್ಕಲಿಗರ ಎಮ್ಮೆ, ಪರಿಶಿಷ್ಟ ಜಾತಿಯ ಎಮ್ಮೆ ಇವೆಯೇ? ಮೂರೂ ಎಮ್ಮೆಯೂ ಚೆನ್ನಾಗಿಲ್ಲವೇ? ಚೆನ್ನಾಗಿವೆ. ಈಗ counseling ಮಾಡಬೇಕಾಗಿದೆ. ನೀವೆಲ್ಲ ಜಾತ್ಯಾತೀತವಾಗಿ ಹೇಗೆ ಬದುಕಿದ್ದೀರಿ, ನಮಗೆ ಸ್ವಲ್ಪ ಬುದ್ಧಿ ಹೇಳಿಕೊಡಿ ಎಂದು ಎಮ್ಮೆಗಳಿಗೂ counseling ಮಾಡಬೇಕು. ಹುಲಿಗೂ counseling ಮಾಡಬೇಕು. Counseling ಮಾಡಬೇಕೋ ಬೇಡವೋ? ಏನು MA ಓದಿದ್ದೇವೆಯೇ ನಾವು?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು): ಜಾತಿಯ ಬಗ್ಗೆ ಮಾತನಾಡುವಾಗ ಯೋಚನೆ ಮಾಡಿ ಮಾತನಾಡಬೇಕು. ಜಾತಿ ಏನಿದೆ ವರ್ಗ ಅದಕ್ಕೆ ಚಾಲನೆ ಇದೆ. ಅದಕ್ಕೆ ಚಲನಾ ಶಕ್ತಿ ಇದೆ. ನಾನು ದಲಿತನಾಗಿ ಹುಟ್ಟಿದರೂ ಕೂಡ ಶ್ರೀಮಂತನಾಗಬಹುದು, ಆದರೆ, ಜಾತಿಯನ್ನು ನನ್ನಿಂದ ತೆಗೆಯುವುದಕ್ಕಾಗುವುದಿಲ್ಲ. ಅದು ಸಾಧ್ಯವಿಲ್ಲ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಯಾರಿಂದಲೂ ತೆಗೆಯುವುದಕ್ಕಾಗುವುದಿಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: You cannot. It is an idealistic conscious.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ನಿಜ. ನಾನು ಈ ಬಗೆ ಪ್ರಯತ್ನಗಳು ನಡೆಯಬೇಕೆಂದು ಹೇಳುತ್ತಿದ್ದೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಪ್ರಯತ್ನಗಳು ನೂರಾರು ಅಲ್ಲ, ಈಗಲ್ಲ, 5 ಸಾವಿರ ವರ್ಷಗಳಿಂದಲೂ ಕೂಡ ನಡೆಯುತ್ತಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ನಡೆಯುತ್ತಿರಬೇಕು. ಏಕಲವ್ಯನ ಹೆಬ್ಬೆರಳನ್ನು ಆವತ್ತು ಕತ್ತರಿಸಿದರು. ಇವತ್ತು ಕತ್ತರಿಸುವುದಕ್ಕಾಗುವುದಿಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಏನಾಗಿದೆ ಎಂದರೆ, ನಮ್ಮಲ್ಲಿ ಯೋಚನೆ ಮಾಡಬೇಕು. Caste at birth ಎಂದು ತಾವೇ ಹೇಳುತ್ತಿದ್ದಿರಿ ಒಕ್ಕಲಿಗನಾಗಿ ಹುಟ್ಟಬೇಕೆಂದು. ತಾಯಿಯ ಗರ್ಭದಿಂದ ಬಂದ ತಕ್ಷಣ ಅದು ಬಂದುಬಿಡುತ್ತದೆ. ಅದನ್ನು change ಮಾಡುವುದಕ್ಕಾಗುವುದಿಲ್ಲ. Caste ಏನಿದೆ, ಅದು ನಾನು ನನ್ನ ತಾಯಿಯ ಗರ್ಭದಿಂದ ಕಿಟಾರನೆ ಕಿರುಚಿ ಭೂಮಿಗೆ ಬಂದ ತಕ್ಷಣ ಜಾತಿ ಹುಟ್ಟಿಕೊಳ್ಳುತ್ತದೆ, ಅದನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ವರ್ಗಕ್ಕೆ ಚಾಲನೆ ಇದೆ. ಅದಕ್ಕೆ ಚಲನಾಶಕ್ತಿ ಇದೆ. ನಾನು ಬಡವನಾಗಿ ಹುಟ್ಟಿದರೂ ಕೂಡ ನಾನು ಶ್ರೀಮಂತನಾಗಬಹುದು, ಆದರೆ, ಜಾತಿ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಇದು ವಾಸ್ತವಿಕತೆ. ಇದನ್ನು ಎಲ್ಲರೂ ಮಾಡಿದ್ದಾರೆ. ಬಸವಣ್ಣನವರೂ ಮಾಡಿದ್ದಾರೆ, ಬುದ್ಧ ಮಾಡಿದ್ದಾರೆ, ಅಂಬೇಡ್ಕರ್, ಲೋಹಿಯಾ ಇದಕ್ಕೆ ಒತ್ತೊತ್ತಿ ಹೇಳಿದ್ದಾರೆ. Class and caste ಬಗ್ಗೆ ಬಹಳ ಚೆನ್ನಾಗಿ ಮಾತನಾಡಿ ಹೇಳಿದ್ದಾರೆ. ಆದ್ದರಿಂದ, ನಾವು ಆರ್ಥಿಕವಾಗಿ ಕೂಡ ಇದರ ಬಗ್ಗೆ ಯೋಚನೆ ಮಾಡಬೇಕಾಗಿರುವ ಒಂದು ಅಂಶ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ನನಗನ್ನಿಸುತ್ತದೆ, ಆರ್ಥಿಕ ಅಸಮಾನತೆಯೇ ಜಾತಿಗೆ ಬಹಳ ಕೆಟ್ಟ ವ್ಯವಸ್ಥೆ ಇದೆ. ಒಂದು ದಿವಸ ಒಂದು ಹುಟ್ಟುಹಬ್ಬಕ್ಕೆ ಹೋಗಿದ್ದೆ. ಅದು 80 ವರ್ಷದ ಯಜಮಾನರ ಹುಟ್ಟುಹಬ್ಬವಾಗಿತ್ತು. ಅವರು 13 ಜನ ಇದ್ದರು. ಅವರು ದಲಿತರು, ನನ್ನ ಸ್ನೇಹಿತರು, ರೈತ ಸಂಘದಲ್ಲಿದ್ದರು. ಅವರ family ಹೇಗಿತ್ತು ಗೊತ್ತೇ?

ಶ್ರೀ ವಿ. ಶ್ರೀನಿವಾಸ ಪ್ರಸಾದ್: ನೀವು ಮಾತನಾಡುತ್ತಿದ್ದೀರಿ, ನಿಮಗೆ ನಾನು ತೊಂದರೆ ಮಾಡುವುದಿಲ್ಲ. ಆದರೆ, ನಮ್ಮ ದೇಶದಲ್ಲಿ ಗೊತ್ತೋ ಗೊತ್ತಿಲ್ಲದೆಯೋ ಈ ವರ್ಣಾಶ್ರಮದ ವ್ಯವಸ್ಥೆ ಇದೆಯಲ್ಲ, irrepairable damage ಮಾಡಿಬಿಟ್ಟಿದೆ. ನಾನು parliament ನಲ್ಲೂ apartheid ಮತ್ತು untouchability ಬಗ್ಗೆ ನನಗೆ ಅನ್ನಿಸುವ ಮಟ್ಟಿಗೆ ತುಂಬ ಚೆನ್ನಾಗಿ ಮಾತನಾಡಿದ್ದೇನೆ. ಅಲ್ಲಿ ವರ್ಣಬೇಧ ಹೇಗಿರುತ್ತದೆ ಕರಿಯರು, ಬಿಳಿಯರು ಎಂದು, ಮತ್ತೆ ಸ್ಪೃಶ್ಯರು ಅಸ್ಪೃಶ್ಯರು ಎನ್ನತಕ್ಕಂಥ ರೀತಿಯಲ್ಲಿ, ಇಲ್ಲಿ ಯಾವ ರೀತಿಯಾದಂಥ ರೀತಿಯಲ್ಲಿ ಹುಟ್ಟುತ್ತಲೇ ನಿಮ್ಮ blood ಗೆ inject ಆಗಿ ಬರುತ್ತದಲ್ಲ, ಎಲ್ಲೋ ನಿಮ್ಮಂಥವರು, ಮತ್ತೊಬ್ಬರು ಎಲ್ಲೋ ಈ ರೀತಿ ಚಿಂತನೆ ಮಾಡತಕ್ಕಂಥವರು ಒಂದು broad base concept ಇಟ್ಟುಕೊಂಡು ನೀವು ಆ ರೀತಿಯಾಗಿ ಒಂದು ಆದರ್ಶ ರಾಜ್ಯ, ಕಲ್ಯಾಣ ರಾಜ್ಯದ ಕಲ್ಪನೆ ಹಿನ್ನೆಲೆಯಲ್ಲಿ ಮಾತನಾಡಬಹುದು. ಆದರೆ, ವಾಸ್ತವಿಕತೆಯಲ್ಲಿ ground realities ಬೇರೆಯೇ ಇರುತ್ತದೆ. ಏಕೆಂದರೆ, ಇಲ್ಲಿರತಕ್ಕಂಥ ವರ್ಣಾಶ್ರಮ ವ್ಯವಸ್ಥೆ ಸಾವಿರಾರು ವರ್ಷಗಳಿಂದ ಯಾವ ರೀತಿ ಬಂದಿದೆ ಎನ್ನತಕ್ಕಂಥದ್ದು ತಮಗೆ ಗೊತ್ತಿದೆ. ಎಷ್ಟೇ ಪ್ರಯತ್ನ ಮಾಡುತ್ತಿದ್ದರೂ ಕೂಡ ಅಲ್ಪಸ್ವಲ್ಪ ಸುಧಾರಣೆ ಆಗುತ್ತಿದೆಯೇ ಹೊರತು ಪೂರ್ಣ ಪ್ರಮಾಣದಲ್ಲಿ ಅದನ್ನು eradicate ಮಾಡುತ್ತೇವೆ, ತೆಗೆದುಬಿಡುತ್ತೇವೆ ಎನ್ನತಕ್ಕಂಥದ್ದು ಕಷ್ಟಸಾಧ್ಯ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ನಾನೆಲ್ಲಿ ಹೇಳಿದ್ದೇನೆ?

ಶ್ರೀ ವಿ. ಶ್ರೀನಿವಾಸ ಪ್ರಸಾದ್: ತಾವು ಹೇಳುತ್ತಿದ್ದಿರಲ್ಲ ಅದಕ್ಕೆ ಹೇಳಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ನೋಡಿ, ಮಠ ಕಟ್ಟುವಾಗಲೇ ಜಾತಿ ಮೇಲೆ ಮಠ ಕಟ್ಟಿದರು. ವಿಶ್ವಮಾನವರ ಮಠ ಎಲ್ಲಿದೆ?

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಕೇಳಿ. ವಿಶ್ವಮಾನವ ಬಂದದ್ದು ಕುವೆಂಪುರವರಿಂದ. ವಿಶ್ವಮಾನವ ಕುವೆಂಪುರವರು ವಿಶ್ವಮಾನವ ಒಕ್ಕಲಿಗರ ಸಂಘ ಮಾಡುತ್ತಾ ಕುಳಿತಿದ್ದಾರೆ ನಿಮ್ಮ ಜಾತಿ ಒಳಗಡೆ. ಮತ್ತೆ ನಮಗೇ preach ಮಾಡುವುದು, ನೀವು ನಮಗೇ ಹೇಳತಕ್ಕಂಥದ್ದು ಮಾಡುತ್ತೀರಿ. ನೀವೇ

ಯೋಚನೆ ಮಾಡಿ. ನಿಮ್ಮ ಮಂಡ್ಯದಲ್ಲಿ ಯೋಚನೆ ಮಾಡಿ. ಅವರ ಜಿಲ್ಲೆಯಲ್ಲಿ ಏನಾಗುತ್ತಿದೆ ಎಂದು ಸಾ.ರಾ. ಮಹೇಶ್‌ರವರು ಹೇಳಲಿ. ನೀವು ಮಾಡುವಾಗ ಮಾಡುತ್ತೀರಿ ಏನ್ರಿ? ಕುವೆಂಪುರವರ ಹೆಸರಿನಲ್ಲೂ ಕಟ್ಟಿದ್ದಾರೆ, ಸತ್ಯ. ನೀವು ಹೇಳವುದು ನಿಜ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಶಿವಲಿಂಗೇಗೌಡರೆ, ಇವರು ಯಾರೂ ಮಾಡುತ್ತಿಲ್ಲ.

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಮಾತನಾಡುವುದು ಸುಲಭ. ನೀವು ಮಾತನಾಡಿ, ಬೇಡ ಎಂದು ಹೇಳುವುದಿಲ್ಲ.

(ಗೊಂದಲ)

ಶ್ರೀ ಸಾ.ರಾ. ಮಹೇಶ್: ಆಗುವಂಥದ್ದನ್ನು ಸಲಹೆ ಕೊಡಿ ಎಂದು ಅವರು ಹೇಳುತ್ತಿರುವುದು.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ನೋಡಿ, ಚರ್ಚೆಗಳು ಆಗಬೇಕು. ದಲಿತರು ಶಿಕ್ಷಣಕ್ಕೆ ಬರಲಿ. ಮೇಲ್ಮಟ್ಟಕ್ಕೆ ಹೋದಾಕ್ಷಣ ಸತ್ಯನಾರಾಯಣ ಪೂಜೆ ಬಿಟ್ಟುಬಿಟ್ಟಿದ್ದಾರೆಯೇ? ಬಹಳ ಜನ ಪುರೋಹಿತರು ಬಿಟ್ಟುಬಿಟ್ಟಿದ್ದಾರೆಯೇ? ನಾನು ಹೇಳುತ್ತಿರುವುದು, ಒಕ್ಕಲಿಗರಲ್ಲಿ ಶ್ರೀಮಂತ ಆಗಿಬಿಟ್ಟೆ, ಒಕ್ಕಲಿಗರು ಬಡವರನ್ನು ನೋಡಿಬಿಟ್ಟಿದ್ದಾರಾ? ದಲಿತರು ಉನ್ನತ ಸ್ಥಾನಕ್ಕೆ ಹೋಗಿ ಎಷ್ಟು ಬಡ ದಲಿತರ ಬಗ್ಗೆ ಆಲೋಚನೆ ಮಾಡಿದ್ದಾರೆ? ಅದನ್ನೆಲ್ಲ ಚರ್ಚೆ ಮಾಡಿದರೆ ಗಂಟೆಗಟ್ಟಲೆ ಆಗುತ್ತದೆ. ಅದು ಬೇರೆ ಪ್ರಶ್ನೆ. ನನ್ನ ಮನಸ್ಸಿನ ಅಭಿಪ್ರಾಯ ಸ್ವತಂತ್ರವಾಗಿ ಹೇಳುತ್ತಿದ್ದೇನೆ. ಅದು ಆಗುತ್ತದೋ ಬಿಡುತ್ತದೋ? ತಾವು ಈ ವಿಷಯದಲ್ಲಿ ಹೆಚ್ಚು ಚಿಂತನೆ ಮಾಡಿದ್ದೀರಿ, ಅದರಲ್ಲಿ ಯಾವುದೇ ಅನುಮಾನವಿಲ್ಲ. ಯಾವುದೇ ಶಿಕ್ಷಣದಲ್ಲಿ ಚರ್ಚೆ ನಡೆಯಬೇಕು. ನಾಳೆ ಬೆಳಗ್ಗೆ ಕ್ರಾಂತಿಯಾಗುತ್ತದೆ, ಬದಲಾವಣೆ ಆಗಿ ಹೋಗುತ್ತದೆ, ಬೆಳಗ್ಗೆ ಹೊತ್ತಿಗೆ ಎಲ್ಲ

machine ಬಿಟ್ಟು ತಲೆ ಎಲ್ಲ ಸರಿ ಮಾಡುತ್ತೇವೆಂದು ಹೇಳುತ್ತಿಲ್ಲ. ಶಿಕ್ಷಣದಲ್ಲಿ ಎಲ್ಲಿ ಚರ್ಚೆ ನಡೆಯುತ್ತಿದೆ? ಯಾವ ಶಿಕ್ಷಣದಲ್ಲಿ ಬದುಕಿನ ಬಗ್ಗೆ ಮತ್ತು ಸಮಾನತೆ ಬಗ್ಗೆ ಚರ್ಚೆ ನಡೆಯುತ್ತದೆ? ಇದನ್ನು ಗಂಭೀರವಾಗಿ ಯೋಚನೆ ಮಾಡಬೇಕು. ಎಲ್ಲರೂ ಓದಿದ್ದರೆ ಕನಿಷ್ಠ ಸುಧಾರಣೆ ಆಗುತ್ತಾ ಹೋಗುತ್ತಿತ್ತು. ಆವತ್ತು ಏಕಲವ್ಯನ ಹೆಬ್ಬೆರಳು ಕತ್ತರಿಸಿದರು. ಈಗ ಯಾವನು ಕತ್ತರಿಸುತ್ತಾನೋ ಕತ್ತರಿಸಲಿ ನೋಡೋಣ. ಈ ತರಹ ಕತ್ತರಿಸುವುದಕ್ಕೆ ಹೋದರೆ ಇವತ್ತು ದ್ರೋಣಾಚಾರ್ಯರಿಗೆ ನೇಣು ಹಾಕುತ್ತೇವೆ. ಕಾನೂನು ಇದೆ ನೇಣು ಹಾಕುತ್ತೇವೆ. ಆವತ್ತು ನೇಣು ಹಾಕಲಿಕ್ಕೆ ಆಗಲಿಲ್ಲ. ಹೆಬ್ಬೆರಳು ಕತ್ತರಿಸಿಕೊಂಡು ವಾಪಸ್ಸು ಹೋದ. ಆದರೆ ಕನಿಷ್ಟ ಅಂದಿಗೂ ಇಂದಿಗೂ ಸುದಾರಣೆಯಾಗಿದೆ ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಲ್ಲ, ಒಪ್ಪಿಕೊಳ್ಳಲೇಬೇಕು, ಪಶು ಸಂಗೋಪನೆ ಮಂತ್ರಿಗಳು ಇಲ್ಲ, ಯಾರೂ ಇಲ್ಲ, ಯಾರು ಏನು ಬರೆದುಕೊಳ್ಳುತ್ತಾರೆಂದು ಗೊತ್ತಿಲ್ಲ.

ಅಧ್ಯಕ್ಷರು: ಬರುತ್ತಾರೆ ಬಿಡಿ, ಇವರು ಬರೆದುಕೊಳ್ಳುತ್ತಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಇವರು ಬರೆದುಕೊಳ್ಳುತ್ತಾರೆ. ಆದರೆ ಇಲಾಖೆಯವರು ಏನೂ ಬರೆದುಕೊಳ್ಳುತ್ತಿಲ್ಲ. ಪಶು ಸಂಗೋಪನೆ ಬಹಳ ಮುಖ್ಯವಾದುದು. ದೇಶಿಯ ತಳಿಗಳನ್ನು ರಕ್ಷಣೆ ಮಾಡುವುದರಲ್ಲಿ ನಾವು utterly failure ಆಗಿದ್ದೇವೆ. ಸುಮಾರು 6 ರಿಂದ 7 ತರಹದ ತಳಿಗಳಿವೆ ಇದು ಬಹಳ ಮುಖ್ಯ. ಮೊದಲು ಹಸುಗೆ ವೀರ್ಯ ಕೊಟ್ಟು ಕೃತಕ ಗರ್ಭದಾರಣೆ ಮಾಡುವುದಕ್ಕೆ ಐದು ರೂಪಾಯಿಗಳು ಇತ್ತು. ಈಗ ಮೂವತ್ತು ರೂಪಾಯಿಗಳು ಎಂದು ಮಾಡಿದ್ದಾರೆ. ಇದನ್ನು ಮೂವತ್ತು ರೂಪಾಯಿ ಮಾಡುವುದೇ? ಅವನು ಒಬ್ಬ ಮಗಳನ್ನು ಸಾಕಿದ ರೀತಿಯಲ್ಲಿ ಹಸುವನ್ನು ಸಾಕುತ್ತಾನೆ. ಹಸುವಿಗೆ ವೀರ್ಯ ಕೊಟ್ಟು ಕೃತಕ ಗರ್ಭದಾರಣೆ ಮಾಡಬೇಕಾದರೆ ಮೂವತ್ತು ರೂಪಾಯಿ charge ಮಾಡುತ್ತಾರೆ. ದೇಶೀಯ ತಳಿಗಳ ಹಾಲಿಗೆ ನಲವತ್ತು ರೂಪಾಯಿಗಳನ್ನು fix ಮಾಡಲಿ. ವಿದೇಶೀಯ ತಳಿಗಳ ಹಾಲುಗಳಿಗೆ ಇಪ್ಪತ್ತೈದ ರಿಂದ ಮೂವತ್ತು ರೂಪಾಯಿಗಳನ್ನು fix ಮಾಡಲಿ. ನಿಜವಾಗಿಯೂ ದೇಶಿಯ ತಳಿ ಹಾಲಿನಲ್ಲಿ ಸಂಪೂರ್ಣ ದೇಹವನ್ನು

ಆರೋಗ್ಯವನ್ನು ಕಾಪಾಡತಕ್ಕಂಥ ಶಕ್ತಿ ಇದೆ. ಈ ಹಸು ಇದೆಯಲ್ಲ, ಇದರ ಜಾತಿಯೇ ಬೇರೆ. ಗಂಜಲ ಮತ್ತು ತೊಪ್ಪೆಯಿಂದ ಬಹಳ ಪರಿಣಾಮಕಾರಿಯಾಗಿರತಕ್ಕಂಥ ಕೃಷಿ ಮಾಡಬಹುದು. ಕುರಿ, ಕೋಳಿ, ಹಂದಿಗೆ ಹೆಚ್ಚು ಸಾಲ ಕೊಡಬೇಕು. ಇಂದು ಮಾಂಸದ ಉದ್ಯಮ ಬಹಳ ಚೆನ್ನಾಗಿದೆ. ಮೂರು ಸಾವಿರ ರೂಪಾಯಿಗಳಿಗೆ ಕುರಿ ತೆಗೆದುಕೊಂಡು ಮುಂದಿನ ವರ್ಷಕ್ಕೆ ಮಾರಿದರೆ ಆರು ಸಾವಿರ ರೂಪಾಯಿಗಳು ಸಿಗುತ್ತದೆ. ಮೊನ್ನೆ ದಿವಸ ಹಾರ್ನಳ್ಳಿಯಲ್ಲಿ ಎರಡು ಹಸು ಸತ್ತು ಹೋಯಿತು ಎಂದು ಆತ ಆತ್ಮಹತ್ಯೆ ಮಾಡಿಕೊಂಡ. ತನ್ನ ಜೀವನದ ಬದುಕಿನ ಕನಸನ್ನು ಎರಡು ಹಸುಗಳ ಮೇಲೆ ಕಾಣುತ್ತಿದ್ದವನು ಆತ್ಮಹತ್ಯೆ ಮಾಡಿಕೊಂಡು ಸತ್ತು ಹೋಗಿಬಿಟ್ಟ. ಕುರಿ ಸತ್ತರೆ ಪರಿಹಾರ, ಹಸು ಸತ್ತರೆ ಪರಿಹಾರವಿಲ್ಲ. ಅದು ಏಕೆ? ಇದೂ ಪ್ರಾಣಿ, ಅದೂ ಪ್ರಾಣಿ. ಅದೂ ಹಾಲನ್ನು ಕೊಡುತ್ತದೆ, ಇದೂ ಮಾಂಸ ಕೊಡುತ್ತದೆ. ಆದ್ದರಿಂದ, ಹಸು ಸತ್ತರೆ ಪರಿಹಾರ ಕೊಡಬೇಕು. ಕೊನೆಯದಾಗಿ ತಮ್ಮ ಮೂಲಕ ಹೇಳುವುದೇನೆಂದರೆ, ಕರ್ನಾಟಕದಲ್ಲಿ ನೂರಾನಲವತ್ತು ಜಾತ್ರೆಗಳು ನಡೆಯುತ್ತವೆ. ಮುನ್ನೂರು ಚಿಲ್ಲರೆ ಚಿಕ್ಕ ಜಾತ್ರೆ ನಡೆಯುತ್ತವೆ. Dance ಆಡುವವರಿಗೆ, long jump ಮಾಡುವವರಿಗೆ, high jump ಮಾಡುವವರಿಗೆ ಐವತ್ತು ಸಾವಿರ ರೂ.ಗಳನ್ನು ಕೊಡುತ್ತಾರೆ. ದನ ಸಾಕುವವರಿಗೆ ಏಕೆ ಕೊಡುತ್ತಿಲ್ಲ? ತನ್ನ ಮನೆಯಲ್ಲಿರತಕ್ಕಂಥ ಹಾಲು-ಬೆಣ್ಣೆಯನ್ನು ತಿನ್ನಿಸಿ, ಜಾತ್ರೆಗೆ ಹೋಗಬೇಕಾದರೆ ಆರು ಡಬ್ಬ powder ಹಾಕಿಕೊಂಡು ದನಗಳನ್ನು ಹೊಡೆದುಕೊಂಡು ಬರುತ್ತಾನೆ. ಅವನ ಹೆಂಡತಿಗೆ ಆ ತರಹ ಒಂದು ದಿವಸವೂ powder ಹಾಕಿಲ್ಲ. ಅಷ್ಟು powder ಹಾಕಿಕೊಂಡು ದನ ಹೊಡೆದುಕೊಂಡು ಬರುತ್ತಾರೆ, ಅವನಿಗೆ ಎರಡು ಬಕೀಟು ಕೊಡುತ್ತಾರೆ. ಚೆನ್ನಾಗಿ ಸಾಕಿದ್ದೀಯಾ, ಬೇಧಿಯಾದರೆ ಹಳ್ಳದ ಮಗ್ಗಲಿಗೆ ತೆಗೆದುಕೊಂಡು ಹೋಗು ಎಂದು ಎರಡು ಬಕೀಟು ಕೊಡುತ್ತಾರೆ. ಅವನಿಗೆ ಏಕೆ 3–5 ಲಕ್ಷ ರೂ.ಗಳನ್ನು ಕೊಡಬಾರದು? ಯಾವ್ಯಾವುದಕ್ಕೋ ಖರ್ಚು ಮಾಡುತ್ತೇವೆ, ದನವನ್ನು ಸಾಕಿ ತನ್ನ ಜೀವನದಲ್ಲಿ ಅದಕ್ಕೆ band set ಹೊಡೆಸಿಕೊಂಡು ಕರೆಸಿಕೊಂಡು ಬಂದು, ಅದರ ಕಾಲಿಗೆ ಪೂಜೆ ಮಾಡಿ ಅದನ್ನು ಜನಗಳಿಗೆ

ಪ್ರದರ್ಶನ ಮಾಡುತ್ತಾನಲ್ಲಾ, ಅವನಿಗೆ ಏಕೆ ಕೊಡಬಾರದು? ಈ ಸಾರಿ ನಾನು ದೇವಿ ಜಾತ್ರೆಯಲ್ಲಿ ಇಪ್ಪತ್ತುನಾಲ್ಕು ಚಿನ್ನದ ಪದಕವನ್ನು ಕೊಟ್ಟಾಗ ಆ ಖುಷಿ ನೋಡಲಿಕ್ಕಾಗಲ್ಲ. ನಾಲ್ಕು ಗ್ರಾಂನ ಇಪ್ಪತ್ತು ನಾಲ್ಕು ಚಿನ್ನದ ಪದಕಗಳು, ಅಡ ಇಟ್ಟುಕೊಂಡರೂ ಐದು ಸಾವಿರ ರೂ.ಗಳು ಸಿಗುತ್ತದೆ. Original ಚಿನ್ನವನ್ನೇ ಕೊಟ್ಟಿದ್ದೇನೆ. ಸರ್ಕಾರ ಕೊಡಲಿಕ್ಕಾಗುವುದಿಲ್ಲವೆ? ಯಾವ ಕಾರಣಕ್ಕಾಗಿ ಇದನ್ನು neglect ಮಾಡುತ್ತೀರಿ? ಮಾನ್ಯ ಪಶು ಸಂಗೋಪನಾ ಸಚಿವರು ಇದ್ದರೆ ಚೆನ್ನಾಗಿತ್ತು. ಅವರನ್ನು ಜಾತ್ರೆಗೆ ಕರೆಯಿಸಿ ಅವರ ಕೈಯಿಂದಲೇ gold medalಗಳನ್ನು ಕೊಡಿಸಿದ್ದೆ. ದಯವಿಟ್ಟು ಜನಗಳ ಜಾತ್ರೆಗೆ ವಿಶೇಷವಾಗಿ ಆಲೋಚನೆ ಮಾಡಬೇಕೆಂದು ಒತ್ತಾಯ ಮಾಡಿ ಹೇಳುತ್ತೇನೆ. ಕೊನೆಯದಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸಿನಿಮಾ ತೆಗೆಯುತ್ತೇನೆಂದರೆ ಐವತ್ತು ಲಕ್ಷ ರೂ.ಗಳನ್ನು ಕೊಡುತ್ತೀರಿ. ನಮ್ಮೂರಿನಲ್ಲಿ ಒಂದು ಲಕ್ಷ ಖರ್ಚು ಮಾಡಿ ನಾಲ್ಕು ತಿಂಗಳು ಹಗಲು-ರಾತ್ರಿ ಕಷ್ಟಪಟ್ಟು ನಾಟಕ ಆಡುವವರಿಗೆ ಹತ್ತು ಸಾವಿರ ರೂಪಾಯಿಗಳನ್ನಾದರೂ ಕೊಡಿ. ನಾಟಕದ ಕಷ್ಟ ಯಾರಿಗಾದರೂ ಗೊತ್ತಿದೆಯೇ? ನೀವು ನಾಟಕದಲ್ಲಿ ಯಾವುದಾದರೂ part ಮಾಡಿದ್ದೀರಾ? ಸೈಕಲ್ ಟ್ಯೂಬ್‌ಗೆ ಹಾಕುವ solutions ತೆಗೆದು ಮೀಸೆಗೆ ಅಂಟಿಸುತ್ತಾರೆ ಗೊತ್ತೇ? Puncture ಹಾಕಿದ ಹಾಗೆ ಮೀಸೆ ಆಗುತ್ತದೆ. ನೂರು ವರ್ಷದ ಕೂದಲು, ಅದರೊಳಗೆ ಎಲ್ಲಾ ಪ್ರಾಣಿಗಳು ಸೇರಿಕೊಂಡಿರುತ್ತವೆ, ಅದನ್ನು ತಲೆಗೆ ಕಟ್ಟುತ್ತಾರೆ, ಅದರ ಮೇಲೆ ಕಿರೀಟ, ಬಟ್ಟೆಗಳು ಇವೆಯಲ್ಲ ಎಷ್ಟು ಸಾವಿರ ಜನ ಉಪಯೋಗಿಸಿದ್ದಾರೋ ಏನೋ ಕಥೆಯೋ ಯಾವ್ಯಾವ ಪ್ರಾಣಿಯದು ಎಂದು ಯಾರಿಗೂ ಗೊತ್ತಿಲ್ಲ. ಅವನು ಅವುಗಳನ್ನು ಕಟ್ಟಿಕೊಂಡು, ಯಾರಲ್ಲಿ ಎಂದ ತಕ್ಷಣ, ಏನು ಅಪ್ಪಣೆ? ಎಂದು ಇನ್ನೊಬ್ಬ ಹೇಳುತ್ತಾನೆ, ಅದಕ್ಕೆ ಅವನು ರಾಜ ನರ್ತಕಿಯನ್ನು ಬರಮಾಡತಕ್ಕದ್ದು ಎನ್ನುತ್ತಾನೆ. ಅವಳು dance ಮಾಡಿ ಹೋಗುತ್ತಾಳೆ, ಬೆಳಿಗ್ಗೆ ಇವನು ಮನೆಗೆ ಹೋಗುತ್ತಾನೆ. ಅವನ ಹೆಂಡತಿಗೆ ಯಾರಲ್ಲಿ ಎಂದು ಹೇಳುತ್ತಾನೆ, ಅದಕ್ಕವಳು ಏನು ಅಪ್ಪಣೆ ಎನ್ನುತ್ತಾಳೆ, ಇವನು ಬಾಗಿಲು ತೆಗೆಯತಕ್ಕದ್ದು ಎನ್ನುತ್ತಾನೆ, ಅದಕ್ಕೆ ಅವಳು ರಾಗಿ ದುಡ್ಡು

ಏನು ಮಾಡಿದೆ ಎಂದರೆ, ಇವನು ಸೀನ್ಸ್‌ನವನಿಗೆ ಕೊಟ್ಟುಬಿಟ್ಟೆ ಎಂದಾಗ ಅದಕ್ಕವಳು ವಾಪಸ್ ಹೋಗತಕ್ಕದ್ದು ಎನ್ನುತ್ತಾಳೆ. ಅವನು ಬಂದು ಬೀಡಿ ಸೇದುತ್ತಾ ಕುಳಿತು ಬಿಡುತ್ತಾನೆ. ನಾಟಕ ಆಡುವವರ ಜೀವನ ಎಷ್ಟು ಕಷ್ಟ ಇದೆ ಎಂದು ಗೊತ್ತಿದೆಯೇ? ಒಂದು ಸಾರಿ ಒಬ್ಬ ಆಂಜನೇಯನ ಪಾರ್ಟ್ ಮಾಡಿದ್ದಾನೆ. ಬಣ್ಣ ಹಾಕಿಕೊಂಡು ಅವನು ಹಾಗೆ ಕುಳಿತಿದ್ದ, ಅವನ ಸ್ನೇಹಿತ ಬಂದು ಬಾಲದ ಮೇಲೆ ಕುಳಿತು ಮಾತನಾಡುವಾಗ ಇದ್ದಕ್ಕಿದ್ದಂತೆ ಕರೆಂಟ್ ಹೋಯಿತು, ಗ್ಯಾಸ್ ಲೈಟ್ ಅವನು ಹೊಡೆದಾಗ ಸೀಮೆ ಎಣ್ಣೆ ಎಲ್ಲಾ ಮೈಗೆ ಚೆಲ್ಲಿ ಬಿಟ್ಟಿತ್ತು. ಆಂಜನೇಯ ಲಂಕಾ ಪಟ್ಟಣ ಸುಡುವ ಸೀನ್ ಇತ್ತು, ಅದಕ್ಕೆ ಅವನ ಬಾಲಕ್ಕೆ ಬೆಂಕಿ ಹಾಕಿದರು, ಕೂಡಲೇ ಇಡೀ ಮೈಗೆ ಬೆಂಕಿ ಹತ್ತಿಕೊಂಡು ಬಿಟ್ಟಿತು. ಇಡೀ ಮೈಗೆ ಬೆಂಕಿ ಹತ್ತಿಕೊಂಡು ಕುಣಿಯುತ್ತಿದ್ದಾನೆ, ಜನ ಎಲ್ಲಾ ಇವನು original acting ಮಾಡುತ್ತಿದ್ದಾನೆ ಎನ್ನುತ್ತಿದ್ದರು, ಅವನು ಬೆಂದು ಹೋದ. ಆಮೇಲೆ hospital ನಲ್ಲಿ ಒಂದು ಚೂರು ಬಟ್ಟೆ ಇಲ್ಲದೆ ಬೆಡ್ ಮೇಲೆ ಮಲಗಿದ್ದಾನೆ. ನಾನು ಹೋಗಿ ಏನಣ್ಣಾ ಇದು ಎಂದೆ, ಅದಕ್ಕವನು ಆಂಜನೇಯ ಪಾರ್ಟ್ ಮಾಡಿದೆ ಹೀಗೆ ಆಗಿದೆ ನೋಡಿ ಎಂದ. ನಾಟಕ ಎಂದರೆ ಸುಲಭವಲ್ಲ. ಬಹಳ ಕಷ್ಟ, ನಾವೂ ಮಾಡಿದ್ದೆವು. ನಾನು 5–6 ನಾಟಕ ಆಡಿದ್ದೇನೆ. ನಾಟಕ ಮಾಡುವುದು ಬಹಳ ಸುಲಭವಲ್ಲ, ಇಂಥವರಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನಾದರೂ ಕೊಡಿ. ನಿಮ್ಮಂಥವರು ಮಂತ್ರಿಯಾಗಿರುವುದೇ ನಮ್ಮ ಪುಣ್ಯ. ನೀವು ದೊಡ್ಡ ಕಲಾವಿದರು, ನಾವು ನಿಮ್ಮ ಚಿತ್ರ ನೋಡಲಿಕ್ಕೆ queue ನಿಂತುಕೊಳ್ಳುತ್ತಿದ್ದೆವು. ಅಷ್ಟು ಚೆನ್ನಾಗಿ ನೀವು ಪಾತ್ರವನ್ನು ನಿರ್ವಹಣೆ ಮಾಡುತ್ತಿದ್ದಿರಿ. ನೋಡಿ, ಆ ನಾಟಕದವರಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು declare ಮಾಡಿ.

ಶ್ರೀಮತಿ ಉಮಾಶ್ರೀ: ಮಾನ್ಯ ಅಧ್ಯಕ್ಷರೆ, ಈಗ ಅವರು ಹತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಾರೆಂದು ಹೇಳಿದರು. ನಮ್ಮಲ್ಲಿ ಪೌರಾಣಿಕ ನಾಟಕಗಳಿಗೆ ಹಾಗೂ ಸಾಮಾಜಿಕ ನಾಟಕಗಳಿಗೆ ಎರಡು ರೀತಿಯ ಪ್ರಾಯೋಜನಗಳನ್ನು ಕೊಡುತ್ತಿದ್ದೇವೆ. Regular professionalಗಳು ಬಂದು ಕೇಳಿದಾಗ, ಮೊದಲೆಲ್ಲಾ ಹದಿನೈದು, ಇಪ್ಪತ್ತು ಸಾವಿರ ರೂಪಾಯಿ

ಇರುವುದನ್ನು ನಾನೀಗ ಮೂವತ್ತೈದು ಸಾವಿರ ರೂಪಾಯಿ ಪ್ರಾಯೋಜನೆ ಇರತಕ್ಕಂಥ ಕಲಾವಿದರ ಗುಂಪಿಗೆ, regular professional ಗಳಿಗೆ ಯಾವಾಗಲಾದರೂ ಅವರು ಬಂದು ಕೇಳುತ್ತಾರೆ, ಒಂದು ನಾಟಕಕ್ಕೆ ಕೊಡುತ್ತೇವೆ. ಹತ್ತು ಸಾವಿರ ರೂಪಾಯಿ ಏನಿದೆ, ಈ ಗ್ರಾಮೀಣ ಭಾಗಗಳಲ್ಲಿ ಹಬ್ಬ–ಜಾತ್ರೆ–ಹರಿದಿನದಲ್ಲಿ ಹುಡುಗರು ಎಲ್ಲರೂ ಸೇರಿಕೊಂಡು ತಾವೇ ಬಣ್ಣ ಹಚ್ಚಿಕೊಂಡು, ತಾವೇ ದುಡ್ಡುಗಳನ್ನು ಹಾಕಿಕೊಂಡು......

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಅವರೇ ಬಣ್ಣ ಹಚ್ಚುವುದಿಲ್ಲ ಸೀನ್ಸ್‌ನವನು ಬರುತ್ತಾನೆ.

ಶ್ರೀಮತಿ ಉಮಾಶ್ರೀ: ಒಂದು ನಿಮಿಷ. ಅಂದರೆ ಅದಕ್ಕೂ ಅವರು ದುಡ್ಡು ಕೊಡಬೇಕು ಬಿಡಿ. ಈ ರೀತಿ ಮಾಡುವುದರಿಂದ ಅವರಿಗೆ ಯಾವುದೇ ರೀತಿಯ ಒಂದು ಸವಲತ್ತು ಸರ್ಕಾರ ಕೊಟ್ಟಿಲ್ಲ. ಇದು ಏನಾಗುತ್ತಿತ್ತು, ಬೆಂಗಳೂರಿನ ಭಾಗದಲ್ಲಿ ಯಾರೇ ಬಂದು ಒಂದು pamphlets ಕೊಟ್ಟರು ಅವರಿಗೆ ಐದು–ಹತ್ತು ಸಾವಿರ ಕೊಟ್ಟು ಕಳುಹಿಸುವ ವ್ಯವಸ್ಥೆಯಿತ್ತು. ಅದು ಯಾರು ಬಂದರು, ಯಾರು ಕೊಟ್ಟರು, ಯಾರು ದೃಢೀಕರಣ ಮಾಡಿದರು, ಏನೂ ಇರಲಿಲ್ಲ. ಈಗ ನಾನು ಕೂಡ MLA ಆದಮೇಲೆ ಕೆಲವರು ನಾಟಕಗಳಿಗೆ ದುಡ್ಡು ಕೊಡಿ ಎಂದು ಹಳ್ಳಿಗಳಲ್ಲಿ ಬರುತ್ತಿರುತ್ತಾರೆ. ಶಾಸಕರಿಗೆ ಮೇಲಿಂದ ಮೇಲೆ ಒತ್ತಾಯ ಆಗುತ್ತಿರುತ್ತದೆ. ಅದಕ್ಕೆ ನಾನು ಏನು ಮಾಡಿದೆ, ಬೆಂಗಳೂರಿನಲ್ಲಿ ಒಂದು ಕಡೆ ದುಡ್ಡು ಕೊಟ್ಟುಕೊಂಡು ಕುಳಿತುಕೊಳ್ಳುವುದು ಬೇಡ, ಇದನ್ನು de-centralize ಮಾಡಿ ಎಂದು ನಮ್ಮ ಎಲ್ಲಾ MLA ಗಳಿಗೆ ತಮ್ಮ ಕ್ಷೇತ್ರವಾರು ಹತ್ತು ನಾಟಕದವರಿಗೆ 5–10 ಸಾವಿರ ರೂ.ಗಳನ್ನು ಕೊಡುವ ವ್ಯವಸ್ಥೆ ಮಾಡಿದೆವು. ಜನಪ್ರತಿನಿಧಿಗಳು ಬಂದು ದೀಪ ಹಚ್ಚುತ್ತಾರೆ, ಆಗ ಅವರೇ ಇಂಥದೊಂದು pamphlets ಮತ್ತು photo ಹಾಕಿ recommend ಮಾಡಿದರೆ, ಆ ಹುಡುಗರಿಗೆ 5–10 ಸಾವಿರ ರೂ.ಗಳನ್ನು ಕೊಡಿ ಎಂದು ಮಾಡಿರುವುದರಿಂದ ಎಲ್ಲಾ ಶಾಸಕರು ಕೂಡ ಅದನ್ನು ಉಪಯೋಗಿಸಿಕೊಳ್ಳಬಹುದು. ಮೊದಲು ಆ ವ್ಯವಸ್ಥೆ ಇರಲಿಲ್ಲ. ಈಗ ಅದನ್ನು ಸ್ವಲ್ಪ ಬದಲಾವಣೆ ಮಾಡಿ

ನಮ್ಮ ಶಾಸಕರಿಗೂ ಅನುಕೂಲವಾಗಲಿ, ಅವರಿಗೂ ಅನುಕೂಲವಾಗಲಿ ಎಂದು ನಾವು ಮಾಡಿದ್ದೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ನೀವು ಹತ್ತು ಸಾವಿರ ರೂ. ಕೊಡವಾಗ ಸೀನ್ಸ್‌ಗೆ ನಲವತ್ತು ಸಾವಿರ ರೂ. ಇತ್ತು. ಮೊನ್ನೆ ನನ್ನ ಜೊತೆಯಲ್ಲಿ ನೀವೇ ಕಥೆ ಹೇಳಿದಿರಿ.

ಶ್ರೀಮತಿ ಉಮಾಶ್ರೀ: ಏನೂ ಇರಲಿಲ್ಲ, ಐದು ಸಾವಿರ ಅಥವಾ maximum ಹತ್ತು ಸಾವಿರ ರೂ.ಗಳನ್ನು ಕೊಡಿ ಎಂದು first time ಮಾಡಿದ್ದೇವೆ. ಅದನ್ನು ನೀವು appreciate ಮಾಡಬೇಕು. ಅದನ್ನು ನೀವು appreciate ಮಾಡಲಿಲ್ಲ. ಇಂಥದೊಂದು ವ್ಯವಸ್ಥೆ ಬದಲಾವಣೆ ಮಾಡಿದ್ದೇವೆ, ಅದರ ಬಗ್ಗೆ ಒಳ್ಳೆಯದು ಮಾತನಾಡುವುದಿಲ್ಲ. ಹತ್ತು ಸಾವಿರ ರೂ.ಗಳನ್ನು ಕೊಡುವುದನ್ನು ಹೆಚ್ಚು ಮಾಡುವ ಒಳ್ಳೆಯ ಸಲಹೆ ಏನಿದೆ, ಅದನ್ನು ಆಮೇಲೆ ನೋಡೋಣ. But ಮಾಡಿರುವುದರ ಬಗ್ಗೆ ಸ್ವಲ್ಪ ಮಟ್ಟಿಗೆ ಹೇಳಲಿಲ್ಲವೆಂದರೆ ಹೇಗೆ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ನೀವು ಮಾಡಿಲ್ಲ ಎಂದು ಹೇಳಿದವರು ಯಾರು?

ಶ್ರೀಮತಿ ಉಮಾಶ್ರೀ: ಅದನ್ನು ನೀವು ಹೇಳಲೇ ಇಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ಹತ್ತು ಸಾವಿರ ರೂ.ಗಳನ್ನು ಕೊಡುತ್ತಿದ್ದೀರಿ ಅದು ಸಾಲುತ್ತಿಲ್ಲ. ಇಪ್ಪತ್ತೈದು ಸಾವಿರ ರೂ.ಗಳನ್ನು ಕೊಡಿ. ಸೀನ್ಸ್ ಒಂದೂಕಾಲು ಲಕ್ಷ ರೂ.ಗಳು, ಬಣ್ಣ ಬಳಿಯುವವನಿಗೆ ಇಪ್ಪತ್ತು ಸಾವಿರ ರೂ.ಗಳು ಜಾಸ್ತಿಯಾಗಿದೆ. ನೀವೇ, ಮೊದಲು ನಾನು ಸಿನಿಮಾದಲ್ಲಿ ಪಾತ್ರ ಮಾಡುತ್ತಿದ್ದಾಗ ಇಪ್ಪತ್ತು ಸಾವಿರ ರೂ.ಗಳನ್ನು ಕೊಡುತ್ತಿದ್ದರು. ಕೊನೆಗೆ ಒಂದು ಲಕ್ಷ ರೂ.ಗಳನ್ನು ಕೊಡಲು ಶುರು ಮಾಡಿದರು ಎಂದು ಹೇಳಿದಿರಿ. ಅವರೇ ಒಂದು ಲಕ್ಷ ರೂ.ಗಳನ್ನು ಕೊಟ್ಟರು ಎಂದು ಹೇಳಿದರು.

ಅಧ್ಯಕ್ಷರು: ಆಯಿತು ಬಿಡಿ ಪೂರೈಸಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ: ನಾನು ಎರಡೇ ನಿಮಿಷದಲ್ಲಿ ಮುಗಿಸುತ್ತೇನೆ. ಕಾನೂನು ಮಂತ್ರಿಗಳಿಗೆ ತಮ್ಮ ಮೂಲಕ ಇಡೀ ಬೆಂಗಳೂರಿನಲ್ಲಿ ಹಳ್ಳಿ ಮಕ್ಕಳು ಇರುವುದು. ಏಳೇಳು ಎಕರೆ ಹೊಲ ಇರುವವರೆಲ್ಲ ಬಂದು ಇಲ್ಲಿ supplier ಕೆಲಸ ಮಾಡುತ್ತಾರೆ, ಲೋಟ ತೊಳೆಯುತ್ತಾರೆ. ಅಮೇರಿಕಾದಲ್ಲಿ ಐದು ಜನಕ್ಕೆ supply ಮಾಡಿದರೆ ಹತ್ತು dollar tips ಕೊಡುತ್ತಾರೆ.

ಇವರು ಕನಿಷ್ಟ 5 ಜನಕ್ಕೆ ಸಪ್ಲೈ ಮಾಡಿದರೆ, ಆ ಬಡ ಮಕ್ಕಳಿಗೆ 5–6 ರೂಪಾಯಿ ಟಿಪ್ಸ್ ಕೊಟ್ಟರೆ, ಅವರ ಅಪ್ಪ–ಅಮ್ಮನಿಗೆ ದುಡ್ಡು ಕಳುಹಿಸಿದರೆ ರೈತರ ಆತ್ಮಹತ್ಯೆಯನ್ನು ತಡೆಯಬಹುದು. ಹಾಗೆಯೇ ಅವರ ತಂದೆ–ತಾಯಿಯನ್ನು ರಕ್ಷಣೆ ಮಾಡಬಹುದು. ಅಸಂಘಟಿತ ಕಾರ್ಮಿಕರ ಬಗ್ಗೆ ಯಾವುದೇ ಹೊಣೆಗಾರಿಕೆ, ಜವಾಬ್ದಾರಿ ಇಲ್ಲದೆ ಇದ್ದರೆ ಏನು ಮಾಡುವುದು? ಹಳ್ಳಿಯಿಂದ ಇಲ್ಲಿಗೆ ಬಂದು second-hand auto ತೆಗೆದುಕೊಂಡರೆ ಅದಕ್ಕಾಗಿ ಸಾಲ ಕೊಡತಕ್ಕಂಥ ಕೆಲಸ ಆಗಬೇಕು. ಅಮೇರಿಕಾ ದೇಶದಲ್ಲಿ second-hand car ಗೆ ಸಾಲ ಕೊಡುತ್ತಾರೆ. ಬಡವರನ್ನು ರಕ್ಷಣೆ ಮಾಡುವುದು ಸಾಮಾನ್ಯ ಜನರ ಜೀವನಕ್ಕೆ ಬೇಕಾದ ಆರ್ಥಿಕ ನೀತಿ, ಅಂದರೆ ಸಾಲದ ನೀತಿ ಹಾಗೂ ಆತನನ್ನು ರಕ್ಷಣೆ ಮಾಡತಕ್ಕಂಥ ಕೆಲಸ ಆಗಬೇಕು. ಇವತ್ತಿನದಿವಸ ಒಂದು ಮಸಾಲೆ ದೋಸೆಗೆ 25 ರಿಂದ 40 ರೂಪಾಯಿಗಳು. ಆದರೂ ಸಹ ಕೊಡುತ್ತೇವೆ. ಆ ಮಕ್ಕಳು ಅಲ್ಲಿ ಕೆಲಸ ಮಾಡಿ ಕಾಲು ಕೊಳೆತು ಹೋಗಿರುತ್ತದೆ. ಅಂಥ ಹುಡುಗರಿಗೆ 5 ರೂಪಾಯಿಗಳ ಟಿಪ್ಸ್ ಅನ್ನು ನಿಗದಿ ಮಾಡುವುದಕ್ಕೆ ಏನು ತೊಂದರೆ? ದೊಡ್ಡ ದೊಡ್ಡ five star hotel ನಲ್ಲಿ ಶ್ರೀಮಂತರು 50–100 ರೂಪಾಯಿಗಳ ಟಿಪ್ಸ್ ಕೊಡುತ್ತಾರೆ. ಆದ್ದರಿಂದ, ಬಡವರ ಮಕ್ಕಳಿಗೆ ಇಲ್ಲಿ 5–10 ರೂ.ಗಳ ಟಿಪ್ಸ್ ಫಿಕ್ಸ್ ಮಾಡುವುದಕ್ಕೆ ಆಗುವುದಿಲ್ಲವೇ? ಅಸಂಘಟಿತ ಕಾರ್ಮಿಕರ ಬಗ್ಗೆ ಅಂದರೆ, ಗಾರ್ಮೆಂಟ್ಸ್‌ಗೆ ಹೋಗುವ ಹೆಣ್ಣುಮಕ್ಕಳ ಬಗ್ಗೆ ಮೊನ್ನೆ ದಿವಸ ನಮ್ಮ ಸಮ್ಮುಖದಲ್ಲಿಯೇ ಮಾತನಾಡಿದ್ದೇನೆ. ಕಾರ್ಮಿಕ ಮಂತ್ರಿ ಎಂದರೆ ಅವರು ಸಂಶೋಧನೆ ಮಾಡಬೇಕು. ಅಂದರೆ, ನಿಜವಾಗಿ ಯಾರು ಬಡವರು ಇರುತ್ತಾರೆಯೋ, ಅವರ ಬದುಕನ್ನು ರಕ್ಷಣೆ ಮಾಡತಕ್ಕಂಥ ಅಸಂಘಟಿತ ವರ್ಗದ ಎಲ್ಲಾ

ಕಾರ್ಮಿಕರ ರಕ್ಷಣೆ ಮಾಡತಕ್ಕಂಥದ್ದು ಅಂದರೆ, ಅವರ ಆರೋಗ್ಯ ಮತ್ತು ಆರ್ಥಿಕವಾಗಿ ರಕ್ಷಣೆ ಮಾಡತಕ್ಕಂಥ ಆಲೋಚನೆಯನ್ನು ಮಾಡಬೇಕೆಂದು ತಮ್ಮ ಮೂಲಕ ಹೇಳುತ್ತಾ ಇಷ್ಟು ಅವಧಿಯವರೆಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ನಿಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿಳ್ಳ ಮುನಿಶಾಮಪ್ಪ: ಮಾನ್ಯ ಅಧ್ಯಕ್ಷರೆ, ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ 10 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಇವರು ಆದ ಕೂಡಲೇ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ): ಮಾನ್ಯ ಅಧ್ಯಕ್ಷರೆ, ಇಲಾಖಾ ಬೇಡಿಕೆಗಳ ಮೇಲೆ ಚರ್ಚೆಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಮುಖ್ಯವಾಗಿ ಕಂದಾಯ ಇಲಾಖೆ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಕಂದಾಯ ಇಲಾಖೆ ಇವತ್ತು ಮಾತೃ ಇಲಾಖೆ ಎಂದು ಹೇಳುತ್ತೇವೆ. ಕಂದಾಯ ಇಲಾಖೆಯಲ್ಲಿ ಎಲ್ಲಾ ವ್ಯವಸ್ಥೆಗಳು ಸರಿಯಾಗಿದ್ದರೆ ಉಳಿದ ಎಲ್ಲಾ ಇಲಾಖೆಗಳು ಕೆಲಸ ಮಾಡುವುದಕ್ಕೆ ಒಳ್ಳೆಯದಾಗುತ್ತದೆ. ಇವತ್ತು ಕಂದಾಯ ಇಲಾಖೆಯಲ್ಲಿ ಜಿಲ್ಲಾ ಆಡಳಿತದ ಎಲ್ಲಾ ವ್ಯವಸ್ಥೆಗಳು ಇವೆ. ಅದರ ಜೊತೆಗೆ 47 ಕಾಯಿದೆಗಳ ಅನುಷ್ಠಾನದ ಜವಾಬ್ದಾರಿ ಕೂಡ ಈ ಇಲಾಖೆ ಮೇಲೆ ಇದೆ. ಅದರಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ಬೇರೆ ಬೇರೆ arms ಸೇರಿರುತ್ತವೆ. ನಾನು ಪೂರ್ಣವಾದ ವಿವರಗಳಿಗೆ ಹೋಗುವುದಿಲ್ಲ. ಇದರ ಅನುಷ್ಠಾನದ ಜವಾಬ್ದಾರಿ ಜೊತೆಗೆ ತಮಗೆ ಈಗಾಗಲೇ ಗೊತ್ತಿರುವ ಹಾಗೆ ನಾಗರೀಕ ಸನ್ನದುದಲ್ಲಿ ಬೇರೆ ಬೇರೆ ಫಲಾನುಭವಿಗಳಿಗೆ ಏನು ಸೌಲಭ್ಯ ಕೊಡಬೇಕಾಗಿದೆಯೋ ಅದೂ ಕೂಡ ಇದರಲ್ಲಿ ಸೇರಿದೆ. ಅದರ ಜೊತೆಗೆ ಹಿಂದಿನ ಸರ್ಕಾರ ಸಕಾಲ ಯೋಜನೆಯನ್ನು ಜಾರಿಗೆ ತಂದು ಸುಮಾರು 49 ಬೆನಿಫಿಟ್ಸ್ ಅನ್ನು ಸಕಾಲದ ಮೂಲಕ ಪಡೆದುಕೊಳ್ಳಬಹುದೆಂದು ಹೇಳಿದೆ. ಅದಕ್ಕೆ ಟೈಂ ಲಿಮಿಟ್ ಸಹ ಇದೆ. ಅಂದರೆ, ಅರ್ಜಿ ಕೊಟ್ಟರೆ ಇಷ್ಟೇ ದಿವಸಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಅದನ್ನು ವಿಲೇವಾರಿ

ಮಾಡಬೇಕೆಂದು ಇದೆ. ಆದರೆ, ಈ ಕಾಯಿದೆಯನ್ನು ಜಾರಿಗೆ ತಂದಾಗ ಅದರ ಬಗ್ಗೆ ಎಲ್ಲರೂ ಬಹಳ ಅಭಿಮಾನದಿಂದ ಮಾತನಾಡಿ ಇನ್ನಾದರೂ ಕಛೇರಿಗಳಿಗೆ ಅಲೆಯುವುದು ತಪ್ಪುತ್ತದೆ ಎಂಬ ಭಾವನೆ ಎಲ್ಲರಿಗೂ ಸಹ ಬಂದಿತ್ತು. ಬಹುಶಃ ಈ ಅಧಿಕಾರಿಗಳು ನಿಗದಿತ ಟೈಂ ಒಳಗೆ ಮಾಡದೆ ಹೋದರೆ ಅವರಿಗೆ fine ಹಾಕುವಂಥ ಅವಕಾಶಗಳು ಕೂಡ ಇದೆ. ಆದರೆ, ನಿಮ್ಮ ಸುತ್ತೋಲೆಯಲ್ಲಿ ಹೇಗಿದೆ ಎಂದರೆ, ಆದೇಶ ಸಂಖ್ಯೆ. ಸಿ.ಆ.ಸು.ಇ./20/ಇ.ಕ./2012, 6.03.2012 ರ ಅಧಿಸೂಚನೆಯಲ್ಲಿ ಅಧಿಸೂಚಿಸಿರುವ ಸೇವೆಗಳನ್ನು ಒದಗಿಸುವುದು ಅಥವಾ ತಿರಸ್ಕರಿಸುವುದು ಎಂದು ಹಾಕಿದ್ದಾರೆ. ನಿಗದಿ ಗರಿಷ್ಠ ಕಾಲಾವಧಿಯೊಳಗೆ ಅರ್ಜಿದಾರರಿಗೆ ಪೂರ್ಣಗೊಳಿಸತಕ್ಕದ್ದು, ಇಲ್ಲವೇ ಅರ್ಜಿದಾರರಿಗೆ ಪರಿಹಾರ ವೆಚ್ಚವನ್ನು ಅವರ ಕೋರಿಕೆ ಮೇರೆಗೆ ಪಾವತಿಸತಕ್ಕದ್ದು. ಹೀಗೆ ಪಾವತಿಸಬೇಕಾದ ಪರಿಹಾರ ವೆಚ್ಚವನ್ನು ವಿಳಂಬಕ್ಕೆ ಕಾರಣರಾದ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಯಿಂದ ವಸೂಲಿ ಮಾಡಲಾಗುವುದೆಂದು ಇದೆ. ಮೊದಲು ಸಕಾಲದಲ್ಲಿ ಒಂದಿಷ್ಟು ವಸೂಲಾತಿಗಳು ಸಹ ಆಗುತ್ತಿತ್ತು. ಆದರೆ, ಇವತ್ತು ಹೇಗಿದೆ ಎಂದರೆ, ಸಕಾಲದಲ್ಲಿ ಅರ್ಜಿ ಕೊಟ್ಟ ತಕ್ಷಣ, ಅದನ್ನು within time ಹೇಗೆ ತಿರಸ್ಕರಿಸಬಹುದೆಂದು ಅಧಿಕಾರಿಗಳು ನೋಡುತ್ತಾರೆ. ಅವರು ಏನಾದರೂ ಮಾನವೀಯತೆ ದೃಷ್ಟಿ ತೋರಿ ಅದನ್ನು ಕೊಡಬೇಕೆಂಬ ಭಾವನೆ ಏನಿತ್ತು, ಅದು ಇವತ್ತಿನದಿವಸ ಅಧಿಕಾರಿಗಳಲ್ಲಿ ಹೊರಟು ಹೋಗಿದೆ. ನಾನೇಕೆ ಫೈನ್ ಹಾಕಿಸಿಕೊಳ್ಳಬೇಕೆಂದು ಅದನ್ನು ತಿರಸ್ಕಾರ ಮಾಡುತ್ತಿದ್ದಾರೆ. ಕೆಳಗಿನ ಮಟ್ಟದಲ್ಲಿ ಹೆಚ್ಚಿನ ಅರ್ಜಿಗಳು ಇವತ್ತಿನ ದಿವಸ ತಿರಸ್ಕರಿಸ್ಪಡುತ್ತಿವೆ. ಯಾರಾದರೂ ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ ಕೇಳಿದರೆ ಅವರಿಗೆ 20 ಸಾವಿರ ರೂ.ಗಳ ಆದಾಯಕ್ಕಿಂಥ ಅಂದರೆ, ಅವರಿಗೆ 1 ಲಕ್ಷ ರೂಪಾಯಿಗಳ ಆದಾಯ ಇದೆ ಎಂದು ವಿಲೇಜ್ ಅಕೌಂಟೆಂಟ್ ಬರೆದು ಕಳುಹಿಸುತ್ತಾರೆ. ತಹಸೀಲ್ದಾರ್ ಅದನ್ನು ಪರಿಶೀಲನೆ ಮಾಡುವುದಕ್ಕೆ ಹೋಗದೆ refused ಎಂದು ಬರೆದು ಹಾಕುತ್ತಾರೆ. ಅವರು ಅದರ ವಾಸ್ತವಾಂಶವನ್ನು ತಿಳಿಯುವುದಕ್ಕೆ ಹೋಗುವುದಿಲ್ಲ. ಇಲ್ಲದಿದ್ದರೆ ಅವರ ಸಂಬಳದಿಂದ ಕಟ್ ಆಗುತ್ತದೆ.

ನಾಗರೀಕರಿಗೆ ಪ್ರಯೋಜನ ಆಗಲೆಂಬ ಉದ್ದೇಶದಿಂದ ಸಕಾಲ ಯೋಜನೆಯನ್ನು ತರಲಾಯಿತು. ಆದರೆ, ಅದರ ದುರುಪಯೋಗ ಈ ರೀತಿಯಲ್ಲಿ ಮಾಡುತ್ತಿದ್ದರೆ, ಇದರ ಫಲಾನುಭವಿಗಳಿಗೆ ಅನ್ಯಾಯ ನಿರಂತರವಾಗಿ ನಡೆಯುತ್ತಿದೆ. ಇದರ ಬಗ್ಗೆ ಸಾಕಷ್ಟು ವಿವರಗಳಿಗೆ ನಾನು ಹೋಗುವುದಿಲ್ಲ. Form 11(a), 11 (b), 9 and 11 ಇವೆಲ್ಲಾ ಗ್ರಾಮಪಂಚಾಯತ್‌ಗಳಲ್ಲಿ ಇರುವಂಥ ತೊಂದರೆಗಳಾಗಿವೆ. ಇವೆಲ್ಲವನ್ನೂ ಕಂದಾಯ ಇಲಾಖೆ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಇದೆಲ್ಲ ನಿಮ್ಮಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಕಾರಣ ಏನೆಂದರೆ, ನಿಮ್ಮಲ್ಲಿ staff ಇಲ್ಲ. ನಿಮ್ಮಲ್ಲಿ ಸರ್ವೇಯರ್ಸ್ ಸಾಕಷ್ಟು ಇಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಸರ್ವೇಯರ್ಸ್ surplus ಇದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ: Surplus ಎಂದು ಹೇಳುತ್ತಿದ್ದೀರಿ. ನಮ್ಮಲ್ಲಿ ಅಂತೂ ಇಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ನಮ್ಮ ಸರ್ಕಾರ ಬಂದ ತಕ್ಷಣ, ನಾನು ಕಂದಾಯ ಸಚಿವನಾಗಿ ಬಂದ ನಂತರ, ಪ್ರತಿ ಸಾರಿ ಸದನದಲ್ಲಿ ಈ ಬಗ್ಗೆ ಅಂಕಿ-ಅಂಶಗಳನ್ನು ಕೊಟ್ಟಿದ್ದೇನೆ. ಕೆರೆ ಒತ್ತುವರಿಗೆ ಸಂಬಂಧಪಟ್ಟಂತೆ ಸದನ ಸಮಿತಿ ಮಾಡಿದ ನಂತರ 1 ಸಾವಿರ ಸರ್ವೇಯರ್ಸ್ ಅನ್ನು ವರದಿ ಮಾಡುವುದಕ್ಕೆ ಕೊಟ್ಟಿದ್ದೇನೆ. ಹಾಗೆಯೇ ಪ್ರತಿ ಜಿಲ್ಲೆಗೂ ಸಹ ಕೊಟ್ಟಿದ್ದೇವೆ. ನಾವು ಬಂದ ಮೇಲೆ 1682 ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡಿದ್ದೇವೆ. ಸರ್ವೇಯರ್ಸ್ ಕೊರತೆ ಇಲ್ಲ. ನಿಮ್ಮ ಜಿಲ್ಲೆಯಲ್ಲಿ ಸರ್ವೇಯರ್ಸ್ ಕೊರತೆ ಇದೆಯೇ?

ಶ್ರೀ ಕೆ.ಜಿ. ಬೋಪಯ್ಯ: ನಮ್ಮ ಜಿಲ್ಲೆಯಲ್ಲಿ ಕೊರತೆ ಇದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಈಗ 728 ಸರ್ವೇಯರ್ಸ್ ಅನ್ನು ನೇಮಕಾತಿ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಕೆ.ಜಿ. ಬೋಪಯ್ಯ: ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಜಿಲ್ಲೆಗೆ ಬಂದು ತಾವು ರಿವ್ಯೂ ಮಾಡಿ. ಸರ್ವೆ ಕೆಲಸ ಮಾಡಿ ಆರ್.ಟಿ.ಸಿ. ಮತ್ತು ಎಂ.ಸಿ ಆಗಬೇಕು. ಆದರೆ, ಇವತ್ತಿನ ದಿವಸ ಎಷ್ಟು ಪೆಂಡಿಂಗ್ ಇವೆ ಎಂದು ತೆಗೆದು ನೋಡಿ. ಇತ್ತೀಚೆಗೆ ಮೊನ್ನೆ ದಿವಸ ಕೆಡಿಪಿ ಸಭೆಯಲ್ಲಿ ಚರ್ಚೆಗೆ ಬಂದಾಗ 2 ಸಾವಿರಕ್ಕೂ ಹೆಚ್ಚು ಪೆಂಡಿಂಗ್ ಇರುವುದು ತಿಳಿದು ಬಂತು. ಇವತ್ತಿನದಿವಸ ಯಾರೂ ಸಹ ಕೆಲಸ ಮಾಡುತ್ತಿಲ್ಲ. ಇದು ವಾಸ್ತವಾಂಶವಾಗಿದೆ. ಆಮೇಲೆ ವಾಜಪೇಯಿ ಜನಸ್ನೇಹಿ ಕೇಂದ್ರದ ಮೂಲಕ ಆಧಾರ್ ಕಾರ್ಡ್, ಬಿಪಿಎಲ್ ಕಾರ್ಡ್ ಈ ರೀತಿಯಾಗಿ ಎಲ್ಲಾ ಕೆಲಸಗಳು ಆಗುತ್ತವೆ. ಆದರೆ, ಅಲ್ಲಿ ಕೇವಲ ಒಂದು ಕಂಪ್ಯೂಟರ್ ಮಾತ್ರ ಇದೆ. ಅದು ಏನಾದರೂ ರಿಪೇರಿ ಆದರೆ ಯಾವುದೇ ಕೆಲಸ ಅಲ್ಲಿ ಆಗುವುದಿಲ್ಲ. ಅದನ್ನು ಯಾರಿಗೆ ಕೊಟ್ಟಿದ್ದಾರೆಯೋ ಗೊತ್ತಿಲ್ಲ. ಅಲ್ಲಿ ಜನರು ಬೆಳಿಗ್ಗೆಯಿಂದ ಸಂಜೆಯವರೆಗೆ ಕ್ಯೂ ನಿಂತುಕೊಂಡಿರುತ್ತಾರೆ. ಇದನ್ನು ಸರಿಪಡಿಸದೆ ಹೋದರೆ ಕಷ್ಟವಾಗುತ್ತದೆ. ಇವತ್ತಿನದಿವಸ ಎಲ್ಲವನ್ನು online ಮೂಲಕ ಮಾಡುತ್ತೇವೆ ಎನ್ನುತ್ತೀರಿ. Online ಮೂಲಕ ಮಾಡುವುದು ಒಳ್ಳೆಯದು, ಅದು ತಪ್ಪೆಂದು ಹೇಳುವುದಿಲ್ಲ. ಆದರೆ, ಅದಕ್ಕೆ ಬೇಕಾದಂಥ infrastructure ಅನ್ನು ನೀವು ಮಾಡಬೇಕಲ್ಲವೇ? ಈಗ ಹೋಬಳಿ ಮಟ್ಟದವರಿಗೆ ಇದು ಬಂದಿದೆ. ಆ ಹೋಬಳಿ ಕೇಂದ್ರದಲ್ಲಿ ಎಷ್ಟು ಕಂಪ್ಯೂಟರ್‌ಗಳಿವೆ? ನೀವು ಯಾರಿಗೋ ಟೆಂಡರ್ ಕೊಟ್ಟಿದ್ದೀರಿ. ಅವರು ಏನು ಮಾಡುತ್ತಿದ್ದಾರೆ? ಎಂಬುದು ಗೊತ್ತಿಲ್ಲ. ಅವರ ಹತ್ತಿರ ಜನ ಸಾಮಾನ್ಯರು ಇರಲಿ, ನಾವು ಕೇಳಿದರೆ ಬಾಯಿಗೆ ಬಂದಂತೆ ಮಾತನಾಡುತ್ತಾರೆ.

ಶ್ರೀ ಬಿ. ನಾಗೇಂದ್ರ: ಮಾನ್ಯ ಅಧ್ಯಕ್ಷರೆ, ಅಲ್ಲಿ ಒಂದು ದಿನಕ್ಕೆ ಕೇವಲ ಐದಾರು ಮಾತ್ರ ಮಾಡುತ್ತಾರೆ.

ಶ್ರೀ ಕೆ.ಜಿ. ಬೋಪಯ್ಯ: ಆಧಾರ್ ಕಾರ್ಡ್ ಮಾಡಿಸಲು ಹೋದರೆ ನಾಲ್ಕರಿಂದ ಐದು ಆಧಾರ್ ಕಾರ್ಡ್ ಅನ್ನು ಬಹಳ ಕಷ್ಟದಲ್ಲಿ ಮಾಡುತ್ತಾರೆ. ಉಳಿದವೆಲ್ಲವೂ ಹಾಗೆಯೇ ಉಳಿದುಕೊಂಡಿರುತ್ತವೆ. ತಮಗೆ ಗೊತ್ತಿರುವ ಹಾಗೆ ಮಲೆನಾಡು ಭಾಗದಲ್ಲಿ ಕರೆಂಟ್ ಹೋಗುತ್ತದೆ. ಇದರಿಂದ ಅಲ್ಲಿ ಕಾಯ್ದು

ಕುಳಿತುಕೊಳ್ಳುವವನ ಸಂಬಳ ಮತ್ತು ಟೈಂ ಎಲ್ಲವೂ ವೇಸ್ಟ್ ಆಗುತ್ತದೆ. ಇದು ಅಲ್ಲಿ ನಡೆಯುತ್ತಿರುವ ಪರಿಸ್ಥಿತಿ ಆಗಿದೆ. ತಾಲ್ಲೂಕು ಮತ್ತು ಹೋಬಳಿ ಕಛೇರಿಗಳಲ್ಲಿ ಇದನ್ನು ಸರಿಮಾಡುವಂಥ ಕೆಲಸ ಆಗದೆ ಹೋದರೆ ಬಹುಶಃ ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ಜಾರಿ ಮಾಡುವಂಥ ಅಂದರೆ, ಜನರಿಗೆ ತಲುಪಿಸುವಂಥ ಕೆಲಸ ಈ ಇಲಾಖೆಯಿಂದ ಆಗುತ್ತಿಲ್ಲ. ಇವತ್ತಿನದಿವಸ ಜನರು ಕಂದಾಯ ಇಲಾಖೆ ಮೇಲೆ ಆಕ್ರೋಶ ವ್ಯಕ್ತಪಡಿಸುತ್ತಾರೆ. ಇದನ್ನು ಸರಿಮಾಡತಕ್ಕಂಥ ಕೆಲಸಗಳು ಆಗುತ್ತಿಲ್ಲ. ಮೊನ್ನೆ incharge Secretary ಬಗ್ಗೆ ಹೇಳಿದ್ದೇನೆ. ಮತ್ತೆ ಪುನಃ ಪುನಃ ಹೇಳುವುದಕ್ಕೆ ಹೋಗುವುದಿಲ್ಲ. ಅವರು ಅಲ್ಲಿಗೆ ಬರುತ್ತಾರಷ್ಟೆ, ಅಲ್ಲಿ ಯಾವುದೇ ರಿವ್ಯೂವನ್ನು ಮಾಡುವುದಿಲ್ಲ. ಅವರು ಒಂದು ಶುಕ್ರವಾರ ಆರಾಮಾಗಿ ಬಂದು ವಾಪಸ್ಸು ಹೋಗುತ್ತಾರೆ. ಅವರು ರಿವ್ಯೂ ಕೆಲಸವನ್ನು ಮಾಡುವುದಿಲ್ಲ. ಇದು ಅಲ್ಲಿರುವ ವಾಸ್ತವಾಂಶವಾಗಿದೆ. ಬಹುಶಃ ತಾಲ್ಲೂಕು ಮತ್ತು ಹೋಬಳಿ ಕಛೇರಿಗಳನ್ನು ಸರಿಮಾಡುವಂಥ ಕೆಲಸ ತತ್‌ಕ್ಷಣ ಆದರೆ ಬಹುಶಃ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಇಲ್ಲದಿದ್ದರೆ ಬೆಳಿಗ್ಗೆ ಎದ್ದರೆ ಶಾಪ ಹಾಕುತ್ತಾರೆ. ಶಾಪ ನಿಮಗೆ ಅಷ್ಟೇ ಅಲ್ಲದೆ ನಮ್ಮನ್ನೂ ಸೇರಿಸಿ ಬೈಯುತ್ತಾರೆ. ಕೆಟ್ಟ ಕೆಟ್ಟದಾಗಿ ನಾವು ಬೈಸಿಕೊಳ್ಳುವಂಥ ಕೆಲಸ ದಿನನಿತ್ಯ ಆಗುತ್ತಿದೆ. ಇದನ್ನು ಸರಿಮಾಡುವಂಥದಕ್ಕೆ ಏನಾದರೂ ಮಾಡಬೇಕು ಎಂದು ಹೇಳುತ್ತೇನೆ. ಇವತ್ತಿನದಿವಸ ತಾಲ್ಲೂಕು ಕಛೇರಿಗಳಲ್ಲಿ ನಿಮ್ಮ ತಹಸೀಲ್ದಾರ್‌ಗಳು ಎಲ್ಲಿ ಇರುತ್ತಾರೆಂದು ಗೊತ್ತಿಲ್ಲ. ಎಲ್ಲಿಗೆ ಹೋಗಿದ್ದಾರೆಂದು ಕೇಳಿದರೆ spot visit ಗೆ ಹೋಗಿದ್ದಾರೆಂದು ಹೇಳುತ್ತಾರೆ. ಅಲ್ಲಿಗೆ ಹೋಗಿ visit ಮಾಡಿರುವುದಿಲ್ಲ. ಆದರೆ ಎಲ್ಲಿ ಇರುತ್ತಾರೆಂದು ಗೊತ್ತಿರುವುದಿಲ್ಲ. ಅವರು ಜನರ ಕೈಗೆ ಸಿಗುವುದಿಲ್ಲ. ಈ ವ್ಯವಸ್ಥೆಯನ್ನು ತತಕ್ಷಣದಲ್ಲಿ ಸರಿಮಾಡತಕ್ಕಂಥ ಕೆಲಸ ಆಗಬೇಕು. ಕಛೇರಿಗಳಲ್ಲಿ ಬೇರೆ ಬೇರೆ ಹುದ್ದೆಗಳು ಸಾಕಷ್ಟು ಖಾಲಿ ಇವೆ. 47 ಆಕ್ಟ್ ಅನ್ನು ಅನುಷ್ಠಾನ ಮಾಡುವ ಜವಾಬ್ದಾರಿ ಇದೆ, ಹಾಗೆಯೇ 49 ಸೌಲಭ್ಯಗಳನ್ನು ಕೊಡಬೇಕಾಗಿದೆ. ಆದರೆ ಬೇಕಾಗಿರುವ infrastructure ಇಲ್ಲದೆ ಹೋದರೆ ಇದು ಹೇಗೆ ಆಗುತ್ತದೆ? ಕಂದಾಯ ಇಲಾಖೆ ಮಾತ್ರ ಇಲಾಖೆ ಅಲ್ಲ ಅದೊಂದು step mother ಎಂದು ಮೊನ್ನೆದಿವಸ ಮಾನ್ಯ ಸಭಾಧ್ಯಕ್ಷರು

ಹೇಳಿದರು. ಆ ಇಲಾಖೆ ಪರಿಸ್ಥಿತಿ step mother ಗಿಂತ ಕೆಳಕ್ಕೆ ಹೋಗಿದೆ. Step mother ಗೆ ಒಂದೊಂದು ಸಾರಿ ಪ್ರೀತಿ ಬರುತ್ತದೆ. ಆದರೆ ಈ ಇಲಾಖೆಗೆ ಅದೂ ಸಹ ಈಗ ಇಲ್ಲ. ಆ ಪರಿಸ್ಥಿತಿ ಇವತ್ತಿನದಿವಸ ಆಗಿದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆ mother department ಆಗಿದೆ. ತಾವು practical ಆಗಿ ಅರ್ಥ ಮಾಡಿಕೊಳ್ಳಬೇಕು. ಎಲ್ಲಾ ಇಲಾಖೆಯ ಒತ್ತಡಗಳು ಕೂಡ ಅದರ ಮೇಲೆ ಬೀಳುತ್ತವೆ. ಉದಾಹರಣೆಗೆ ಅನ್ನಭಾಗ್ಯ ಯೋಜನೆ ಇರಬಹುದು. ಸಂಪೂರ್ಣವಾದ ಎಲ್ಲಾ ಜವಾಬ್ದಾರಿ ಇಲಾಖೆ ಮೇಲೆ ಇದೆ. ಮೊನ್ನೆ ದಿವಸ ಗ್ರಾಮ ಪಂಚಾಯಿತಿಗೆ ಚುನಾವಣೆ ನಡೆಸಿದ್ದೇವೆ. ಈ ರೀತಿಯಾದ ಚುನಾವಣೆ ಬಂದಾಗ ಮಾತ್ರ ಇಲಾಖೆ ಕೆಲಸ ನಡೆಸುವುದಕ್ಕೆ ಆಗುತ್ತದೆಯೇ? ಚುನಾವಣೆ ಕಾರ್ಯಕ್ಕೆ ಇಲಾಖೆಯ ಸಿಬ್ಬಂದಿಗಳನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು. ಅಂದರೆ, ಚುನಾವಣೆಗೆ ನೋಟಿಫಿಕೇಷನ್ ಮಾಡಿ, ಚುನಾವಣೆ ನಡೆದು, ಫಲಿತಾಂಶ ಬರುವವರೆಗೆ ನಮ್ಮ ಇಲಾಖೆಯಲ್ಲಿ ಕೆಲಸಗಳು ನಡೆಯುವುದಿಲ್ಲ. ಆದ್ದರಿಂದ ಎಷ್ಟು pressure ಇದೆ ಎಂಬುದನ್ನು ಸಹ ನಾವು ನೋಡಬೇಕಾಗುತ್ತದೆ. ಕಂದಾಯ ಇಲಾಖೆ mother department ಎಂದು ಹೇಳಿದ್ದೀರಿ. ಆದರೆ ಇದಕ್ಕೆ ಬೇರೆ ಇಲಾಖೆ ಜೊತೆಗೆ ಲಿಂಕ್ ಇದೆ. ನಾವು ನಿರೀಕ್ಷೆ ಮಾಡಿದ ಮಟ್ಟಕ್ಕೆ ಬಹಳ sincere ಆಗಿ ಕೆಲಸ ಮಾಡುತ್ತಿದ್ದೇವೆಂದು ಹೇಳುತ್ತಿಲ್ಲ. ಕೆಲಸ ಮಾಡುವಂಥವು ಸಹ ಇದೆ. ಎಲ್ಲಾ ತಹಸೀಲ್ದಾರ್ ಹೊರಗಡೆ ಇರುವುದಿಲ್ಲ. ಕೆಲವು ತಹಸೀಲ್ದಾರ್ ಬಹಳ sincere ಆಗಿ ಕೆಲಸ ಮಾಡುತ್ತಾರೆ. ನಿಮ್ಮ ಇಲಾಖೆ ಸರಿಪಡಿಸಿದರೆ ಆಡಳಿತವೆಲ್ಲವೂ ಸರಿಹೋಗುತ್ತದೆ ಎಂಬ ದೃಷ್ಟಿಯಿಂದ ತಾವು ಹೇಳಿದ್ದೀರಿ. ಸಕಾಲ ಮತ್ತು ಅಟಲ್‌ಜಿ ಸ್ನೇಹ ಕೇಂದ್ರದಲ್ಲಿ ಏನಾಗುತ್ತಿದೆ ಎಂದು ಸಹ ಹೇಳಿದ್ದೀರಿ. ಇದು ನಮ್ಮ ಗಮನಕ್ಕೂ ಸಹ ಬಂದಿದೆ. ಎಲ್ಲೆಲ್ಲಿ ಸಾಧ್ಯವೋ, ಅಲ್ಲೆಲ್ಲಾ ಸರಿಪಡಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಎಲ್ಲಾ ಅಟಲ್‌ಜಿ ಸ್ನೇಹ ಕೇಂದ್ರಗಳು ಮತ್ತು ಸಕಾಲಕ್ಕೆ ಸಂಬಂಧಪಟ್ಟಂತೆ ಅಲ್ಲಿರುವ ಅಧಿಕಾರಿಗಳು ಎಲ್ಲರೂ ಕೂಡ ಭ್ರಷ್ಟರು ಮತ್ತು ಬಹಳ ತಾತ್ಸಾರ ಅನ್ನುವುದಲ್ಲ. ಎಲ್ಲಿ ಏನು

ಕ್ರಮ ತೆಗೆದುಕೊಳ್ಳಬೇಕಾಗಿದೆಯೋ ಅದನ್ನು ಕೂಡ ನಾವು ಮಾಡುತ್ತಿದ್ದೇವೆ. ನಮ್ಮ ವ್ಯವಸ್ಥೆಯಲ್ಲಿ ಬಂದಿರತಕ್ಕಂಥದರಲ್ಲಿ ನಾವು ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಬೇಕಾಗಿದೆ. ಅದರ ಬಗ್ಗೆ ಕಳೆದ ಎರಡು ವರ್ಷಗಳಿಂದ ಮಾಡಿಕೊಂಡು ಬಂದಿದ್ದೇವೆ. ಸಕಾಲ ಯೋಜನೆಯನ್ನು ನೀವೇ ತೆಗೆದುಕೊಂಡು ಬಂದಿದ್ದೀರಿ. ಇದು ಬಹಳ ಒಳ್ಳೆಯದಾಗುತ್ತದೆ ಎಂದು ನಾವೆಲ್ಲರೂ ಅದನ್ನು ಸ್ವಾಗತ ಮತ್ತು ಮೆಚ್ಚುಗೆ ಕೂಡ ಮಾಡಿದ್ದೆವು. ಈಗ ಹೋಬಳಿ ಲೆವೆಲ್‌ನಲ್ಲಿ ಅಟಲ್‌ಜಿ ಸ್ನೇಹ ಕೇಂದ್ರವನ್ನು ಎಲ್ಲಾ ಕಡೆ ತರುತ್ತಿದ್ದೇವೆ. Practical ಆಗಿ ಕೆಲವು ತೊಂದರೆಗಳಿವೆ. ಅವೆಲ್ಲವನ್ನೂ ಸರಿಪಡಿಸತಕ್ಕಂಥ ಕೆಲಸ ಮಾಡುತ್ತೇವೆ. ನೀವು ಸಾಕಷ್ಟು ಸಲಹೆಗಳನ್ನು ಕೊಡಬೇಕಾಗಿದೆ. ಏಕೆಂದರೆ, ತಾವು ಕಳೆದ ಸಾರಿ ತುಂಬಾ ಚೆನ್ನಾಗಿ ಮಾತನಾಡಿದ್ದೀರಿ. Either this side or that side, ಅಂದರೆ, ಆಡಳಿತ ಪಕ್ಷ ಅಥವಾ ವಿರೋಧ ಪಕ್ಷ ಇರಲಿ, ತಾವುಗಳು ಇಲ್ಲಿ ಕೊಟ್ಟಂಥ ಸಲಹೆಗಳು, ಆಯಾ ಇಲಾಖೆಗಳು ಒಂದು introspection ಮಾಡಿಕೊಳ್ಳಬೇಕೆಂದು ನಾನು ಹೇಳಿದೆ. ಒಂದು ಆತ್ಮಾವಲೋಕನ ಮಾಡಿ ಒಳ್ಳೆಯ ಆಡಳಿತವನ್ನು ಜನರ ನಿರೀಕ್ಷೆಗೆ ತಕ್ಕಂತೆ ಕೊಡಬೇಕೆಂದು ನಾನು ಕಳೆದ ಸಾರಿ ಸ್ಪಷ್ಟವಾಗಿ ಹೇಳಿದ್ದೇನೆ. ಆದರೆ, ನೀವು ಮಾತನಾಡುವುದಕ್ಕೆ ಸಮಯ ಕಡಿಮೆ ಇದೆ. ಮಾನ್ಯ ಸಭಾಧ್ಯಕ್ಷರು ಇರತಕ್ಕಂಥ ಸಮಯದಲ್ಲಿ ತಮಗೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಯಾವ್ಯಾವ ಇಲಾಖೆಗಳ ಬಗ್ಗೆ ಆಸಕ್ತಿ ಇದೆಯೋ, ಅದರ ಬಗ್ಗೆ ಮಾತನಾಡಿ. ಯಾರೂ ಸಹ ಕಂದಾಯ ಇಲಾಖೆ ಬಗ್ಗೆ ಹೆಚ್ಚು ಮಾತನಾಡಿರಲಿಲ್ಲ. ನಾನು ಇಲ್ಲಿ ಕುಳಿತುಕೊಂಡಿದ್ದೇನೆ. ತಾವು ಹೇಳುವ ಎಲ್ಲಾ ವಿಚಾರವನ್ನು ನಾನು ಕೇಳಿ, ಸಾಧ್ಯವಾದಷ್ಟೂ ಅದನ್ನು ಸುಧಾರಣೆ ಮಾಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ. ತಾವು ಚರ್ಚೆಯನ್ನು ಮುಂದುವರೆಸಿ, ಸಲಹೆಗಳನ್ನು ಕೊಡಿ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ನಾನು ಸಲಹೆಗಳನ್ನು ಮಾತ್ರ ಕೊಟ್ಟಿದ್ದೇನೆ ಹೊರತು ಬೇಡದ ಟೀಕೆಗಳನ್ನು ನಾನು ಮಾಡಿಲ್ಲ. ಇವತ್ತಿನದಿವಸ ಯಾವುದಾದರೂ ಚುನಾವಣೆ ಬಂದಾಗ ಅದನ್ನು ನೀವೇ ನಡೆಸುವುದು ಅದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಆದರೆ, ನಿಮ್ಮಲ್ಲಿ

ಎಲ್ಲಾ ಕೆಲಸಗಳು ನಿಂತು ಹೋಗುತ್ತವೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಉಳಿದ ಸಮಯದಲ್ಲಿ ಜನರಿಗೆ ಸ್ಪಂದನ ಮಾಡತಕ್ಕಂಥ ಕೆಲಸ ಈ ಇಲಾಖೆಯಿಂದ ಆದರೆ ಮಾತ್ರ ಎಲ್ಲವೂ ಸರಿಯಾಗುತ್ತದೆ ಎಂಬುದು ನನ್ನ ಸಲಹೆ ಆಗಿದೆ. ಇಲ್ಲಿ ಏನಾಗಿದೆ ಎಂದರೆ infrastructure ಅನ್ನು ಜಾಸ್ತಿ ಮಾಡಬೇಕು. ಅಂದರೆ, computer ಜಾಸ್ತಿ ಕೊಡಬೇಕು. ಒಂದು ಕೇಂದ್ರದಲ್ಲಿ ಒಂದು ಕಂಪ್ಯೂಟರ್ ಮೂಲಕ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಹೆಚ್ಚು ಕಂಪ್ಯೂಟರ್ ಕೊಡಬೇಕೆಂದು ಈ ಬಗ್ಗೆ ನಾನು ಸಲಹೆ ಕೊಟ್ಟಿದ್ದೇನೆ ಹಾಗೆಯೇ, ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ವಿಶೇಷವಾದಂಥ ಕಾಳಜಿ ವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ಇವತ್ತು ಜನರ ಭಾವನೆಯು ಹೇಗಿದೆ ಎಂದರೆ ನಮ್ಮ ಜಿಲ್ಲೆಯಲ್ಲಿ ಹೊರಗಡೆಯಿಂದ ಬಂದವರು property ಅನ್ನು purchase ಮಾಡುತ್ತಾರೆ. ಅವರುಗಳ RTC ಕೇವಲ ಒಂದು ತಿಂಗಳಲ್ಲಿ ಮಾಡಿಕೊಡುತ್ತಾರೆ. ಈ family ಒಳಗೆ ಅವರುಗಳು ಜಮೀನಿಗೆ ಮಹಜರ್ ಮಾಡಿ RTC ಮಾಡಿಕೊಡಿ ಎಂದು ಹೇಳಿ ಏನಾದರೂ ಅರ್ಜಿ ಕೊಟ್ಟರೆ, ಎರಡು ವರ್ಷಗಳಾದರೂ ಮಾಡಿಕೊಡುವುದಿಲ್ಲ. ಇಲ್ಲಿ brokerಗಳ ಹಾವಳಿ ಜಾಸ್ತಿಯಾಗಿದೆ. ತಹಶೀಲ್ದಾರ್‌ಗಳ ಕಛೇರಿ after 05.00 p.m. ಬಹಳ active ಆಗುತ್ತದೆ. ನೀವು ಬೇಕಾದರೆ ಒಂದು surprise inspection ಮಾಡಿ. ನೀವು ತಾಲ್ಲೂಕು ಕಛೇರಿಗಳಿಗೆ after 5 O' clock ಹೋದರೆ ಎಲ್ಲವೂ ಕಾಣುತ್ತದೆ. ಇದನ್ನು ಸರಿಮಾಡಬೇಕೆಂದು ನನ್ನ ಕಳಕಳಿ ಇದೆ. ಇನ್ನೊಂದು ವಿಷಯದ ಬಗ್ಗೆ ನಾನು ಆಗಾಗ್ಗೆ ಹೇಳುತ್ತಿದ್ದೇನೆ. ಅದೇನೆಂದರೆ, ಈಗಾಗಲೇ ಜಮ್ಮಾ ಬಾಣೆಯದು ತಿದ್ದುಪಡಿಯಾಗಿದೆ. ಆ ತಿದ್ದುಪಡಿಯಾದ ಮೇಲೆ ಎಲ್ಲವನ್ನೂ ಕಂದಾಯಕ್ಕೆ ಒಳಪಡಿಸಬೇಕೆಂದು ಇದೆ. ಇದನ್ನು suo-moto ತಹಶೀಲ್ದಾರ್‌ರವರೇ ಮಾಡಬೇಕು. ಈ ಅಧಿಕಾರಿಗಳು ಹೇಗೆ ಇದ್ದಾರೆಂದರೆ ಆ ಬಗ್ಗೆ clarificationಗೆ ಬರೆಯುತ್ತಾರೆ. ಇಡೀ ವಿಧಾನಸಭೆಯಲ್ಲಿ ಅವಿರೋಧವಾಗಿ ಎಲ್ಲರ ಸಹಕಾರವನ್ನು ಪಡೆದು ಕಂದಾಯಕ್ಕೆ ಒಳಪಡಿಸಬೇಕೆಂಬ ಬಗ್ಗೆ ತಿದ್ದುಪಡಿಯನ್ನು ಮಾಡಿದ್ದೇವೆ, ಈಗಾಗಲೇ 4 ವರ್ಷಗಳಾಗಿದೆ. ಆ ಬಗ್ಗೆ

ಒಪ್ಪಿಗೆಯನ್ನು ಪಡೆಯುವ ಸಂಬಂಧ ರಾಷ್ಟ್ರಪತಿಯವರಿಗೆ ಹೋಗಿ ಅದು ಬಂದಿದೆ. ಅದು ಬಂದ ಮೇಲೆ ಇವತ್ತಿನವರೆಗೂ ಅಧಿಕಾರಿಗಳು ಮಾಡುತ್ತಿಲ್ಲ ಏಕೆ? ಸುಮ್ಮನೆ ಇವರು clarification ಗಾಗಿ ಬರೆಯುತ್ತಾರೆ. ಈ ವಿಧಾನಸಭೆ ತಿದ್ದುಪಡಿ ಮಾಡಿ ಕಳುಹಿಸಿದರೆ, ಅದನ್ನು ಜಾರಿ ಮಾಡಬೇಕಾಗಿರುವುದು ಅವರ ಕರ್ತವ್ಯವಾಗಿದೆ. ಜಿಲ್ಲಾಧಿಕಾರಿಗಳು ಅಲ್ಲಿ ಒಂದು clarification ಬರೆಯುತ್ತಾರೆ. ಇಲ್ಲಿರುವಂತಹ ಅಧಿಕಾರಿಗಳು ಈ ಬಗ್ಗೆ ಏನೂ ಉತ್ತರವನ್ನು ಕೊಡುವುದಿಲ್ಲ. ತಾವು ಯಾರೂ ಕೂಡ ಆ ಬಗ್ಗೆ ನೋಡುವುದೂ ಸಹ ಇಲ್ಲ. ಇದು ಅವ್ಯವಸ್ಥೆಯಾಗಿರುವುದಕ್ಕೆ ಒಂದು ಉದಾಹರಣೆಯಾಗಿದೆ. ಇಂತಹದ್ದರ ಬಗ್ಗೆ ಹೇಳುತ್ತಲೇ ಹೋದರೆ ನಾನು ಎಷ್ಟೋ ಹೇಳಬೇಕಾಗುತ್ತದೆ. ಇಂತಹವುಗಳನ್ನು ಸರಿಮಾಡಬೇಕಾಗಿದೆ. ಜನರ ಪರ ಆಡಳಿತ, ದಕ್ಷ ಆಡಳಿತ ಎಂದು ತಾವು ಘೋಷಣೆಯನ್ನು ಮಾಡಿಕೊಂಡಿದ್ದೀರಿ. ಇದೆಲ್ಲ ಆದರೆ ಮಾತ್ರ ಅದು ಸಾಧ್ಯವಾಗುತ್ತದೆ.

ಅಧ್ಯಕ್ಷರು: ಜಮ್ಮಾ ಬಾಣೆ Section 79 ಅಡಿಯಲ್ಲಿ ಬರುತ್ತದೆ ತಾನೇ?

ಶ್ರೀ ಕೆ.ಜಿ. ಬೋಪಯ್ಯ: Section 80ಗೆ ನಾವು assessment ಬಗ್ಗೆ amendment ಮಾಡಿದ್ದೇವೆ.

ಅಧ್ಯಕ್ಷರು: ಅದರ ಪ್ರಕಾರ ಹಿಂದೆ ಅದು full assessment ಇರಲಿಲ್ಲ.

ಶ್ರೀ ಕೆ.ಜಿ. ಬೋಪಯ್ಯ: Full assessment ಇರಲಿಲ್ಲ.

ಅಧ್ಯಕ್ಷರು: ಈ ಹಿಂದೆ assessment ಇದೆಯಲ್ಲಾ. ಸೊಪ್ಪಿನಬೆಟ್ಟ ಇದಕ್ಕೆಲ್ಲಾ ಇದೆಯಲ್ಲಾ.

ಶ್ರೀ ಕೆ.ಜಿ. ಬೋಪಯ್ಯ: ಜಮ್ಮಾ ಬಾಣೆ ಇದಕ್ಕೆ ಇಲ್ಲಿಯೇ ತಿದ್ದುಪಡಿಯಾಯಿತು. ಅದಕ್ಕೆ assessment ಹಾಕಬೇಕು. Occupant ಅನ್ನುವುದನ್ನು Section 220ಯಲ್ಲಿ ತಿದ್ದುಪಡಿ ಮಾಡಿ ಕಳುಹಿಸಿದ್ದೇವೆ. ಸೊಪ್ಪಿನಬೆಟ್ಟ ಅದು different issue ಆಗಿದೆ. ಈಗ ಅವರು ಹೇಗೆ ಮಾಡುತ್ತಿದ್ದಾರೆಂದರೆ, suppose ನಾವು cultivation ಮಾಡಿದರೆ ಆಮೇಲೆ

ಅವರು ಬಂದು ಅದನ್ನು inspection ಮಾಡಿ, ಆಮೇಲೆ ಕಂದಾಯ ಎಂದು ಮಾಡುತ್ತಾರೆ. ನೀವು ಇದನ್ನು direct ಆಗಿ ಮಾಡಿ ಎಂದು ಒಂದು ತಿದ್ದುಪಡಿಯನ್ನು ಮಾಡಿ ಕಳುಹಿಸಿದ್ದೇವೆ. ಆದರೆ ಅದು ಆಗುತ್ತಲೇ ಇಲ್ಲ. ಚಕ್ಕರೆ ಪೂವಯ್ಯನವರ ಕೇಸಿನಲ್ಲಿ ಒಂದು ಆರ್ಡರ್ ಆಗಿದೆ. ಅದನ್ನೇ ಹಿಡಿದುಕೊಂಡು ಈಗಲೂ ಸಹ ಅದನ್ನೇ ಮಾಡುತ್ತಿದ್ದಾರೆ. ಇವರು ಹೇಗೆ inspection ಮಾಡುತ್ತಾರೆಂದರೆ ಒಂದು Village Accountatnt ಒಂದು ಮಹಜರ್ ಮಾಡುತ್ತಾರೆ. Revenue Inspector, Tahsildar, A.C.ಯವರು ಮಹಜರ್ ಮಾಡಿ ನಂತರ ಈ ಬಗ್ಗೆ ಕಂದಾಯವನ್ನು fix ಮಾಡುತ್ತಾರೆ. ಇವರೆಲ್ಲರೂ ಒಂದು ಸಾರಿ ಒಂದು ವಿಲೇಜಿಗೆ ಒಟ್ಟಿಗೆ ಹೋಗಿ ಒಂದೇ ಸಲ inspection ಮಾಡಿ ಬರಬಹುದಲ್ಲಾ? ಈ ಕೆಲಸವನ್ನು ಮಾಡಲೇಬೇಕೆಂದು ಇದ್ದರೆ ಮಾಡಬಹುದು. ಆದರೆ ಇಲ್ಲಿ ಒಬ್ಬೊಬ್ಬರು ಒಂದೊಂದು ದಿವಸ ಮಾಡಿ ವರ್ಷಗಟ್ಟಲೆ ಎಲ್ಲರನ್ನೂ ಕಾಯಿಸುತ್ತಾರೆ. ಇದು ಆಗಬಾರದು ಎಂದು ನನ್ನ ವಿನಂತಿ ಇದೆ. ಬಹುಶಃ ಈ ರೀತಿ ಮಾಡಿದಾಗ ಮಾತ್ರ ಕಂದಾಯ ಇಲಾಖೆಯು ಚುರುಕಾಗಿ ಕೆಲಸ ಮಾಡುತ್ತದೆ. ಜನರ ಪರವಾಗಿ ನಡೆದುಕೊಳ್ಳುತ್ತದೆ ಎಂದು ಹೇಳಬಹುದು. ಆಗ ಎಲ್ಲಾ ಇಲಾಖೆಗಳ ಕೆಲಸಗಳು ಆಗುತ್ತವೆ. ಆ Section 11(a) 11(b) ಗೆ ಸಂಬಂಧಿಸಿದಂತೆ ನಾನು ವಿನಂತಿ ಮಾಡುತ್ತೇನೆ. ಹಿಂದೆ ಮಲೆನಾಡಿಗೆ ಅದು not applicable ಎಂದು ಇತ್ತು. ಒಂದು Farm House ಕಟ್ಟಿಕೊಳ್ಳುವುದಕ್ಕೆ permission ಅನ್ನು ಬರೆದುಕೊಡುತ್ತಿದ್ದರು. ಎಕರೆಗಟ್ಟಲೆ conversion, ಇನ್ನೊಂದು ಮಾಡುವುದಕ್ಕೆ restricition ಮಾಡಿ, ಅದನ್ನು ನಾವು ಕೇಳುವುದೇ ಇಲ್ಲ. ಆದರೆ, ತೋಟದ ಒಳಗಡೆ ಮನೆ, ಬೇರೆ ಬೇರೆ ಮನೆಗಳನ್ನು ಕಟ್ಟುವ ಸಂಬಂಧ conversion ಕೇಳಿದರೆ ಅದು ಹೇಗೆ ಸಾಧ್ಯವಾಗುತ್ತದೆ? ದಯವಿಟ್ಟು ಅದನ್ನು drop ಮಾಡಿ, ಆ Farm House ಕಟ್ಟಿಕೊಳ್ಳುವುದಕ್ಕೆ ಅಥವಾ ಆಶ್ರಯ ಮನೆಗಳಿಗೆ conversion ಕೇಳಬೇಡಿ. ಇದ್ಯಾವುದೂ ಕೂಡ ಆಗುವುದಿಲ್ಲ. ಈ ಹಿಂದೆ ಇತ್ತು ಅದನ್ನು ಏತಕ್ಕಾಗಿ withdraw ಮಾಡಿದರೋ ಗೊತ್ತಿಲ್ಲ. ಎಲ್ಲವೂ computerized ಆಗಬೇಕೆಂದು ಹೇಳಿ ಬಡವರಿಗೆ ಏತಕ್ಕಾಗಿ ತೊಂದರೆ

ಮಾಡುತ್ತೀರಿ? ಈ ಹಿಂದೆ ಕೈಯಲ್ಲಿಯೇ ಬರೆದುಕೊಡುತ್ತಿದ್ದರು. ಈಗ ಅದು ಎಲ್ಲಿಯೂ ಮಾಡುತ್ತಿಲ್ಲ. ಮನೆಗಳನ್ನು ಸಹ ಕಟ್ಟುವುದಕ್ಕಾಗುವುದಿಲ್ಲ. ಎಲ್ಲದಕ್ಕೂ ಈ ರೀತಿಯ ತೊಂದರೆಗಳಾಗುತ್ತಿದೆ. ಇದು ಆಗದ ಹಾಗೆ ಪಾರದರ್ಶಕವಾಗಿ ಇರಬೇಕೆಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: 11(e) sketch ತೆಗೆದುಕೊಳ್ಳಬೇಕಾದರೆ ಎಲ್ಲರಿಗೂ ಎಷ್ಟು ಕಷ್ಟವಿದೆ ಎಂದರೆ ಸುಮಾರು 150 ಜನರು 11(e) sketch ಸಂಬಂಧ apply ಮಾಡಿದರೆ, ಆ 150 ಜನರದು ಮುಗಿಯುವವರೆಗೂ ಮತ್ತೆ ಹೊಸದಾಗಿ ಯಾರಿಗೂ ಕೊಡುವುದಿಲ್ಲ ಎಂಬ ಕಾನೂನು ಮಾಡಿದರೆ ಹೇಗೆ?

ಅವನದು ಬರುವವರೆಗೆ ಆತನದು ಮಧ್ಯೆದಲ್ಲಿ ರೆಕಾರ್ಡ್ ಸಿಗುವುದಿಲ್ಲ. ರೆಕಾರ್ಡ್ಸ್ ಎಲ್ಲೋ ತಪ್ಪಿ ಹೋಗಿರುತ್ತದೆ. ಆತ ರೆಕಾರ್ಡ್ಸ್ ಅನ್ನು ಒದಗಿಸುವುದಕ್ಕೆ ಆಗುವುದಿಲ್ಲ. ಅವನದು ಪೂರ್ತಿ ಆಗದ ಹೊರತು ಹಿಂದಿನವನದು ತೆಗೆದುಕೊಳ್ಳಬಾರದೆಂದು ಕಾನೂನು ಮಾಡಿದರೆ process ಹೇಗೆ ಅಗುವುದು? ತಾವು ಈಗ ಪ್ರತಿಯೊಂದಕ್ಕೂ 11(ಇ) ಸ್ಕೆಚ್ ಅನ್ನು ಕೇಳುತ್ತಿದ್ದೀರಿ.

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, ಈಗ ಅವರು ಹೊಸ ಹೊಸ scheme ಗಳನ್ನು ತಂದಿದ್ದಾರೆ. ಅದು ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿ ಕಾರ್ಯಗತ ಆಗಿದೆ, ಅದು ಏನಾಗಬೇಕು ಎಂಬುದರ ಬಗ್ಗೆ ಪ್ರತ್ಯೇಕವಾಗಿ ಒಂದು ಚರ್ಚೆ ಮಾಡಿದರೆ ಬಹಳ ಒಳ್ಳೆಯದು. ಸುಮ್ಮನೆ adhocಆಗಿ ಇಲ್ಲಿ ಒಂದು ಮಾತು, ಅಲ್ಲಿ ಒಂದು ಮಾತು ಏಕೆ ಹೇಳುವುದು? ಮಾನ್ಯ ಮಂತ್ರಿಗಳು 11(ಇ) ಸ್ಕೆಚ್ ಬಗ್ಗೆ ಒಂದು ಮೀಟಿಂಗ್ ಅನ್ನು ಕರೆದಿದ್ದರು. ಆ ಮೀಟಿಂಗ್ ಮುಂದಕ್ಕೆ ಹೋಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಕಂದಾಯ ಇಲಾಖೆಯಲ್ಲಿ ಮಾನ್ಯ ಸಚಿವರೆ ತಾವು ಒಳ್ಳೆಯ ಕಾರ್ಯಕ್ರಮಗಳನ್ನು ತಂದಿದ್ದೀರಿ. ಈ ಕಂದಾಯ ಇಲಾಖೆಯಲ್ಲಿ ಯಾರೋ ಮೇಲೆ ಕುಳಿತುಕೊಂಡು ಅಧಿಕಾರಿಗಳು ತಹಶೀಲ್ದಾರರುಗಳಿಗೆ ಬಹಳ ತೊಂದರೆಯನ್ನು ಕೊಡುತ್ತಿದ್ದಾರೆ. ಸುತ್ತಿ ಬಳಸಿ

ಅದೇ ಕಾನೂನು. ಅದಕ್ಕೆ 28 ವ್ಯವಸ್ಥೆ. ಕೇವಲ ತಕರಾರು. ಕಂದಾಯ ಇಲಾಖೆ ಇರುವುದೇ ತಕರಾರು ಹಾಕುವುದಕ್ಕೆ ಎಂಬ ಭಾವನೆ ಗ್ರಾಮೀಣ ಪ್ರದೇಶದ ಜನತೆಯಲ್ಲಿ ಬಂದಿದೆ. ನಾನು ಸುಮ್ಮನೆ ಹೇಳುವುದಿಲ್ಲ. ನಾವು, ದಿನನಿತ್ಯ ನೀನು ಏಕೆ ಇಷ್ಟು ದಿವಸಗಳವರೆಗೂ ಬರುತ್ತೀಯಾ ಎಂದು ಕೇಳಿದರೆ, ಆತ 11(ಇ) ಸ್ಕೆಚ್ ಕೊಟ್ಟು 15 ದಿವಸ ಆಯಿತು, ಒಂದು ತಿಂಗಳು ಆಯಿತು, 11(ಇ) ಸ್ಕೆಚ್ ಅನ್ನು ಕೊಡುವುದಿಲ್ಲವೆಂದು ಹೇಳುತ್ತಾನೆ. ಆತನದು ಒಂದು ಅಥವಾ ಎರಡು ಗುಂಟೆ ಜಮೀನು ಇರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಊರ ಮುಂದೆ ಇರುವ ಒಂದೊಂದು ಎಕರೆ, ಎರೆಡರಡು ಎಕರೆ ಜಮೀನನ್ನು ಮಾರುವುದಕ್ಕೆ ಹೋದರೆ ಯಾರೂ ತೆಗೆದುಕೊಳ್ಳುವುದಿಲ್ಲ. ಬಹಳ ಸಗಟು ಕೇಳುತ್ತಾರೆ. ಅದಕೋಸ್ಕರ ಬಿಡಿಸಿ, ಬಿಡಿಸಿ ಮಾಡಿ 2 ಗುಂಟೆ, 3 ಗುಂಟೆ ಆತನ ಅವಶ್ಯಕತೆಗೆ ತಕ್ಕಂತೆ ಮಾರಿಕೊಂಡು ಹೋಗುತ್ತಾನೆ. ಮಾರಬೇಕಾದರೆ ಪ್ರತಿಯೊಂದಕ್ಕೂ ಒಂದು ಸರ್ವೆ ನಂ.ನಲ್ಲಿ ಆತ 20 ಜನಕ್ಕೆ ಮಾರಿದರೆ, 20 ಜನಕ್ಕೂ ₹. 1,200/- ಗಳನ್ನು ಕಟ್ಟಿ 11(ಇ) ಸ್ಕೆಚ್‌ಅನ್ನು ಮಾಡಿಸಿದರೆ, ತಾವು ಬೇಕಾದರೆ ತಿಳಿದುಕೊಳ್ಳಿ, ಪ್ರತಿಯೊಂದು ಸರ್ವೆ ನಂ.ನಲ್ಲಿ part, part ಗೂ, ಆತ ಯಾವುದು ಮಾರುತ್ತಾನೆ ಅಷ್ಟಕ್ಕೂ 11(ಇ) ಸ್ಕೆಚ್ ಆಗಬೇಕು. ನಾನು ಹಿಡುವಳಿದಾರನದು ಹೇಳುತ್ತಿದ್ದೇನೆ. ಆತನ ಜಮೀನನ್ನು ಆತ ಮಾರಿಕೊಳ್ಳುವುದಕ್ಕೆ ಅವನು ₹. 1,200/- ಗಳನ್ನು ಏಕೆ ಕೊಡಬೇಕು? ಹಳ್ಳಿ ಜನ ಮುಗ್ಧರು. ನಿಜವಾಗಿ ಆ ನಿಂದನೆ, ಕಷ್ಟ ಅನುಭವಿಸಿ, ಸಾಯಂಕಾಲದವರೆಗೆ ತಾಲ್ಲೂಕು ಕಚೇರಿ ಮುಂದೆ ಬಂದು ಅಲೆದು, ಅಲೆದು . . . .

ಅಧ್ಯಕ್ಷರು: ಯಾವುದು ಅದು 11(ಇ) ಸ್ಕೆಚ್, ಅದಕ್ಕೆ ಏನು ಹೇಳುತ್ತಾರೆಂದು ನನಗೂ ಗೊತ್ತಿಲ್ಲ, but ಈಗ ಅದಕ್ಕೆ .. . .

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು): ಮಾನ್ಯ ಗೌಡರೆ, ತಾವು ಮಾತ್ರ ತೊಂದರೆ ಆಗುತ್ತಿದೆ ಎಂದು ಹೇಳುತ್ತಿದ್ದೀರಿ. ನಮಗೆ ನಿಮ್ಮನ್ನು ಬಿಟ್ಟರೆ ಬೇರೆ ರೈತರು ಆಗಲಿ ಯಾರೂ ಕೂಡ ಈ ರೀತಿ ತೊಂದರೆ ಆಗುತ್ತಿದೆ ಎಂದು ಹೇಳಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಸಚಿವರೆ, ನಿಮಗೆ ಹೇಳುವುದಿಲ್ಲ. ನಮಗೆ ಅಲ್ಲಿ ಹೇಳುತ್ತಿದ್ದಾರೆ. ನಿಮಗೆ ಹೇಗೆ ಹೇಳುತ್ತಾರೆ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಮಾನ್ಯ ಸಚಿವರೆ, ಸರ್ವೆ ಮಾಡಿಸಿ.

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್: ನಾವು ಆದೇಶವನ್ನು simplify ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಮಾನ್ಯ ಸಚಿವರೆ, ಈ ಸರ್ವೆ ಬಗ್ಗೆ ನಮ್ಮ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಒಂದು ಆದೇಶವನ್ನು ಹೊರಡಿಸಿದ್ದಾರೆ. ನಿಮ್ಮ Commissioner for Survey Settlement and Land Records ಅವರು ಮೀರಿ ಒಂದು ಆದೇಶ ಮಾಡುತ್ತಿದ್ದಾರೆ. ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಏನು ಆದೇಶ ಮಾಡಿದ್ದಾರೆ, ಅದನ್ನು ಕೊಟ್ಟರೆ ಸಾಕು. ಅದು ಜನರಿಗೆ ಸರಳವಾಗಿದೆ. ನಿಮ್ಮ ಕಮಿಷನರ್ ಬಗ್ಗೆ ಏನು ಹೇಳಬೇಕೆಂದು ಅರ್ಥವಾಗುವುದಿಲ್ಲ. ದಯಮಾಡಿ, ಅದನ್ನು ಅಮೆಂಡ್ ಮಾಡಿ ಜನಗಳಿಗೆ ಅನುಕೂಲವಾಗುವ ಹಾಗೆ ಮಾಡಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ಇದರ ಬಗ್ಗೆ ಯಾರ್‍ಯಾರು ತಲೆಕೆಡಿಸಿಕೊಳ್ಳುತ್ತಾರೋ ಗೊತ್ತಿಲ್ಲ. ಆದರೆ, ನಾನು ಅದರ ಬಗ್ಗೆ ಸ್ವಲ್ಪ ತಲೆ ಕೆಡಿಸಿಕೊಳ್ಳುತ್ತೇನೆ. ನಮಗೆ ಜನರು ಹೇಳಿದ್ದಕ್ಕೆ ನಾವು ಅಲ್ಲಿಗೆ ಹೋಗಿ ಕೇಳುತ್ತೇವೆ. ಪರಿಸ್ಥಿತಿ ಹಾಗೆ ಇದೆ. ತಾಲ್ಲೂಕು ಕಚೇರಿಗಳಲ್ಲಿ ಕೇಳಿದರೆ ಅವರು ತಮ್ಮ ತಲೆ ಮೇಲೆ ಹಾಕಿಕೊಳ್ಳುವುದೇ ಇಲ್ಲ. Village Accountant ನಿಂದ ಹಿಡಿದು R.I ನಿಂದ ಹಿಡಿದು ಇವರು ಯಾರೂ ಅದನ್ನು ತಲೆಗೆ

ಹಾಕಿಕೊಳ್ಳುವುದಿಲ್ಲ. ಅವರು ಮೇಲಿಂದ ಆದೇಶ ಇದೆ, ನಾವು ಮಾಡುತ್ತೇವೆಂದು ಹೇಳುತ್ತಾರೆ.

ಶ್ರೀ ಜೆ.ಆರ್. ಲೋಬೋ (ಮಂಗಳೂರು ನಗರ ದಕ್ಷಿಣ): ಮಾನ್ಯ ಗೌಡರೆ, ಒಂದು ನಿಮಿಷ. 11(ಇ) ಸ್ಕೆಚ್ Agricultural Lands ಗೆ ಬೇಕಾಗಿರುವುದು, ಅದರ registration ಮಾಡುವ ಮೊದಲು ಅದನ್ನು insist ಮಾಡಿದ್ದಾರೆ. ಇದರಲ್ಲಿ ಬಂದಿರುವ ಸಮಸ್ಯೆ ಏನೆಂದರೆ. . . .

ಅಧ್ಯಕ್ಷರು: 11(ಇ) ಸ್ಕೆಚ್ ಅನ್ನು ಯಾರು ತಯಾರು ಮಾಡಬೇಕು?

ಶ್ರೀ ಜೆ.ಆರ್. ಲೋಬೋ: ಸರ್ವೇಯರ್ ತಯಾರು ಮಾಡಿ ಕೊಡುತ್ತಾರೆ.

ಶ್ರೀ ಸಿ.ಎನ್. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಸರ್ವೇಯರ್ ಮಾಡಿಕೊಡಬೇಕು. ಮಾನ್ಯ ಲೋಬೋರವರೆ, ಅದು ದುರಸ್ತಿ ಆಗಿರಬೇಕೆಂದು ಸಹ ಹೇಳಿ.

ಅಧ್ಯಕ್ಷರು: ಮಾನ್ಯ ಬಾಲಕೃಷ್ಣರವರೆ, ಲೋಬೋರವರು ಮಾತನಾಡುತ್ತಾರೆ.

ಶ್ರೀ ಜೆ.ಆರ್. ಲೋಬೋ: ಮಾನ್ಯ ಅಧ್ಯಕ್ಷರೆ, Registration ಮಾಡುವ ಮೊದಲು ಸರ್ವೇಯರ್ ಅದನ್ನು ಸರ್ವೆ ಮಾಡಿ ಕೊಡಬೇಕು. ಹಿಂದೆ ಅದರ registration ಗೆ 11(ಇ) ಸ್ಕೆಚ್ ಅವಶ್ಯಕತೆ ಇರಲಿಲ್ಲ. ಈಗ ಅಮೆಂಡ್‌ಮೆಂಟ್ ಮಾಡಿ part of the document ಮಾಡಿಕೊಂಡಿದ್ದಾರೆ. 11(ಇ) ಸ್ಕೆಚ್ ಅನ್ನು ಸರ್ವೆ registration ಮಾಡುವಾಗ ಕೊಡಬೇಕು. ಮಾನ್ಯ ಗೌಡರು ಹೇಳಿರುವಂಥ ವಿಚಾರ ಬಹಳ ಸತ್ಯ. ಒಂದು ಸರ್ವೇ ನಂ.ಗೆ 11(ಇ) ಸ್ಕೆಚ್ ಮಾಡಿಸಲು ₹. 1,500/- ಗಳು ಕೊಡುವುದರ ಜೊತೆಗೆ ಅದನ್ನು ಮಾಡಬೇಕಾದರೆ ಸರ್ವೆಯರ್ ಎನ್ನುವ ಭೂಪರನ್ನು ಹಿಡಿದುಕೊಂಡು ಇಷ್ಟೊಂದು ಮೊತ್ತವನ್ನು ಅವನಿಗೆ ಕೊಟ್ಟು ಮಾಡಿಸುವುದು ಇದೆಯೆಲ್ಲ ಅದೊಂದು ದೊಡ್ಡ ಸಮಸ್ಯೆ. ಈಗ ಮಾನ್ಯ ಸಚಿವರು ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಒಂದು

ಜಿಲ್ಲೆಯಲ್ಲಿ 10 ಮಂದಿ Village Accountants ಗೆ ತರಬೇತಿಯನ್ನು ಕೊಡುವುದು. ಇದರಲ್ಲಿ ಏನಾಗಬೇಕಿದೆ ಎಂದರೆ ಸರಿಯೋ, ತಪ್ಪೋ ಹಿಂದೆ ಶ್ಯಾನುಬೋಗರು ಇರುವಂಥ ಪದ್ಧತಿಯಲ್ಲಿ ಅವರು ಸರ್ವೆ ಅನ್ನು ಕೂಡ ಮಾಡುತ್ತಿದ್ದರು. ಗ್ರಾಮ ಗ್ರಾಮಗಳಲ್ಲಿ ಸರ್ವೆ ಮಾಡಿ ಕೊಡುತ್ತಿದ್ದರು. Village Accountant ರಿಗೆ ಸರ್ವೆ ತರಬೇತಿಯನ್ನು ಕೊಡಿ. 11(ಇ) ಸ್ಕೆಚ್ ಬೇಕು. ಇಲ್ಲವಾದರೆ ಎಷ್ಟೋ dispute ಗಳು ಆಗುತ್ತವೆ. ಆದರೆ, ಒಂದು ವಿಚಾರ, ಒಂದು ಬಾರಿ ಸರ್ವೆ ಆಗಿ ಒಂದು document ಗೆ 11(ಇ) ಸ್ಕೆಚ್ ಬಂದರೆ ಪುನಃ ಮಾರಾಟ ಮಾಡಿದರೆ ಮತ್ತೊಂದು ಬಾರಿ 11(ಇ) ಸ್ಕೆಚ್‌ನ ಅವಶ್ಯಕತೆ ಇಲ್ಲ. ಪ್ರತಿ ಬಾರಿ 11(ಇ) ಸ್ಕೆಚ್ ಏಕೆ ಬೇಕು? ಅದು ಬೇಡ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅದನ್ನೇ ನಾನು ಕೇಳುತ್ತಿದ್ದೇನೆ. ಪ್ರತಿ ಬಾರಿ ಮಾರುವಾಗ 11(ಇ) ಸ್ಕೆಚ್ ಬೇಕು ಎಂದರೆ ಹೇಗೆ? ಆತ ಒಂದು 11(ಇ) ಸ್ಕೆಚ್ ಕಾಪಿ ತೆಗೆದುಕೊಂಡು ಹೊರಗೆ ಬರುವಷ್ಟರಲ್ಲಿ ₹. 3,000/- ಗಳು ಖರ್ಚಾಗುತ್ತದೆ. ₹. 1,000/- ಗಳ ಲಂಚ ಕೊಡಬೇಕು. ₹. 1,000/- ಕ್ಕಿಂತ ಕಡಿಮೆ ಮಾಡುವುದಿಲ್ಲ. ಕನಿಷ್ಟ ಮೂರು ತಿಂಗಳು ಬೇಕಾಗುತ್ತದೆ.

(ಗೊಂದಲ)

ಶ್ರೀ ಸಿ.ಟಿ. ರವಿ: ಮೂರು ತಿಂಗಳು, ಆರು ತಿಂಗಳು ಆಗುತ್ತದೆ. ಹಣದಲ್ಲ. . . . . .

(ಗೊಂದಲ)

ಶ್ರೀ ಜೆ.ಆರ್. ಲೋಬೋ: ಮಾನ್ಯ ಗೌಡರೆ, ಒಂದು ನಿಮಿಷ. ಕನಿಷ್ಟ ಮೂರು ತಿಂಗಳು ಅಲ್ಲ. ಆರು ತಿಂಗಳು, ಎಂಟು ತಿಂಗಳು ಆಗುತ್ತದೆ.

(ಗೊಂದಲ)

ಅಧ್ಯಕ್ಷರು: ಇದು simple. ಅದನ್ನು ಇರಬೇಕು ಎನ್ನುತ್ತೀರಾ ಅಥವಾ ಬೇಡ ಎನ್ನುತ್ತೀರಾ?

(ಗೊಂದಲ)

ಶ್ರೀ ಜೆ.ಆರ್. ಲೋಬೋ: ಮಾನ್ಯ ಅಧ್ಯಕ್ಷರೆ, ಅದು ಬೇಕು. As a part of registragtion, ಆ document ಒಂದು ಬಾರಿ ಬೇಕು. ಒಂದು ಬಾರಿ registragtion ಆದಮೇಲೆ ಅದೇ ಜಾಗವನ್ನು ಪುನಃ ಮಾರಾಟ ಮಾಡುವುದಾದರೆ ಪುನಃ 11(ಇ) ಸ್ಕೆಚ್‌ನ ಅವಶ್ಯಕತೆ ಇಲ್ಲ. ಈಗ ಪ್ರತಿ ಬಾರಿ insist ಮಾಡುತ್ತಿದ್ದಾರೆ.

ಅಧ್ಯಕ್ಷರು: 11(ಇ) ಸ್ಕೆಚ್ ಎಂದರೆ ಅದು ಪಕ್ಕಾ ಪೋಡಿ.

ಶ್ರೀ ಜೆ.ಆರ್. ಲೋಬೋ: ಮಾನ್ಯ ಅಧ್ಯಕ್ಷರೆ, ಇಲ್ಲ. ಅದು ಪಕ್ಕಾ ಪೋಡಿ ಅಲ್ಲ. ಪಕ್ಕಾ ಪೋಡಿ ಮತ್ತೆ ಆಗುತ್ತದೆ. ಇದು ಖಾಲಿ demarcation ಮಾಡಿದರೆ ಮಾತ್ರ ಸಾಧ್ಯ.

ಅಧ್ಯಕ್ಷರು: ಆಯಿತು, demarcation.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಅದು ದುರಸ್ತಿ.

ಶ್ರೀ ಸಿ.ಎನ್. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಗೌಡರು 11(ಇ) ಸ್ಕೆಚ್ ಬಗ್ಗೆ ಮಾತನಾಡಿದ್ದಾರೆ. ಒಂದು ಹಳ್ಳಿಯಲ್ಲಿ 500 ಎಕರೆ ಲ್ಯಾಂಡ್ ಇದ್ದರೆ 100 ಎಕರೆ ದುರಸ್ತಿ ಆಗಿರುವುದಿಲ್ಲ. ಮಂಜೂರು ಆಗಿರುತ್ತದೆ. 15 ವರ್ಷ ಆದಮೇಲೆ ಪರಭಾರೆ ಮಾಡುವುದಕ್ಕೂ ಅವಕಾಶ ಇರುತ್ತದೆ. ಇವರದು ಪಕ್ಕಾ ಪೋಡಿ ಆಗದೆ ಮಾರಾಟ ಮಾಡುವುದಕ್ಕೆ ಆಗುವುದಿಲ್ಲ. ಹಳ್ಳಿಗಳಲ್ಲಿ ಬಹಳ ಕಷ್ಟ ಇದೆ.

ಅಧ್ಯಕ್ಷರು: ಅದಕ್ಕೆ ಏನು ಮಾಡಬೇಕು ಹೇಳಿ?

ಶ್ರೀ ಸಿ.ಎನ್. ಬಾಲಕೃಷ್ಣ: ಅದನ್ನು ದುರಸ್ತಿ ಮಾಡುವುದಕ್ಕೆ ಹೆಚ್ಚಿನ ಸರ್ವೆಯರ್ ಅನ್ನು ಒದಗಿಸಿ ಅವಕಾಶ ಮಾಡದೆ ಹೋದರೆ, ಗ್ರಾಮಾಂತರ

ಪ್ರದೇಶದಲ್ಲಿ ಬಹಳ ಕಷ್ಟ ಇದೆ. ಮಾನ್ಯ ರೆವಿನ್ಯೂ ಸಚಿವರು 70 ಸರ್ವೆಯರ್ಸ್ ಅನ್ನು ಕೊಟ್ಟಿದ್ದಾರೆ. ಬೇಗನೆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಹಕಾರ ಮಾಡಬೇಕು.

ಶ್ರೀ ಕೆ.ಬಿ. ಪ್ರಸನ್ನಕುಮಾರ್ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೆ, ನಮ್ಮ ಶಿವಮೊಗ್ಗ ನಗರದಲ್ಲಿ property card ಬಗ್ಗೆ ಗೊಂದಲ ಇತ್ತು. ಮಾನ್ಯ ಸಚಿವರು ಸಭೆ ನಡೆಸಿ ಅದನ್ನು ಬಗೆಹರಿಸಿದ್ದಾರೆ. ಅವರಿಗೆ ತಮ್ಮೂಲಕ ಧನ್ಯವಾದಗಳನ್ನು ಹೇಳುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರೆ ನಿಮಗೆ ಧನ್ಯವಾದಗಳನ್ನು ಹೇಳುತ್ತಿದ್ದಾರೆ.

ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ): ಮಾನ್ಯ ಅಧ್ಯಕ್ಷರೆ, ಈ ಸರ್ವೆ ಮಾಡುವುದು ಬಹಳ ಸುಲಭ remote sensing ನಿಂದ ಸರ್ವೆಯನ್ನು ಮಾಡಬಹುದು. There is no need to physically visit the site. Remote sensing ನಿಂದ ನಮ್ಮ constituency ನಲ್ಲಿ ನಾವು ಸರ್ವೆ ಮಾಡಿದ್ದೇವೆ.

ಅಧ್ಯಕ್ಷರು: ಇವರು ಅಮೇರಿಕಾದಿಂದ ಬಂದಿದ್ದಾರೆ. ಇವರನ್ನೇ ನೇಮಕ ಮಾಡಿಕೊಳ್ಳಿ. ಮಾನ್ಯ ಖೇಣಿ ಯಾವ remote sensing ಇಲ್ಲ, ಏನೂ ಇಲ್ಲ. ಹಿಂದೆ ಪಕ್ಕಾ ಪೋಡಿ ಮಾಡಿ, ಸರ್ವೆ ನಂಬರ್ ಮಾಡಿ tippani copy ಬಿಟ್ಟು ಹೋಗಿದ್ದಾರೆ. ಅಂಥ ಒಂದು ವ್ಯವಸ್ಥೆಯನ್ನು ತರುವುದಕ್ಕೆ ತಲೆ ಕೆಳಗೆ ಮಾಡಿ, ಕಾಲು ಮೇಲೆ ನಿಂತರೂ ಆಗುವುದಿಲ್ಲ. ಅದನ್ನು ಬಿಡಿ.

SRI ASHOK KHENY: 120 acres ನಲ್ಲಿ . . . .

ಅಧ್ಯಕ್ಷರು: ಅದೆಲ್ಲ ಆಗುವುದಿಲ್ಲ, ಬಿಡಿ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಹಿಂದಿನ ವ್ಯವಸ್ಥೆಯನ್ನು ಕಂಪ್ಯೂಟೀಕರಣ ಮಾಡುವಾಗ ನಿಮಗೆ ಎಲ್ಲೋ ಒಂದು ಕಡೆ ತೊಂದರೆ ಆಗುತ್ತಿದೆ. ಅದು ಸರಿ ಮಾಡುವಂಥ ಕೆಲಸ ಆಗಬೇಕು. ನಾನು ಬಹುಶಃ ಕಂದಾಯ ಇಲಾಖೆ ಬಗ್ಗೆ ಮಾತನಾಡುತ್ತಾ ಹೋದರೆ ಅದು ಮುಗಿಯುವುದಿಲ್ಲ. ಕಂದಾಯ ಇಲಾಖೆ ಬಗ್ಗೆ ನಾನು ವಿನಂತಿಯನ್ನು

ಮಾಡಿದ್ದೇನೆ, ಅಷ್ಟಕ್ಕೆ ಮುಗಿಸುತ್ತೇನೆ. ಒಂದೆರಡು ನಿಮಿಷದಲ್ಲಿ ಅರಣ್ಯ ಇಲಾಖೆಯ ಬಗ್ಗೆ ಹೇಳುತ್ತೇನೆ. ಇವರು ಹಾಕಿಕೊಳ್ಳುವ ಕಾರ್ಯಕ್ರಮಗಳಲ್ಲಿ ಸಮಸ್ಯೆ ಇದೆ. ಆನೆಗಳ ಕಾಟ. . .

ಅಧ್ಯಕ್ಷರು: ಇದರ ಬಗ್ಗೆ ಮೊನ್ನೆ ದಿವಸ ಹೇಳಿದಿರಿ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಈ ವರ್ಷದಲ್ಲಿ 14 death ಹಾಗೂ 50 ಜನ injured. ಆನೆ ಸತ್ತಲ್ಲಿ, ಆನೆಗಳು attack ಆದಲ್ಲಿ ನಾವು ಯಾರೂ ಅಲ್ಲಿಗೆ ಹೋಗುವ ಆಗಿಲ್ಲ. ಅಲ್ಲಿಗೆ ಹೋದರೆ ನಮಗೆಲ್ಲಾ ಯಾವ್ಯಾವುದೋ ಭಾಷೆಯಲ್ಲಿ ಮಂಗಳಾರತಿ ಆಗುತ್ತಿದೆ. ಅವರದು ತಪ್ಪು ಅಲ್ಲ. ನಾವು ಕೇಳಿಕೊಳ್ಳಲೇಬೇಕಾಗುತ್ತದೆ. ಸಾವು ಆದರೆ 5 ಲಕ್ಷ ರೂ.ಗಳು ಕೊಡುವುದು ಎಂದು ಆಗಿದೆ. ಆದರೆ, injuries ಆದಲ್ಲಿ Medical bills ಕೊಟ್ಟರೆ ಅವರು ಹಣ ಕೊಡುತ್ತಾರೆ. ಈ injuries, ಮತ್ತೊಂದು ಬಡವರಿಗೆ, ತೋಟದಲ್ಲಿ ಕೆಲಸ ಮಾಡುವವರಿಗೆ ಆಗುತ್ತಿದೆ. ಈ ಅರಣ್ಯ ಅಧಿಕಾರಿಗಳದ್ದು ತಪ್ಪಲ್ಲ, ಅವರನ್ನು ತೆಗೆದುಕೊಂಡು ಹೋಗಿ ಸರ್ಕಾರಿ ಆಸ್ಪತ್ರೆಗೆ treatment ಗೆ ಹಾಕುತ್ತಾರೆ. ಅಲ್ಲಿ ಯಾವ ಬಿಲ್ಲು ಸಿಗುವುದಿಲ್ಲ. ಅವರಿಗೆ ಯಾವ ಪರಿಹಾರವೂ ಸಿಗುವುದಿಲ್ಲ. ಕೆಲವರು permanent disability ಆಗುತ್ತಾರೆ. ಇವರು ಬಿಲ್ ಇಲ್ಲದೆ ಏನೂ ಕೊಡುವುದಿಲ್ಲ. ಅದಕ್ಕೆ ನನ್ನದೊಂದು ವಿನಂತಿ ಇದೆ, ಅರಣ್ಯ ಇಲಾಖೆಯ ಅಧಿಕಾರಿಗಳಾದರೂ ಇಲ್ಲಿ ಇದ್ದಾರೋ ಇಲ್ಲವೋ ಗೊತ್ತಿಲ್ಲ. ನೀವು death ಆದವರಿಗೆ 5 ಲಕ್ಷ ರೂ.ಗಳು ಎಂದು ಫಿಕ್ಸ್ ಮಾಡಿದ್ದೀರಿ. ಅದೇ ರೀತಿ ಈ injuries ಆದಾಗ medical certificate ಅನ್ನು produce ಮಾಡಿ ಬಿಟ್ಟರೆ without bill, injury ಆದವರಿಗೆ ಆ ಪರಿಹಾರವನ್ನು ಫಿಕ್ಸ್ ಮಾಡಲೇಬೇಕಾಗುತ್ತದೆ. ಆ ಬಡವರಿಗೆ ಮಾಡಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ. ಬಹುಶಃ ಇದಕ್ಕೆ preventive ಆಗಿ ಇಡೀ ರಾಜ್ಯದಲ್ಲಿ ಹುಲಿ ಸಂರಕ್ಷಣಾ ಪ್ರದೇಶ ಒಟ್ಟು 5 ಪ್ರದೇಶಗಳಿವೆ. ಬಂಡೀಪುರ, ನಾಗರಹೊಳೆ, ಭದ್ರಾ, ದಾಂಡೇಲಿ, ಬಿ.ಆರ್.ಟಿ.ಹಿಲ್ಸ್ ಎಂದು ಇದೆ. ನಾನು ಉಳಿದದ್ದಕ್ಕೆ ಹೋಗುವುದಿಲ್ಲ. ನಾಗರಹೊಳೆ ಸುಮಾರು 162 ಚದರ ಕಿ.ಮೀ ಪ್ರದೇಶ ದೊಡ್ಡದಾಗಿ ಇದೆ. ಇದರಲ್ಲಿ ಬಹಳ ಆಶ್ಚರ್ಯವೆಂದರೆ, 82 ಚದರ

ಕಿ.ಮೀ. ಪ್ರಾಣಿಗಳು ಹೆಚ್ಚಾಗಿ ಇರುವ ಜಾಗ ಎಂದು ಹೆಚ್ಚು ಕಡಿಮೆ 14% ಇದೆ. ದುರಾದೃಷ್ಟವೇನೆಂದರೆ, ಅಲ್ಲಿ ಪೂರ್ತಿ teak wood ಇದೆ. ಎಲ್ಲಿ ಪ್ರಾಣಿಗಳು ಇರಬೇಕು, ಅಲ್ಲಿ ಇದನ್ನು ಬೆಳೆಸಿ ಬಿಟ್ಟಿದ್ದಾರೆ. ಬಹುಶಃ ಹಿಂದೆ ನೆಟ್ಟಿದ್ದಾರೆ, ಆಗ ಇದು Tiger Reserve ಪ್ರದೇಶ ಎಂದು declare ಆಗಿಲ್ಲವೆಂದು, ನಾನು ಬಹಳ ಸಲ ವಿನಂತಿಯನ್ನು ಮಾಡಿದ್ದೇನೆ. ಬಹುಶಃ direct ಆಗಿ ಕೇಳಿದ್ದರೆ, ಅದಕ್ಕೆ ಕೇಂದ್ರ ಸರ್ಕಾರ ಅನುಮತಿ ಕೊಡುವುದಿಲ್ಲ, ಅದನ್ನು thin ಮಾಡುವುದಕ್ಕೆ ಮರಗಳನ್ನು ಸ್ವಲ್ಪ ತೆಗೆದು ಅಲ್ಲಿ ಪ್ರಾಣಿಗಳಿಗೆ ಹುಲ್ಲು ಮತ್ತು ಇನ್ನಿತರೆಗಳನ್ನು ಬೆಳೆಸುವುದಕ್ಕೆ. ಅದಕ್ಕಾಗಿ ನಾನು ಅಧಿಕಾರಿಗಳಿಗೆ ಸಲಹೆ ಮಾಡಿದೆ. Complete felling ಎಂದರೆ ಕೇಂದ್ರ ಸರ್ಕಾರ, ಈ ಪರಿಸರವಾದಿಗಳಿಂದ ಇದಕ್ಕೆ permission ಕೊಡುವುದಿಲ್ಲ. Thin ಮಾಡುವಂಥದ್ದನ್ನು ಹಂತ ಹಂತವಾಗಿ ಮಾಡಿಕೊಂಡು ಬಂದರೆ ಹೆಚ್ಚು ಕಡಿಮೆ ಈ ಆನೆಗಳು ಎಲ್ಲಾ ಅಲ್ಲಿಯೇ ಇರುತ್ತವೆ. ಇವರು ಒಂದು action plan ಮಾಡಿದ್ದಾರೆ. ಕೇಂದ್ರ ಸರ್ಕಾರದಿಂದಲೂ ಸಾಕಷ್ಟು ದುಡ್ಡು ಬರುತ್ತದೆ. ಈ action plan ಏನಾದರೂ ನೋಡಿ ಬಿಟ್ಟರೆ, ನಾನು ನಾಗರಹೊಳೆಯ ಒಂದು ವಿಷಯವನ್ನು ಓದಿ ಬಿಡುತ್ತೇನೆ. ಅವರು ಯಾವುದಕ್ಕೆಲ್ಲಾ ಖರ್ಚು ಮಾಡುತ್ತಾರೆಂದರೆ, ಇಲ್ಲಿ Maintenance of view lines tourism are in Nagarahole Tiger Reserve ಗೆ 25 ಲಕ್ಷ ರೂಪಾಯಿ, Improvement of tourist facilitiesಗೆ 50 ಲಕ್ಷ ರೂಪಾಯಿ, Renovation of forest guest house, auditorium, RFO, etc 20+20 ಲಕ್ಷ ರೂಪಾಯಿ, ಹೀಗೆ ಹೆಚ್ಚು ಕಡಿಮೆ 4 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆ, ನಾನು ಎಲ್ಲವನ್ನೂ ಓದುವುದಕ್ಕೆ ಹೋಗುವುದಿಲ್ಲ. Purchase and maintenance of guns, ಒಂದು ಬಿಟ್ಟರೆ ಎಲ್ಲಾ ಇವರು ಬೇಡದ್ದಕ್ಕೆ ಖರ್ಚು ಮಾಡಿದ್ದಾರೆ. ಈ ಪ್ರಾಣಿಗಳಿಗೆ ಅಲ್ಲಿ food, ಮರ ಮತ್ತು ಇನ್ನಿತರೆಯನ್ನು ಬೆಳೆಸುವುದಕ್ಕೆ ಒಂದು ರೂಪಾಯಿ ಕೂಡ ಇವರ ಕ್ರಿಯಾ ಯೋಜನೆಯಲ್ಲಿ ಇಲ್ಲ. ಇವರು ಹೇಗೆ ಪ್ರಾಣಿಗಳ ರಕ್ಷಣೆ ಮಾಡುವುದು, ಮತ್ತು ಆನೆಗಳ ಕಾಟವನ್ನು ತಪ್ಪಿಸುವುದು? ಈ 5 Tiger Reserve areas ದಲ್ಲಿ ಇದೆ ತರಹದ್ದು ಇವರ action plan ಇದೆ.

ಅಧ್ಯಕ್ಷರು: ನಿಮಗೆ ನಾನು ಏಕೆ ಹೇಳುತ್ತೇನೆಂದರೆ, ಪ್ರತಿಯೊಂದು demand ಅನ್ನು ಪ್ರತ್ಯೇಕವಾಗಿ ಇಟ್ಟುಕೊಂಡು ಚರ್ಚೆ ಮಾಡಿದರೆ ಸಂಬಂಧಪಟ್ಟ ಮಂತ್ರಿಗಳು ಇರುತ್ತಾರೆ, ಉತ್ತರ ಹೇಳುತ್ತಾರೆ. ನಮ್ಮ ವ್ಯವಸ್ಥೆ ಏನಾಗಿದೆ ಎಂದರೆ, ಎಲ್ಲವನ್ನೂ ಒಂದೇ ಕಡೆಗೆ ತೋರಿಸಿಕೊಂಡು, ನೀವು ಹೇಳುತ್ತಿರುವುದು ನಿಜ. ಅದನ್ನು ಕೇಳುವವರು ಇಲ್ಲ, ಅದಕ್ಕೆ ಸ್ಪಷ್ಟವಾಗಿ ಉತ್ತರ ಹೇಳುವವರು ಇಲ್ಲ.

ಶ್ರೀ ಕೆ.ಜಿ. ಬೋಪಯ್ಯ: ಮಾತನಾಡಿ ಚಪಲ ತೀರಿಸಿಕೊಂಡಂತೆ ಆಗಿದೆ.

ಅಧ್ಯಕ್ಷರು: ಹಾಗಾಗಿದೆ. ಇದಕ್ಕೆ ನಿಮ್ಮ ವಿರೋಧ ಪಕ್ಷದವರು ಹೆಚ್ಚು ಜವಾಬ್ದಾರಿ ವಹಿಸಬೇಕು. ಏಕೆಂದರೆ, ಒಂದೇ ಗಂಟೆ ಆಗಲಿ. ಒಂದು demand ಬಗ್ಗೆ ಚರ್ಚೆ ಮಾಡೋಣ, ಉತ್ತರ ಕೊಡೋಣ. ಇದಕ್ಕೆ ನೀವು ಒತ್ತು ಕೊಡಬೇಕು. ಸರ್ಕಾರಕ್ಕೆ ಏನಾಗುತ್ತದೆ, ಆದಷ್ಟು ಬೇಗ, ಹಾಗೋ ಹೀಗೋ ಚರ್ಚೆ ಮಾಡಿ ವೋಟಿಂಗ್ ಹಾಕಿಕೊಂಡು ಹೋಗೋಣವೆಂದು ಅವರು ಇರುತ್ತಾರೆ. ಯಾವ್ಯಾವ ವಿಚಾರ ಎಷ್ಟೆಷ್ಟು ಇದೆ? ಎನ್ನುವುದನ್ನು ನಾನು ನೋಡಿದೆ. ಈಗ ನೀವು ಹೇಳುತ್ತೀರಿ ನಿಜ ಇದೆ. ಅದು ಬಹಳ ಸೂಕ್ಷ್ಮವಾದಂಥ ವಿಚಾರ. ಆನೆಗಳು ಏಕೆ ಹೊರಗೆ ಬರುತ್ತವೆ ಅದು ನನಗೆ ಗೊತ್ತಿದೆ. ಹುಲಿ ಏಕೆ ಹೊರಗೆ ಹೋಗುತ್ತವೆ ಅದು ನಮಗೆ ಗೊತ್ತಿದೆ. ಅವುಗಳಿಗೆ ತಿನ್ನುವುದಕ್ಕೆ ಬೇಕು, ಅಲ್ಲಿ ಸಿಗುವುದಿಲ್ಲ. ಅವು ಹೊರಗಡೆ ಬರುತ್ತವೆ. ಅದಕ್ಕಾಗಿ ನೀವು ಹೇಳತಕ್ಕಂಥದ್ದು ನಿಜ ಇದೆ. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದ್ದಾಗ ನೀವು ಹೇಳಿದರೆ, ಅದಕ್ಕೆ ಏನಾದರೂ ಖಂಡಿತವಾಗಿ ಅವರು ಸ್ಪಂದಿಸುತ್ತಾರೆ. ಇಲ್ಲದಿದ್ದರೆ ನೀವು ಹೇಳುವುದು ಎಲ್ಲಾ ವ್ಯರ್ಥವಾಗುತ್ತದೆ.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ಹೇಳುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಇದು ಸಂಪೂರ್ಣವಾಗಿ ಚರ್ಚೆ ಆಗಬೇಕೆಂದು ನಾವು 4 ವಾರಗಳ ಕಾಲ ಮಾಡಿರುತ್ತೇವೆ. ಬೆಳಗಾವಿಯಲ್ಲಿ

ಇಲಾಖೆಯ ಮೇಲೆ ಚರ್ಚೆ ಮಾಡುವುದಕ್ಕೆ ಹೆಚ್ಚು ಅವಕಾಶ ಬರಲಿಲ್ಲ. ಬೇರೆ ಬೇರೆ ವಿಚಾರದಲ್ಲಿ ಚರ್ಚೆ ಆಗಿದೆ. ಇಲ್ಲಿ ಸಹ ಚರ್ಚೆ ಆಗಿದೆ. ನಾವು ಎಲ್ಲರೂ ಮಂತ್ರಿಗಳು ನಮ್ಮ ಇಲಾಖೆಯ ಮೇಲೆ ಖಂಡಿತವಾಗಿ ಚರ್ಚೆ ಆಗಲೇಬೇಕು. ಹಲವಾರು ವಿಚಾರಗಳು ನಮಗೆ ಗೊತ್ತಾಗುತ್ತದೆ, ಅದನ್ನು ನಾವು ಸರಿಪಡಿಸಿಕೊಳ್ಳಲು ಆಗುತ್ತದೆ ಎನ್ನುವ ಉದ್ದೇಶದಿಂದಲೇ ಇದನ್ನು ನಾವು ಮಾಡುತ್ತಿದ್ದೇವೆ. ನಾವು ಚರ್ಚೆ ಮಾಡಲಿಕ್ಕೆ ಸಿದ್ಧರಿದ್ದೇವೆ. ದಯವಿಟ್ಟು ಒಂದೊಂದು ವಿಷಯದ ಮೇಲೆ ಹೆಚ್ಚಿಗೆ ಮಾಡದೆ, ಇದಕ್ಕೆ ನಾವು ಸಾಕಷ್ಟು ಪ್ರಾಮುಖ್ಯತೆ ಕೊಡಬೇಕಾಗಿದೆ.

ಶ್ರೀ ಕೆ.ಜಿ. ಬೋಪಯ್ಯ: ಬರುವ ಆನೆಗಳನ್ನು ತಡೆಯಲಿಕ್ಕೆ ನಿಮಗೆ ಕೊಟ್ಟಿರುವ ದುಡ್ಡನ್ನು ಅದಕ್ಕೆ ಖರ್ಚು ಮಾಡುತ್ತಿಲ್ಲ. ಈ action plan ನೋಡಿಬಿಟ್ಟರೆ...

ಅಧ್ಯಕ್ಷರು: ನಿಮ್ಮ ತಿಳುವಳಿಕೆಯ ಪ್ರಕಾರ ಕೊಟ್ಟ ದುಡ್ಡನ್ನು ಅದೇ ಉದ್ದೇಶಕ್ಕೆ ಬಳಕೆ ಮಾಡುವ ಬದಲಾಗಿ ಬೇರೆದ್ದಕ್ಕೆ ಖರ್ಚು ಮಾಡಿದ್ದಾರೆನ್ನುವುದಕ್ಕೆ ಏನಾದರೂ ಒಂದು ಮಾಹಿತಿ ಇದೆಯೇ?

ಶ್ರೀ ಕೆ.ಜಿ. ಬೋಪಯ್ಯ: ನಾನು ಕ್ರಿಯಾ ಯೋಜನೆ ಓದಿದ್ದೇನೆ.

ಅಧ್ಯಕ್ಷರು: ಆ ಕ್ರಿಯಾ ಯೋಜನೆಯ ಪ್ರಕಾರ ಯಾವ ಉದ್ದೇಶಕ್ಕೆ ಹಣ ಕೊಟ್ಟಿದ್ದಾರೋ, ಆ ಉದ್ದೇಶ ಬಿಟ್ಟು ಬೇರೆ ಏನಾದರೂ ಖರ್ಚು ಮಾಡಿದ್ದಾರೆ ಎನ್ನುವುದಕ್ಕೆ ನಿಮ್ಮ ಹತ್ತಿರ ಏನಾದರೂ ಮಾಹಿತಿ ಇದೆಯೇ?

ಶ್ರೀ ಕೆ.ಜಿ. ಬೋಪಯ್ಯ: Action plan ಮಾಡುವಂಥದ್ದಕ್ಕೆ ಕೇಂದ್ರ ಸರ್ಕಾರದ್ದು ಮತ್ತು ರಾಜ್ಯದ ಪಾಲು ಸೇರಿ ಒಂದು ಕಮಿಟಿ ಇದೆ. ಈ ತರಹ action plan ಮಾಡಿ ದುಡ್ಡು waste ಮಾಡುತ್ತಾರಲ್ಲಾ ಎನ್ನುವುದು ಅಷ್ಟೆ. ಅಲ್ಲಿ ನಿಜವಾಗಿ ಪ್ರಾಣಿಗಳಿಗೆ ಆಹಾರಕ್ಕಾಗಿ ಹುಲ್ಲು ಬೆಳೆಸುವುದು, ಇನ್ನಿತರೆ ಏನು ಮಾಡಬೇಕು, ಇದನ್ನು ಮಾಡಿದ್ದರೆ, ಬಹುಶಃ ಆಗುತ್ತಿತ್ತು ಎನ್ನುವುದು ನನ್ನ ಸಲಹೆ ಅಷ್ಟೇ. ಅದರ ಜೊತೆಗೆ ಇವತ್ತು ಇನ್ನೊಂದು ಹೊಸ ಪ್ಲಾನ್ ಮಾಡಿದ್ದಾರೆ. ನಿಜವಾಗಿಯೂ ಒಳ್ಳೆಯ ಯೋಜನೆ. ರೈಲ್ವೆ ಟ್ರಾಕ್

ಅಳವಡಿಸುವುದುನ್ನು ಹೆಚ್.ಡಿ.ಕೋಟೆ ಭಾಗದಲ್ಲಿ ಮಾಡಿದ್ದಾರೆ. ಅದು success ಆಗಿದೆ. ಆದರೆ ನಮ್ಮಲ್ಲಿ ಇನ್ನೂ ಎರಡು ಬ್ರಹ್ಮಗಿರಿ ಮತ್ತು ಪುಷ್ಪಗಿರಿ ಎಂದು ಎರಡು wild life area ಇದೆ, ಅಲ್ಲಿ ಮಾಡಬೇಕು. ಏಕೆಂದರೆ, ಅಲ್ಲಿ ದೊಡ್ಡ ಬೆಟ್ಟ ಮತ್ತು ತೋಟಗಳ ನೀರು ಹರಿಯುವಂಥದ್ದು. ಅಲ್ಲಿ trench ತೆಗೆಯುವುದಕ್ಕಾಗುವುದಿಲ್ಲ. ನಾನು ಮಾನ್ಯ ಸಚಿವರ ಹತ್ತಿರ ವೈಯಕ್ತಿಕವಾಗಿಯೂ ಕೇಳಿದೆ, 50–100 ಕಿ.ಮೀ. ಆ ಎರಡು wild life area ಕ್ಕೆ ಮಾಡಿದರೆ ಕೊಡಗಿನಲ್ಲಿ ಈ ಆನೆಗಳು ಕಾಡಿನಿಂದ ನಾಡಿಗೆ ಬರುವುದನ್ನು ತಪ್ಪಿಸಬಹುದು ಎನ್ನುವಂಥದ್ದು ನನ್ನ ಸಲಹೆ. ಇದು ಎಲ್ಲಿ ಅವಶ್ಯಕತೆ ಇದೆ ಅದನ್ನು ಮಾಡಬೇಕು. Plantation ಬಗ್ಗೆ ನಾನು ಮಾತನಾಡುವುದಿಲ್ಲ. ಅದನ್ನು ಏನಾದರೂ ಹೇಳಿಬಿಟ್ಟರೆ, ನಮ್ಮ ಕೊಡಗು ಜಿಲ್ಲೆಯಲ್ಲಿ ಮೊನ್ನೆ ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. 10,000 ಗಿಡಗಳನ್ನು ನೆಟ್ಟಿದ್ದೇವೆಂದು ಹೇಳಿದ್ದಾರೆ. ಎಲ್ಲಿ ಎಂದು ಹುಡುಕಬೇಕು? ನಾನು ಜಿಲ್ಲಾ ಪಂಚಾಯತಿಯವರಿಗೆ ಹೇಳಿದ್ದೇನೆ. Social forest ಅವರ control ಗೆ ಬರುತ್ತದೆ. ನೀವು ಒಂದು ಸಲ ಚೆಕ್ ಮಾಡಿ ಎಂದು ಹೇಳಿದ್ದೇನೆ. ನಾವು ಆಕೆಷಿಯಾ ಗಿಡಗಳನ್ನು ನೆಡುವುದಕ್ಕೆ ಬಿಡುತ್ತಿಲ್ಲ. ಈ ತರಹ ಒಂದು ರೀತಿಯ mis-management ಆಗುತ್ತಿದೆ. ಅಧಿಕಾರಿಗಳು ಬೆಂಗಳೂರಿನಲ್ಲಿ ಕುಳಿತುಕೊಂಡು ಈ ರೀತಿ ಮಾಡಿ ಆನೆಗಳ ಹೆಸರಿನಲ್ಲಿ ಬರುವಂಥ ಈ ಪ್ರಾಣಿಗಳ ರಕ್ಷಣೆಗೆ, ಅವರ ಸ್ವಂತಕ್ಕೆ ಅಲ್ಲ. ಇದನ್ನು ದಯವಿಟ್ಟು ನಿಲ್ಲಿಸಬೇಕು ಎನ್ನುವಂಥದ್ದು ನನ್ನ ಸಲಹೆ. ಅದರ ಜೊತೆಗೆ ಇವತ್ತು ಕೇರಳ, ಕೊಡಗು ಬಾರ್ಡರ್ ಏರಿಯಾದಲ್ಲಿ ಏನಾಗಿದೆ ಎಂದರೆ, ಅಲ್ಲಿ maintenance ಗೆ ಇವರು ಗಾರ್ಡ್‌ಗಳನ್ನು ಏನು ಇಟ್ಟುಕೊಂಡಿದ್ದಾರೆ, ಅವರೆಲ್ಲರೂ daily wagesರವರನ್ನು ಹಾಕಿದ್ದಾರೆ. ಮುಂಡ್ರೋಟು ಎಂದು ಒಂದು ಏರಿಯಾ ಇದೆ. ಅಲ್ಲಿ direct ಆಗಿ ಹೋಗುವುದಕ್ಕೆ ಬರುವುದಿಲ್ಲ. ಕೇರಳಕ್ಕೆ ಹೋಗಿ ಬರಬೇಕು. ಅಲ್ಲಿರುವಂಥ ವಾಚರ್ಸ್‌ಗಳಿಗೆ ಇವರು ಸಂಬಳವೇ ಕೊಡುವುದಿಲ್ಲ. ಅವರಿಗೆ ಇಷ್ಟ ಬಂದಾಗ ಸಂಬಳ ಕೊಡಬೇಕು. ಇವರು ಕೇರಳದ ಸ್ಮಗ್ಲರ್‌ಗಳ ಜೊತೆಯಲ್ಲಿ ಸೇರಿಕೊಳ್ಳುತ್ತಾರೆ. ಮತ್ತೆ ಅವರ ಹೊಟ್ಟೆಪಾಡು ಆಗಬೇಕಲ್ಲ. ನಮ್ಮ ಹೆಚ್ಚು ಹೊಳೆಗಳು ಕೇರಳದ ಕಡೆಗೆ

ಹರಿಯುತ್ತವೆ. ಮರ ಕಡಿದು ಆ ಹೊಳೆಯೊಳಗೆ ಹಾಕಿ ಬಿಡುವುದು, ಅದು ತೇಲಿ ಹೋಗುತ್ತವೆ, ಅಲ್ಲಿ ಹೋಗಿ ಹಿಡಿದುಕೊಳ್ಳುತ್ತಾರೆ, ಅಲ್ಲಿ ಯಾವ restriction ಇಲ್ಲ. ನಾನು ಇದನ್ನು ಬಹಳ ಸಲ ಹೇಳಿದ್ದೇನೆ. ಅಲ್ಲಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದ್ದೀರಿ. ಮಾಕೂಟ ಕೇರಳದ ಒಂದು ಬಾರ್ಡರ್, ಅವರ ಮೇಲೆ departmental enquiry ಮತ್ತೊಂದು ಎಲ್ಲವೂ ಇದೆ. ಮತ್ತೆ ಅವರನ್ನು ಅಲ್ಲಿಗೇ ಪೋಸ್ಟಿಂಗ್ ಮಾಡುತ್ತಾರೆ. ಏಕೆ ಹೀಗಾಗುತ್ತದೆ? ಸ್ವಲ್ಪ ಅರಣ್ಯದ ಬಗ್ಗೆ ಕಾಳಜಿ ಇರುವಂಥವರನ್ನು ಏಕೆ ಪೋಸ್ಟಿಂಗ್ ಮಾಡಬಾರದು ಎನ್ನುವುದೇ ನನ್ನ ಸಲಹೆ. ಆದುದರಿಂದ ಬಹುಶಃ ಇನ್ನು ಇದೇ activities ಅರಣ್ಯ ಇಲಾಖೆಯದು ಮುಂದುವರೆದರೆ ಕೊಡಗಿನಲ್ಲಿ ಮರ ಇಲ್ಲದಂತಾಗುತ್ತದೆ. ಯಾವ thick forest ಎಂದು ಅನಾದಿ ಕಾಲದಿಂದ ಬೆಳೆಸಿಕೊಂಡು ಬಂದಿದೆ, ಅದು ಇಲ್ಲದಂತಾಗುತ್ತದೆ. ಅದು ಇಲ್ಲದಂತಾದರೆ ಪರಿಣಾಮ ಏನಾಗಬಹುದು? ನಮಗೇನೂ ಆಗುವುದಿಲ್ಲ. ನಾವು ಹೇಗೋ ಬದುಕಿಕೊಳ್ಳುತ್ತೇವೆ. ಬೆಂಗಳೂರಿನವರು ಸಾಯುತ್ತಾರೆ ಅಷ್ಟೇ.

ಅಧ್ಯಕ್ಷರು: ಆಯಿತು.

ಶ್ರೀ ಕೆ.ಜಿ. ಬೋಪಯ್ಯ: ಇನ್ನೊಂದು ಸಮಾಜ ಕಲ್ಯಾಣದ ಬಗ್ಗೆ Forest Dwellers Act ಮೇಲೆ ಎರಡೇ ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು: ಸಮಯ ಇಲ್ಲ, 6.30 ಆಯಿತು.

ಶ್ರೀ ಕೆ.ಜಿ. ಬೋಪಯ್ಯ: ಅವರ ಅಧಿಕಾರಿಗಳು ಹೇಗೆ ಕೆಲಸ ಮಾಡುತ್ತಾರೆಂಬ ಬಗ್ಗೆ ಹೇಳಿ ಮುಗಿಸಿಬಿಡುತ್ತೇನೆ. Forest Dwellers Act, ಇವತ್ತು 800 applications, ಇತರೆ ಜನಾಂಗದವರದು ಅವರಿಗೊಂದು ನೋಟೀಸ್ ಇಲ್ಲ, enquiry ಇಲ್ಲ, reject ಮಾಡಿಬಿಡುವುದು. ಅಧ್ಯಕ್ಷರೆ, ನಾನು ಅದನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. 80 ವರ್ಷ ವಯಸ್ಸಾದವರ ಅರ್ಜಿಯ ಜೊತೆ ಪ್ರಮಾಣ ಪತ್ರವನ್ನು ಕೊಡಿಸಿದ್ದೇನೆ. False affidavit ಅಂತ reject ಮಾಡುತ್ತಾರೆ. ಆ ಪ್ರಮಾಣಪತ್ರವನ್ನು consider ಮಾಡಬೇಕೆಂದು Act ನಲ್ಲಿದೆ. Any one evidence ಅಂತ it is very clear in the Act. ನೀವು

reject ಮಾಡಿಕೊಂಡು ಕೂರುತ್ತೀರಿ. ಆಮೇಲೆ ಹಾಡಿ ವಾಸಕ್ಕೆ ಬಂದಿದ್ದರು, ನಮ್ಮ ಕೊಡಗು ಜಿಲ್ಲೆಗೂ ಬಂದಿದ್ದರು. ಒಂದು ರಾತ್ರಿ ಇಡೀ ನಾನು ಅವರ ಹತ್ತಿರ ಸುಮಾರು 2.00 ಗಂಟೆವರೆಗೆ ಅವರೊಟ್ಟಿಗೆ ಇದ್ದೆ. ಅವರ culture ಎಲ್ಲವನ್ನು ಮಾಡಿದರು. ಆದರೆ ಆ ಹಾಡಿಗೆ ಹೋಗಲಿಕ್ಕೆ ಒಂದು ರಸ್ತೆ ನಾನು ನೀವು ಬಂದಿದ್ದಕ್ಕೆ ನಿಮ್ಮನ್ನು ಅವರು ನೆನೆಸಿಕೊಳ್ಳುತ್ತಾರೆ. ಆ ರಸ್ತೆಯನ್ನು ನೋಡಿಬಿಟ್ಟರೆ four wheel jeep ಹೋಗುವುದಕ್ಕಾಗುವುದಿಲ್ಲ. ನನ್ನ ಕಾರು ಹೋಗಿ ಮತ್ತೆ ಅದು ರಿಪೇರಿಗೆ ಕಳುಹಿಸಬೇಕಾಯಿತು. ಅಂಥ ಒಂದು ರಸ್ತೆ ಇದೆ. ಮೂರು ಮರಗಳನ್ನು ತೆಗೆಯಬೇಕಾಗಿತ್ತು. ಸಣ್ಣ teak wood ಅದನ್ನು ತೆಗೆಸಲಿಕ್ಕೆ Forest Department ಗೆ directions ಕೊಡಿ ಎಂದು ಕೇಳಿದೆ. ಇವರು orally ಹೇಳಿದರು, ಏನೂ ಆಗಲಿಲ್ಲ. ನಾನು ಮೊನ್ನೆ ಹೋಗಿದ್ದೆ. ಮೊನ್ನೆ ಹೋದರೆ ಇವತ್ತು jeep ಹೋಗುವುದಕ್ಕಾಗುವುದಿಲ್ಲ. ಪಾಪ ಅಲ್ಲಿ ಎಲ್ಲ ಈ ಟೂರಿಸಂ ಬೇರೆ ಇದರಲ್ಲಿ ಆಟೋ ಎಲ್ಲ road side ನಿಲ್ಲಿಸಿ ನಡೆದುಕೊಂಡು ಹೋಗುವಂಥ ಪರಿಸ್ಥಿತಿ ಇದೆ. ಇನ್ನೂ ಅವರನ್ನು ನಾವು ಮುಖ್ಯವಾಹಿನಿಗೆ ಇನ್ನು ಯಾವಾಗ ತರಲಿಕ್ಕಾಗುತ್ತದೆ? ಅದಕ್ಕೆ Forest Dwellers Act, ಇದು ನಿಮ್ಮ ಜವಾಬ್ದಾರಿ. ಈ ಅರಣ್ಯ ಇಲಾಖೆಯವರಿಗೆ misguide ಮಾಡುವುದೇ ಕೆಲಸ. ಇದೆ ಸರ್ community, road ಎಲ್ಲವೂ ಇದೆ.

ಅಧ್ಯಕ್ಷರು: ಈಗ ಅದರಲ್ಲಿ ಅವಕಾಶ ಇದೆ. ಸಾರ್ವಜನಿಕ ಉದ್ದೇಶಕ್ಕೆ ಬೇಕಾದರೆ ಆ ಪಂಚಾಯಿತಿಯವರು, ಸಾರ್ವಜನಿಕರು ಆ ಸಮಿತಿಗೆ ಕೊಟ್ಟವರು ಮಾಡಬೇಕಾಗುತ್ತದೆ.

ಶ್ರೀ ಕೆ.ಜಿ. ಬೋಪಯ್ಯ: ಅವೆಲ್ಲವೂ ಮಾಡಿದೆ. ಆದರೆ ಈ ಅರಣ್ಯ ಇಲಾಖೆಯ ಅಧಿಕಾರಿಗಳು ಸುಪ್ರೀಂ ಕೋರ್ಟ್, ಇನ್ನೊಂದು ಎಂದು ಹೆದರಿಸುತ್ತಾರೆ. ನಾನು ಅದಕ್ಕೆ ಹೇಳಿದೆ. For example, ಒಂದು ಆ ACF ಮತ್ತು RFO ಗಳ ಮೇಲೆ atrocity case register ಮಾಡಿ ಎಂದೆ. ಅದರ ಬದಲಿಗೆ Forest Departmentನವರು ಇವರ ಮೇಲೆ ಕೇಸ್ register ಮಾಡುತ್ತಾರೆ. ಕಾನೂನು ಎಲ್ಲರಿಗೂ ಒಂದೇ ಅಲ್ಲವೇ? Atrocity ಅವರಿಗೂ

applicable. ಕೇವಲ ಹೊಡೆದರೆ, ಬಡಿದರೆ ಅಲ್ಲ, ಈ ರೀತಿ ಅವರಿಗೆ ಮಾನಸಿಕವಾಗಿ ತೊಂದರೆ ಮಾಡುವುದು, ಅವರ facilities ಅನ್ನು ಕೊಡದೇ ಇರುವುದೂ ಸಹ it amounts to atrocity. ನೀವು ಅದನ್ನು ಸ್ವಲ್ಪ strict ಆಗಿ ಮಾಡುವುದಕ್ಕೆ ಹೇಳಿ. ಇನ್ನೊಂದು incident ಮೊನ್ನೆ ತಾವು ಇರಲಿಲ್ಲ. ಮಾನ್ಯ ಗೃಹ ಮಂತ್ರಿಗಳೇ, 2012 ರ ಡಿಸೆಂಬರ್‌ನಲ್ಲಿ ಗೋಣಿಕೊಪ್ಪದಲ್ಲಿ ಒಬ್ಬ ಹರಿಜನ ಮಹಿಳೆಯ ಮೇಲೆ ಒಂದು ಅತ್ಯಾಚಾರ ನಡೆಯಿತು. ಆದರೆ ಕೇಸ್ ಇಲ್ಲ, ಅವರ relation ಯಾರೋ ಒಬ್ಬರು ಪ್ರಭಾವಿ ಪೊಲೀಸ್ ಅಧಿಕಾರಿ. procession, protest ಆದಮೇಲೆ FIR ಆಯಿತು. ಅಲ್ಲಿ atrocity Section attract ಆಗುವ ಆ Section ಅನ್ನೇ ಬಿಟ್ಟುಬಿಟ್ಟರು. ಆ ಹೆಣ್ಣುಮಗಳಿಗೆ 31.12.2012 ರಂದು Public TV ಅವರೆಲ್ಲಾ interview ಮಾಡಿ ಹಾಕಿದರು. ಇವತ್ತಿನವರೆಗೆ ಪರಿಹಾರ ಕೊಟ್ಟಿಲ್ಲ. ಮೊನ್ನೆ ನಿಮ್ಮ ಉತ್ತರ ಇತ್ತು. ನಾನು ಗಮನ ಸೆಳೆದಾಗ ಒಂದು ವಾರದಲ್ಲಿ ಉತ್ತರ ಕೊಡಿಸುತ್ತೇನೆಂದು ಇತ್ತು, ಇವತ್ತಿನವರೆಗೆ ಕೊಡಲಿಲ್ಲ. ಆ ಸೆಕ್ಷನ್ ಬಿಟ್ಟಿದ್ದಾರೆ, ಹೇಗೆಂದರೆ ಇನ್ನೊಂದು FIR ಮಾಡುತ್ತೇವೆ ಅಂತ. ಏಕೆ ಹೀಗೆ ಮಾಡಿದ್ದಾರೆ? ನಿಮ್ಮ ಇಲಾಖೆಯವರು ಮಾಡುವುದು ಸರಿಯಿದೆಯೇ? ಯಾರೋ ಇಲ್ಲೊಬ್ಬರು ಅವರ IG level ಅಧಿಕಾರಿ ಇದ್ದಾರೆಂದು ..

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು): ಕೇಳಿ, ಬೋಪಯ್ಯನವರೆ, ಇದನ್ನು ನೀವು ಈಗ ನನ್ನ ಗಮನಕ್ಕೆ ತಂದಿದ್ದೀರಿ. ನಮ್ಮ ಇಲಾಖೆಯಲ್ಲಿ ಈಗ ಕಟ್ಟುನಿಟ್ಟಿನ ನಿರ್ದೇಶನ ಕೊಟ್ಟಿದ್ದೇವೆ. ಈ ತರಹ ಯಾವುದೇ ಪೊಲೀಸ್ ಆಫೀಸರ್ ಆ ತರಹ ತಪ್ಪು ಮಾಡಿ Sections ಬಿಟ್ಟು ಮಾಡಿದರೆ, ತಮಗೆ ಗೊತ್ತಿದೆ. ಬೆಂಗಳೂರಿನಲ್ಲಿ ಒಬ್ಬ Circle Inspector ರವರನ್ನು suspend ಮಾಡಿದ್ದೇವೆ. ನಾನು ಅದನ್ನು immediate ಆಗಿ ತಿಳಿಸಿಬಿಟ್ಟು ಅದರ ವಿಚಾರದಲ್ಲಿ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ: ಪರಿಹಾರ ಕೊಡಿಸಿ.

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು): ಪರಿಹಾರ ಕೊಡುವುದು ಬೇರೆ ಇರುತ್ತದೆ. ಮೊದಲು ಅವರು ಏಕೆ ಸರಿಯಾಗಿ FIR ಮಾಡಲಿಲ್ಲ ಎಂದು ನೋಡಬೇಕಾಗುತ್ತದೆ.

ಶ್ರೀ ಕೆ.ಜಿ. ಬೋಪಯ್ಯ: ಈಗ atrocity Section ಬಿಟ್ಟು charge sheet is filed. ಅದನ್ನು ಮಾಡಬಹುದೇ? ಈ ರೀತಿ ಸಮಾಜ ಕಲ್ಯಾಣ ಅಧಿಕಾರಿಗಳು ಇದ್ದಾರೆ.

ಶ್ರೀ ಕೆ.ಜೆ. ಜಾರ್ಜ್: ನಾನು ಹೇಳುತ್ತಿದ್ದೇನೆ....

ಶ್ರೀ ಕೆ.ಜಿ. ಬೋಪಯ್ಯ: ನಿಮ್ಮ ಬಗ್ಗೆ ಇದರಲ್ಲಿ complaint ಇಲ್ಲ. ಆದರೆ ಸಮಾಜ ಕಲ್ಯಾಣ ಇಲಾಖೆ ಏನು ಮಾಡುತ್ತಿದೆ? ಹೀಗೆಯೇ ನೀವು ಸಾಮಾಜಿಕ ನ್ಯಾಯ ಕೊಡುವುದು? ಅದೊಂದು ಕಾನೂನನ್ನು ತಂದಿದ್ದೀರಿ. ಎಲ್ಲಾ ಇಲಾಖೆಯದ್ದು ಮಾಡಬೇಕೆಂದರೆ ಬೆಳಗಾವಿಯಲ್ಲಿ ಅಂಬೇಡ್ಕರ್ ತರಹವೇ ದೊಡ್ಡದಾಗಿ ಎಲ್ಲಾ ನಾವೆಲ್ಲಾ ಹೊಗಳಿದ್ದೇ, ಹೊಗಳಿದ್ದು. ಇವತ್ತು ಎಷ್ಟು ಹಣ lapse ಆಗುತ್ತಿದೆ? ಎಷ್ಟು ಅಧಿಕಾರಿಗಳ ಮೇಲೆ case register ಮಾಡಿದ್ದಾರೆ? ಎನ್ನುವ ಬಗ್ಗೆ ಉತ್ತರ ಹೇಳುವಾಗ ಹೇಳಿ. Lapse ಆಗಿರುವ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಹೇಳುತ್ತೇನೆ. About ₹. 10-12 crore rupees ವಾಪಸ್ಸು ಹೋಯಿತು. ವಾಪಸ್ಸು ಅಂದರೆ lapse ಆಗಿ ಅಲ್ಲ, ಕೆಲಸ ಮಾಡುವುದನ್ನೇ ಬಿಟ್ಟರು. ಕೆಲಸ ಮಾಡದೇ ಇರುವುದು offence. ನೀವು ಯಾರಾದರೂ ಮೇಲೆ FIR ಹಾಕಿದ್ದೀರಾ? ಅಥವಾ ಅವರಿಗೆ fine ಹಾಕುತ್ತೀರಾ? ಏಕೆ ಹೀಗೆ? ನೀವು review ಮಾಡಿ. ನಿಮ್ಮ ಅಧಿಕಾರಿಗಳು ಏನು ಮಾಡುತ್ತಾರೆ? ಇದು ಸರಿಯಲ್ಲ. ಇದೇ ರೀತಿ ಮುಂದುವರೆದರೆ, ನಾವು ಬಾಯಲ್ಲಿ ಸಾಮಾಜಿಕ ನ್ಯಾಯ ಮತ್ತೊಂದು ಹೇಳಬಹುದು ಅಷ್ಟೇ, ಯಾವುದನ್ನೂ ಕೊಡುವುದಕ್ಕಾಗುವುದಿಲ್ಲ. ದಯವಿಟ್ಟು ಆ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತನ್ನಿ. ಯಾವ ಇಲಾಖೆ ಅದನ್ನು ಪಾಲನೆ ಮಾಡುವುದಿಲ್ಲವೋ ಅಂಥ ಒಂದು ಇಲಾಖೆಯ ಮೇಲೆ ಕ್ರಮ ಕೈಗೊಳ್ಳಿ, ಆಗ ಬೇರೆಯವರು ಎಚ್ಚರವಾಗುತ್ತಾರೆ. ಒಬ್ಬ ಅಧಿಕಾರಿಗೆ punishment ಮಾಡಿದರೆ, ಉಳಿದವರು ಎಚ್ಚರಗೊಳ್ಳುತ್ತಾರೆ.

ಇದನ್ನು ಮಾಡಬೇಕು ಮತ್ತು ಆ ಮಹಿಳೆಗೆ ನೀವು ತಕ್ಷಣ ಎಂದು ಹೇಳಿದಿರಿ, ಒಂದು ವಾರ ಎಂದು ಹೇಳಿದಿರಿ. 15 ದಿವಸಗಳಾಯಿತು. ಇನ್ನೂ ಕೊಟ್ಟಿಲ್ಲ. ಪರಿಹಾರ ಕೊಡುವಂಥ ಕೆಲಸ ಸಮಾಜ ಕಲ್ಯಾಣ ಇಲಾಖೆಯಿಂದ ಆಗಬೇಕು. ಆಕೆಗೆ ಒಂದು ಮಗು ಇದೆ ಅಧ್ಯಕ್ಷರೆ. ಅದು handicap ಆಗಿದೆ. ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು: ಹತ್ತು ನಿಮಿಷ, ಹೇಳಿ. ಇನ್ನೂ zero hour ಇವೆ, ಗಮನ ಸೆಳೆಯುವ ಸೂಚನೆಗಳಿವೆ, ಅವುಗಳನ್ನು ಪೂರೈಸಿಕೊಂಡು ಬೇಕಾದರೆ ತೆಗೆದುಕೊಳ್ಳೋಣ. ಹೇಳಿ.

ಶ್ರೀ ಪಿಳ್ಳ ಮುನಿಶಾಮಪ್ಪ (ದೇವನಹಳ್ಳಿ): ಅಧ್ಯಕ್ಷರೆ, ಹಲವಾರು ಇಲಾಖೆಗಳ ಬಗ್ಗೆ ಬಹಳಷ್ಟು ಹಿರಿಯ ಸಚಿವರು, ಮಾಜಿ ಸಚಿವರು ಮತ್ತು ಶಾಸಕರೆಲ್ಲರೂ ಮಾತನಾಡಿದರು. ಆದರೆ ನಾನು ಈ ಸಮಯವನ್ನು ಬಳಸಿಕೊಂಡು ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಮಾತನಾಡುತ್ತೇನೆ. ದೇವನಹಳ್ಳಿ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಇರುವಂಥ ನಮ್ಮ ಕ್ಷೇತ್ರದಲ್ಲಿ ಹಲವಾರು ಸಮಸ್ಯೆಗಳಿವೆ. ನಾಲ್ಕು ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ದೇವನಹಳ್ಳಿ ತಾಲ್ಲೂಕಿನಲ್ಲಿ 100 bedded hospital, ವಿಜಯಪುರದಲ್ಲಿ 30 bedded ಸಮುದಾಯ ಆಸ್ಪತ್ರೆ ಇದೆ. ಹಾಗೆ 12 PHCಗಳಿವೆ. ಈ ಆಸ್ಪತ್ರೆಗಳಲ್ಲಿ ಎಲ್ಲಾ ರೀತಿಯ ಮೂಲ ಸೌಕರ್ಯ ಇವೆ. ಆದರೆ ಬಹಳಷ್ಟು ಸಿಬ್ಬಂದಿ ಕೊರತೆ ಇದೆ. ಮೊದಲು ಸಿಬ್ಬಂದಿ ಕೊರತೆ ಸರಿಪಡಿಸಿದರೆ ಸರ್ಕಾರದಿಂದ ಕೊಟ್ಟಿರುವಂಥ ಹಲವಾರು machines ಉಪಯೋಗವಾಗುತ್ತದೆ. ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ಅದೇ ರೀತಿ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇವತ್ತು ಸಾವಿರಾರು ಜನ ಅಲ್ಲಿ ಬಂದು ಇಳಿಯುತ್ತಾರೆ, ಹೋಗುತ್ತಾರೆ. ಅಲ್ಲಿ H1N1, ಎಬೋಲಾ ಏನೆಲ್ಲಾ ಕಾಯಿಲೆಗಳು ಬರುತ್ತವೆ ಅದನ್ನು test ಮಾಡಲಿಕ್ಕೆ ಅಲ್ಲಿ ಯಾವುದೇ ರೀತಿಯ doctors ಇಲ್ಲ. ನಮ್ಮ PHCಯಿಂದ ಇರಬಹುದು, ತಾಲ್ಲೂಕು ಆಸ್ಪತ್ರೆಗಳಿಂದ

doctors ಅನ್ನು ಅಲ್ಲಿಗೆ ಕಳುಹಿಸಿ ಒಂದೊಂದು ವಾರಕ್ಕೆ ಒಬ್ಬೊಬ್ಬರನ್ನು ಅಲ್ಲಿಗೆ ಕಳುಹಿಸಿ test ಮಾಡಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಯಾವುದೇ ಕಾರಣಕ್ಕೂ PHC ಆಗಲಿ, ಸಮುದಾಯ ಆಸ್ಪತ್ರೆ ಆಗಲಿ, ನಾವು ಇನ್ನು ಮೇಲೆ ಯಾವುದೇ doctors ಕಳುಹಿಸುವುದಿಲ್ಲ. ತಾವು ದಯಮಾಡಿ ವಿಶೇಷವಾಗಿ ಬೇರೆ doctors ಅನ್ನು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹಾಕಬೇಕೆಂದು ಈ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ. ಮೊನ್ನೆ ವಿಜಯಪುರದ ಆಸ್ಪತ್ರೆಯಲ್ಲಿ 9.45 ನಿಮಿಷಕ್ಕೆ session ಮುಗಿಸಿಕೊಂಡು ಹೋಗಿದ್ದೇನೆ. ಒಬ್ಬ ಭಾರತಿ ಎಂಬ lady ಅಲ್ಲಿ delivery ಗೆ ಬಂದಿದ್ದಾರೆ. ನೋಡಿದರೆ ಅಲ್ಲಿ ಒಬ್ಬ ನರ್ಸ್, ಒಬ್ಬ ಹುಡುಗ ಇದ್ದಾರೆ. ಆ ನರ್ಸ್ delivery ಮಾಡುತ್ತಿದ್ದಾರೆ. ರಾತ್ರಿ ಮೂರುವರೆ ಗಂಟೆಯಾದರೂ delivery ಅಗಿಲ್ಲ. 10.00 ಗಂಟೆ ರಾತ್ರಿಯಲ್ಲಿ ನಾನು ಸನ್ಮಾನ್ಯ ಸಚಿವರ PS ಗೆ ಫೋನ್ ಮಾಡಿ, DHO ಗೆ ಫೋನ್ ಮಾಡಿ ಗಲಾಟೆ ಮಾಡಿದ ಮೇಲೆ 12.00 ಗಂಟೆಗೆ DHO ಬಂದಿದ್ದಾರೆ. ಇಂಥ ಕೆಟ್ಟ ಪರಿಸ್ಥಿತಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿದೆ. ನಮ್ಮ ವಿಧಾನಸೌಧಕ್ಕೆ ಕೇವಲ 30 ಕಿ.ಮೀ. ದೂರದಲ್ಲಿ ಇಂಥ ಪರಿಸ್ಥಿತಿ ಆದರೆ ಗುಲಬರ್ಗಾ, ರಾಯಚೂರಿನಲ್ಲಿ ಇನ್ನೆಂಥ ಕೆಟ್ಟ ಪರಿಸ್ಥಿತಿ ಇದೆ ಎಂದು ಹೇಳಿ, ನಿಜವಾಗಲೂ ಕೂಡ ಜಿಲ್ಲಾ ಮತ್ತು ಮಂಡಲ್ ಪಂಚಾಯತ್ ಸದಸ್ಯನಾಗಿದ್ದಾಗ ನನಗೆ ನೆಮ್ಮದಿ ಇತ್ತು. ಈ ರೀತಿಯ ವ್ಯವಸ್ಥೆಯಲ್ಲಿ ಶಾಸಕರಾಗಿ ನಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುವುದಕ್ಕೆ ಒಂದು ಕೆಟ್ಟ ಸಮಸ್ಯೆಯಾಗಿದೆ. ನೀವು ಆಗಲೇ 11(a), 11(b) ಕಥೆಯ ಬಗ್ಗೆ ಹೇಳುತ್ತಿದ್ದಿರಿ. ದೇವನಹಳ್ಳಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆದಂಥ ಕೆಟ್ಟ ಪರಿಸ್ಥಿತಿ ಬೇರೆ ಯಾವುದೇ ತಾಲ್ಲೂಕುಗಳಲ್ಲಿಯೂ ಇಲ್ಲ ಅಧ್ಯಕ್ಷರೆ, ಅದಕ್ಕೆಲ್ಲಾ ದಾಖಲಾತಿಗಳನ್ನು ಕೊಡುತ್ತೇನೆ. PDOಗಳು ಏನೆಲ್ಲಾ ಸಮಸ್ಯೆಗಳನ್ನು ಮಾಡಿದ್ದಾರೆ ಎನ್ನುವುದಕ್ಕೆ ಒಂದು ವಿಚಾರದಲ್ಲಿ ಮಾತನಾಡುತ್ತೇನೆ. ಅದೇರೀತಿ ಇವತ್ತು ದೇವನಹಳ್ಳಿ ಆಸ್ಪತ್ರೆಗಳಿಗೆ ವಿಶೇಷವಾಗಿ doctors ಅನ್ನು ಕೊಡಬೇಕು, ಇತರೆ ಸಿಬ್ಬಂದಿಯನ್ನು ಕೊಡಬೇಕು. ಗ್ರೂಪ್–ಡಿ ನೌಕರರನ್ನು ಕೊಡಬೇಕು. Revenue ಇಲಾಖೆಗೆ ಸಂಬಂಧಪಟ್ಟಂತೆ ನಮ್ಮ

ಪಹಣಿಯನ್ನು ತೆಗೆದುಕೊಳ್ಳಬೇಕಾದರೆ 400–00, 500–00 ರೂಪಾಯಿಗಳಿಗೆ ಅವರು ದಿನಗೂಲಿ ಮೇಲೆ ಕೆಲಸ ಮಾಡುತ್ತಿರುತ್ತಾರೆ. ಒಂದು ಕಡೆ ಅಲ್ಲ, ಎರಡು ಕಡೆ ಕೂಲಿ ಕೆಲಸ ಮಾಡಿದರೂ ರೈತರಿಗೆ ಜೀವನ ಮಾಡಲಿಕ್ಕೆ ಸಾಧ್ಯವಿಲ್ಲ. ನಮ್ಮ ಸಮುದಾಯದಕ್ಕೆ ಅಲ್ಲಿರತಕ್ಕಂಥ ದಲಿತರಿಗೆ, ಅಲ್ಪಸಂಖ್ಯಾತರಿಗೆ, ಹಿಂದುಳಿದ ವರ್ಗದವರಿಗೆ ಸಾಧ್ಯವಿಲ್ಲ. 15–00 ರೂಪಾಯಿಗಳಿಗೆ ಒಂದು ಪಹಣಿ ತೆಗೆದುಕೊಳ್ಳುವುದಕ್ಕೆ ಪ್ರತಿ ದಿವಸ ಪೂರ್ತಿಯಾಗಿ ಅವರು ಅಲ್ಲಿ ಕುಳಿತು ಕಾಲ ಕಳೆಯಬೇಕಾಗುತ್ತದೆ. ಅಂತಹ ಕೆಟ್ಟ ಪರಿಸ್ಥಿತಿ ದೇವನಹಳ್ಳಿ ತಾಲ್ಲೂಕಿನಲ್ಲಿ ನಿರ್ಮಾಣವಾಗಿದೆ. ಕೇವಲ ಅಲ್ಲಿ real estate ದಂಧೆ ಮಾಡುವಂತಹವರು, ಯಾರ್‍ಯಾರು apartments & villas ಕಟ್ಟುತ್ತಿದ್ದಾರೆ, ಅವರಿಗೆ ಎಲ್ಲಿ ಬೇಕಾದರೂ ಸಿಕ್ಕುತ್ತಿದೆ. Village Accountants ಆಗಿರಬಹುದು, Revenue Inspector, ತಹಶೀಲ್ದಾರರು ಇರಬಹುದು, ನಾನು ಮಾನ್ಯ ಕಂದಾಯ ಸಚಿವರಿಗೆ ಎಷ್ಟು ಬಾರಿ ಮನವಿ ಮಾಡಿಕೊಂಡರೂ ಸಹ, ಅವರು ಉತ್ತಮವಾದಂತಹ ಕೆಲಸ ಮಾಡಿದ್ದಾರೆ, ಹಿರಿಯರಿದ್ದಾರೆ, ಅವರ ಬಗ್ಗೆ ಗೌರವ ಇದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉಸ್ತುವಾರಿ ಸಚಿವರು ಮತ್ತು ಮಾನ್ಯ ಕೃಷ್ಣಭೈರೇಗೌಡರು ಉತ್ತಮವಾದ ಕೆಲಸವನ್ನು ಮಾಡುತ್ತಿದ್ದಾರೆ. ಅವರ ಬಗ್ಗೆ ನನಗೆ ಗೌರವ ಇದೆ. ಅಧಿಕಾರಿಗಳು, IAS, KAS officers ರವರ ಹತ್ತಿರ ಶಾಸಕರು ಬಂದರೆ ಕೆಲಸ ಮಾಡಿಕೊಡುತ್ತಾರೆ. ಆದರೆ ಅಲ್ಲಿರುವಂತಹ village Accountant, Revenue Inspector, DT ಗಳನ್ನು ನಾವು ನಿಜವಾಗಿಯೂ ಯಾರನ್ನೂ ಮಾತನಾಡಿಸುವುದಕ್ಕಾಗುವುದಿಲ್ಲ. ಅವರು ಎಲ್ಲಿರುತ್ತಾರೆ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಒಬ್ಬ ಶಾಸಕರಿಗೆ ಸರಿಯಾದ ರೀತಿಯಲ್ಲಿ ಗೌರವ ಕೊಡುವಂತಹ ಅಧಿಕಾರಿಗಳು ಇನ್ನು ಜನಸಾಮಾನ್ಯರಿಗೆ ಎಷ್ಟರಮಟ್ಟಿಗೆ ಕೆಲಸ ಮಾಡಿಕೊಡುತ್ತಾರೆ? ಅವರು ಯಾವ ರೀತಿ ಕೆಲಸ ಮಾಡುತ್ತಾರೆ ಎಂದರೆ, ದುಡ್ಡು ಇದ್ದರೆ ಮಾತ್ರ ಕೆಲಸ ಮಾಡುತ್ತಾರೆ. ಭ್ರಷ್ಟಾಚಾರ ಎಂದು ಕೇಳುವುದಕ್ಕೆ ನಮಗೆ ಅಸಹ್ಯವಾಗುತ್ತದೆ. ಅದು ಈ ಒಂದು ನಮ್ಮ ಸರ್ಕಾರದಲ್ಲಿ ತಾಂಡವವಾಡುತ್ತಿದೆ ಎಂದು ಹೇಳುವುದಕ್ಕೆ ಸರ್ಕಾರವೇ ಅಲ್ಲ ಒಬ್ಬ ಶಾಸಕನಾಗಿ, ನಾನೂ ಕೂಡ Part of

the Government ಆಗಿರುವುದರಿಂದ ನನಗೂ ಜವಾಬ್ದಾರಿ ಇದೆ. ಅದನ್ನು ಸರಿಪಡಿಸುವಂತಹ ಕೆಲಸ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿಶೇಷವಾಗಿ ಬಹಳಷ್ಟು ಕೆಟ್ಟ ಪ್ರಮಾಣದಲ್ಲಿ ಮರಳು ದಂಧೆ ನಡೆಯುತ್ತಿದೆ. ಮರಳು ನೀತಿಯನ್ನು ಸರಿಪಡಿಸಿಕೊಳ್ಳದೇ ಇದ್ದರೆ, ಇವತ್ತು ಏನೇ ಕಾನೂನು ತಂದರೂ ಕೂಡ ಅದು ಪ್ರಯೋಜನವಾಗುವುದಿಲ್ಲ ಮತ್ತು ಸರ್ಕಾರಿ ಕಟ್ಟಡಗಳನ್ನು ಕಟ್ಟುವ ಗುತ್ತಿಗೆದಾರರು 30–40 ಸಾವಿರ ರೂ.ಗಳನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಕಡಿಮೆ ಪ್ರಮಾಣದಲ್ಲಿ filter ಮರಳು ತೆಗೆದುಕೊಂಡು ಅದರಿಂದ ಕಟ್ಟಡಗಳನ್ನು ಕಟ್ಟುತ್ತಾರೆ. ಇನ್ನೊಬ್ಬ ಬಡವ, ಅವನು ಎಲ್ಲಿದ್ದರೂ ಬಡತನ ಇರುತ್ತದೆ. ಯಾವುದೇ ಕಾರಣಕ್ಕೂ ಬಡವ ಹೆಚ್ಚಿಗೆ ದುಡ್ಡು ಕೊಟ್ಟು ಅವನು building ಕಟ್ಟುವುದಕ್ಕೆ ಆಗುವುದಿಲ್ಲ. ಬಡವನಿಗೆ ಕೊಡುವಂತಹ ಆಶ್ರಯ ಮನೆಗಳಿಗೆ, ಬಡವನು ಕಡಿಮೆ ಪ್ರಮಾಣದಲ್ಲಿ ಮರಳು ತೆಗೆದುಕೊಂಡು filter ಮಾಡಿ ಮನೆ ಕಟ್ಟಿಕೊಳ್ಳುತ್ತಾನೆ. ಆದರೆ ಸ್ಥಿತಿವಂತರು, ಸಾಹುಕಾರರು ಏನು ಮಾಡುತ್ತಾನೆ ಎಂದರೆ ನಿಜವಾಗಿಯೂ ಎಷ್ಟೇ ಆಗಲಿ 30,000–50,000 ರೂ.ಗಳು ಆಗಲಿ, ಒಂದು ಲಕ್ಷ ರೂ.ಗಳು ಆಗಲಿ, ಒಂದು ಲೋಡ್ ತರುತ್ತಾನೆ, ಕಟ್ಟಿಕೊಳ್ಳುತ್ತಾನೆ. ಯಾರಿಗೆ ನಿಜವಾಗಿಯೂ ತೊಂದರೆಯಾಗುತ್ತಿದೆ? ಒಂದು Government building ಕಟ್ಟುತ್ತಿದ್ದೇವೆಲ್ಲಾ ಅದಕ್ಕೆ ತೊಂದರೆಯಾಗುತ್ತಿದೆ. ಸಾಮಾನ್ಯ ರೈತರಿಗೆ ತೊಂದರೆಯಾಗುತ್ತಿದೆ. ಬಡವನಿಗೆ, ದಲಿತರಿಗೆ ತೊಂದರೆಯಾಗುತ್ತಿದೆ. ನೀವು ನಿಜವಾಗಿಯೂ ಮರಳು ನೀತಿಯನ್ನು ಏಕೆ ತರಲಿಕ್ಕೆ ಆಗಿಲ್ಲ? ಉತ್ತಮವಾದ ಮರಳು ನೀತಿಯನ್ನು ತರಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತೇನೆ. ಹಾಗೆಯೇ ಇವತ್ತು ಗಣಿ ನೀತಿ, ಇವತ್ತು ಏನು ನೀವು ವಿಧಾನಸೌಧ, ವಿಕಾಸಸೌಧ, ಸುವರ್ಣಸೌಧ ಕಟ್ಟಿದ್ದೀರಿ, ಅದು ನಮ್ಮ ದೇವನಹಳ್ಳಿ ತಾಲ್ಲೂಕಿನ ಕೊಯಿರಾ ಕಲ್ಲು. ಅಲ್ಲಿ ಅರ್ಕಾವತಿ ಭೂಪ್ರದೇಶಕ್ಕೆ, ತಿಪ್ಪಗೊಂಡನಹಳ್ಳಿ ಅಚ್ಚುಕಟ್ಟುಪ್ರದೇಶಕ್ಕೆ ಬರುತ್ತದೆ ಎಂದು ಅದನ್ನು ಕಾನೂನುಬಾಹಿರ ಎಂದು ತೆಗೆದುಬಿಟ್ಟಿದ್ದಾರೆ. ಅಲ್ಲಿ ಇವತ್ತು ಏನೇ ಆಗಲಿ. ಯಾವುದೇ ದೇವಸ್ಥಾನ, ಮುಜರಾಯಿ ದೇವಸ್ಥಾನಕ್ಕೆ ಬೇಕಾದರೆ ಅಲ್ಲಿಗೆ ಬರುತ್ತಾರೆ. ಕೊಯಿರಾಕ್ಕೆ ನೀವು permission

ಕೊಡಲೇಬೇಕು. ಸಾವಿರಾರು ಜನ ಅಲ್ಲಿ ಕೆಲಸ ಮಾಡುತ್ತಾರೆ, ಬೋವಿ ಜನಾಂಗದವರು, ವೃತ್ತಿಪರ ಕೆಲಸ ಮಾಡುತ್ತಿರುವವರು ಇವತ್ತು ಬೀದಿಯಲ್ಲಿದ್ದಾರೆ. ಆ ಕಾರಣಕ್ಕೋಸ್ಕರ ಇವತ್ತು ಪಕ್ಕದಲ್ಲಿರುವಂತಹ ಸಾದಳ್ಳಿಗೆ 25–25 ಜನಕ್ಕೆ ಇವತ್ತು ಗಣಿ ಇಲಾಖೆಯಿಂದ permission ಕೊಟ್ಟಿದ್ದೀರಿ. ಕೆಲವೇ ಕಿ.ಮೀ ಇರುವಂತಹ ಕೊಯಿರಾಕ್ಕೆ ಏಕೆ ಕೊಡುತ್ತಿಲ್ಲ? ಅಲ್ಲೂ ಕೊಡಿ. ಈ ಮೂಲಕ ಆ ಭಾಗದ ಜನತೆಗೆ ಅನುಕೂಲವಾಗಬೇಕು, ನಮ್ಮ ಕ್ಷೇತ್ರದ ಜನರಿಗೆ ಅನುಕೂಲವಾಗಬೇಕು, ದಯಮಾಡಿ ಅದಕ್ಕೆ permission ಕೊಡುವಂತಹ ಕೆಲಸ ಆಗಬೇಕೆಂದು ನಾನು ಆಗ್ರಹಿಸುತ್ತೇನೆ. ಅದೇ ರೀತಿ ನಾನು 2013ರಲ್ಲಿ ಅಗ್ನಿಶಾಮಕ ಠಾಣೆ ನಿರ್ಮಿಸಿಕೊಡಲು ಒಂದು ಅರ್ಜಿ ಕೊಟ್ಟಿದ್ದೆ. ಅಲ್ಲಿಂದ ಇವತ್ತಿನವರೆಗೂ ಎಷ್ಟೇ ಅದರ ಹಿಂದೆ ಬಿದ್ದರೂ ಆಗಿಲ್ಲ. ನಾನು ಮಾನ್ಯ ಗೃಹಸಚಿವರಲ್ಲಿ ಕೇಳಿಕೊಂಡೆ. ಎಲ್ಲಾ ರೀತಿಯ ಅಧಿಕಾರಿಗಳನ್ನು ಕೇಳಿದರೂ ಕೂಡ ಇವತ್ತಿನವರೆಗೂ ಅಗ್ನಿಶಾಮಕ ಠಾಣೆ ಆಗಿಲ್ಲ. ಇವತ್ತು ವಿಜಿಪುರದಲ್ಲಿ 40,000 ಜನ ಇದ್ದಾರೆ. ದೇವನಹಳ್ಳಿಯಲ್ಲಿ 35,000 ಇದ್ದಾರೆ. ಒಟ್ಟು 75,000 ಜನ ಇದ್ದಾರೆ. ಏನೇ ಆದರೂ ಕೂಡ ನಾವು ಚಿಕ್ಕಬಳ್ಳಾಪುರಕ್ಕೆ ಹೋಗಬೇಕು. ಇಲ್ಲದೇ ಹೋದರೆ ನಾವು Airport ಗೆ ಹೋಗಬೇಕು. Airport ನಲ್ಲಿ ಕಳುಹಿಸುವುದಿಲ್ಲ. ತುಂಬಾ ಸಮಸ್ಯೆಯಾಗಿದೆ. File ಎಲ್ಲಿದೆ ಗೊತ್ತಿಲ್ಲ. ದಯವಿಟ್ಟು ಒಂದು ಅಗ್ನಿಶಾಮಕ ಠಾಣೆಯನ್ನು ಮಾಡಿಕೊಡಬೇಕೆಂದು ಆಗ್ರಹಿಸುತ್ತಾ, ಇನ್ನೊಂದು ವಿಶೇಷವಾಗಿ ನಮ್ಮ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಏಕೆ PDO ಗಳನ್ನು ತಂದರು ಎಂದು ನಾನು ಯೋಚನೆ ಮಾಡುತ್ತಿದ್ದೇನೆ. ಮೊದಲು ಮಂಡಲ ಪಂಚಾಯತ್, ಜಿಲ್ಲಾ ಪರಿಷತ್ ಇದ್ದಂತಹ ಸಂದರ್ಭದಲ್ಲಿ ಏನು ಅಲ್ಲಿ Secretary ಇದ್ದರು, ಅವರು drawing officer ಆಗಿದ್ದರು. Drawing officer ರವರಿಗೆ ಹೆಚ್ಚಿನ ಹಣ ಬರುತ್ತಿತ್ತು. ಸರ್ಕಾರದಿಂದ ಅದನ್ನು draw ಮಾಡುವುದಕ್ಕೆ 6000 PDO ಎಂದು ತಂದಿರಿ. ಕೆಲವು ಪಂಚಾಯಿತಿಗಳಲ್ಲಿ ತೊಂದರೆ ಇಲ್ಲದೇ ಇರಬಹುದು, ನಮ್ಮ ಬೆಂಗಳೂರು ಗ್ರಾಮಾಂತರ ಮತ್ತು ನಗರಕ್ಕೆ, ತಾಲ್ಲೂಕಿಗೆ ಒಳಪಟ್ಟ ಪಂಚಾಯಿತಿಗಳಲ್ಲಿ 11(A), 11(B) ಎಂದು ಏನು ಮಾಡುತ್ತಿದ್ದೀರೋ,

ಅದೊಂದು ದೊಡ್ಡ ದಂಧೆಯಾಗಿದೆ. ಒಂದೇ -ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ದೇವನಹಳ್ಳಿ ತಾಲ್ಲೂಕಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಇರುವಂತಹ ಅಣ್ಣೇಶಪುರ ಗ್ರಾಮ ಪಂಚಾಯಿತಿ, ಬೂದಿಗೆರೆ ಗ್ರಾಮ ಪಂಚಾಯಿತಿ, ಕನ್ನಮಂಗಲ ಗ್ರಾಮ ಪಂಚಾಯಿತಿ, ಬೆಟ್ಟಗೊಡ್ಡೆ ಗ್ರಾಮ ಪಂಚಾಯಿತಿ, ಜಾಲಿಗೆ ಗ್ರಾಮ ಪಂಚಾಯಿತಿ, ಈ ಐದೂ ಗ್ರಾಮ ಪಂಚಾಯಿತಿಗಳು airport ನ ಸುತ್ತಲೂ ಇವೆ. ಅಣ್ಣೇಶಪುರ ಗ್ರಾಮ ಪಂಚಾಯಿತಿಗೆ ಪ್ರತಿ ವರ್ಷ airport ನಿಂದ 4 ಕೋಟಿ 50 ಲಕ್ಷ ರೂ.ಗಳು ವರ್ಗ–1 ರಿಂದ ಕಂದಾಯ ಬರುತ್ತದೆ. ಅದೇ ರೀತಿ ಆ airport ಕೂಡ 25 ಕೋಟಿ ರೂ.ಗಳನ್ನು ಇಟ್ಟುಕೊಂಡು ಇವತ್ತಿಗೂ ಕೂಡ ಅದನ್ನು ಸರಿಯಾಗಿ ಕಟ್ಟಲಿಲ್ಲ. ಅದಕ್ಕೆ adjustment, ಒಬ್ಬ PDO ಮತ್ತೆ ಅಲ್ಲಿರುವಂತಹ ಕೆಲವು ಆಡಳಿತ ಮಂಡಳಿಯವರು ಅಲ್ಲಿ ವ್ಯತ್ಯಾಸ ಮಾಡಿಕೊಂಡು 25 ಲಕ್ಷ ರೂ.ಗಳು ಬಂದಿರಲಿಲ್ಲ. ಕಳೆದ ಬಾರಿ ನಾನು ಮಾತನಾಡಿದಾಗ 4.5 ಕೋಟಿ ರೂ.ಗಳು ಒಂದು ವರ್ಷದ್ದು ಕಟ್ಟಿದ್ದಾರೆ. ಇನ್ನೂ 4 ನಾಲ್ಕು ವರ್ಷದ್ದು ಕಟ್ಟಿಲ್ಲ. ಆ ಪೂರ್ತಿ ಹಣವನ್ನು ಪಂಚಾಯಿತಿಗೆ ಕಟ್ಟಿಸಬೇಕು. ತಾಲ್ಲೂಕಿನಲ್ಲಿ 24 ಪಂಚಾಯಿತಿಗಳು ಇವೆ. ಆ ದುಡ್ಡನ್ನು ಬೇರೆ ಕಡೆ divert ಮಾಡಿ. ಬಡ ಪಂಚಾಯಿತಿಗಳು ಯಾವ್ಯಾವು ಇವೆಯೋ ಸಾಮಾಜಿಕವಾಗಿ ಎಲ್ಲಾ ಪಂಚಾಯಿತಿಗಳು ಅಭಿವೃದ್ಧಿಯಾಗಬೇಕೆಂದು ಈ ಮೂಲಕ ಆಗ್ರಹಿಸುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ದುಡ್ಡು ಅವರು ಕಟ್ಟದೇ ಹೋದರೆ ನೀವು ಜಪ್ತಿ ಮಾಡಬಹುದುಲ್ಲವೇ?

ಶ್ರೀ ಪಿಳ್ಳ ಮುನಿಶಾಮಪ್ಪ: ಏನಾಗಿದೆ ಎಂದರೆ, ಇಲ್ಲಿರುವಂತಹ ಶ್ರೀ ಕುಮಾರ್ ಎನ್ನುವ PDOರವರನ್ನು ಈ ವಿಷಯವಾಗಿ ಕೇಳಿ ನಾವು ಗಲಾಟೆ ಮಾಡಿದಾಗ ಈ PDO, 1 ರಿಂದ 1,200, 11(A), 11(B) ಅನ್ನು ಕೇವಲ 4–5 ಜನಕ್ಕೆ ಸೀಮಿತವಾಗಿ ಮಾಡುತ್ತಾರೆ. ಅದು ಸರ್ಕಾರಿ ಜಾಗ ಇರಬಹುದು, Private ನಲ್ಲಿ ಜಮೀನು SC/ST ಜಮೀನು ಇರಬಹುದು, ಇನಾಮ್ ಜಮೀನು ಇರಬಹುದು, ಯಾವುದೇ ಜಾಗ ಇರಬಹುದು, ಭೂ

ಪರಿವರ್ತನೆ ಆಗಿಲ್ಲ. ಇಷ್ಟು ಪಂಚಾಯಿತಿಗಳಲ್ಲಿಯೂ ಅಲ್ಲಿ PDO ಗಳ adjustment. ಯಾವುದೇ ಕಾರಣಕ್ಕೂ change of land ಆಗಿಲ್ಲ. Conversion ಆಗಿಲ್ಲ. BIAAPA ಆಗಿಲ್ಲ.

ಅಧ್ಯಕ್ಷರು: ಒಳ್ಳೆಯ ಭೂಪನೇ ಸಿಕ್ಕಿದ್ದಾನಲ್ಲಾ.

ಶ್ರೀ ಪಿಳ್ಳ ಮುನಿಶಾಮಪ್ಪ: ಯಾರು ಭೂ ಪರಿವರ್ತನೆ ಮಾಡಿ land ಗೆ ಸಾಕಷ್ಟು ಹಣವನ್ನು ಕೊಟ್ಟು conversion ಮಾಡಿ BIAAPA ತೆಗೆದುಕೊಂಡಿರುತ್ತಾರೋ ಇವತ್ತು ಒಂದು ಸೈಟ್ ಮಾರುವುದಕ್ಕಾಗುವುದಿಲ್ಲ. ಕಾರಣವೇನೆಂದರೆ ಇಲ್ಲಿ ಕೇವಲ ಬೂದಿಗೆರೆ, ಕನ್ನಮಂಗಲ ಗ್ರಾಮ ಪಂಚಾಯಿತಿ, ಅಣ್ಣೇಶಪುರ ಗ್ರಾಮ ಪಂಚಾಯಿತಿಯ ಸುತ್ತಮುತ್ತಲೂ ಇರುವಂತಹ ಸಾಮಾನ್ಯ ರೈತರ ಹತ್ತಿರ 20 ಲಕ್ಷ, 50 ಲಕ್ಷ ರೂ.ಗಳಿಗೆ ಜಮೀನು ತೆಗೆದುಕೊಂಡು 11(A), 11(B) ಹಾಕಿಕೊಂಡು ಇವರಿಗೆ conversion ಏನೂ ಬೇಕಾಗಿಲ್ಲ, ಒಂದೊಂದು ಅಡಿ ಒಂದೊಂದು ಸಾವಿರ ರೂ.ಗಿಂತಲೂ ಮೇಲ್ಪಟ್ಟು 1,000 ರೂ, 2000 ರೂ.ಗೆ ಮಾರುತ್ತಿದ್ದಾರೆ. ಈ ರೀತಿ ಮಾಡಿಕೊಂಡು ಹೋದರೆ ನಮ್ಮ Revenue Department ಆಗಲಿ, ಗ್ರಾಮೀಣಾಭಿವೃದ್ಧಿ ಸಚಿವರಾಗಲಿ, ಎಷ್ಟು ಗಮನಹರಿಸಬೇಕೆಂದು ಸುಮಾರು ಹತ್ತಾರು ಕಾಗದಪತ್ರಗಳನ್ನು ಕೊಟ್ಟಿದ್ದರೂ ಕೂಡ ನನಗೆ ಯಾವುದೇ ಪ್ರತಿಫಲ ಆಗದೇ ಇದ್ದಾಗ ನಾನು ಯೋಚನೆ ಮಾಡುತ್ತಿದ್ದೇನೆ, ಏಕೆ ನಾವು ಶಾಸಕರಾದೆವು ಎಂದು ನಿಜವಾಗಿಯೂ ಕೂಡ ಎಲ್ಲೋ ಒಂದು ಕಡೆ ತುಂಬಾ ನೋವಿದೆ. ತಮ್ಮ ಕಾಲದಲ್ಲಿ ತಾವಾದರೂ ಕೂಡ ಜವಾಬ್ದಾರಿ ವಹಿಸಿ ಸರ್ಕಾರಕ್ಕೆ ಒತ್ತಾಯ ಹಾಕಿ. ಇವತ್ತು ಈ PDO ರವರನ್ನು suspend ಮಾಡಿಸಿದೆವು. ತಾಲ್ಲೂಕು ಪಂಚಾಯಿತಿಯಿಂದ complaint ಕೊಟ್ಟೆವು. ಜಿಲ್ಲಾ ಪಂಚಾಯಿತಿಗೆ complaint ಕೊಟ್ಟೆವು. ಜಿಲ್ಲಾ ಪಂಚಾಯಿತಿ CEO ರವರು ಏನೂ ಜವಾಬ್ದಾರಿಯನ್ನು ತೆಗೆದುಕೊಳ್ಳದೇ, ಯಾವ ರೀತಿಯ adjustment ಇದೆಯೋ ಏನೋ ಗೊತ್ತಿಲ್ಲ. ಸರ್ಕಾರಕ್ಕೆ ಹೊತ್ತು ಹಾಕುತ್ತಾರೆ. ಒಬ್ಬ PDO ಅನ್ನು ಜಿಲ್ಲಾ ಪಂಚಾಯತ್‌ನ Deputy Secretary ಯಾರು ಇದ್ದಾರೋ, DS-1, DS-2 ಅವರು suspend ಮಾಡಬಹುದು. ಇಲ್ಲವೇ CEO ರವರು

suspend ಮಾಡಬೇಕು. ಆದರೆ ಸರ್ಕಾರಕ್ಕೆ ಕಳುಹಿಸುತ್ತಾರೆಂದರೆ; ಈ PDO ಎಂತಹ ಪ್ರಭಾವಶಾಲಿ ಎಂದು ಅರ್ಥ ಮಾಡಿಕೊಳ್ಳಿ, ಆ PDO ಇವತ್ತು 10 ಕೋಟಿ. ರೂ.ಗಳಿಗಿಂತಲೂ ಹೆಚ್ಚಾಗಿ ಹಣವನ್ನು ಮಾಡಿರತಕ್ಕಂತಹ ಒಬ್ಬ ಪ್ರತಿಷ್ಠಿತ ವ್ಯಕ್ತಿಯಾಗಿದ್ದಾನೆ. ಆ ವ್ಯಕ್ತಿ ತನ್ನ ಅಮಾನತ್ತು ಕುರಿತು KAT ಗೆ ಹೋಗಿ ಸರ್ಕಾರಕ್ಕೆ ಆದೇಶ ಮಾಡಿಸಿಕೊಳ್ಳುತ್ತಾನೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಏನು suspend ಮಾಡಿದ್ದಾರೆ, suspend ಮಾಡಿದ 8 ದಿವಸಕ್ಕೆ ಅದೇ place ಗೆ ಬಂದು 4 ತಿಂಗಳು ಆಗಿದೆ. ನಾನು ಮತ್ತೆ letter ಕೊಟ್ಟಿದ್ದೇನೆ. ಯಾವುದೇ suspend ಆದ ಮೇಲೆ ಆ ಜಾಗಕ್ಕೆ ಹಾಕುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಹೇಳಿದರೂ ಕೂಡ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಕೊಡುವಂತಹ 21% ಹಣ ಇರಬಹುದು, ವಿಕಲಚೇತನದವರಿಗೆ ಕೊಡುವಂತಹ 3% ಹಣ ಇರಬಹುದು, 5 ಕೋಟಿ ರೂ.ಗಳಲ್ಲಿ ಇವತ್ತು 11 ಕೋಟಿ ರೂ.ಗಳು ಇತ್ತು. 3% ಎಂದರೆ ಎಷ್ಟಾಯಿತು? ವಿಕಲಚೇತನರಿಗೆ ಆ ಹಣವನ್ನು ಏಕೆ ಕೊಟ್ಟಿಲ್ಲ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಏಕೆ ಕೊಟ್ಟಿಲ್ಲ? 25% ಹಣವನ್ನು ಏಕೆ ಖರ್ಚು ಮಾಡಿಲ್ಲ? ಕಾನೂನುಬಾಹಿರವಾಗಿ ಖರ್ಚು ಮಾಡಿದ್ದಾರೆ. ಇಷ್ಟ ಬಂದ ರೀತಿ ಖರ್ಚು ಮಾಡಿದ್ದಾರೆ. ಒಬ್ಬ secretary ಗೆ ಆಡಳಿತಾತ್ಮಕ ಅನುಮೋದನೆ ಕೊಡುವುದಕ್ಕೆ ಅವಕಾಶವಿಲ್ಲ. ಅದು ತಾಲ್ಲೂಕು ಪಂಚಾಯಿತಿಗೆ ಬರಬೇಕು, ಜಿಲ್ಲಾ ಪಂಚಾಯಿತಿಗೆ ಬರಬೇಕು. 25,000 ರೂ.ಗಳಿಗೆ ಅನುಮೋದನೆ ನೀಡಲು ಅವರಿಗೆ permission ಇದೆ. 1.75 ಲಕ್ಷ ರೂ.ಗಳಿಗೆ permission ಕೊಡುತ್ತಾರೆ. ತಾಂತ್ರಿಕ ಅನುಮೋದನೆಯನ್ನು ಒಬ್ಬ JE ಕೊಡುತ್ತಾರೆ. ಅವರಿಗೆ CCA ಪ್ರಕಾರ 25,000 ರೂ.ಗಳಿಗೆ ಅನುಮೋದನೆ ಕೊಡಲು ಅವಕಾಶ ಇದೆ. 1.75 ಲಕ್ಷದ ರೂ.ಗಳನ್ನು ಇವತ್ತು ಅಲ್ಲಿರುವಂತಹ ಎಲ್ಲಾ ಪಂಚಾಯಿತಿಯ, ತಾಲ್ಲೂಕಿನಲ್ಲಿ ಕೆಲಸ ಮಾಡುವಂತಹ ಎಲ್ಲಾ ಐದು JE ಗಳೂ ಕೂಡ, ಮೊನ್ನೆ ನಾನು ಪ್ರಶ್ನೆ ಕೇಳಿದ್ದೆ. ಉತ್ತರ ಬಂದಿಲ್ಲ. ಆದರೂ ನಾನೇ ಇಲಾಖೆಯಿಂದ ಉತ್ತರ ತೆಗೆದುಕೊಂಡಿದ್ದೇನೆ. ಒಬ್ಬೊಬ್ಬರು 36, 48, 56 CCA ಅನ್ನು ಮೀರಿ 25,000 ರೂ.ಗಳನ್ನು ಮೀರಿ 84 ಲಕ್ಷ, 1 ಕೋಟಿ 10 ಲಕ್ಷ ರೂ.ಗಳು. ಈ ರೀತಿ ಒಬ್ಬೊಬ್ಬ JE ಕೂಡ AEE permission

ಇಲ್ಲದೇ, EE permission ಇಲ್ಲದೇ, ಜಿಲ್ಲಾ ಪಂಚಾಯತ್‌ನ permission ಇಲ್ಲದೇ JE ಗಳು permission ಕೊಟ್ಟಿದ್ದಾರೆ.

ಅಧ್ಯಕ್ಷರು: ಚೆಕ್ ಕೊಡಬೇಕಾದರೆ ಪಂಚಾಯಿತಿ ಅಧ್ಯಕ್ಷರು, ಕಾರ್ಯದರ್ಶಿಯವರು ರುಜು ಹಾಕಬೇಕಲ್ಲವೇ?

ಶ್ರೀ ಪಿಳ್ಳ ಮುನಿಶಾಮಪ್ಪ: ಹೌದು. ಅದಕ್ಕೆ ಯಾವ ರೀತಿಯ adjustment ಇದೆಯೋ ಗೊತ್ತಿಲ್ಲ. ಅಂದರೆ ಎಲ್ಲರೂ ಅದೇ ರೀತಿ ಇರುತ್ತಾರೆ. ಎಲ್ಲಾ PDO ಗಳು ಅದೇ ರೀತಿ ಇರುತ್ತಾರೆ ಎಂದು ನಾನು ಹೇಳುತ್ತಿಲ್ಲ.

ಅಧ್ಯಕ್ಷರು: ಹಾಗಲ್ಲ, ಅವರು ಚುನಾಯಿತ ಪ್ರತಿನಿಧಿ ಅಲ್ಲವೇ?

ಶ್ರೀ ಪಿಳ್ಳ ಮುನಿಶಾಮಪ್ಪ: ಹೌದು ಅಧ್ಯಕ್ಷರೆ.

ಅಧ್ಯಕ್ಷರು: ಅವರು ಏನು ಮಾಡುತ್ತಿದ್ದಾರೆ?

ಶ್ರೀ ಪಿಳ್ಳ ಮುನಿಶಾಮಪ್ಪ (ದೇವನಹಳ್ಳಿ): ಇತ್ತೀಚೆಗೆ ನಡೆದ ಪಂಚಾಯಿತಿ ಚುನಾವಣೆಯಲ್ಲಿ ಜನರು ತೀರ್ಮಾನ ತೆಗೆದುಕೊಂಡು ಹಿಂದೆಯಿದ್ದ bodyಯನ್ನು ತೆಗೆದು ಬೇರೆ body ಬರುವ ರೀತಿ ಮಾಡಿಕೊಂಡಿದ್ದಾರೆ. ಅದು ಯಾವ ಪಕ್ಷ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಮೊದಲಿದ್ದ ಅಧ್ಯಕ್ಷರಿಗೆ ಸರಿಯಾದ ರೀತಿ ಬುದ್ಧಿ ಕಲಿಸುವಂತಹ ಕೆಲಸವನ್ನು ಮಾಡಿದ್ದಾರೆ. ಆ ಕಾರಣಕ್ಕಾಗಿ, ಆ ಪಂಚಾಯತ್‌ಯಲ್ಲಿ ಕೆಲಸ ಮಾಡುತ್ತಿರುವ ಕುಮಾರ ಎಂಬುವವರನ್ನು ಸಸ್ಪೆಂಡ್ ಮಾಡಬಾರದು. ತಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ ಯಾವ ಅಧಿಕಾರಿಯನ್ನು ಕೂಡ ಸಸ್ಪೆಂಡ್ ಮಾಡಬಾರದೆಂದು ನಾನು ಆಗ್ರಹಿಸುತ್ತೇನೆ. ಸಸ್ಪೆಂಡ್ ಮಾಡಿದರೆ KAT ಹೋಗಿ ಒಂದು ವಾರದಲ್ಲಿ ಮತ್ತೆ ಬರುತ್ತಾರೆ. ನಾವು ಶಾಸಕರಾಗಿ ಯಾವ ರೀತಿ ಅಲ್ಲಿ ಕೆಲಸ ಮಾಡಬೇಕು? ಇದು ನನಗೆ ಮಾತ್ರವಲ್ಲ, ಸರ್ಕಾರಕ್ಕೆ ಅವಮಾನ. ಒಬ್ಬ ಸಚಿವರು ಮಾಡಿದ್ದರು ಪುನಃ ಬಲರಾಮ್ ಎಂಬ ಕಾರ್ಯದರ್ಶಿ ಅಲ್ಲೇ ಇರಬೇಕೆಂದು ಹೇಳಿದ್ದಾರೆ. KAT ಪ್ರಕಾರ ಅಲ್ಲೇ ಮಾಡಬೇಕೆಂದು ಹೇಳಿದ್ದಾರೆ. KAT ಯಲ್ಲಿ ಯಾವುದೇ ಕಾರಣಕ್ಕೂ ಅದೇ

ಜಾಗದಲ್ಲಿ ಮುಂದುವರೆಯಿರಿ ಎಂದು ಹೇಳುವುದಿಲ್ಲ. ಆದರೂ ಕೂಡ ನಮ್ಮ ಇಲಾಖೆಯಲ್ಲಿ ಹಣ ತೆಗೆದುಕೊಂಡು ಈ ರೀತಿ ಮಾಡಿದ್ದಾರೆ. ಅವನು ಲಕ್ಷಗಳನ್ನು ಹೊಡೆದು ಇಲ್ಲಿ ಸಾವಿರ ಕೊಟ್ಟು ಈ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ನಿಜವಾಗಿ ನಮ್ಮ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ, ಸರ್ಕಾರವನ್ನು ಮಾರಾಟಕ್ಕೆ ಇಟ್ಟಿದ್ದೇವೇನೋ ಎಂಬ ಕೆಟ್ಟ ತೀರ್ಮಾನ ನಮ್ಮ ಮನಸ್ಸಿಗೆ ಬರುತ್ತದೆ.

ಅಧ್ಯಕ್ಷರು: ಮಂತ್ರಿಗಳು ಇದ್ದಾಗ ನೀವು ಹೇಳಲಿಲ್ಲ.

ಶ್ರೀ ಪಿಳ್ಳ ಮುನಿಶಾಮಪ್ಪ: ನಾನೇನು ಮಾಡಲಿ ಅಧ್ಯಕ್ಷರೆ, ತಾವು ಅವಕಾಶ ಕೊಟ್ಟರೆ, ಮೊದಲ ಬಾರಿ ಗೆದ್ದಿರುವಂತಹ ಎಲ್ಲಾ ಶಾಸಕರಿಗೂ ಆತಂಕವಿದೆ.

ಅಧ್ಯಕ್ಷರು: ಹಾಗಲ್ಲ, ಮಂತ್ರಿಗಳು ಇದ್ದಂತಹ ಸಂದರ್ಭದಲ್ಲಿ ಈ ವಿಚಾರವನ್ನು ಹೇಳಿದ್ದರೆ ಅವರಿಗೆ ಗೊತ್ತಾಗುತ್ತದೆ.

ಶ್ರೀ ಪಿಳ್ಳ ಮುನಿಶಾಮಪ್ಪ: ಯಾವ ರೀತಿ ಮಾಡುತ್ತೀರೋ ಗೊತ್ತಿಲ್ಲ. ನಾನು ಗಮನ ಸೆಳೆಯುವ ಸೂಚನೆಯಲ್ಲಿ, ಶೂನ್ಯ ವೇಳೆಯಲ್ಲಿ ಕೊಟ್ಟಿದ್ದೇನೆ.

ಅಧ್ಯಕ್ಷರು: ಹತ್ತು ನಿಮಿಷ ಆಯಿತು ಮುಗಿಸಿ.

ಶ್ರೀ ಪಿಳ್ಳ ಮುನಿಶಾಮಪ್ಪ: ಅಧ್ಯಕ್ಷರೆ, ಇನ್ನೆರಡು ನಿಮಿಷ ಮಾತನಾಡುತ್ತೇನೆ. ಐದು ಪಂಚಾಯಿತಿಗಳಲ್ಲಿ ನಡೆಯುವಂತಹ ವ್ಯವಹಾರಗಳ ಪರಿಶೀಲನೆ ಆಗಬೇಕು ಮತ್ತು ಎಲ್ಲಾ ಪಿ.ಡಿ.ಓ ಮತ್ತು ಜೆ.ಇ ಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳಿ ಆಗ್ರಹಿಸುತ್ತೇನೆ.

ಅಧ್ಯಕ್ಷರು: ಸದಸ್ಯರು ಹೇಳಿರುವ ವಿಚಾರವನ್ನು ಸಚಿವರಿಗೆ ಕಳುಹಿಸಿಕೊಡಿ.

ಶ್ರೀ ಪಿಳ್ಳ ಮುನಿಶಾಮಪ್ಪ: ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನೀರಿಗೆ ತುಂಬಾ ಹಾಹಾಕಾರ ಪಡುತ್ತಿದ್ದೇವೆ. ರೈತರ ಜಮೀನಿನಲ್ಲಿ 1200–1300 ಅಡಿ ಆಳದಲ್ಲಿ ಬರುತ್ತಿರುವ ಅಲ್ಪಸ್ವಲ್ಪ ನೀರನ್ನು ತೆಗೆದು

ಏರ್‌ಪೋರ್ಟ್‌ನಲ್ಲಿ ಬರುವಂತಹವರಿಗೆ ನೀರು ಕೊಡುವುದಕ್ಕೋಸ್ಕರ ಹಾಕುತ್ತೀರಿ. ರೈತರು ಬರುವ ಹಣದಲ್ಲಿ ಜೀವನ ಮಾಡುತ್ತಿದ್ದಾರೆ. Karnataka Water Supply Board ನಿಂದ ವಿಜಿಪುರದಲ್ಲಿ 11 ಕೋಟಿ ರೂ.ಗಳಿಗೆ ಕೊಟ್ಟಿರುವ ಕೆಲಸವನ್ನು ನಾನು ಮತ್ತು ಕೃಷ್ಣಭೈರೇಗೌಡರು ಪೂಜೆ ಮಾಡಿ 2¼ ವರ್ಷಗಳಾಯಿತು. ಇದುವರೆಗೆ ಏನೂ ಆಗಿಲ್ಲ. ಅಲ್ಲಿನ ಕೆರೆಯಲ್ಲಿ 42 ಬೋರ್‌ವೆಲ್‌ಗಳನ್ನು ಹಾಕಿದ್ದು, 20 ಬೋರ್‌ವೆಲ್‌ಗಳಲ್ಲಿ ಪಂಪ್ ಮೋಟಾರ್ ಅಳವಡಿಸಿದ್ದರೂ ಕೂಡ ನೀರಿಲ್ಲ. 11 ಕೋಟಿ ರೂ.ಗಳ ಪ್ರಾಜೆಕ್ಟ್ ಮಾಡಿರುವುದು ಕೇವಲ ಎರಡು ಟ್ಯಾಂಕ್, ವಾಟರ್ ಸಪ್ಲೈ, ಕರೆಂಟ್ ಬಿಲ್ಲುಗಳಾಯಿತು, ಪೈಪ್‌ಲೈನ್ ಆಯಿತು, ನೀರು ಬರದೆ failure ಆಗಿದೆ.

ಅಧ್ಯಕ್ಷರು: Source ಇಲ್ಲದೆ overhead tank ಕಟ್ಟಿದ್ದಾರೆಯೇ?

ಶ್ರೀ ಪಿಳ್ಳ ಮುನಿಶಾಮಪ್ಪ: ಹೌದು ಅಧ್ಯಕ್ಷರೆ, ನಾನು ಸಾಕಷ್ಟು ಗಲಾಟೆ ಮಾಡಿ ಪೇಪರ್‌ನಲ್ಲಿ, ಟಿ.ವಿ ಯಲ್ಲಿ ಪ್ರಚಾರ ಮಾಡಿದೆವು. ಏನೂ ಪ್ರಯೋಜನವಾಗಲಿಲ್ಲ. ಸಚಿವರು ಬಂದಾಗಲೂ ಕೂಡ ನಾನು ಮನವಿ ಮಾಡಿಕೊಂಡಿದ್ದೇನೆ. ನೀರು ಬಂದಿಲ್ಲ.

ಅಧ್ಯಕ್ಷರು: ಇಲ್ಲಿ ಕೃಷ್ಣ ಬೈರೇಗೌಡರು ಇಲ್ಲವಲ್ಲ. Overhead tank ಅನ್ನು ಒಡೆದು ಹಾಕಬೇಕಲ್ಲ ಅದು ಹೇಗೆ?

ಶ್ರೀ ಪಿಳ್ಳ ಮುನಿಶಾಮಪ್ಪ: ಆ ಕೆಲಸವನ್ನು ನೀವು ಹೇಳಿದರೆ ಮಾಡಿಸುತ್ತೇವೆ. ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ನಾನು ಕೂಡ ಆ ಸಮುದಾಯದ ಮೀಸಲು ಕ್ಷೇತ್ರದಿಂದ ಬಂದಿರುವವನು. ಸ್ಥಾಯಿ ಸಮಿತಿಯ ಅಧ್ಯಕ್ಷರು ಮತ್ತು ಸದನ ಸಮಿತಿಯ ಅಧ್ಯಕ್ಷರಾದ ನರೇಂದ್ರಸ್ವಾಮಿ ಹಾಗೂ ಹಿರಿಯ ಸದಸ್ಯರು ಬಹಳ ವಿಷಯವನ್ನು ಹೇಳಿದ್ದಾರೆ. ಆದರೆ ಒಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವಂತಹ ಕೆಲಸ ಬೇಗ ಆಗಬೇಕು. SC/ST ಗಳಿಗೆ ಸಿಗುವಂತಹ ಹಣಕ್ಕೆ ತಾವು ಮಾಡಿರುವ ಕಾನೂನನ್ನು ಸ್ವಾಗತ ಮಾಡುತ್ತೇನೆ. ಆದರೂ ಕೂಡ ವಿಶೇಷವಾಗಿ

particular ಆಗಿ ಆ ಕಾಲೋನಿಗಳಲ್ಲಿ ಏನೇನು ಕೆಲಸವಾಗಬೇಕೋ ಅದು ಆಗಲೇಬೇಕು. ಸಾಮಾಜಿಕ ನ್ಯಾಯವನ್ನು ಕೊಡುವಂತಹ ಸಂದರ್ಭದಲ್ಲಿ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಈಗಾಗಲೇ ಮೂರು ವರ್ಷಗಳಾಗಿವೆ. ಇದುವರೆಗೆ ಈ ವರದಿಯನ್ನು ಏಕೆ ಮಂಡಿಸಿಲ್ಲ ಇದಕ್ಕೆ ಕಾರಣವೇನು? ಇದನ್ನು ಮುಂದಿನ ಸದನದಲ್ಲಿ ಮಂಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಾ, ರಾಜ್ಯದಲ್ಲಿ ಮಾದಿಗ ಜನಾಂಗದ ಬಹಳಷ್ಟು ಜನರು ಮತ್ತೆ ಮತ್ತೆ ಬೀದಿಗಿಳಿದು ಗಲಾಟೆ ಮಾಡುತ್ತಿದ್ದಾರೆ. ಈ ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತಂದು ಈ ವಿಚಾರವನ್ನು ಅರ್ಧಗಂಟೆ ಕಾಲಾವಧಿಯಲ್ಲಿ ಅಥವಾ ಬೇರೆ ರೂಪದಲ್ಲಿ ಚರ್ಚಿಸಲು ಅವಕಾಶ ಮಾಡಿಕೊಟ್ಟು ಆ ವರದಿಯನ್ನು ಜಾರಿಗೆ ತರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕೆ ತಮಗೆ ಧನ್ಯವಾದಗಳು.

ಅಧ್ಯಕ್ಷರು: ಉಮೇಶ್ ಜಿ. ಜಾಧವ್ ರವರೆ, ಐದ್ಯೆದು ನಿಮಿಷ ಮಾತನಾಡಿ ಮುಗಿಸಿ. ಎಲ್ಲವನ್ನೂ ಹೇಳುತ್ತೇನೆಂದರೆ ಆಗುವುದಿಲ್ಲ, ಹೆಚ್ಚು ಸಮಯವಿಲ್ಲ. ಬೇಗ ಮುಗಿಸಬೇಕು.

ಡಾ|| ಉಮೇಶ್ ಜಿ. ಜಾಧವ್ (ಚಿಂಚೋಳಿ): ಮಾನ್ಯ ಅಧ್ಯಕ್ಷರೆ, ಅನೇಕ ಇಲಾಖೆಗಳ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಕೊಟ್ಟಿರುವ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ.

ಅಧ್ಯಕ್ಷರು: ಪ್ರಮುಖವಾದ ಒಂದೋ ಎರಡು ವಿಚಾರಗಳನ್ನು ಹೇಳಿ ಪೂರೈಸಿ.

ಡಾ|| ಉಮೇಶ್ ಜಿ. ಜಾಧವ್: ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸಭೆಯ ಮುಖಾಂತರ ಧನ್ಯವಾದಗಳನ್ನು ಹೇಳುತ್ತೇನೆ. ಏಕೆಂದರೆ, ನಮ್ಮ ಹೈದರಾಬಾದ್–ಕರ್ನಾಟಕ ಮತ್ತು ಮುಂಬೈ–ಕರ್ನಾಟಕ ಪ್ರದೇಶದಲ್ಲಿ ವಾಸಿಸುತ್ತಿರುವ ಲಂಬಾಣಿ ತಾಣಗಳಲ್ಲಿ ಕಂಡು ಬರುವ ವಲಸೆ ಪ್ರವೃತ್ತಿಯನ್ನು ತಡೆಯಲು ಹಾಗೂ ತಾಂಡ ನಿವಾಸಿಗಳು ಅದರಲ್ಲೂ ವಿಶೇಷವಾಗಿ

ಮಹಿಳೆಯರಿಗೆ ಸ್ವಯಂ ಉದ್ಯೋಗದಲ್ಲಿ ತೊಡಗಿಸಲು ಅನುಕೂಲವಾಗುವಂತೆ ಬಂಜಾರ, ಆರ್ಥಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳು ಬೀದರ್ ಜಿಲ್ಲೆ ಹುಮ್ನಾಬಾದ್ ತಾಲ್ಲೂಕಿನ ಬೋರಂಪಳ್ಳಿ ಹಾಗೂ ಬಾಗಲಕೋಟೆ ಜಿಲ್ಲೆಯ ಗದ್ದನಕೇರಿಯಲ್ಲಿ ಸ್ಥಾಪಿಸಲಾಗುವ ಹಾಗೂ ಬಂಜಾರ ಭಾಷೆಯ ಅಭಿವೃದ್ಧಿ ವಿಶ್ವವಿದ್ಯಾಲಯ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಲು ಘೋಷಿಸಿದ್ದಾರೆ. ಈಗಾಗಲೇ ಚಿಂಚೋಳಿ ಬಾರ್ಡರ್ ಹುಮ್ನಾಬಾದ್‌ನಲ್ಲಿ 34 ಎಕರೆ ಭೂಮಿಯನ್ನು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಅಲಾಟ್ ಮಾಡಿದ್ದಾರೆ. ಖುದ್ದಾಗಿ ತಾಂಡಾ ನಿಗಮದ Managing Director ಅನ್ನು ಕರೆದುಕೊಂಡು ಹೋಗಿ ಬೌಂಡರಿಯನ್ನು ಫಿಕ್ಸ್ ಮಾಡಿ ಬಂದಿದ್ದೇವೆ. ಈ ಕೆಲಸವನ್ನು time bond programme ನಲ್ಲಿ ಮಾಡಬೇಕು. ತಾಂಡ ನಿಗಮವನ್ನು ನೋಡಿದರೆ ಅಷ್ಟು active ಇದ್ದಂತೆ ಕಾಣುತ್ತಿಲ್ಲ. ಆದುದರಿಂದ ಬಹಳ ಚುರುಕಾಗಿ ಕೆಲಸ ಮಾಡಬೇಕು. ಇತ್ತೀಚೆಗೆ ರೈತರ ಆತ್ಮಹತ್ಯೆ ಈ ರೀತಿ ಅನೇಕ ಸಮಸ್ಯೆಗಳಾಗುತ್ತಿವೆ. ರೆವಿನ್ಯೂ ಮಂತ್ರಿಗಳಿಗೆ ಹೇಳುವುದೇನೆಂದರೆ, ಕೆ.ನರಸಿಂಹಯ್ಯ ನೇತೃತ್ವದ ಸಮಿತಿ ನೀಡಿರುವ ವರದಿಯನ್ನು ಆದಷ್ಟು ಶೀಘ್ರವಾಗಿ ಅನುಷ್ಠಾನಗೊಳಿಸಬೇಕು ಮತ್ತು ಕ್ರಮ ಬದ್ಧವಾಗಿ ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಬೇಕು. ಅಫಜಲ್‌ಪುರ ತಾಂಡದಲ್ಲಿ ಗ್ರಾಮ ಪಂಚಾಯಿತಿಯ ಕಛೇರಿಯಲ್ಲಿ ತಾಂಡ ನಿವಾಸಿಗಳು ವಾಸ್ತವ್ಯ ಹೂಡಿದ್ದಾರೆಂಬ article newspaper ನಲ್ಲಿ ಬಂದಿತ್ತು. 50 ವರ್ಷಗಳಿಂದ ಎರಡು ಎಕೆರೆ ಜಾಗದಲ್ಲಿ ಒಂದು ತಾಂಡದಲ್ಲಿ ವಾಸವಿದ್ದ ಜನರನ್ನು Court direction ತಂದು ಒಕ್ಕಲೆಬ್ಬಿಸಿದ್ದು, ಅವರೀಗ ಗ್ರಾಮ ಪಂಚಾಯಿತಿಯಲ್ಲಿ ವಾಸ ಮಾಡುತ್ತಿದ್ದಾರೆ. ಈ article ಎಂಟು ದಿವಸಗಳ ಹಿಂದೆ news paper ನಲ್ಲಿ ಬಂದಿದೆ.

ಅಧ್ಯಕ್ಷರು: ಅಫಜಲ್‌ಪುರ ಎಂ.ಎಲ್.ಎ ಇದ್ದಾರೆ, ನೀವೇಕೆ ಮಾತನಾಡುತ್ತೀರಿ ಬಿಡಿ.

ಡಾ|| ಉಮೇಶ್ ಜಿ. ಜಾಧವ್: ಆದಷ್ಟು ಬೇಗ ಕಂದಾಯ ಗ್ರಾಮಗಳಾಗಿ convert ಮಾಡಬೇಕೆಂದು ನನ್ನ ವಿನಂತಿಯಾಗಿದೆ. ಸಮಾಜ

ಕಲ್ಯಾಣ ಇಲಾಖೆಯ ಮಂತ್ರಿಗಳಲ್ಲಿ ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಅನೇಕ ಸ್ಕೀಮ್‌ಗಳು ಕಟ್ಟಕಡೆಯ ವ್ಯಕ್ತಿಗೆ ಮುಟ್ಟುತ್ತಿಲ್ಲ. ಲಿಡ್‌ಕರ್ ಆಧುನಿಕ ಕುಟೀರದಲ್ಲಿ 10 ಆಧುನಿಕ ಕುಟೀರಗಳ ಸಲುವಾಗಿ ಪತ್ರ ಕೊಟ್ಟು ಒಂಭತ್ತು ಬಾರಿ ಡಿ.ಡಿ. ಕೊಟ್ಟಿದ್ದೇನೆ. 90,000 ದ ಒಂದು ಆಧುನಿಕ ಕುಟೀರ 6–7 ತಿಂಗಳವರೆಗೆ ನಮಗೆ ಕೊಡುವುದಿಲ್ಲ. ಸಾಮಾನ್ಯವಾಗಿ ಚಪ್ಪಲಿ ಹೊಲಿಯುವವನು ಅಲ್ಲಿ ಹೋದಾಗ ಆತ ಮುಖ ನೋಡುವುದಿಲ್ಲ ಕಾಲನ್ನು ನೋಡುತ್ತಾನೆ. ನಿಮಗೆಲ್ಲಾ ಒಳ್ಳೊಳ್ಳೆ ಆಧುನಿಕ ಕುಟೀರವನ್ನು ತರುತ್ತೇವೆ, ನಿಮ್ಮ lifestyle change ಮಾಡುತ್ತೇವೆಂದು ಅವರಿಗೆ ಆಶ್ವಾಸನೆ ಕೊಟ್ಟಿದ್ದೇವೆ. ಇದುವರೆಗೆ ಯಾವುದೇ ಕೆಲಸವಾಗುತ್ತಿಲ್ಲ. ಆದಷ್ಟು ಬೇಗ ಮಂತ್ರಿಗಳು ಅವರಿಗೆ ನಿರ್ದೇಶನ ಕೊಡಬೇಕು. ನಾವು ಯಾವ್ಯಾವ ಪತ್ರ ಕೊಟ್ಟಿದ್ದೇವೆ, ಅದರ ಮೇಲೆ ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕು. Labour Department ನಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನಾ ಸ್ಕೀಮ್ ಇದ್ದು, ಇದು ಬಹಳ ಒಳ್ಳೆಯ ಸ್ಕೀಮ್ ಆಗಿದೆ. ಡಾ|| ಮಲ್ಲಿಕಾರ್ಜುನ ಖರ್ಗೆಯವರು ಕಾರ್ಮಿಕ ಸಚಿವರಾದಾಗ ಈ ಸ್ಕೀಮ್ ತಂದಿದ್ದರು. ಇದು unorganized sectorನಲ್ಲಿ ವಲಸೆ ಹೋಗುವವರಿಗೆ ಬಹಳ ಉಪಯೋಗವಾಗುವಂತಹ ಸ್ಕೀಮ್ ಆಗಿದೆ. ಇದಕ್ಕೆ Health Card ಕೊಡಬೇಕಾಗಿದ್ದು, ಇನ್ನೂ ಪೂರ್ತಿ ಹೆಲ್ತ್ ಕಾರ್ಡ್ ಕೊಟ್ಟಿಲ್ಲ. ಇದನ್ನು ಖುದ್ದಾಗಿ follow up ಮಾಡುತ್ತಿದ್ದೇನೆ. ಇನ್ನೂ 100% ಕಾರ್ಡ್ ಕೊಟ್ಟಿಲ್ಲ. ಆದಷ್ಟು ಬೇಗ ಕಾರ್ಡ್ ಕೊಡಬೇಕೆಂದು ವಿನಂತಿ ಮಾಡುತ್ತೇನೆ. Central Government scheme ಬೀಡಿ ಕೆಲಸಗಾರರಿಗೆ ಮತ್ತು Mine worker ಗಳಿಗೆ, limestone dolomite worker ಗಳಿಗೆ, welfare fund ಇದೆ. ಅದರ welfare activities ನಮ್ಮ State Government monitor ಮಾಡಬೇಕು. ಎರಡು ವರ್ಷಗಳಿಂದ committee ಆಗಿಲ್ಲ. Committee ಆದರೆ ಒಳ್ಳೆಯದಾಗುತ್ತದೆಯೆಂದು ಹೇಳುತ್ತಾರೆ. ನಮ್ಮ ಏರಿಯ mining area ಆಗಿದ್ದು, ಬೀಡಿ ಕೆಲಸಗಾರರ ಏರಿಯಾ ಕೂಡ ಆಗಿದೆ. ಅವರಿಗೆ ಆದಷ್ಟು ಬೇಗ ಸಮಿತಿ ಮಾಡಬೇಕೆಂದು ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಇದರಲ್ಲಿ ಎಂ.ಎಲ್.ಎಗಳು ಸದಸ್ಯರಿರುತ್ತಾರೆ ಮತ್ತು ಯೂನಿಯನ್‌ರವರಿರುತ್ತಾರೆ.

ಆದಷ್ಟು ಬೇಗ ಸಮಿತಿ form ಮಾಡಬೇಕೆಂದು ವಿನಂತಿ ಮಾಡುತ್ತೇನೆ. Economic Development Activity ಬಗ್ಗೆ ಹೇಳುವುದಾದರೆ, ನಮ್ಮ ಚಿಂಚೋಳಿ ಕ್ಷೇತ್ರದಲ್ಲಿ ಬಹಳ ನೀರಿದೆ. 200 ರಿಂದ 300 ಅಡಿ ಆಳದವರೆಗೆ ಬೋರ್‌ವೆಲ್ ಹಾಕಿದರೆ ನೀರು ಸಿಗುತ್ತದೆ. ಮೇವು ಬಹಳವಿದೆ, ಜನರು ಕೆಲಸವನ್ನು ಮಾಡುತ್ತಾರೆ. ಜೊತೆಗೆ ಹೆಚ್ಚು ವಲಸೆ ಹೋಗುತ್ತಾರೆ. ಅಲ್ಲಿ Economic Development Activity ಸಲುವಾಗಿ ಹೈನುಗಾರಿಕೆಗೆ ಹೆಚ್ಚು ಒತ್ತು ಕೊಡಬೇಕು. ವಿಶೇಷವಾಗಿ ಗುಲ್ಬರ್ಗಾದಲ್ಲಿ ಕ್ಯಾಬಿನೆಟ್ ಆದಾಗ 14 ಕೋಟಿ ರೂ.ಗಳ ಒಂದು ಪ್ರಾಜೆಕ್ಟ್ ಕೊಟ್ಟಿದ್ದೇವೆ, ಅದನ್ನು ಅವರು postpone ಮಾಡಿ, ಮೂರು ಕೋಟಿ ರೂ.ಗಳನ್ನು ಮಾತ್ರ ಕೊಟ್ಟಿದ್ದಾರೆ. ಪ್ರತಿ ವರ್ಷ ಐದೈದು ಕೋಟಿ ರೂ.ಗಳಂತೆ ನಾಲ್ಕು ವರ್ಷ ಕೊಟ್ಟರೆ 50% ನಮ್ಮಲ್ಲಿ Economic Development Activity ಮಾಡಿ ನಮ್ಮಿಂದ ವಲಸೆ ಹೋಗುವುದನ್ನು ತಪ್ಪಿಸಬಹುದು.

ಮಾನ್ಯ ಅಧ್ಯಕ್ಷರೆ, ಆಮೇಲೆ ಕುಂಚವರಂ ಮಕ್ಕಳ ಮಾರಾಟ ಪ್ರಕರಣಗಳು, ತಾವು ಸಹ ಮಂತ್ರಿಯಾಗಿದ್ದಾಗ ಬಂದಿದ್ದೀರಿ. 12–14 ಕಿ.ಮೀ. ನಷ್ಟು ದೂರಕ್ಕೆ ಅಲ್ಲಿ ಮಕ್ಕಳು ಸ್ಕೂಲ್‌ಗೆ ನಡೆದುಕೊಂಡು ಹೋಗುತ್ತಾರೆ. ಆಂಧ್ರ ಬಾರ್ಡರ್ ಜೈರಾಬಾದ್‌ಗೆ ಹೋಗಬೇಕು. ನಾವು ರೋಡ್‌ನಲ್ಲಿ ಹೋಗುವಾಗ ಯಾವುದಾದರೂ ಮಕ್ಕಳನ್ನು ನಿಲ್ಲಿಸಿ ಮಾತನಾಡಬೇಕೆಂದರೆ ನಮ್ಮ ಗಾಡಿ ಹಾಗೂ ಬಸ್‌ಗಳನ್ನು ನೋಡಿದರೆ ಅವರು ಓಡಿ ಹೋಗುತ್ತಾರೆ, ಕಾರ್ ನೋಡಿ, ಜೀಪ್‌ಗಳನ್ನು ನೋಡಿ ಓಡಿ ಹೋಗುತ್ತಾರೆ. ಅಲ್ಲಿ ನಮಗೆ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಸ್ಕೂಲ್ ಹಾಗೂ ಮೊರಾರ್ಜಿ ದೇಸಾಯಿ ಸ್ಕೂಲ್‌ಗಳನ್ನು ಆದ್ಯತೆಯ ಮೇಲೆ ಕೊಡಬೇಕು. ಈಗಾಗಲೇ ಎರಡು ವರ್ಷಗಳಿಂದ ಸ್ಕೂಲ್ ಕೊಡುತ್ತೇವೆ ಎಂದು ಹೇಳುತ್ತಾ ಬಂದಿದ್ದೀರಿ. ಆದರೆ- ಇಲ್ಲಿಯವರೆಗೆ ನಮಗೆ ಯಾವುದೂ ಸ್ಕೂಲ್ ಕೊಟ್ಟಿಲ್ಲ. ಆದಷ್ಟು ಬೇಗ ಸ್ಕೂಲ್ ಕೊಡಬೇಕೆಂದು ವಿನಂತಿ ಮಾಡುತ್ತೇನೆ. Health Department ಬಗ್ಗೆ ಹೇಳುವುದಾದರೆ, ನಾನು ಪ್ರತಿ ಸಲ ನಮ್ಮ Health Minister ಹಾಗೂ Health Secretary ಯವರನ್ನು ಭೇಟಿ ಮಾಡುತ್ತೇನೆ. ಅಲ್ಲಿ simple diseases like

anemia ಇದೆ. ಅಲ್ಲಿ Hemoglobin 4 gms ರಿಂದ 6 gms ವರೆಗೆ ಆಗಿ, ಅಲ್ಲಿನ ಹೆಣ್ಣುಮಕ್ಕಳು ರಕ್ತಹೀನತೆಯಿಂದ ಸಾಯುತ್ತಿದ್ದಾರೆ. ಅಲ್ಲಿ simple ಆಗಿ ಒಂದು mobile medical unit ನಮ್ಮ SCP-TSP fund ನಲ್ಲಿ ಮಾಡಬೇಕು. ಮೊದಲು ಮಾಡಿದ ಮೊಬೈಲ್ ಯೂನಿಟ್‌ಗಳೆಲ್ಲಾ ನಿಂತು ಬಿಟ್ಟಿವೆ. ಅಲ್ಲಿ Mobile Medical unit ಆಗಬೇಕು. ಅಲ್ಲಿ ಬಹಳ ದೂರ ದೂರದ ಪ್ರದೇಶಗಳಿವೆ. 10–15 ಕಿ.ಮೀ. ದೂರದಲ್ಲಿ ತಾಂಡಾಗಳು ಹಾಗೂ ಊರುಗಳಿವೆ. ಅಲ್ಲಿ 35%–40% SC/ST ಜನರಿದ್ದಾರೆ. Mobile Medical unit ಅನ್ನು ಆದಷ್ಟು ಬೇಗ ಶುರು ಮಾಡಬೇಕು.

ಅಧ್ಯಕ್ಷರು: ಏಕೆ ಅದನ್ನು ನಿಲ್ಲಿಸಿಬಿಟ್ಟರು? ಮೊಬೈಲ್ ಯೂನಿಟ್ ನಮ್ಮಲ್ಲಿಯೂ ಒಂದು ಇತ್ತು. ಅದನ್ನು ನಿಲ್ಲಿಸಿಬಿಟ್ಟರು.

ಡಾ|| ಉಮೇಶ್ ಜಿ. ಜಾಧವ್: ಮಾನ್ಯ ಅಧ್ಯಕ್ಷರೆ, ಆ ಬಗ್ಗೆ ಮಂತ್ರಿಗಳನ್ನು ಕೇಳಬೇಕು.

ಶ್ರೀ ಯು.ಟಿ. ಖಾದರ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಅದಕ್ಕೆ ಒಂದು ಟೆಂಡರ್ ಕರೆದಿದ್ದೇವೆ. ಕೇಸ್ ಎಲ್ಲಾ ಆಗಿ ಬಾಕಿ ಉಳಿದಿದೆ.

ಡಾ|| ಉಮೇಶ್ ಜಿ. ಜಾಧವ್: ಮಾನ್ಯ ಅಧ್ಯಕ್ಷರೆ, ಎರಡು ವರ್ಷಗಳಿಂದ ಟೆಂಡರ್ ಕರೆದಿದ್ದೇವೆ, ಕೇಸ್ ಹಾಕಿದ್ದಾರೆ. ಕೋರ್ಟ್‌ಗೆ ಹೋಗಿದೆ ಎನ್ನುತ್ತಾರೆ. ನಾನು ಹೇಳುತ್ತೇನೆ. ನಿಮಗೆ ಕೋರ್ಟ್‌ಗೆ ಹೋಗುವುದಕ್ಕಾಗುವುದಿಲ್ಲವೆಂದರೆ ನಮಗೆ ಹೇಳ್ರಿ, ನಾವು ಹೋಗಿ ಲಾಯರ್‌ಗೆ defend ಮಾಡಬೇಕೆಂದು ಹೇಳುತ್ತೇವೆ. ಅದೇ ಕಥೆಯನ್ನು ಎರಡು ವರ್ಷಗಳಿಂದ ಹೇಳುತ್ತಿದ್ದಾರೆ. ಆದಷ್ಟು ಬೇಗ ಇದನ್ನು ಮಾಡಬೇಕು. ಇದು ಬಹಳ serious issue ಇದೆ. ನಮ್ಮ ಹತ್ತಿರ atleast mobile medical unit ಬಂದರೆ ಅನುಕೂಲ. Simple Paracetamol tablet ಕೂಡ ಅಲ್ಲಿನ ಜನರಿಗೆ ಸಿಗುತ್ತಿಲ್ಲ. ಅವರು quackery ಹತ್ತಿರ ಹೋಗಿ steroid tablet ತೆಗೆದುಕೊಂಡು diabetes, kidney failure ಈ ರೀತಿಯ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ.

Mobile unit ಬೇಗ ಶುರು ಮಾಡಬೇಕು. ಆಮೇಲೆ ನಮ್ಮ Social Welfare Department ಮಂತ್ರಿಯವರಿಗೆ ನಾನು ವಿನಂತಿ ಮಾಡುತ್ತೇನೆ. ಮಾನ್ಯ ಆಂಜನೇಯ ಸಾಹೇಬರೆ, . .

ಅಧ್ಯಕ್ಷರು: ಹೇಳಿ, ಇದ್ದಾರೆ ಹೇಳ್ರಿ.

ಡಾ॥ ಉಮೇಶ್ ಜಿ. ಜಾಧವ್: ನೀವು ನಮ್ಮ ಕ್ಷೇತ್ರಕ್ಕೆ ಒಂದು ದಿನ ಬಂದು ಅಲ್ಲೊ halt ಮಾಡಿ ನೋಡ್ರಿ. ನಮ್ಮಲ್ಲಿ ತಾಂಡಾಗಳು ಬಹಳ ದೂರ ದೂರ ಇವೆ. Light ಇಲ್ಲ, ರೋಡ್ ಇಲ್ಲ, ಕರೆಂಟ್ ಇಲ್ಲ. ಇವತ್ತು ಬೆಳಿಗ್ಗೆ ಒಂದು starred question ಗೆ answer ಕೊಟ್ಟಿದ್ದಾರೆ. 31 ಹಳ್ಳಿಗಳಿಗೆ ಅಂದರೆ ತಾಂಡಾಗಳಿಗೆ ಬಸ್ಸುಗಳ ವ್ಯವಸ್ಥೆಯಿಲ್ಲ, ರೋಡ್ ಇಲ್ಲ. ಕೆಲವು ಕಡೆಗಳಲ್ಲಿ ಕರೆಂಟ್ ಸಹ ಇಲ್ಲ. ಆದಕಾರಣ ತಾವು ಬಂದು ಅಲ್ಲಿನ ಪರಿಸ್ಥಿತಿ ನೋಡಿ ನಮ್ಮ ಸಮಸ್ಯೆ ಬಗೆಹರಿಸಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು: ನನಗೆ ಈಗಲೂ ಅಲ್ಲಿ ಕರೆಂಟ್ ಇಲ್ಲವೆಂಬುದು ಆಶ್ಚರ್ಯವಾಗುತ್ತದೆ.

ಡಾ॥ ಉಮೇಶ್ ಜಿ. ಜಾಧವ್: ಇಲ್ಲಿಯವರೆಗೆ ಕರೆಂಟ್‌ಯಿಲ್ಲ. ಮೊನ್ನೆ GESCOM ನವರೆಲ್ಲಾ ಬಂದು ನೋಡಿ ಹೋಗಿದ್ದಾರೆ. Forest Department ನ ಕೆಲವು ಸಮಸ್ಯೆಗಳಿವೆ. ಬಹಳಷ್ಟು ವರ್ಷಗಳಾದರೂ ಆಗುವುದಿಲ್ಲ.

ಅಧ್ಯಕ್ಷರು: ಹಾಗೆ ಇದ್ದರೆ ಆಗುವುದಿಲ್ಲ ಬಿಡಿ. Forest ನವರದು ಇದ್ದರೆ ಖಂಡಿತಾ ಆಗುವುದಿಲ್ಲ.

ಡಾ॥ ಉಮೇಶ್ ಜಿ. ಜಾಧವ್: ಮಾನ್ಯ ಅಧ್ಯಕ್ಷರೆ, even ಅಲ್ಲಿಗೆ solar ಹಾಕುವುದಕ್ಕೂ ಸಹ permission ಕೊಡುತ್ತಿಲ್ಲ. Solar light ಹಾಕುವುದಕ್ಕೂ ಸಹ permission ಕೊಡುತ್ತಿಲ್ಲ.

ಅಧ್ಯಕ್ಷರು: ಅದು ಏನೂ ಆಗುವುದಿಲ್ಲ. ಅವರೇ ಸಾಮ್ರಾಜ್ಯದಲ್ಲಿದ್ದಾರೆ. ಅವರನ್ನು ಯುದ್ಧದಲ್ಲಿ ಗೆಲ್ಲುವವರೆಗೂ ನೀವು ಏನೂ ಮಾಡುವುದಕ್ಕೆ ಆಗುವುದಿಲ್ಲ ಬಿಟ್ಟುಬಿಡಿ.

ಡಾ॥ ಉಮೇಶ್ ಜಿ. ಜಾಧವ್: ಆಮೇಲೆ ನಮ್ಮ ಹತ್ತಿರ Forest Rights Committee ಮಾಡಿದ್ದಾರೆ. Social Welfare Department ನವರು ಸ್ವಲ್ಪ interest ತೋರಿಸುತ್ತಿಲ್ಲ. ತಾವು ಹೇಳಿದ ಮೇಲೆ committee form ಮಾಡಿದ್ದಾರೆ. ಇಲ್ಲಿಯವರೆಗೂ ಒಂದೂ ಮೀಟಿಂಗ್ ಮಾಡಿಲ್ಲ.

ಅಧ್ಯಕ್ಷರು: ಯಾವುದು ಗ್ರಾಮ ಮಟ್ಟದಲ್ಲಿಯೋ ಅಥವಾ sub division level ನಲ್ಲಿ ಮಾಡಿದ್ದಾರೋ?

ಡಾ॥ ಉಮೇಶ್ ಜಿ. ಜಾಧವ್: ಮಾನ್ಯ ಅಧ್ಯಕ್ಷರೆ, ಗ್ರಾಮ ಮಟ್ಟದಲ್ಲಿಯೂ ಆಗಿಲ್ಲ.

ಅಧ್ಯಕ್ಷರು: ಗ್ರಾಮ ಮಟ್ಟದಲ್ಲಿ ಆಗದೇ ಇದ್ದರೆ ಅವರನ್ನು ತೆಗೆದುಹಾಕಿ ಬೇರೆ committee ಮಾಡ್ರಿ.

ಡಾ॥ ಉಮೇಶ್ ಜಿ. ಜಾಧವ್: ಆ ರೀತಿ ಆದೇಶ ಕೊಟ್ಟರೆ ನಾವು ಎಲ್ಲಾ change ಮಾಡಿಬಿಡುತ್ತೇವೆ.

ಅಧ್ಯಕ್ಷರು: ಮಾಡುವುದಲ್ಲ. ನೀವೇ ಮಾಡುವುದಕ್ಕೆ ಅವಕಾಶವಿದೆ. ಯಾವ ಗ್ರಾಮಸಭೆ ಕೆಲಸ ಮಾಡುವುದಿಲ್ಲ. ಅವುಗಳನ್ನು ತೆಗೆದುಹಾಕಿ, ಪಂಚಾಯಿತಿಯವರಿಗೆ ಹೇಳ್ರಿ, ಗ್ರಾಮಸಭೆ ಕರೆದು ತೆಗೆದುಹಾಕಿ ಬೇರೆಯವರನ್ನು ಮಾಡ್ರಿ ಎಂದು ಹೇಳಿ.

ಡಾ॥ ಉಮೇಶ್ ಜಿ. ಜಾಧವ್: ಆಯಿತು ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ್ (ಮಲ್ಲೇಶ್ವರಂ): ಮಾನ್ಯ ಅಧ್ಯಕ್ಷರೆ, . .

ಅಧ್ಯಕ್ಷರು: ನೀವು ಆರೋಗ್ಯದ ವಿಷಯ ಬಿಟ್ಟು ಬೇರೆ ಏನನ್ನೂ ಮಾತನಾಡುವುದಕ್ಕೆ ಹೋಗಬೇಡಿ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ್: ಆಯಿತು. ನಾನು ಆರೋಗ್ಯ ಇಲಾಖೆಯ ಮತ್ತು ವೈದ್ಯಕೀಯ ಶಿಕ್ಷಣದ ಬೇಡಿಕೆಯ ಮೇಲೆ ಮಾತನಾಡುತ್ತೇನೆ.

ಅಧ್ಯಕ್ಷರು: ವೈದ್ಯಕೀಯ ಶಿಕ್ಷಣ ಬೇಡ. ಔಷಧಿಯ ಬಗ್ಗೆ ಕಳೆದ ಸಲ ಹೇಳಿದ್ದಿರಲ್ಲಾ, ಅವರು ಏನು ಭಾಷಣದ ನಕಲನ್ನು ನಿಮಗೆ ಕಳುಹಿಸಿಕೊಟ್ಟಿದ್ದೆ. ಅದರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ ಅದಕ್ಕೆ ನನಗೆ ಉತ್ತರವಿಲ್ಲ. ಅದನ್ನು ಸ್ವಲ್ಪ ಹೇಳಿ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ್: ಕಳೆದ ಬಾರಿ demands ಮೇಲೆ ಸಮಗ್ರವಾಗಿ ಒಂದೂವರೆ ಗಂಟೆಗಳ ಕಾಲ ಮಾತನಾಡಿದ್ದು ಆಯಿತು. ಉತ್ತರದಲ್ಲಿ ಸರಿಯಾದ ಉತ್ತರವನ್ನು ಒದಗಿಸಿರಲಿಲ್ಲ. ಕ್ರಮವನ್ನೂ ಜರುಗಿಸಿಲ್ಲ. ಯಾವ ರೀತಿ ಈ ಒಂದು ಯುವಕರು ಬಹಳ ಉತ್ತಮವಾಗಿ ಕ್ರಿಯಾಶೀಲವಾಗಿ ಕೆಲಸ ಮಾಡುವಂತಹವರು ಇವರ ಕೈಯಲ್ಲಿಯೇ ಆರೋಗ್ಯ ಇಲಾಖೆ ಈ ರೀತಿ ಯಾವುದೇ ಸಾಧನೆಯಾಗಲಿ, ಆರೋಗ್ಯ ಕ್ಷೇತ್ರದಲ್ಲಿ ಗುಣಮಟ್ಟದ ಪರಿವರ್ತನೆ ಮತ್ತು ಏನು ಒಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯೂ ಸಹ ಸರಿಯಾದಂತಹ ಯಾವುದೇ ವ್ಯವಸ್ಥೆ ಇಲ್ಲ. ಇಷ್ಟೆಲ್ಲಾ ವೈದ್ಯಕೀಯ ಸಿಬ್ಬಂದಿಗಳ recuitment ಆಗಿ ಸಾವಿರಾರು ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಈ ಸಾವಿರಾರು ಕೋಟಿ ರೂಪಾಯಿಗಳ ಹಣ ಖರ್ಚು ಮಾಡಿ ಈಗ ಡಾ|| ಜಾಧವ್‌ರವರು ಹೇಳುತ್ತಿದ್ದರು. weekly Iron and Folic acid tablets ಅನ್ನು ಕೊಡಬೇಕೆಂದು ರಾಷ್ಟ್ರಮಟ್ಟದಲ್ಲಿ ಒಂದು ಕಾರ್ಯಕ್ರಮ ರೂಪಿಸಿ ಪ್ರತಿಯೊಂದು ವಾರಕ್ಕೂ ಎಲ್ಲಾ ಹೆಣ್ಣುಮಕ್ಕಳಿಗೆ ಈ ಕಬ್ಬಿಣದ ಮಾತ್ರೆ ಮತ್ತು folic acid ಮಾತ್ರೆ ಕೊಡಬೇಕು ಅಂದರೆ ಆ ಕಾರ್ಯಕ್ರಮ ಯಾವ ರೀತಿಯಲ್ಲಿ ನಡೆಯುತ್ತಿದೆ ಎಂಬುದು ಸಹ ಇವರಿಗೆ ಗೊತ್ತಿರುವುದಿಲ್ಲ. ಯಾವ ಪರಿಸ್ಥಿತಿಯಲ್ಲಿ ನಡೆಯುತ್ತಿದೆ, ಒಂದು auditing, ಒಂದು primary health center ನಲ್ಲಿ ಯಾವ ರೀತಿ auditing ಆಗಿ ಪ್ರತಿ ಸಾವಿರ ಜನರಿಗೆ ಒಂದು ನರ್ಸ್ ಇದ್ದಾರೆ ಅಂದರೆ ಆಶಾ ವರ್ಕರ್ ಇದ್ದಾರೆ, link worker ಇದ್ದಾರೆ ಮತ್ತು health sub centers ಇವೆ. ₹. 25,000–30,000 ಜನರಿಗೆ ಒಂದು ಆರೋಗ್ಯ ಕೇಂದ್ರವಿರಬೇಕು. ಅಲ್ಲಿ ನೋಡಿದರೆ 10,000 ಜನರಿಗೂ ಸಹ ಒಂದು ಆರೋಗ್ಯ ಕೇಂದ್ರವಿದೆ, 5,000 ಜನರಿಗೂ ಇದೆ, 700 ಜನರಿಗೂ ಒಂದು

ಆರೋಗ್ಯ ಕೇಂದ್ರವಿದೆ. 2,200 ಆರೋಗ್ಯ ಕೇಂದ್ರಗಳನ್ನು ಇಟ್ಟುಕೊಂಡಿದ್ದಾರೆ. ಇಷ್ಟೆಲ್ಲಾ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಯಾವುದೇ ರೀತಿಯಾದಂತಹ ಒಂದು ಲಸಿಕೆಯನ್ನೂ ಸಹ, ಲಸಿಕೆ ಹಾಕುವುದರಲ್ಲಿಯೂ ಸಹ ಎಷ್ಟು percent achieve ಮಾಡಿದ್ದಾರೆ ಎಂದು ಕೇಳಿ, ಲಸಿಕೆ ಕೊಡುವುದರಲ್ಲಿಯೂ ಸಹ ಎಷ್ಟು failure ಆಗಿದ್ದಾರೆ? ಅದಕ್ಕೆ ಇನ್ನೊಂದು ಹೊಸ ಕಾರ್ಯಕ್ರಮ ಇಂಧ್ರಧನುಷ್ ಎಂಬ ಕಾರ್ಯಕ್ರಮ ರೂಪಿಸಿಕೊಂಡಿದ್ದಾರೆ. ಈ ರೀತಿ ತಂತ್ರಜ್ಞಾನವನ್ನೂ ಸಹ ತಂದು MCTS ಎಂಬ ಕಾರ್ಯಕ್ರಮವೂ ಸಹ ಇದೆ. ಈ MCTS ಕಾರ್ಯಕ್ರಮವೂ ಸಹ ತಂತ್ರಜ್ಞಾನವನ್ನು ಬಳಸಿ ಬಹಳ ಉತ್ತಮವಾದಂತಹ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಈ call user group ಎಂದು ಮಾಡಿದ್ದಾರೆ. ಮತ್ತೆ MCTS portal ಎಂದೂ ಸಹ ಇದೆ. ಇವೆಲ್ಲಾ ಇಷ್ಟು ಸಾವಿರಾರು ಜನರು ಈ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡಬೇಕು, ಸಾವಿರ ಜನರು ಇರುತ್ತಾರೆ, ಸಾವಿರ ಜನರಲ್ಲಿ ಗರ್ಭಿಣಿ ಹೆಂಗಸರು ಎಷ್ಟು ಜನರು ಇರುತ್ತಾರೆ, ಎಷ್ಟು ಶಿಶುಗಳು ಇರುತ್ತವೆ, ಬಹಳ ಕಡಿಮೆ ಇರುತ್ತಾರೆ, 200 ಅಥವಾ 300 ಜನರು ಇರುತ್ತಾರೆ ಅಥವಾ 50 ಅಥವಾ 20 ಜನರು ಇರುತ್ತಾರೆ. ಇಷ್ಟೂ ಜನರನ್ನು ನೋಡಿದಾಗ ಸಾವಿರ ಜನರಲ್ಲಿ ಗರ್ಭಿಣಿಯವರು 50 ಜನ ಇದ್ದರೆ ಹೆಚ್ಚು. ಅದೂ ಸಹ tracking ಆಗುವುದಿಲ್ಲ. ಇಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಯಾವ ರೀತಿ ನಡೆಯುತ್ತಿವೆ, ಏನು ಕೆಲಸ ನಡೆಯುತ್ತಿದೆ ಎನ್ನುವುದು ಮಾನ್ಯ ಆರೋಗ್ಯ ಸಚಿವರಿಗೆ ಮಾಹಿತಿ ಇದೆಯೋ ಅಥವಾ ಇಲ್ಲವೋ ಎನ್ನುವುದು ಬಹಳ ಆಶ್ಚರ್ಯಕರವಾಗಿದೆ. ಏಕೆಂದರೆ, ಸಾಧನೆ ಪಟ್ಟಿಗಳಲ್ಲಿ ನಾವು ಹೇಳುತ್ತಾ ಹೋಗುತ್ತಿರುತ್ತೇವೆ. ಆದರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿಗಳಾಗಲಿ, ಅಂದರೆ ಯಾವ ರೀತಿ staff pattern ಇರಬೇಕು, ಆ staffing pattern ಪ್ರಕಾರ ಕೂಡ ಇಲ್ಲ. ಆ ವೈದ್ಯರು ಆ ಒಂದು ಕೇಂದ್ರ ಸ್ಥಾನದಲ್ಲಿಯೇ ಅಂದರೆ head quarters ನಲ್ಲಿಯೇ ವಾಸ ಮಾಡಬೇಕೆಂದು ತಮ್ಮ ಕಾಲದಲ್ಲಿಯೂ ಸಹ ಕಟ್ಟುನಿಟ್ಟಾಗಿ ಅನುಷ್ಠಾನ ಜಾರಿಗೆ ತಂದಿದ್ದಿರಿ. ಡಾಕ್ಟರ್ಸ್ headquarters ನಲ್ಲಿಯೇ ಇರಬೇಕು. ಯಾವುದೇ emergency

ಇದ್ದರೂ ಅಲ್ಲಿಯೇ ನೋಡಬೇಕು. ಅಲ್ಲಿಯೇ ಡಾಕ್ಟರ್ಸ್ ಸಿಗಬೇಕು ಎನ್ನುವ ದೃಷ್ಟಿಯಿಂದ headquarters ನಲ್ಲಿಯೇ ಅವರು ವಾಸ ಮಾಡಬೇಕೆಂದು ತಾವು ಕಟ್ಟುನಿಟ್ಟಾಗಿ ಜಾರಿಗೆ ತಂದಿದ್ದಿರಿ. ಇವತ್ತು ಅದು ಅನುಷ್ಠಾನದಲ್ಲಿಲ್ಲ. ಮೇಲ್ವಿಚಾರಣೆಯಾಗುತ್ತಿಲ್ಲ, ಯಾರೂ ಸಹ headquarters ನಲ್ಲಿ ಇಲ್ಲ, ಯಾವ staff ಕೂಡ ಇರುವುದಿಲ್ಲ. ಈ ರೀತಿ ನಡೆದುಕೊಂಡು ಹೋಗುತ್ತಿದ್ದರೆ . .

ಡಾ|| ಶ್ರೀನಿವಾಸ ಮೂರ್ತಿ ಕೆ.: ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು head quarters ನಲ್ಲಿ ಇರಬೇಕು ಎಂದು ಪ್ರತಿಯೊಬ್ಬರೂ ಆಸೆ ಪಡುತ್ತಾರೆ. ಆದರೆ, ಎಲ್ಲಿಯೂ ಕೂಡ quarters ಅನ್ನು ಕಟ್ಟಿಲ್ಲ. ಒಂದು ಸಣ್ಣ ಮನೆಯಲ್ಲಿ ಇವತ್ತು ನಮ್ಮ ಆರೋಗ್ಯ ಇಲಾಖೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ನಡೆಸುತ್ತಿದೆ?

ಅಧ್ಯಕ್ಷರು: ಎಲ್ಲಿ ಭಟ್ಕಳದಲ್ಲಿನಾ?

ಡಾ|| ಶ್ರೀನಿವಾಸ ಮೂರ್ತಿ ಕೆ.: ಉತ್ತರದಲ್ಲಿಯೂ ಇದೆ. Doctors quarters ಅನ್ನು ಎಲ್ಲಿಯೂ ಕಟ್ಟಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ . . .

ಅಧ್ಯಕ್ಷರು: ಕೆಲವು ಕಡೆಗಳಲ್ಲಿ ಇದೆ.

ಡಾ|| ಶ್ರೀನಿವಾಸ ಮೂರ್ತಿ ಕೆ.: ಕೆಲವು ಕಡೆಗಳಲ್ಲಿ ಇದೆ. ಈಗ ನಮ್ಮಲ್ಲಿ 8 ಕೇಂದ್ರಗಳಿವೆ. 8 ಕೇಂದ್ರಗಳಲ್ಲಿ ಎರಡು ಕಡೆಗಳಲ್ಲಿ ಮಾತ್ರ quarters ಇವೆ.

ಅಧ್ಯಕ್ಷರು: ಅಲ್ಲಿ ಯಾರಾದರೂ ಇದ್ದಾರಾ?

ಡಾ|| ಶ್ರೀನಿವಾಸ ಮೂರ್ತಿ ಕೆ.: ಮಾನ್ಯ ಅಧ್ಯಕ್ಷರೆ, ಅಲ್ಲಿ ಇದ್ದಾರೆ. National Highway ಎಲ್ಲಿದೆ ನೋಡಿ ಅಂತಹ ಕಡೆಗಳಲ್ಲಿ ನಾವು ಅವರಿಗೆ ಆಗ್ರಹ ಮಾಡಿದ್ದೇವೆ. ದಯವಿಟ್ಟು ಅವರು ಅಲ್ಲಿ ಇರಬೇಕೆಂದು ಹೇಳಿದ್ದೇವೆ. ಅಲ್ಲಿ ಅವರು ಎರಡು ಕಡೆ National Highway ಕಡೆಗಳಲ್ಲಿ ಇದ್ದಾರೆ. ಆದರೆ, interior village ನಲ್ಲಿ ನಿಜವಾಗಿಯೂ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ತಾವು ಹೇಳಿದ-ಹಾಗೆ ನನ್ನ ಕ್ಷೇತ್ರದಲ್ಲಿಯೂ quarters ಇದೆ. ಹೈವೇ ಪಕ್ಕದಲ್ಲಿಯೇ quarters

ಇದೆ. ಆದರೆ, ಹೈವೇ ಜಾಗದಲ್ಲಿ accident ಆದರೆ quarters ನಲ್ಲಿ ಯಾರೂ ಇರುವುದಿಲ್ಲ. ಎಲ್ಲರೂ ತಾಲ್ಲೂಕು ಕೇಂದ್ರಗಳಲ್ಲಿ ಬಂದು ಇರುತ್ತಾರೆ. ಹಾಗಾಗಿ patients ಅನ್ನು ನೋಡುವವರೂ ಸಹ ಇರುವುದಿಲ್ಲ. ಅವರು ಇದ್ದ quarters ನಲ್ಲಿಯೇ ಅವರು ಇರುವ ಹಾಗೆ ಮಾಡುವುದು. ಅಂದರೆ ಮತ್ತೆ ಅದನ್ನು ಸಣ್ಣ–ಪುಟ್ಟ ರಿಪೇರಿ ಮಾಡಿಸಿ ಅವರನ್ನು ಅಲ್ಲಿಯೇ ಇರುವ ಹಾಗೆ ಮಾಡುವುದನ್ನು compulsory ಯಾಗಿ ತಾವು ಮಾಡಬೇಕು.

ಶ್ರೀ ಯು.ಟಿ. ಖಾದರ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿದ ಹಾಗೆ ಕೆಲವು ಕಡೆಗಳಲ್ಲಿ ಕೇಂದ್ರ ಸ್ಥಾನದಲ್ಲಿ quarters ಇದೆ. ಆದರೆ, ಕೆಲವರು ಅಲ್ಲಿ ಉಳಿಯುತ್ತಾರೆ, ಬಹುತೇಕ ಅಲ್ಲಿ ಉಳಿಯುವುದಿಲ್ಲವೆಂಬ ಮಾಹಿತಿಯಿದೆ. ನಾವು ಸಹ ನಮ್ಮ ರಾಜ್ಯದಲ್ಲಿ ಇಲಾಖೆಯಿಂದ enquiry ಮಾಡುವಾಗ ಕೆಲವೊಮ್ಮೆ ಅವರು ಇರುತ್ತಾರೋ ಇಲ್ಲವೋ ಎಂದು ನೋಡಿದ್ದೇವೆ. ಆದರೆ, ನಮ್ಮ ಶಾಸಕರು ತಿಂಗಳಿಗೆ ಒಮ್ಮೆ ಒಂದು review ಮಾಡಿ ಅವರು quarters ನಲ್ಲಿ ಇದ್ದಾರೋ ಅಥವಾ ಇಲ್ಲವೋ ಎಂದು ನಮಗೆ ರಿಪೋರ್ಟ್ ಕೊಟ್ಟರೆ ನಮಗೆ ತಕ್ಷಣವೇ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸುಲಭವಾಗುತ್ತದೆ. ಅದು number one. Number two ಏನೆಂದರೆ, ಇವತ್ತು ತಾವು ಹೇಳಿದ್ದೀರಿ. ಕೇಂದ್ರ ಸ್ಥಾನದಲ್ಲಿ ನಿಲ್ಲುವುದಕ್ಕೆ ಜನರಿದ್ದಾರೆ, ಅವರಿಗೆ quarters ಇಲ್ಲವೆಂದು ಹೇಳಿದ್ದೀರಿ. ನಾವು ಏನು ಮಾಡಿದ್ದೇವೆ ಎಂದರೆ ನಾವು ಅಲ್ಲಿ buildings ಕಟ್ಟಿದರೆ ಅವರು ಅಲ್ಲಿ ವಾಸ ಮಾಡಲಿಲ್ಲವೆಂದರೆ ದುಡ್ಡೂ waste ಹೀಗೆ ಎಲ್ಲಾ waste ಆಗುತ್ತದೆ. ಅದಕ್ಕಾಗಿ ಯಾರಾದರೂ ಅಲ್ಲಿ ವಾಸ ಮಾಡುತ್ತಾರೆ ಎಂದು ಹೇಳಿದರೆ ನಾವು ಪಕ್ಕದಲ್ಲಿಯೇ rent ನಲ್ಲಿ ಮನೆ ತೆಗೆದು ಅಲ್ಲಿಯೇ ಪಕ್ಕದಲ್ಲಿ ಕೊಡುತ್ತೇವೆ. ನೀವು ಆ ರೀತಿ ನಮಗೆ ಹೇಳಿಬಿಡಿ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, ಆಶ್ಚರ್ಯವೇನೆಂದರೆ, ಆರೋಗ್ಯ ಕೇಂದ್ರಗಳಿಗೆ ಇಷ್ಟೊಂದು ವ್ಯವಸ್ಥೆಯನ್ನು ನೀಡಿದ್ದಾರೆ. Taluk health officer ಇದ್ದಾರೆ, ಇವರ ಕೆಳಗಡೆ ಬಹಳಷ್ಟು ಜನ ಸಿಬ್ಬಂದಿಗಳಿರುತ್ತಾರೆ. ಇಷ್ಟೆಲ್ಲಾ ಇದ್ದರೂ ಮೇಲ್ವಿಚಾರಣೆ ಮತ್ತು monitoring system ಇಲ್ಲವೆನ್ನುವುದನ್ನೇ ಗಮನಕ್ಕೆ ತರುವುದಕ್ಕೆ ಪ್ರಯತ್ನ

ಮಾಡುತ್ತಿರುವುದು. ಏನೊಂದು ಕಾನೂನು ಜಾರಿಯಲ್ಲಿದೆ ಅದು ಮೊದಲು ಬಹಳ ಪರಿಣಾಮಕಾರಿಯಾಗಿ ಅನುಷ್ಠಾನವಾಗಿತ್ತು. ಅನುಷ್ಠಾನ ಆಗಿರುವುದನ್ನು ಮೇಲ್ವಿಚಾರಣೆ ಮಾಡದೇ ಇರುವ ಕಾರಣಕ್ಕೆ ಇವತ್ತು ಯಥಾಸ್ಥಿತಿಗೆ ಬಂದಿರುವಂತಹದ್ದು. ಇವತ್ತು ಇದಕ್ಕೆ 108 ಕಾರಣಗಳನ್ನು ಕೊಡಬಹುದು. ಅಲ್ಲಿ ಬಾಡಿಗೆಗೆ ಇರಬಹುದು, quarters ಇಲ್ಲವೆಂದರೆ ಅದನ್ನು ನಿರ್ಮಾಣ ಮಾಡಿ ಮಾಡಬಹುದು.

ಅಧ್ಯಕ್ಷರು: With-in the radius of a 8 kms. ಇದ್ದರೆ ಮಾಡಬಹುದು.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಆ ಕಾಲದಲ್ಲಿ ತಾವು 4 ಕಿ.ಮೀ. ಎಂದು ತಾವು ಕೊಟ್ಟಿದ್ದಿರಿ. ಕೇಂದ್ರ ಸ್ಥಳದಲ್ಲಿ ವಾಸ ಮಾಡುವ ಮೂಲಕ ಮತ್ತು ಅದರ ಜೊತೆಯಲ್ಲಿಯೇ ಅಲ್ಲಿ ಆರೋಗ್ಯ ರಕ್ಷಣಾ ಸಮಿತಿಗಳೇನಿವೆ, ಒಂದೊಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 1.75 ಲಕ್ಷ ರೂ.ಗಳನ್ನು ಕೊಡುತ್ತಾರೆ. ಈಗ ಕೊಟ್ಟಿರುವ ಹಣವನ್ನು ಯಾವ ರೀತಿ ಬಳಕೆ ಮಾಡುತ್ತಾರೆ.

ಶ್ರೀ ಯು.ಟಿ. ಖಾದರ್: ಮಾನ್ಯ ಸದಸ್ಯರ ಗಮನಕ್ಕೆ ಹೇಳುವುದೇನೆಂದರೆ, 1.75 ಲಕ್ಷ ರೂ.ಗಳಲ್ಲ. 2.5 ಲಕ್ಷ ರೂ.ಗಳನ್ನು ಕೊಡುತ್ತಿದ್ದೇವೆ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: 2.5 ಲಕ್ಷ ರೂ.ಗಳನ್ನು ಮಾಡಿರುವುದು ಬಹಳ ಸಂತೋಷ. ಆದರೆ . . . .

ಅಧ್ಯಕ್ಷರು: ಈಗ ಒಂದು ಕೆಲಸ ಮಾಡೋಣ. Session ಆದ ಮೇಲೆ ಎಲ್ಲರೂ ಅವರವರ ಮತಕ್ಷೇತ್ರಗಳಲ್ಲಿರುವ ಆಸ್ಪತ್ರೆಗಳಿಗೆ ಒಂದು round ಹೋಗಿ ಅಲ್ಲಿನ ಪರಿಸ್ಥಿತಿಗಳನ್ನು ತಿಳಿದುಕೊಂಡು, ವರದಿಯನ್ನು ತಯಾರು ಮಾಡಿ ಅವರಿಗೆ ಕಳುಹಿಸೋಣ. ಇದಾದ ನಂತರ ಬೇಡಿಕೆಗಳ ಮೇಲೆ next time ಚರ್ಚೆ ಮಾಡೋಣ.

ಶ್ರೀ ಡಿ.ಎನ್. ಜೀವರಾಜ್: ಮಾನ್ಯ ಅಧ್ಯಕ್ಷರೆ, Primary Hospitals ಗೆ ಶಾಸಕರುಗಳ ಅಧ್ಯಕ್ಷತೆಯಿತ್ತು. ನಮ್ಮ ಖಾದರ್ ಸಾಹೇಬರಂತಹವರು

ಮಂತ್ರಿಯಾಗಿ, ಆ ಶಾಸಕರ ಅಧ್ಯಕ್ಷತೆಯನ್ನು ತೆಗೆದುಹಾಕುವಂತಹ ಮಹತ್ತರವಾದ ನಿರ್ಧಾರವನ್ನು ಕೈಗೊಂಡರು. ಏಕೆ ಆ ರೀತಿ ಮಾಡಿದರೆಂದು ಗೊತ್ತಿಲ್ಲಪ್ಪ.

ಶ್ರೀ ಯು.ಟಿ. ಖಾದರ್: ನಾನು ಬಂದ ಮೇಲೆ ಆ ರೀತಿ ಯಾವುದನ್ನು ತೆಗೆದುಹಾಕಿಲ್ಲ.

ಶ್ರೀ ಡಿ.ಎನ್. ಜೀವರಾಜ್: ಹಾಗೇ ಮಾಡಿರುವುದು ಮಂತ್ರಿಗಳಿಗೆ ಗೊತ್ತಿಲ್ಲದೇ ಹೋಯಿತೇ?

ಶ್ರೀ ಯು.ಟಿ. ಖಾದರ್: ಪ್ರೈಮರಿಗೆ ಇರಲಿಲ್ಲ. ಹಾಗೇ ಬೇಕಾದರೆ ಪ್ರೈಮರಿಗೆ ನಿಮ್ಮನ್ನು ಅಧ್ಯಕ್ಷರನ್ನಾಗಿ ಮಾಡುತ್ತೇವೆ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್: ನಮ್ಮನ್ನು ಮಾಡುತ್ತೀರಾ? ನಾವು ಅಲ್ಲಿ ಆಸ್ಪತ್ರೆಗಳಿಗೆ ಹೋಗುತ್ತಿದ್ದೇವೆ.

ಡಾ|| ಕೆ. ಶ್ರೀನಿವಾಸ ಮೂರ್ತಿ: ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಇರಲಿಲ್ಲ. ತಾಲ್ಲೂಕು ಆಸ್ಪತ್ರೆಗೆ ಮಾತ್ರ ಇತ್ತು.

ಶ್ರೀ ಷಡಕ್ಷರಿ: ತಾಲ್ಲೂಕು ಆಸ್ಪತ್ರೆಗೆ ಈಗಲೂ ಇದೆ. ಅದನ್ನೇನು ಈಗಲೂ ತೆಗೆದು ಹಾಕಿಲ್ಲ.

ಶ್ರೀ ಡಿ.ಎನ್. ಜೀವರಾಜ್: ಮೊದಲು ನಾವೂ ಸಹ ಇದ್ದೆವು. ಈಗಿಲ್ಲ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಇವರೇ ಮಾಡಿದಂತಹ ಕಾನೂನುಗಳನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನ ಮಾಡುತ್ತಿಲ್ಲ. ಇವರು 2012 ರ ಹೊತ್ತಿಗೆ ಗುರಿಯಿಟ್ಟುಕೊಂಡಿರುವ National Health Mission ಪ್ರಕಾರ MMR and IMR rates ಅನ್ನು ಕಂಟ್ರೋಲ್ ಮಾಡಬೇಕೆಂದು ಅಂದುಕೊಂಡಿದ್ದರೋ ಇವತ್ತಿಗೂ ಆ ಗುರಿ ತಲುಪಿಲ್ಲ. ಅವರ ಗುರಿ 2012 ರ ಹೊತ್ತಿಗೆ MMR ನಲ್ಲಿ 100 ಕ್ಕೆ ತಲುಪಬೇಕೆಂದು ಇತ್ತು ಮತ್ತು IMR ನಲ್ಲಿ

25ಕ್ಕೆ ತಲುಪಬೇಕಾಗಿತ್ತು. ಆದರೆ ಇವತ್ತಿಗೂ ತಲುಪಿಲ್ಲ. ಒಂದು 144 ಮತ್ತು ಇನ್ನೊಂದು 32 ಇದೆ. MCTS ಎನ್ನುವ ತಂತ್ರಜ್ಞಾನ ಬಹಳ ಉತ್ತಮವಾಗಿದ್ದು, ಅಲ್ಲಿ programme ರೂಪಿಸಿರುವುದು ಬಹಳ ಚೆನ್ನಾಗಿದೆ. ಆದರೆ ಯಾರೂ ಸಹ ಅದನ್ನು ಬಳಕೆ ಮಾಡುತ್ತಿಲ್ಲ. ಬಳಕೆ ಮಾಡದಿದ್ದರೆ ಆ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಯಶಸ್ವಿ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇಷ್ಟೆಲ್ಲಾ ರೀತಿಯಲ್ಲಿ ಜನರಿಗೆ ಉತ್ತಮ ರೀತಿಯಲ್ಲಿ ಆರೋಗ್ಯವನ್ನು ಒದಗಿಸಬೇಕೆಂಬ ಪ್ರಯತ್ನ ನಡೆದರೂ ಮೇಲ್ವಿಚಾರಣೆ ಸರಿಯಿಲ್ಲ. ಇದರಲ್ಲಿ ಇವರು ಸರಿಯಾಗಿ ಜವಾಬ್ದಾರಿ ತೆಗೆದುಕೊಳ್ಳದೇ ಇರುವ ಕಾರಣ, National Programmes ಅನ್ನು ಸರಿಯಾಗಿ ಆಡಿಟಿಂಗ್ ಮಾಡದೇ ಇದ್ದ ಕಾರಣ, ಅಷ್ಟೂ National Programmes ಗೆ ಅವರು ಗುರಿಯಿಟ್ಟುಕೊಂಡಿರುವ ಪ್ರಕಾರ ಕೆಲಸವೇ ನಡೆದಿಲ್ಲ. ಲಸಿಕೆ ನೀಡುವುದರಲ್ಲೇ failure ಆದರೆ, ಇಷ್ಟೊಂದು ಸಿಬ್ಬಂದಿಗಳಿದ್ದು ಬೇರೆ ಏನು ಕೆಲಸ ನಡೆಯುತ್ತದೆ. 1,000 ಜನರಿಗೆ ಒಬ್ಬ ಆಶಾ ಕಾರ್ಯಕರ್ತರು ಬೇರೆ ಇದ್ದಾರೆ.

ಶ್ರೀ ಯು.ಟಿ. ಖಾದರ್: ಮಾನ್ಯ ಅಧ್ಯಕ್ಷರೆ, ಲಸಿಕೆಗೆ ಸಂಬಂಧಪಟ್ಟಂತೆ ಈ ಹಿಂದೆ ಹಾಗೂ ಇವತ್ತು ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ನಮ್ಮ ಈ ಪ್ರದೇಶದಲ್ಲಿ ಬಹುಶಃ 85 ರಿಂದ 90% ವರೆಗೆ ಗುರಿ ಮುಟ್ಟಿದೆ. ಕೆಲವು ಪ್ರದೇಶದಲ್ಲಿ high focused districtsನಲ್ಲಿ 65–70% ಇದ್ದ ಕಾರಣ ಈ ವರ್ಷ ಅದನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಂಡು, ಪ್ರತಿಯೊಂದು ಮಕ್ಕಳನ್ನು ಟಾರ್ಗೆಟ್ ತೆಗೆದುಕೊಂಡು ನಾಲ್ಕು ತಿಂಗಳುಗಳ ಕಾಲ continuous ಆಗಿ ಒಂದೊಂದು ವಾರ ಇಂದ್ರಧನುಷ್ ಕಾರ್ಯಕ್ರಮವನ್ನು ಹಮ್ಮಿಕೊಂಡು ಅಲ್ಲಿ 100% ಮಾಡಿದ ನಂತರ, next ಐದು ಜಿಲ್ಲೆಗಳನ್ನು ಹಂತ ಹಂತವಾಗಿ ತೆಗೆದುಕೊಳ್ಳುತ್ತೇವೆ. ಈ ಹಿಂದೆ ಆಗಿರುವ ಲೋಪದೋಷಗಳನ್ನು ಸರಿಪಡಿಸಿಕೊಂಡು ಮುಂದಿನ ಒಂದೆರೆಡು ವರ್ಷಗಳಲ್ಲಿ ಸಂಪೂರ್ಣವಾಗಿ immunization ಮಾಡುತ್ತೇವೆ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, ಅವರಿಗೆ ಲೋಪ ದೋಷವನ್ನು ಸರಿಪಡಿಸುವುದಕ್ಕೆ ಟ್ರ್ಯಾಕಿಂಗ್ ಸಿಸ್ಟಮ್ ಇಲ್ಲ. Mother and Child tracking system ಹೇಗಿದೆಯೆಂದರೆ . . .

ಶ್ರೀ ಯು.ಟಿ. ಖಾದರ್: Mother and Child tracking system ಕೂಡ ಅದನ್ನು ಒಂದು ಮಾದರಿ system ನಲ್ಲಿ ಮಾಡುತ್ತಿದ್ದೇವೆ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ನಿಮ್ಮ Mother and Child tracking system ನಲ್ಲಿ ನಿಮ್ಮ data ಪ್ರಕಾರ ನೋಡಿದರೆ. . . .

ಅಧ್ಯಕ್ಷರು: ಮಾಡುತ್ತೇವೆಂದು ಹೇಳುತ್ತಿದ್ದಾರೆ. ಮಾಡುತ್ತಾರೆ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ತಾಯಂದಿರು 37 ಲಕ್ಷ ಇದ್ದಾರೆ. ಆದರೆ ಮಕ್ಕಳು 16 ಲಕ್ಷ ಇದ್ದಾರೆಂದು ತೋರಿಸಿದ್ದಾರೆ. ಇನ್ನೆಷ್ಟರ ಮಟ್ಟಿಗೆ tracking ಆಗುತ್ತಿದೆಯನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಆ Call user group SIM ಸಹ ಬಳಕೆಯಾಗುತ್ತಿಲ್ಲ. ಹಾಗಾಗಿ 1,000 ಜನರಿಗೆ ಒಂದು ಸಿಬ್ಬಂದಿ ಇರಬೇಕಾದರೆ, ಅವರು ಯಾವುದೇ ರೀತಿಯಾದಂತಹ ಕೆಲಸ ಮಾಡಿಲ್ಲವೆಂದರೆ ಮಂತ್ರಿಗಳು ಏನು ಮಾಡುತ್ತಾರೆ? ಮೇಲ್ವಿಚಾರಣೆ ಮಾಡಿ, ಇಡೀ ವ್ಯವಸ್ಥೆ ಮೇಲಿನಿಂದ ಕೆಳಗಡೆ ವರೆವಿಗೂ ಸರಿಯಾಗಿ ಕೆಲಸ ಮಾಡಿದಾಗ ಮಾತ್ರ ಕೆಲಸಗಳು ಪರಿಣಾಮಕಾರಿಯಾಗಿ ನಡೆಯುತ್ತದೆ. ರಾಷ್ಟ್ರೀಯ ನೀತಿ ಪ್ರಕಾರ ನಮಗೆ 1,500 ಆರೋಗ್ಯ ಕೇಂದ್ರಗಳು ಬೇಕು. ಆದರೆ ನಮ್ಮಲ್ಲಿ 2,200 ಆರೋಗ್ಯ ಕೇಂದ್ರಗಳಿವೆ. 2,200 ಆರೋಗ್ಯ ಕೇಂದ್ರಗಳನ್ನು, 375 ಸಮುದಾಯ ಆರೋಗ್ಯ ಕೇಂದ್ರಗಳನ್ನಿಟ್ಟುಕೊಂಡು ಅದರಲ್ಲಿ ಸುಮರು 50% ನಷ್ಟು ಕೇಂದ್ರಗಳಲ್ಲಿ ವೈದ್ಯರಿಲ್ಲ, specialists ಗಳಿಲ್ಲ. ಉಳಿದ ಆರೋಗ್ಯ ಕೇಂದ್ರಗಳಲ್ಲಿ ಏನೇನು ಕೆಲಸಗಳಾಗುತ್ತಿವೆ, ಅಲ್ಲಿ ಯಾವ ರೀತಿ ಕೆಲಸ ನಡೆಯುತ್ತಿದೆ ಮತ್ತು ಅಲ್ಲಿ staff pattern ಸಹ ನಡೆಯುತ್ತಿಲ್ಲ. ತಾಲ್ಲೂಕು ಆಸ್ಪತ್ರೆಗಳು ಯಾವ ರೀತಿ ಕೆಲಸ ಮಾಡುತ್ತಿವೆಯೆಂದರೆ, ಅಲ್ಲೂ ಸರಿಯಾಗಿ ಕೆಲಸ ನಡೆಯಲ್ಲ. ಅಲ್ಲಿ Gynecologist, Surgeon ಇದ್ದರೆ Anesthetist ಇರುವುದಿಲ್ಲ. ಕೆಲವು ಕಡೆ Anesthetist ಇದ್ದರೆ Gynecologist

ಇರುವುದಿಲ್ಲ. ಈ ರೀತಿ ವೈಜ್ಞಾನಿಕವಾಗಿ, ಸಮರ್ಪಕವಾಗಿ ಕೆಲಸ ನಡೆಯದೇ ಇರುವ ಕಾರಣ ಎಲ್ಲವೂ failure ಆಗಿವೆ. ನಾನು ಪದೇ ಪದೇ ಬೇಡಿಕೆ ಮೇಲೆ ಮಾತನಾಡುವ ಸಂದರ್ಭದಲ್ಲಿ ಹೇಳಿದ್ದೇನೆ. ಕಳೆದ ಸಾರಿ ಬೇಡಿಕೆ ಮೇಲೆ ಮಾತನಾಡುವಾಗ ಬಹಳಷ್ಟು ವಿಚಾರಗಳನ್ನು ಮಾತನಾಡಿದ್ದೇನೆ. ಈಗ ಇನ್ನೊಂದು ಅಂಶವಾದ Blood storage and Blood Banks ಬಗ್ಗೆ ಹೇಳುವುದಾದರೆ, blood bank and blood storage ಇವುಗಳಲ್ಲಿ ಎಷ್ಟು ಬ್ಯಾಂಕ್‌ಗಳಿಗೆ ಲೈಸೆನ್ಸ್ ರಿನಿವಲ್ ಆಗಿದೆ, ಎಷ್ಟು ಸ್ಟೋರೇಜ್‌ಗಳು work ಅಗುತ್ತಿವೆ ಎನ್ನುವ ಬಗ್ಗೆ ಮಾಹಿತಿಯನ್ನು ತಿಳಿಸಬೇಕು. ಏಕೆಂದರೆ ಅಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ನಡೆಯುತ್ತಿಲ್ಲ.

ಅಧ್ಯಕ್ಷರು: ಎಲ್ಲಾ ಕಡೆ blood banks ಗಳಲ್ಲಿ ಕೆಲಸ ನಡೆಯುತ್ತಿದೆ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, ಎಷ್ಟು ಬ್ಯಾಂಕಗೆ ಲೈಸೆನ್ಸ್ ಇದೆ ಮತ್ತು ಎಷ್ಟರ ಲೈಸೆನ್ಸ್ renewal ಆಗಿದೆ ಎಂಬ ಬಗ್ಗೆ ನೀವೇ ಮಾಹಿತಿ ತರಿಸಿಕೊಂಡು ನೋಡಿ. ಬೆಂಗಳೂರಿನಲ್ಲಿ ಮೆಡಿಕಲ್ ಕಾಲೇಜಿನಲ್ಲಿ . . . .

ಅಧ್ಯಕ್ಷರು: ಆ ರೀತಿ ಅಲ್ಲ. ಲೈಸೆನ್ಸ್ ಇಲ್ಲದೇ ಯಾರು ಮಾಡುವುದಕ್ಕಾಗುವುದಿಲ್ಲ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, ರಿನಿವಲ್ ಆಗಿಲ್ಲ.

ಅಧ್ಯಕ್ಷರು: ಸರ್ಕಾರದಿಂದ ನಡೆಯುವಂತಹ ಯಾವ blood bank ಗಳಿವೆ ಅವೆಲ್ಲವೂ ನಡೆಯುತ್ತಿವೆ. ನೀವು ಖಾಸಗಿಯವರ blood bank ಬಗ್ಗೆ ಹೇಳಬಹುದು.

ಶ್ರೀ ಯು.ಟಿ. ಖಾದರ್: ಜಿಲ್ಲಾ ಮಟ್ಟದಲ್ಲಿ blood bank ಗಳು ಸುಸೂತ್ರವಾಗಿ ನಡೆಯುತ್ತಿವೆ. Blood storage ಗೆ ಸಂಬಂಧಪಟ್ಟಂತೆ inspection ಮಾಡಿದಾಗ ಕೆಲವು ಕಡೆ ಲೋಪದೋಷಗಳು ಕಂಡು ಬಂದಿವೆ

ಮುಂದಿನ ಮೂರು ತಿಂಗಳೊಳಗೆ, ರಾಜ್ಯದ ಎಲ್ಲಾ ತಾಲ್ಲೂಕು ಮಟ್ಟದ blood storage ಅನ್ನು full fledged ಆಗಿ ಮಾಡಿಸಿ ಅದಕ್ಕೊಬ್ಬ technician ಅನ್ನು ನೇಮಕ ಮಾಡುವ plan ಇದೆ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, ಅವರು ಆ ಮಾಹಿತಿಯನ್ನು ಒದಗಿಸಲಿ.

ಅಧ್ಯಕ್ಷರು: ಜಮಖಂಡಿ ಬಗ್ಗೆ ಅವರು ಹೇಳುತ್ತಾರೆ ಇರಿ.

ಶ್ರೀ ಸಿದ್ದು ಬಿ. ನ್ಯಾಮಗೌಡ: ಮಾನ್ಯ ಅಧ್ಯಕ್ಷರೆ, ನಮ್ಮ ಜಮಖಂಡಿಯಲ್ಲಿ Blood bankಗೆ ಕಳೆದ ಎರಡು ವರ್ಷಗಳ ಹಿಂದೆಯೇ equipments ಎಲ್ಲವೂ ಬಂದಿದೆ. Technician ಇಲ್ಲದ ಕಾರಣ ಇನ್ನೂ ಪ್ರಾರಂಭ ಮಾಡಿರುವುದಿಲ್ಲ.

ಅಧ್ಯಕ್ಷರು: Pathologist ಇದ್ದಾರಾ?

ಶ್ರೀ ಸಿದ್ದು ಬಿ. ನ್ಯಾಮಗೌಡ: ಇದ್ದಾರೆ ಸಾರ್.

ಅಧ್ಯಕ್ಷರು: Pathologist ಇದ್ದ ಮೇಲೆ ನಿಮಗೆ ಮಾಡಿಕೊಡುವುದಕ್ಕೆ ತೊಂದರೆಯೇನು?

ಶ್ರೀ ಸಿದ್ದು ಬಿ. ನ್ಯಾಮಗೌಡ: ಎರಡು ವರ್ಷವಾದರೂ ಇನ್ನೂ ಪ್ರಾರಂಭವಾಗಿಲ್ಲ.

ಅಧ್ಯಕ್ಷರು: ಖಾದರ್ ಅವರೆ, Pathologist ಇದ್ದ ಮೇಲೆ ಬೇಗ ಮಾಡಿ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, ನಿಮ್ಮ ಕಾಲದಲ್ಲಿ ಗ್ರಾಮೀಣ ಮತ್ತು ತಾಲ್ಲೂಕು ಮಟ್ಟದಲ್ಲಿ rapid response scheme ಎನ್ನುವ ಒಂದು ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದಿರಿ. ಆ ಕಾರ್ಯಕ್ರಮ ಮಾಡುವ ಮೂಲಕ, 10 ಜನರ ಒಂದು ತಂಡ ಮಾಡಿ, ಎಲ್ಲೇ ಏನೇ emergency ಗಳಿದ್ದರೂ, ಎಲ್ಲೇ ಒಂದು communicable disease ಆಗಲಿ, infectious disease ಆಗಲಿ, ಏನೇ ಇದ್ದರೂ ತಕ್ಷಣ ಪರಿಣಾಮಕಾರಿಯಾಗಿ

ಕೆಲಸ ನಡೆಯಬೇಕೆಂದು ಆ ಒಂದು ತಂಡ ಮಾಡಿ, ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಆರೋಗ್ಯ ಕೇಂದ್ರಗಳಲ್ಲಿ ಉತ್ತಮವಾಗಿ ಕೆಲಸ ನಿರ್ವಹಿಸಬೇಕು. ಎಲ್ಲೇ ಏನೇ ಆದರೂ ಹ್ಯಾಂಡಲ್ ಮಾಡಬೇಕೆನ್ನುವ ಉದ್ದೇಶದಿಂದ ಮಾಡಿದ್ದಿರಿ. ಅದೂ ಸಹ ಇವತ್ತು ಯಾವುದೂ ಚಾಲನೆಯಲ್ಲಿಲ್ಲ.

ಶ್ರೀ ಯು.ಟಿ. ಖಾದರ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಒಂದು ಟೀಮ್ ಇದೆ. ಇತ್ತೀಚೆಗೆ ಮುಳುಬಾಗಿಲಿನಲ್ಲಿ ಒಂದು ಘಟನೆಯಾದಾಗ ಟೀಮ್ ಹೋಗಿತ್ತು. ಹರಪನಹಳ್ಳಿಯಲ್ಲಿಯೂ ಸಹ out break ಆದ ಸಂದರ್ಭದಲ್ಲಿಯೂ ತಕ್ಷಣ ಅಲ್ಲಿಯೂ ಟೀಮ್ ಹೋಗಿದ್ದಾರೆ. 20–30 ಜನರಿಗೆ ಜ್ವರ ಬಂದಾಗ, ಆ ಟೀಮ್ ಅಲ್ಲಿಗೂ ಹೋಗಿ, ಅಲ್ಲಿ ಕುಳಿತುಕೊಂಡು ಎಲ್ಲರನ್ನು test ಮಾಡಿ, ಅಲ್ಲಿ ಚಿಕಿತ್ಸೆ ಕೊಡುವ ವ್ಯವಸ್ಥೆಯನ್ನು ಮಾಡುತ್ತಾರೆ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ನಾವು ಹೇಳುವುದಲ್ಲ ಅಧ್ಯಕ್ಷರೆ, ಅವರ ಇಲಾಖೆಯ ಅಂಕಿ ಅಂಶಗಳನ್ನು ತೆಗೆದುಕೊಂಡರೆ ತಿಳಿಯುತ್ತದೆ. Urban Health Mission ನಲ್ಲಿ ಎರಡು ವರ್ಷವಾಗಿದ್ದರೂ ಇನ್ನೂ ಒಂದು ರೂಪಾಯಿಯ ಕೆಲಸವಾಗಿಲ್ಲ.

ಅಧ್ಯಕ್ಷರು: ಅಲ್ಲಿ ಏನು ಕೆಲಸವಾಗಬೇಕು?

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ನಗರ ಪ್ರದೇಶಗಳಲ್ಲಿ ಆರೋಗ್ಯ ಕೇಂದ್ರಗಳನ್ನು ಪ್ರಾರಂಭ ಮಾಡುವುದಾಗಲಿ, ಆಸ್ಪತ್ರೆ ಮಾಡುವುದಾಗಲಿ ಇದಕ್ಕೆ ಸಂಬಂಧಿಸಿದಂತೆ 110 ಕೋಟಿ ರೂ.ಗಳಲ್ಲಿ ಇದುವರೆವಿಗೂ ಒಂದು ರೂಪಾಯಿಯ ಕೆಲಸ ನಡೆದಿಲ್ಲ. ಈ ರೀತಿಯಾಗಿ ಎಲ್ಲಾ ಮಿಷನ್ ಹಣ lapse ಆಗುತ್ತಿದೆ. National Health Mission ದುಡ್ಡು ಸಹ lapse ಆಗುತ್ತಿದೆ.

ಅಧ್ಯಕ್ಷರು: ಯಾವುದೇ ಕಾರಣದಿಂದಲೂ ಕೇಂದ್ರ ಸರ್ಕಾರದಿಂದ ಬರುವ ದುಡ್ಡನ್ನು lapse ಮಾಡಬಾರದು. ಅದನ್ನು maximum ಬಳಸಿಕೊಳ್ಳಬೇಕು.

ಶ್ರೀ ಯು.ಟಿ. ಖಾದರ್: ಬೆಂಗಳೂರು ಮಹಾನಗರ ಪಾಲಿಕೆಗೆ ಕೊಟ್ಟು ಅದರ ಉಸ್ತುವಾರಿ ಶಾಸಕರು ನೋಡಿಕೊಳ್ಳಬೇಕು. ನಮ್ಮ ಸಹಕಾರ ಅವರಿಗೆ ಸಂಪೂರ್ಣವಾಗಿ ಇದೆ. ಲೋಪದೋಷಗಳು ಕಂಡು ಬಂದರೆ ಅದನ್ನು ಸರಿಪಡಿಸುತ್ತೇವೆ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, ಶುಚಿ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ, Sanitary pads ಕೊಡುವಂತಹದೇನಿದೆ . . . .

ಅಧ್ಯಕ್ಷರು: ಬೇಗ ಬೇಗ ಪೂರೈಸಿ. ನಿಮಗೆ ಔಷಧಿ ವಿಚಾರಗಳಲ್ಲಿ ಹೇಳಿ ಎಂದು ಹೇಳಿದೆ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: Menstrual cycle ಇರುವಂತಹ ನಮ್ಮ ಹೆಣ್ಣು ಮಕ್ಕಳಿಗೆ Hygiene pads ಗಳ distribution ಆಗಲಿ, ರಾಷ್ಟ್ರೀಯ ಯೋಜನೆಯಲ್ಲಿ, ಅದರಲ್ಲಿಯೂ ಸಹ ಯಾವ ರೀತಿ ವಿತರಣೆಯಾಗುತ್ತಿದೆಯೆಂದರೆ, ಯಾವ ಒಂದು ಬಡಹೆಣ್ಣು ಮಕ್ಕಳಿಗೂ ಸರಿಯಾಗಿ pads ವಿತರಣೆಯಾಗದೆ, ಅದೂ ಸಹ ಬಂದು ಹಾಗೆಯೇ ಮೂಲೆಯಲ್ಲಿ ಬಿದ್ದಿರುತ್ತದೆ. ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಆರೋಗ್ಯ ಇಲಾಖೆಗಳು ಸೇರಿ ಕೆಲಸ ಮಾಡಬೇಕು. ಆರೋಗ್ಯ ಇಲಾಖೆಯವರು procurement ಮಾಡುತ್ತಾರೆ. ಆದರೆ ಯಾವುದೇ ಇಲಾಖೆಯವರು ಜವಾಬ್ದಾರಿ ತೆಗೆದುಕೊಳ್ಳದೇ ವಿತರಣೆಯಾಗುತ್ತಿಲ್ಲ.

ಅಧ್ಯಕ್ಷರು: Stock ಎಲ್ಲಿದೆ ಹಾಗೂ ಎಲ್ಲಿ ಸರಿಯಾಗಿ ವಿತರಣೆ ಆಗಿಲ್ಲ ಎನ್ನುವ ಬಗ್ಗೆ ನಿಮ್ಮ ಗಮನಕ್ಕೆ ಬಂದರೆ, ಅವರಿಗೆ ಒಂದು ಸುದ್ದಿಯನ್ನು ಕೊಡಿ.

ಶ್ರೀ ಯು.ಟಿ. ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವ ಸರ್ಕಾರಿ ಶಾಲೆಯಲ್ಲಿ ಈ ವ್ಯವಸ್ಥೆ ಇಲ್ಲ, ಎಂಬ ಬಗ್ಗೆ ತಿಳಿಸಿ. ನಾನು ಅಲ್ಲಿಗೆ ಏಕೆ

ತಲುಪಲಿಲ್ಲ? ಎನ್ನುವ ಬಗ್ಗೆ ತಕ್ಷಣವೇ ತನಿಖೆ ಮಾಡಿಸಿ, ನೀಡುವ ವ್ಯವಸ್ಥೆ ಮಾಡುತ್ತೇನೆ. ನಿಮ್ಮ ಕ್ಷೇತ್ರದ ಮಾಹಿತಿ ಕೊಡಿ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ನೀವು ಯಾವುದೇ ಕ್ಷೇತ್ರದ ಬಗ್ಗೆ ಹೇಳಿದರೂ ಅದೇ ಪರಿಸ್ಥಿತಿಯಿದೆ. ಮಾನ್ಯ ಸಚಿವರಿಗೆ ಏನಾಗುತ್ತಿದೆ ಎನ್ನುವ ಬಗ್ಗೆ ಗೊತ್ತಿದೆಯೋ ಇಲ್ಲವೋ ಎಂದು ನನಗೆ ಆಶ್ಚರ್ಯವಾಗುತ್ತದೆ. ನಿಜಕ್ಕೂ ಈ ಕಾರ್ಯಕ್ರಮ ಎಲ್ಲಿಯೂ ತಲುಪಿಲ್ಲ. Weekly iron and folic acid tablet ನೀಡುವ ಕಾರ್ಯಕ್ರಮವನ್ನು ಬಹಳ ವಿಜೃಂಭಣೆಯಿಂದ ಇವರೇ ಬೆಂಗಳೂರಿನಲ್ಲಿ launch ಮಾಡಿದರು. ಇವತ್ತಿನ ದಿವಸ ಆ ಕಾರ್ಯಕ್ರಮ ಎಲ್ಲಿಯೂ ನಡೆಯುತ್ತಿಲ್ಲ. ಆ ಕಾರ್ಯಕ್ರಮ ನಡೆಯುತ್ತಿದೆಯೆಂದು ಯಾರಾದರೂ . . .

ಅಧ್ಯಕ್ಷರು: ಅದು ಏನು ಕಾರ್ಯಕ್ರಮ?

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: Iron and folic acid tablet ನೀಡುವುದು. ಇದರ ಗುಣಮಟ್ಟ 100 ಮಿಲಿ ಗ್ರಾಂ ಇರುವ ಕಡೆ 75 ಮಿಲಿ ಗ್ರಾಂ ಇದೆ.

ಅಧ್ಯಕ್ಷರು: ಇಲ್ಲಿ ತಂದು ತೋರಿಸಿಯಾದರೂ ತೋರಿಸಿ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: efficiency ಎಷ್ಟಿದೆ ಎಂದು ನೀವು ನೋಡಬೇಕಲ್ಲವೇ? Drug efficiency ಎಷ್ಟಕ್ಕಿದೆ, ಗುಣಮಟ್ಟ ಏನಿದೆ, ಸರ್ಕಾರದವರು ನೀವೇ ಗುಣಮಟ್ಟ ನೋಡುವವರು.

ಅಧ್ಯಕ್ಷರು: ನೀವೇ ಡಾಕ್ಟರ್ ಆಗಿದ್ದೀರಿ, ಅವರು ಹೇಳುವ prescription ಪ್ರಕಾರ low standard ಇದೆಯೆಂದು ಕಂಡು ಬಂದರೆ ದಯವಿಟ್ಟು ಏಕೆ ಒಂದು messageನ್ನು ಅವರಿಗೆ ನೀವು ಕಳುಹಿಸಬಾರದು? ಏಕೆಂದರೆ Assistant Drug Controller ಎಲ್ಲಾ ಜಿಲ್ಲೆಗೂ ಇದ್ದಾರೆ. ಅವರೇ ಮಾಡುವ ಕೆಲಸ ಇದು. ಎಲ್ಲಿಯಾದರೂ ಆಗಿರುವಂಥ information ಹೋಗದೇ ಹೋದರೆ detection ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ಎನ್. ವಿಜಯ್‌ಕುಮಾರ್: ಸಚಿವರು ಡಾಕ್ಟರ್ ಅಲ್ಲ.

ಅಧ್ಯಕ್ಷರು: ಡಾಕ್ಟರ್‌ಗಿಂತ ಚೆನ್ನಾಗಿ ತಿಳಿದುಕೊಂಡಿದ್ದಾರೆ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಅವರ ಆರೋಗ್ಯ ಚೆನ್ನಾಗಿದೆ ಅಧ್ಯಕ್ಷರೆ, ಬೇರೆಯವರ ಆರೋಗ್ಯವನ್ನೂ ಸಹ ಕಾಪಾಡಬೇಕು. ಈಗ ಖಾದರ್‌ರವರು ಅವರ ಆರೋಗ್ಯವನ್ನು ಚೆನ್ನಾಗಿ improve ಮಾಡಿಕೊಂಡಿದ್ದಾರೆ.

ಶ್ರೀ ಯು.ಟಿ. ಖಾದರ್: ಅವರು ಡಾಕ್ಟರ್ ಆಗಿದ್ದಾರೆ, ಪ್ರತಿನಿಧಿಯಾಗಿದ್ದಾರೆ. ಎಲ್ಲಾ ರೀತಿ ಸಹಕಾರ ಮಾಡಬಹುದು. ನಿಮ್ಮ ಸಲಹೆಯನ್ನು ನಮಗೆ ಕೊಡಿ. ನಾವು ಖಂಡಿತ ತನಿಖೆ ಮಾಡಿ ಕ್ರಮ ಕೈಗೊಳ್ಳುತ್ತೇವೆ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಬೆಂಗಳೂರಿನಲ್ಲಿ ಚಿಕುನ್ ಗುನ್ಯಾದ ಒಂದು ಸಭೆ ಕರೆಯಿರಿ ಎಂದು ನೀವು ಸಹ ಹೇಳಿದ್ದೀರಿ, ಇದುವರೆವಿಗೂ ಕರೆದಿಲ್ಲ.

ಅಧ್ಯಕ್ಷರು: ಬೇಗ ಕರೆಯಿರಿ. ನಮ್ಮ ಮನೆಯಲ್ಲೇ ಶುರುವಾಗಿದೆ. ನಮ್ಮ ವಿಶ್ವನಾಥ್ ಪಾಪ..

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಇವತ್ತೇನು ಬೆಂಗಳೂರು ನಗರದಲ್ಲಿ ಆರೋಗ್ಯ ಇಲಾಖೆಯಿಂದ ಬರಿ ಜಿಲ್ಲಾ ಪಂಚಾಯಿತಿ ಏರಿಯಾಗಳಿಗೆ ಮಾತ್ರ ಆರೋಗ್ಯ ಸೇವೆಯನ್ನು ಒದಗಿಸುತ್ತಿದ್ದಾರೆ. ಇಡೀ ಬೆಂಗಳೂರಿನಲ್ಲಿ ಗ್ರಾಮೀಣ ಭಾಗದಲ್ಲಿರುವ ನಾಗರೀಕರೆಲ್ಲಾ ನಗರಕ್ಕೆ ಬರುತ್ತಿದ್ದಾರೆ. ನಾನು ಕೇಳಿಕೊಳ್ಳುವುದೇನೆಂದರೆ, ಬಿಬಿಎಂಪಿ ಆರೋಗ್ಯ ಸೇವೆಯನ್ನು ಆರೋಗ್ಯ ಇಲಾಖೆಯವರೇ ತೆಗೆದುಕೊಳ್ಳಬೇಕು. ಬಿಬಿಎಂಪಿ ಆರೋಗ್ಯಕ್ಕಾಗಿ ಖರ್ಚು ಮಾಡುತ್ತಿರುವ ಬಜೆಟ್ ಹಣ ಬಹಳ ಕಡಿಮೆಯಿದೆ. 50 ಕೋಟಿ ರೂ.ಗಳನ್ನು ಖರ್ಚು ಮಾಡಿದರೆ ಅದೇ ಹೆಚ್ಚು. ಆದರೆ, ನಮ್ಮ ಆರೋಗ್ಯ ಇಲಾಖೆಯಲ್ಲಿ 6,500 ಕೋಟಿ ರೂಪಾಯಿಗಳವರೆಗೂ ಖರ್ಚಾಗುತ್ತಿದೆ. ಒಂದು ಕಾಲು ಕೋಟಿ ಜನಸಂಖ್ಯೆಯಿರುವಂಥ ಬೆಂಗಳೂರಿನಲ್ಲಿ 50 ಕೋಟಿ

ರೂಪಾಯಿಗಳನ್ನು ಸಹ ಖರ್ಚು ಮಾಡುತ್ತಿಲ್ಲ. ಇನ್ನು ಯಾವ ಮಟ್ಟಕ್ಕೆ ಆರೋಗ್ಯ ಸುಧಾರಣೆ ಮಾಡುತ್ತಾರೆ? ಬೆಂಗಳೂರಿನಲ್ಲಿ 35% ಜನರಿಗೆ ಅಸ್ತಮಾ ಇದೆ. ರಾತ್ರಿ ಹೊತ್ತು emergency ಒಬ್ಬರ ಕ್ಲಿನಿಕ್ ಓಪನ್ ಆಗಿರುವುದಿಲ್ಲ. Restaurant and Bar ಮಾತ್ರ ರಾತ್ರಿ ಒಂದು ಗಂಟೆಯವರೆಗೂ ಓಪನ್ ಆಗಿರುತ್ತದೆ. ಆದರೆ, emergency handle ಮಾಡುವುದಕ್ಕೆ ಯಾವುದೇ ಆರೋಗ್ಯ ಕೇಂದ್ರಗಳು ತೆರೆದಿರುವುದಿಲ್ಲ. 35% ಅಸ್ತಮಾ ಕೇಸ್‌ಗಳಿವೆ. Emergency ಇರುವಂಥ ಯಾವುದೇ ಒಬ್ಬ ಬಡವ ಆಸ್ಪತ್ರೆ, ನರ್ಸಿಂಗ್ ಹೋಂಗಳಿಗೆ ಹೋದರೆ ಸಾವಿರಾರು ರೂಪಾಯಿ ಬಿಲ್ ಆಗುತ್ತದೆ. ಆ ಕಾರಣದಲ್ಲಿ ಎಲ್ಲೋ ಒಂದು ಕಡೆ ಪ್ರಾಣಿಗಳ ತರಹ ಅವರು ನರಳುತ್ತಿದ್ದಾರೆ. ಯಾರೂ ಕೇಳುವವರಿಲ್ಲ, ಹೇಳುವವರಿಲ್ಲ. ನಾನು ದಯವಿಟ್ಟು ನಿಮ್ಮ ಕೇಳಿಕೊಳ್ಳುವುದೇನೆಂದರೆ, ಬೆಂಗಳೂರಿನ ಆರೋಗ್ಯವನ್ನು ಆರೋಗ್ಯ ಇಲಾಖೆಗೆ ಸೇರಿಸಿ. ಬೆಂಗಳೂರು ಬಿಬಿಎಂಪಿಯವರು ಅವರ ಅನುದಾನದಲ್ಲಿ ಆರೋಗ್ಯದ ಬಗ್ಗೆ 50 ಕೋಟಿ ರೂಪಾಯಿ ಖರ್ಚು ಮಾಡಿದರೆ ಹೆಚ್ಚು. ಬೆಂಗಳೂರಿನಲ್ಲಿರುವಂಥ ಒಂದು ಕಾಲು ಕೋಟಿ ಜನಸಂಖ್ಯೆಯ ಜನರು ಆರೋಗ್ಯ ವಂಚಿತರಾಗಿದ್ದಾರೆ. ದುಡ್ಡಿರುವವರು, insurance ಇರುವವರು ಮತ್ತೊಬ್ಬರು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಾರೆ. ಆದರೆ, ಇಲ್ಲಿ 80% ಕೂಲಿ ಕಾರ್ಮಿಕರಿದ್ದಾರೆ. ಅವರ ಪರಿಸ್ಥಿತಿ ಏನಾಗಬೇಕು? ದಯವಿಟ್ಟು ನಾನು ತಮ್ಮ ಮೂಲಕ. . . .

ಶ್ರೀ ಯು.ಟಿ. ಖಾದರ್: ಸಭಾಧ್ಯಕ್ಷರೆ ಉತ್ತರ ಸರಿಯಾಗಿ ಕೊಟ್ಟಿದ್ದಾರೆ. ಬಿಬಿಎಂಪಿಯಲ್ಲಿ ವರ್ಷಕ್ಕೆ ಎಷ್ಟೋ ಸಾವಿರ ಕೋಟಿ ರೂಪಾಯಿ ಬಜೆಟ್ ಮಾಡುತ್ತಾರೆ. ಅಲ್ಲಿ ಸ್ಥಳೀಯ ಶಾಸಕರು ಕುಳಿತುಕೊಂಡು ಆ ಮೀಟಿಂಗ್‌ನಲ್ಲಿ ಇಷ್ಟು ದುಡ್ಡಿದೆ ಎಂದು ಒತ್ತಾಯ ಮಾಡಬೇಕೇ ಅಥವಾ ಬೇಡವೇ? ಆಗದಿದ್ದರೆ ನೀವು ಬಿಬಿಎಂಪಿಯಲ್ಲಿ resolution ಮಾಡಿ ನಮಗೆ ಕೊಡಿ. ನಾವು ತೆಗೆದುಕೊಳ್ಳುತ್ತೇವೆ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಇವರು ಸಾವಿರಾರು ಕೋಟಿ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ರಕ್ಷಾ ಸಮಿತಿ ದುಡ್ಡಿದೆಯಲ್ಲಾ. . .

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಸಂಪೂರ್ಣ ದುರ್ಬಳಕೆಯಾಗುತ್ತಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ರಕ್ಷಾ ಸಮಿತಿ ದುಡ್ಡಿಗೆ ಹಿಂದೆ ಗ್ರಾಮ ಪಂಚಾಯತಿ ಅಧ್ಯಕ್ಷರು ಚೆಕ್‌ಗೆ ಸಹಿ ಹಾಕುತ್ತಿದ್ದರು. ಅದನ್ನು ತೆಗೆದು ಡಾಕ್ಟರ್‌ಗಳಿಗೆ, ಆಯಾಗಳಿಗೆ ಮಾಡಿದ್ದಾರೆ. ನಿಜವಾಗಿಯೂ ಒಂದು ರೂಪಾಯಿಯ ಕೆಲಸವಾಗುತ್ತಿಲ್ಲ. ಆರೋಗ್ಯ ರಕ್ಷಾ ಸಮಿತಿಗೆ ಕರ್ನಾಟಕ ರಾಜ್ಯ ಸರ್ಕಾರದಿಂದ ಪ್ರತಿ ಆರೋಗ್ಯ ಘಟಕಕ್ಕೆ ಈಗ 2.50 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಆ 2.50 ಲಕ್ಷ ರೂಪಾಯಿಗಳನ್ನು ಅವರು ಸುಮ್ಮನೆ ಕಳ್ಳ ಚೆಕ್ ಬರೆದುಕೊಂಡು ತಿಂದು ಹಾಕುತ್ತಿದ್ದಾರೆ.

ಅಧ್ಯಕ್ಷರು: ಯಾರು?

ಶ್ರೀ ಕೆ.ಎಂ. ಶಿವಲಿಂಗೇಗೌಡ: ಯಾರೆಂದರೆ ಡಾಕ್ಟರ್ ಮತ್ತು ಅಲ್ಲಿರುವಂಥ ಆಯಾ. ನಾನು ಹೇಳುತ್ತಿರುವುದು ಎಂ.ಎಲ್.ಎ.ಗಳ ಮೇಲೆ ನಂಬಿಕೆ ಇಲ್ಲವೇನ್ರಿ? ಶಾಸಕರನ್ನು ರಕ್ಷಾ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿ. ನಾವು ವಾರಕ್ಕೊಂದು ಮೀಟಿಂಗ್ ಮಾಡಿ ಕಂಟ್ರೋಲ್ ಮಾಡುತ್ತೇವೆ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಟೇಬಲ್, ಕುರ್ಚಿಗಳನ್ನು ಕೊಂಡುಕೊಳ್ಳುತ್ತಾರೆ.

ಶ್ರೀ ಯು.ಟಿ. ಖಾದರ್: ಸಭಾಧ್ಯಕ್ಷರೆ, ಈ ಹಿಂದೆ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಅಧಿಕಾರವಿತ್ತು. ಏನಾಗಿದೆಯೆಂದರೆ ಅದರ ಕಥೆ ಹೇಳುವುದಕ್ಕೆ ಹೋದರೆ ಒಂದು ಪುಸ್ತಕ ಬರೆಯಬಹುದು. ಅದಕ್ಕಾಗಿ ನೀವು ಶಾಸಕರನ್ನು ಸದರಿ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿ ಎಂದು ಹೇಳಿದಿರಿ. ಅದರ ಬಗ್ಗೆ ನಾನು ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ.

ಅಧ್ಯಕ್ಷರು: ನಮ್ಮಲ್ಲಿ ಹೇಳುತ್ತಿದ್ದರು, ಚೆಕ್‌ಗೆ ರುಜು ಹಾಕಬೇಕಾದರೆ ನನ್ನ ಪಾಲು ಎಷ್ಟಿದೆಯಪ್ಪಾ? ಎಂದು ಕೇಳುತ್ತಿದ್ದರು.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಚೆಕ್‌ಗೆ 5% ತೆಗೆದುಕೊಳ್ಳುತ್ತಿದ್ದರು.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಇದೇ ಆಗಿ ಬಿಟ್ಟಿದೆ. ವರ್ಷದ ಕೊನೆಯಲ್ಲಿ ಎಲ್ಲಾ ಹಂಚಿಕೊಳ್ಳುವ ಕೆಲಸ ಆಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಹಿಂದೆ ಗ್ರಾಮ ಪಂಚಾಯಿತಿಯವರು ಸಹಿ ಹಾಕಿ ಕೊಡುತ್ತಿದ್ದರು. ಹಳೆ ಕುರ್ಚಿಯನ್ನೆಲ್ಲಾ ರಿಪೇರಿ ಮಾಡಿ ದುಡ್ಡು ಹೊಡೆಯುತ್ತಿದ್ದರು. ಈಗ ನೀವು ಮಾಡಿ, ಅಲ್ಲಿ ನಮಗೆ ಇಂಜೆಕ್ಷನ್ ಇಲ್ಲ, ಹುಚ್ಚು ನಾಯಿ ಕಚ್ಚಿದ್ದಕ್ಕೆ ಇಂಜೆಕ್ಷನ್ ಇಲ್ಲ ಎಂದು ಹೇಳುತ್ತಾರೆ. ನಮಗೆ ಎಂಎಲ್‌ಎಗಳಿಗೆ ಗೌರವ ಕಾಪಾಡಿಕೊಳ್ಳಬೇಕೆಂದು ಇರುತ್ತದೆ. ಅದರಲ್ಲಿ ನಾವು ಎಂಜಲು ಕಾಸನ್ನು ಹೊಡೆಯುವುದಕ್ಕೆ ಹೋಗುವುದಿಲ್ಲ. ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿ.

ಶ್ರೀ ಯು.ಟಿ. ಖಾದರ್: ಸಭಾಧ್ಯಕ್ಷರ ಮುಂದೆ ಹೇಳಿದ್ದೀರಿ, ನಾವು ಮಾಡುತ್ತೇವೆ.

ಶ್ರೀ ಸಿ.ಟಿ. ರವಿ: ನಿನ್ನೆ ನಾನು ಆರೋಗ್ಯ ಸಂಬಂಧಪಟ್ಟ ವಿಷಯವಾಗಿ ಮಾತನಾಡಿದೆನು. ನೀವು ಇರಲಿಲ್ಲ. ಕಳೆದ ವರ್ಷ ಜೂನ್ 20ನೇ ತಾರೀಖಿನಂದು ನನಗೆ ಉತ್ತರ ಕೊಟ್ಟಿದ್ದೀರಿ. NRHM schemeನಲ್ಲಿ ನರ್ಸ್‌ಗಳನ್ನು ಖಾಯಂ ಮಾಡುವುದರ ಬಗ್ಗೆ ಆಂಧ್ರಪ್ರದೇಶ ಮಾದರಿಯಲ್ಲಿ ಮತ್ತು ತಮಿಳುನಾಡು ಮಾದರಿಯಲ್ಲಿ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದಿರಿ. ಎಲ್ಲಾ ಕ್ರಮ ವಹಿಸಿ ನಿಮ್ಮ ಆಫೀಸಿಗೆ ಫೈಲ್ ಬಂದು 3 ತಿಂಗಳಾಯಿತು. ಇವತ್ತಿಗೂ ಅದನ್ನು ಕ್ಲಿಯರ್ ಮಾಡಿಲ್ಲ. ನೀವೇ ಈ ಸ್ಥಿತಿಯಾದರೆ, ಬೇರೆಯವರಿಗೆ ಯಾವ ರೀತಿ ಹೇಳಬೇಕು? ಇದರ ಬಗ್ಗೆ ನೀವು ಎಷ್ಟು ವಿಳಂಬ ಮಾಡುತ್ತೀರೋ, ದಲ್ಲಾಳಿಗಳು ಹುಟ್ಟಿಕೊಳ್ಳುತ್ತಾರೆ. ದಲ್ಲಾಳಿಗಳು ಅವರೆಲ್ಲರ ಹತ್ತಿರ ವಸೂಲಿಗೆ ಹೋಗುತ್ತಿದ್ದಾರೆ. ನಿಮಗೆ ಕೆಟ್ಟ ಹೆಸರು ಬರುತ್ತದೆ. ಎಲ್ಲಾ ಫೈಲ್ ರೆಡಿ ಇದೆ. ನೀವು ಸಹಿ ಹಾಕಿ ಕಳುಹಿಸಿದರೆ ಅಷ್ಟು

ಜನರಿಗೆ ಉದ್ಯೋಗದ ಖಾಯಂ ಮಾಡಿ ಕೊಟ್ಟಂಥ ಗೌರವ ನಿಮಗೆ ಸಿಗುತ್ತದೆ. ಇದರಲ್ಲಿ ನೀವು involve ಆಗಿದ್ದೀರಿ ಎಂದು ನಾನು ಹೇಳುವುದಿಲ್ಲ. ಆದರೆ, ನಿಮ್ಮ ಹೆಸರಿನಲ್ಲಿ ವಸೂಲಿ ನಡೆಯುತ್ತದೆ, ಇವತ್ತೂ ನಡೆಯುತ್ತಿದೆ. ಅದಕ್ಕೆ ಅವಕಾಶ ಕೊಡದಂತೆ ಆದೇಶ ಹೊರಡಿಸುವ ಕೆಲಸ ಮಾಡಿ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಸಭಾಧ್ಯಕ್ಷರೆ, ಆರೋಗ್ಯ ಇಲಾಖೆಯಲ್ಲಿ ಪ್ರಮೋಷನ್‌ಗೆ ಬರಿ 24 ಪೋಸ್ಟ್ ಇರುವುದು. ಆರೋಗ್ಯ ಇಲಾಖೆಯ ನಿರ್ದೇಶಕರ ಪೋಸ್ಟ್‌ಗೂ ಸಹ in - charge ಇಟ್ಟುಕೊಂಡಿದ್ದಾರೆ. Timely Department Promotion Committee meeting ಸಹ ನಡೆಯುವುದಿಲ್ಲ. ಅಷ್ಟು ಸಾವಿರಾರು ಜನ ಇರುವ ಕಡೆ ಒಂದು ಇಲಾಖೆಗೆ 24 ಪ್ರಮೋಷನ್ posts ಇದೆ. ಒಂದು ಪೋಸ್ಟ್‌ನ್ನು ಸಹ ಇವರು ಆಯ್ಕೆ ಮಾಡುವುದಿಲ್ಲವೆಂದರೆ ಇನ್ನು ಯಾವ ರೀತಿ ಇಲಾಖೆ ನಡೆಯುತ್ತಿದೆ? Dialysis centreಗಳನ್ನು ಯಾವ ರೀತಿ ನಡೆಸುತ್ತಿದ್ದಾರೆ? ವೈದ್ಯಕೀಯ ಶಿಕ್ಷಣದ ಬಗ್ಗೆ ಎರಡೇ ನಿಮಿಷ ಮಾತನಾಡಬಯಸುತ್ತೇನೆ.

ಅಧ್ಯಕ್ಷರು: ಬೇಡ ರೀ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ನಿಜಕ್ಕೂ ವೈದ್ಯಕೀಯ ಶಿಕ್ಷಣದ ಬಗ್ಗೆ ನೀವು ಕೇಳಿದರೆ ಆಶ್ಚರ್ಯ ಪಡುತ್ತೀರಿ. ಯಾವ ಮಟ್ಟದಲ್ಲಿ ವೈದ್ಯಕೀಯ ಶಿಕ್ಷಣ ನಿರ್ವಹಣೆಯಾಗುತ್ತಿದೆ ಎಂದರೆ. . . . .

ಅಧ್ಯಕ್ಷರು: ವೈದ್ಯಕೀಯ ಶಿಕ್ಷಣ ಯಾರ ಕೈಯಲ್ಲಿ ಇದೆಯೆಂದು ಗೊತ್ತಿದೆಯೇ?

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಸಚಿವರ ಕೈಯಲ್ಲಿ ಇಲ್ಲವೇ ಅಧ್ಯಕ್ಷರೆ?

ಅಧ್ಯಕ್ಷರು: ಅಲ್ಲ, ಅಲ್ಲ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಹೇಳಿ ಅಧ್ಯಕ್ಷರೆ, ನಾವುನೂ ಕೇಳೋಣ.

ಶ್ರೀ ಸಿ.ಟಿ. ರವಿ: ಯಾರ ಕೈಯಲ್ಲಿದ್ದರೂ ಸರ್ಕಾರ ಅಷ್ಟು ಅಸಹಾಯಕತೆಯಿಂದ ಇದೆಯೇ? ನಿಮ್ಮಂಥ ಸಭಾಧ್ಯಕ್ಷರು ಇದ್ದರೆ ನಾವು ಯಾವತ್ತಾದರೂ ಅಸಹಾಯಕರಾಗಿರುವುದು ಉಂಟೇ? ಏನು ಮಾಡೋಣ ಹೇಳಿ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಇವತ್ತು radiology department ಮತ್ತು pathology departmentನ್ನು privatize ಮಾಡುವುದಕ್ಕೆ ಕೊಟ್ಟಿದ್ದಾರೆ. ವೈದ್ಯಕೀಯ ಕಾಲೇಜುಗಳನ್ನು ಈ ರೀತಿ privatize ಮಾಡಿದರೆ Medical Council ಪ್ರಕಾರ recognition withdraw ಆಗುತ್ತದೆ. ಈ ರೀತಿ teaching hospitalಗಳನ್ನು ಇವರು privatize ಮಾಡುವುದಕ್ಕೆ ಕೊಟ್ಟರೆ ಯಾವ ರೀತಿ ಸಂದೇಶ ಮತ್ತು ಪರಿಸ್ಥಿತಿ ಬರುತ್ತದೆ? ಅದು ಸರಿಯಾಗಿ ನಡೆಯುತ್ತಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಲಿ ಅಥವಾ ಮೆಡಿಕಲ್ ಕಾಲೇಜ್‌ನಲ್ಲಿ ಮಾಡುವುದರ ಬದಲು ಇಂಥ ಸೌಲಭ್ಯವನ್ನು ಒದಗಿಸುವುದಕ್ಕೆ separate ಆಗಿ ಬೇರೆ ಕಡೆ ಮಾಡಲಿ, Non-teaching hospitalಗಳಲ್ಲಿ ಮಾಡಲಿ. Teaching hospitalನಲ್ಲಿ ಮಾಡುವುದು ಬೇಡ.

ಅಧ್ಯಕ್ಷರು: ಹೌದೋ, ಇಲ್ಲವೋ ಹೇಳಿ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಅವರು ಯಾವುದರ ಬಗ್ಗೆ ಹೇಳುತ್ತಿದ್ದಾರೆಂದು ಸ್ಪಷ್ಟವಾಗಿ ಹೇಳಬೇಕು.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಬೆಂಗಳೂರು ಮೆಡಿಕಲ್ ಕಾಲೇಜು.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಏನಾಗಿದೆ ಬೆಂಗಳೂರು ಮೆಡಿಕಲ್ ಕಾಲೇಜಿಗೆ?

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: Radiology department ಮತ್ತು pathology departmentನ್ನು privatize ಮಾಡುವುದಕ್ಕೆ ಹೊರಟಿದ್ದೀರಲ್ಲ. . .

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್: Privatize ಮಾಡಿಲ್ಲ. ಅದಕ್ಕೆ only out source ನಿಂದ ತೆಗೆದುಕೊಂಡಿದ್ದಾರೆ. ಇದು ಹಿಂದೆಯೇ ಆಗಿದೆ. ನಾನು ಬಂದಾಗ ಮಾಡಿಲ್ಲ. ಅವರು machineriesನ್ನು ಅವರೇ install ಮಾಡುತ್ತಾರೆ. Only chemicals ಅನ್ನು ಇವರು purchase ಮಾಡುತ್ತಾರಷ್ಟೆ. ಅಷ್ಟೇ ಆಗಿರುವುದು.

ಅಧ್ಯಕ್ಷರು: ಸರ್ಕಾರಿ ಆಸ್ಪತ್ರೆಯಲ್ಲಿ ಅವರು install ಮಾಡುವುದೆಲ್ಲಾ ಬೇಡ ರೀ. ಏನು ಸರ್ಕಾರಕ್ಕೆ ಕಣ್ಣಿಲ್ಲವೇ ಎಂದು ಕೇಳುತ್ತಾರೆ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: Non teaching hospitalನಲ್ಲಿ ಮಾಡಲಿ. Teaching hospitalನಲ್ಲಿ ಮಾಡಿದರೆ ಇವರು ಜವಾಬ್ದಾರಿ ತೆಗೆದುಕೊಳ್ಳುತ್ತಾರೆಯೇ ಎಂದು ಕೇಳಿ. ಅದು de-recognize ಆದರೆ ಮಾನ್ಯ ಸಚಿವರು ಜವಾಬ್ದಾರಿ ತೆಗೆದುಕೊಳ್ಳುತ್ತಾರೆಯೇ? ಜವಾಬ್ದಾರಿಯುತವಾದ ಸ್ಥಾನದಲ್ಲಿದ್ದು ಈ ರೀತಿ ಜವಾಬ್ದಾರಿಯುತವಾಗಿ ಮಾಡಬೇಕು.

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಸದ್ಯಕ್ಕೆ ಹೊಸದಾಗಿ ಯಾವುದನ್ನೂ ಮಾಡಿಲ್ಲ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: 10 ವರ್ಷಗಳಿಂದ ಇವರೇ ವೈದ್ಯರು, platelet apheresis machine ಇದೆ, ಒಂದು ದಿನ ಸಹ ಅದು ಇನ್ನೂ ಕೆಲಸ ಮಾಡಿಲ್ಲ. ಸಾವಿರಾರು ಜನ ಡೆಂಗ್ಯೂ, ಚಿಕುನ್ ಗುನ್ಯಾ ಕಾಯಿಲೆಯಿಂದ suffer ಆಗುತ್ತಿದ್ದಾರೆ.

ಅಧ್ಯಕ್ಷರು: ಎಲ್ಲಿ, ಯಾವ ಆಸ್ಪತ್ರೆಯಲ್ಲಿ?

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಇವರ ಅಧೀನದಲ್ಲಿ ಬರುವ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಈ ರೀತಿ ಆಗುತ್ತಿದೆ.

ಶ್ರೀ ಕೆ. ಷಡಕ್ಷರಿ: ಹಿಂದಿನ ಸರ್ಕಾರ ಮಾಡಿದ್ದರೆ ಬದಲಾವಣೆ ಮಾಡಲಿ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅವರು ಯಾವ ಮಾಹಿತಿ ಹೇಳುತ್ತಿದ್ದಾರೆ, ಆ ಮಾಹಿತಿಯನ್ನು ಕೊಡಲಿ, ನಾವು ಏನು ಕ್ರಮ ಮಾಡಬೇಕೋ ಮಾಡುತ್ತೇವೆ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಅದು ವಿಕ್ಟೋರಿಯಾ ಆಸ್ಪತ್ರೆ. ಯಾವ hospital ಎಂದು ಸಚಿವರಿಗೇ ಗೊತ್ತಿಲ್ಲ. ಕಳೆದ ಬಾರಿಯೂ ಮಾತನಾಡಿದ್ದೇನೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಯಾವುದರ ಬಗ್ಗೆ ಹೇಳುತ್ತಿದ್ದಾರೆ, ವಿಕ್ಟೋರಿಯಾ ಬಗ್ಗೆ ಹೇಳುತ್ತಿದ್ದರೆ, ಸ್ಪಷ್ಟವಾಗಿ ಅವರು ಹೇಳಬೇಕು. ಒಗಟಿನಲ್ಲಿ ಹೇಳಿದರೆ ಅರ್ಥವಾಗುವುದಿಲ್ಲ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಒಗಟಿನಲ್ಲೇನೂ ನಾನು ಹೇಳಲಿಲ್ಲ. ನನ್ನ ಮಾತು ನಿಮಗೆ ಒಗಟಾಗಿದೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಏನಾಗಿದೆಯೆಂದು ಸ್ಪಷ್ಟವಾಗಿ ಹೇಳಿದರೆ, ಅದಕ್ಕೆ ಪರಿಹಾರ ನಾವು ಕೊಡಬಹುದು.

ಅಧ್ಯಕ್ಷರು: ಬೆಂಗಳೂರು ಮೆಡಿಕಲ್ ಕಾಲೇಜ್ ಆಸ್ಪತ್ರೆ ಎಂದು ಹೇಳುತ್ತಿದ್ದಾರೆ. ಯಾವ ಆಸ್ಪತ್ರೆ?

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಬೆಂಗಳೂರು ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ಯಾವುದು ಏನು ಎಂದು ಕಳುಹಿಸಲಿ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ವಿಕ್ಟೋರಿಯಾ ಆಸ್ಪತ್ರೆಯಲ್ಲಿ, ಸಚಿವರಿಗೇ ಈ ವಿಷಯ ಗೊತ್ತಿಲ್ಲ ನಾವೇನು ಮಾಡೋಣ?

ಇದರ ಜೊತೆಗೆ 2011 ರಲ್ಲಿ PGCET ನಲ್ಲಿ ಅವ್ಯವಹಾರ ನಡೆದಿದೆ, 2012ರಲ್ಲಿ ಬಳ್ಳಾರಿಯಲ್ಲಿ ಅವ್ಯವಹಾರ ನಡೆದಿದೆ. ರಾಜೀವ್‌ಗಾಂಧಿ

ಯೂನಿವರ್ಸಿಟಿಯ 10 ಜನ ಸಿಬ್ಬಂದಿಗಳು ಅದಕ್ಕೆ ಕಾರಣಕರ್ತರಿದ್ದಾರೆ. ಈ 10 ಜನರು ಕಾರಣಕರ್ತರು ಒಂದು ಸಿ.ಐ.ಡಿ ಯಲ್ಲಿ recommendation ಮಾಡಿ identify ಆಗಿ ಎಲ್ಲ ಮಾಡಿದ್ದರೂ ಇಲ್ಲಿಯವರೆಗೆ ಏನೂ ಕ್ರಮ ಜರುಗಿಸಿಲ್ಲ. ಈ 10 ಜನರದ್ದು departmental enquiry ಮಾಡುವುದಕ್ಕೆ ರಾಜೀವ್‌ಗಾಂಧಿ ವಿಶ್ವವಿದ್ಯಾಲಯಕ್ಕೆ ಹೇಳಿದ್ದಾರೆ. ರಾಜೀವ್‌ಗಾಂಧಿ ವಿಶ್ವವಿದ್ಯಾಲಯದಲ್ಲಿ enquiry team ಯಾರೆಂದರೆ retired employee ಒಬ್ಬರನ್ನು ಕರೆದುಕೊಂಡು ಬಂದು ಆ enquiry team ಮಾಡಿದ್ದಾರೆ. ಇದುವರೆಗೆ ಯಾವುದೇ suspension, dismiss ಏನೂ ಕ್ರಮ ಜರುಗಿಸಿಲ್ಲ. ಈ ರೀತಿ ನೋಡುತ್ತಾ ಕುಳಿತಿದ್ದಾರೆ. 2009 ರಲ್ಲಿ marks card tampering ಆಗಿದೆ.

ಅಧ್ಯಕ್ಷರು: ಕೇಳಿ, ಸರ್ಕಾರದ ವ್ಯವಹಾರ ಹೀಗಾಗಿದೆ. ಆ ಲೋಕಾಯುಕ್ತದವರೇನೋ permission ಕೇಳಿದ್ದಾರಂತೆ. 105 ಚಿಲ್ಲರೆ ಸರ್ಕಾರಕ್ಕೆ ಕಳುಹಿಸಿದ್ದಾರಂತೆ. Permission ಕೊಡಬೇಕಲ್ಲ. 105 ಇನ್ನೂ ಸರ್ಕಾರದಲ್ಲಿಯೇ ಕೊಳೆಯುತ್ತಿದೆ ಎಂದು ಪತ್ರಿಕೆಯಲ್ಲಿ ಓದಿದೆನಪ್ಪ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: 2009ರಲ್ಲಿ marks card tampering ಆಗಿದೆ. ಇಲ್ಲಿಯವರೆಗೆ ಏನೂ ಕ್ರಮ ಜರುಗಿಸಿಲ್ಲ. 2013 ರಲ್ಲಿ ಆಗಿದೆ.

ಅಧ್ಯಕ್ಷರು: ಮಂತ್ರಿಗಳೇ ಅವರು ಹೇಳುವುದನ್ನು ಸ್ವಲ್ಪ ನೋಡಿ.

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆಯಲ್ಲಿ ಯಾವುದೂ ಈ ರೀತಿ ಲೋಕಾಯುಕ್ತದವರು ಕೇಳಿರುವುದು permission pending ಇಲ್ಲ. ಎಲ್ಲದಕ್ಕೂ ಕೊಟ್ಟಿದ್ದೇವೆ. ಅವರು 2011 ರಲ್ಲಿ ಆಗಿರುವುದನ್ನು ಹೇಳುತ್ತಿದ್ದಾರೆ. ಆಗ ನಿಮ್ಮದೇ ಸರ್ಕಾರ ಇತ್ತು. ನಮ್ಮಲ್ಲಿ ಯಾವುದೂ ಇಲ್ಲ. Already ವಹಿಸಿ ಕೊಟ್ಟಿದ್ದೇವೆ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಸರ್ಕಾರ ಅಲ್ಲಾರಿ, ನೀವು ಸಚಿವರು. ಇದೆಲ್ಲಾ ವರದಿಯಿದೆಯಲ್ಲ, ಏನು ಕ್ರಮ ಜರುಗಿಸಿದ್ದೀರಿ?

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಯಾವ ವರದಿ ಇದೆ?

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಈಗ ಸಿ.ಐ.ಡಿ ಯಿಂದ ಕೊಟ್ಟಿರುವ ವರದಿಯ ಮೇಲೆ ಏನು ಕ್ರಮ ಜರುಗಿಸಿದ್ದೀರಿ?

ಅಧ್ಯಕ್ಷರು: ತರಿಸಿ ನೋಡಿ.

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ತರಿಸಿ ನೋಡುತ್ತೇನೆ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಸಿ.ಐ.ಡಿ ಕೊಟ್ಟಿರುವ ವರದಿ ಮೇಲೆ ರಾಜೀವ್‌ಗಾಂಧಿ ಯೂನಿವರ್ಸಿಟಿ. . .

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್: ನಮ್ಮ ಸರ್ಕಾರದಲ್ಲಿ ಏನಾದರೂ ಮಾಡಿದ್ದರೆ ಅವರನ್ನು ತನಿಖೆ ಮಾಡದೆ ಬಿಟ್ಟು ಬಿಡುತ್ತೀರಾ?

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ನಾವು ಯಾವುದನ್ನೂ ಬಿಡುವುದಿಲ್ಲ. ನೀವು ಮಾಡಿರುವುದನ್ನು ಸರಿ ಮಾಡುತ್ತಿದ್ದೇವೆ. ನೀವು 5 ವರ್ಷ ಏನು ಮಾಡಿ ಹೋಗಿದ್ದೀರಿ, ಅದನ್ನೆಲ್ಲಾ ಸರಿ ಮಾಡಿಕೊಂಡು ಕುಳಿತಿದ್ದೇವೆ, ಸರಿ ಮಾಡುತ್ತಿದ್ದೇವೆ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಇವರು ಬಂದಾದ ಮೇಲೆ, 2013ರಲ್ಲಿ, ಮೂರು ಜನದ್ದು marks card tampering ಆಗಿರುವುದು ಸದಾನಂದ ಗೌಡರು Council ನಲ್ಲಿ raise ಮಾಡಿದರು. ಮೂರು ಜನರ ಮಾಹಿತಿ sampleಗೆ ಕೊಟ್ಟಿದ್ದು. ಕೇವಲ ಆ ಮೂರು ಜನರದ್ದೇ ತನಿಖೆ ಮಾಡಿದರು. ಓ.ಕೆ. ಆಯಿತು. ಮೂರು ಜನರದ್ದೇ ತನಿಖೆ ಮಾಡಿ, ಆ ಮಕ್ಕಳ ಮೇಲೆ ಕ್ರಮ ಜರುಗಿಸಿದರು. ಆದರೆ, ಅದಕ್ಕೆ ಕಾರಣಕರ್ತರಾದ ಅಧಿಕಾರಿಗಳ ಮೇಲೆ ಇನ್ನೂ ಕ್ರಮ ಜರುಗಿಸಿಲ್ಲ. ಇನ್ನೂ ಏನು ಮಾಡುತ್ತಿದ್ದಾರೆ? 2009ರಲ್ಲಿ marks card tampering ಆಗಿದೆ.

ಡಾ|| ಶರಣಪ್ರಕಾಶ್ ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅದಕ್ಕೆ ಸದಾನಂದಗೌಡರು ಹೇಳಿದ ಬಗ್ಗೆ ನಾವು ಈಗಾಗಲೇ ಸಿ.ಐ.ಡಿ. ಗೆ refer ಮಾಡಿದ್ದೇವೆ. ಅವರು ಇನ್ನೂ ವರದಿ ಕೊಟ್ಟಿಲ್ಲ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಏನೂ ಮಾಡಿಲ್ಲವಲ್ಲ. ಏನು ಕ್ರಮ ಜರುಗಿಸಿದ್ದೀರಿ?

ಡಾ|| ಶರಣಪ್ರಕಾಶ್ ಆರ್. ಪಾಟೀಲ್: ಕ್ರಮ ವರದಿ ಬಂದ ಮೇಲೆ ಆಗುತ್ತದೆ. ಕ್ರಮ ಮೊದಲೇ ತೆಗೆದುಕೊಳ್ಳಲಾಗುವುದಿಲ್ಲ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ನೀವು ಅಸಹಾಯಕರು ಎಂದು ಹೇಳಿ. ಒಪ್ಪಿಕೊಳ್ಳಿ.

ಡಾ|| ಶರಣಪ್ರಕಾಶ್ ಆರ್. ಪಾಟೀಲ್: ನಾವು ಅಸಹಾಯಕರಲ್ಲ, ನಾವು ಇಲ್ಲಿ ನಿವಾರಣೆ ಮಾಡುತ್ತಿದ್ದೇವೆ. ಅಸಹಾಯಕತೆ ನೀವು ಮಾಡಿ ಹೋಗಿದ್ದೀರಿ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ನೀವು ಅಸಹಾಯಕರು, ನಿಮ್ಮ ಕೈಯ್ಯಲ್ಲಿ ಕ್ರಮ ಜರುಗಿಸಲಾಗುತ್ತಿಲ್ಲ. ನಿಮ್ಮ ಕೈಯ್ಯಲ್ಲಿ ಕೆಲಸ ಮಾಡಲಾಗುವುದಿಲ್ಲ. ಏನೂ ಮಾಡುವುದಿಲ್ಲ. ನೋಡುತ್ತಾ ಕುಳಿದ್ದೀರಿ.

ಡಾ|| ಶರಣಪ್ರಕಾಶ್ ಆರ್. ಪಾಟೀಲ್: ನೀವು ಇಲಾಖೆಯನ್ನು ಪೂರ್ತಿ ಅಸಹಾಯಕ ಮಾಡಿ ಹೋಗಿದ್ದೀರಿ. ಅದನ್ನು ಹದ್ದುಬಸ್ತಿಗೆ ತರುತ್ತಿದ್ದೇವೆ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, ಈಗ 2014 ರಲ್ಲಿ. . .

ಶ್ರೀ ಯು.ಟಿ. ಖಾದರ್: ನೀವು ಹಿಂದೆ ಮಾಡಿರುವುದನ್ನು ಈಗ clean ಮಾಡುತ್ತಿದ್ದಾರೆ.

ಡಾ॥ ಶರಣಪ್ರಕಾಶ್ ಆರ್. ಪಾಟೀಲ್: ನೀವು ಹಿಂದೆ ಮಾಡಿರುವುದನ್ನು ನಾವು ಈಗ ಸುಧಾರಿಸುತ್ತಿದ್ದೇವೆ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಆಯಿತು. ನೀವು ಬಂದಾದ ಮೇಲೆ ಮಾಡಿರುವುದನ್ನು ಹೇಳಿ.

(ಗೊಂದಲ)

ಅಧ್ಯಕ್ಷರು: ಆಯಿತಾಯಿತು, ಸಾಕು.

(ಗೊಂದಲ)

ಡಾ॥ ಶರಣಪ್ರಕಾಶ್ ಆರ್. ಪಾಟೀಲ್: ಬಹಳಷ್ಟು ಸುಧಾರಣೆ ಮಾಡಿದ್ದೇವೆ. ಬೇಕಿದ್ದರೆ ಚರ್ಚೆಯಾಗಲಿ ಹೇಳುತ್ತೇನೆ, ಏನೇನು ಮಾಡಿದ್ದೇವೆ, ನೀವೇನು ಮಾಡಿ ಹೋಗಿದ್ದೀರಿ, ನಾವೇನು ಮಾಡಿದ್ದೇವೆಂದು ಹೇಳುತ್ತೇನೆ.

(ಗೊಂದಲ)

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, 2014 ರಲ್ಲಿ ಮತ್ತೆ answer booklet tampering. 2014 ರಲ್ಲಿ paper tampering. ಮತ್ತೆ ಇವರ Principal Secretary ಯವರು ರಾಜೀವ್‌ಗಾಂಧಿ ವಿಶ್ವವಿದ್ಯಾಲಯದಲ್ಲಿ ನಡೆದ ಸಭೆಯಲ್ಲಿ, ನಮ್ಮ ಮಾನ್ಯ ಸಚಿವರು prima facie ಇದ್ದರೆ linguistic ಮತ್ತು religious minority Medical college ಮೇಲೆ ಕ್ರಮ ಜರುಗಿಸುತ್ತೇವೆಂದು ಹೇಳುತ್ತಾರೆ. 24 ಜೂನ್ 2014 ರಲ್ಲಿ ನಡೆದ ಸಿಂಡಿಕೇಟ್ ಸಭೆಯಲ್ಲಿ Principal Secretary ಮತ್ತು Vice Chancellor proceedings ನೀವು ನೋಡಬೇಕು. ಯಾವ ರೀತಿ ಮತ್ತು ಯಾವತ್ತು ಪರೀಕ್ಷೆ ನಡೆದಿದೆ ಎಂದು Principal Secretary ಗೆ ಗೊತ್ತಿಲ್ಲ, Vice Chancellor ಗೆ ಗೊತ್ತಿಲ್ಲ. ಪ್ರತಿ ವರ್ಷ seat approve ಮಾಡಿಕೊಂಡು ಬರುತ್ತಿದ್ದಾರೆ. ಯಾರು ಮೆರಿಟ್ಟು, ಏನು ರ್‍ಯಾಂಕಿಂಗ್ ಏನೂ ಇಲ್ಲ. ಮಾನ್ಯ ಸಚಿವರು ಏನು ಮಾಡುತ್ತಿದ್ದಾರೆಂದು ನೋಡಿ. ಎಲ್ಲಾ scandal ಗಿಂತ master scandal.

ಡಾ॥ ಶರಣಪ್ರಕಾಶ್ ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ ರೀತಿ ಮಾತನಾಡಲಾಗುವುದಿಲ್ಲ. ಯೂನಿವರ್ಸಿಟಿಯಲ್ಲಿ ಏನು ನಡೆಯುತ್ತಿದೆ ಎಂದು ಇವರಿಗೆ ಗೊತ್ತು. ಇವರೇ ಮಾಡುವವರು ಎಲ್ಲಾ ಅಲ್ಲಿ. ಇವರದೇ ಇರುವುದು control....

(ಗೊಂದಲ)

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಸಾವಿರಾರು ಕೋಟಿ ಅವ್ಯವಹಾರಕ್ಕೆ ಕಾರಣರಾಗಿದ್ದಾರೆ. ಈ ಕೂಡಲೇ ಇವರು ಒಪ್ಪಿಕೊಳ್ಳಬೇಕು.

ಶ್ರೀ ಸಿ.ಟಿ. ರವಿ: ಕೇಳಿ, ನೀವು ಅವರು ಹೇಳುವುದನ್ನು ಕೇಳಿ.

(ಗೊಂದಲ)

ಡಾ॥ ಶರಣಪ್ರಕಾಶ್ ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಬೇಕಿದ್ದರೆ ಈ ಬಗ್ಗೆ enquiry ಮಾಡಿಸೋಣ. ರಾಜೀವ್ ಗಾಂಧಿ ಯುನಿವರ್ಸಿಟಿ. . . (ಗೊಂದಲ). .

(ಗೊಂದಲ)

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಈಗೇನಾಗಿದೆ ನಿಮಗೆ. ಅಧಿಕಾರ ಸಿಕ್ಕಿದೆ, ಕೆಲಸ ಮಾಡಿ.

(ಗೊಂದಲ)

DR. SHARAN PRAKASH R. PATIL: You have no right to speak like this. Because, you have created this hell.

(ಗೊಂದಲ)

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ನಿಮಗೆ ಯಾವುದೇ ಬದ್ಧತೆ ಇಲ್ಲ.

ಡಾ|| ಶರಣಪ್ರಕಾಶ್ ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಬದ್ಧತೆ ಇರುವುದಕ್ಕೆ ಕೆಲಸ ಮಾಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು: ಹೇಳುವವರೆಗೆ ಕೇಳಿ ಇಲ್ಲಿ. ಸುಮ್ಮನೆ ಅದೆಲ್ಲಾ ಬೇಡ. ಅವರ ಮೇಲೆ ಮಾಡುವಂತಹ ಆಪಾದನೆಗೆ ದಾಖಲೆಗಳಿದ್ದರೆ ಈ ಸದನದ ಮುಂದಿಡಿ. ನಂತರ ನೋಡೋಣ.

(ಗೊಂದಲ)

ಶ್ರೀ ಸಿ.ಎನ್. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ರಾಜೀವ್‌ಗಾಂಧಿ ಯುನಿವರ್ಸಿಟಿಗೆ ಹಿಂದೇನಿತ್ತು. .

(ಗೊಂದಲ)

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ವೈದ್ಯಕೀಯ ವಿಶ್ವವಿದ್ಯಾನಿಲಯ ಸಂಪೂರ್ಣ ಮಲಗಿ ಬಿಟ್ಟಿದೆ.

(ಗೊಂದಲ)

ಅಧ್ಯಕ್ಷರು: ಸ್ವಲ್ಪ ಕೇಳಿ. ಈಗ ಮಂತ್ರಿಗಳ ಮೇಲೆ ನೀವು ನೇರವಾಗಿ ಆಪಾದನೆ ಮಾಡುವುದಾದರೆ with document ನೀವು ಹೇಳಬೇಕಾಗುತ್ತದೆ. ಇಲ್ಲವಾದರೆ ಇಲಾಖೆಗೆ ಏನಾದರೂ ಇದ್ದರೆ ಅದನ್ನು ಹೀಗಿದೆ, ಪರಿಶೀಲನೆ ಮಾಡಿ ಎಂದು ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಆಪಾದನೆ ಇಲಾಖೆಯ ಮೇಲಿದೆ. ಆದರೆ ಮಂತ್ರಿಗಳು ಏಕೆ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ ಎನ್ನುವುದು ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ. ಇವರ ಮೌನ . . .(ಗೊಂದಲ). . . ಅಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ . . . (ಗೊಂದಲ). . .

(ಗೊಂದಲ)

ಶ್ರೀ ಸಿ.ಎನ್. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಇದೊಂದು, ಇದರ ಬಗ್ಗೆ. . .

(ಗೊಂದಲ)

ಅಧ್ಯಕ್ಷರು: ಸಾಕು ಬಿಡಿ. ಸುಮ್ಮನೆ ಕುಳಿತುಕೊಳ್ಳಿ, ಪೂರೈಸಿರಿ.

(ಗೊಂದಲ)

ಶ್ರೀ ಸಿ.ಎನ್. ಬಾಲಕೃಷ್ಣ: ರವೀಂದ್ರನಾಥ್ ರವರು ಬಂದ ಮೇಲೆ ಇದೆಲ್ಲಾ ನಡೆಯುತ್ತಿದೆ. ಅದರ ಬಗ್ಗೆ ನಾನು ಹೇಳುತ್ತಿರುವುದು.

(ಗೊಂದಲ)

ಡಾ॥ ಶರಣಪ್ರಕಾಶ್ ಆರ್. ಪಾಟೀಲ್: . . .(ಗೊಂದಲ). . . ಸಿ.ಐ.ಡಿ ಗೆ ವಹಿಸಿದ್ದೇನೆ. ವರದಿ ಬಂದ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಏನು ಮಾಡುತ್ತಿದ್ದೇವೆಂದರೆ, ಸಿ.ಐ.ಡಿ ಯಿಂದ ವರದಿ ಬರಬೇಕು ತಾನೇ?

ಶ್ರೀ ಸಿ.ಟಿ. ರವಿ: ಒಂದು ನಿಮಿಷ ಇರಿ ಸರ್. ತಾವು ಮಂತ್ರಿಗಳಿದ್ದೀರಿ. ನಿಮ್ಮ ಮೇಲೆ ಆರೋಪ ಮಾಡಿಲ್ಲ. ನಿಮ್ಮ ಇಲಾಖೆಯಲ್ಲಿ ಏನು ನಡೆದಿದೆ ಎನ್ನುವುದನ್ನು ಈ ಸದನದಲ್ಲಿ ಹೇಳಬಾರದೇ?

ಡಾ॥ ಶರಣಪ್ರಕಾಶ್ ಆರ್. ಪಾಟೀಲ್: ಅಲ್ಲ, ಹೇಳಬೇಕು.

ಅಧ್ಯಕ್ಷರು: ಹೇಳ್ರಿ.

ಶ್ರೀ ಸಿ.ಟಿ. ರವಿ: ಹೇಳಿದರೆ . . . ಒಂದು ನಿಮಿಷ ಕೇಳಿ. ತಾವು ಮಂತ್ರಿ ಇದ್ದೀರಿ ಕೇಳಿ. ಈಗ ಅವರು ಇಲಾಖೆಯ ಬಗ್ಗೆ ನಿಮ್ಮ ಗಮನಕ್ಕೆ ತರುತ್ತಿದ್ದರೆ, ಜೋರು ಧ್ವನಿಯಲ್ಲಿ ಮಾತನಾಡುವುದು ಇವರ ಬಗ್ಗೆ ಸಂಶಯಕ್ಕೆ ಒಳಪಡಿಸುತ್ತದೆ.

ಅಧ್ಯಕ್ಷರು: ಹಾಗಲ್ಲ.

(ಗೊಂದಲ)

ಡಾ|| ಶರಣಪ್ರಕಾಶ್ ಆರ್. ಪಾಟೀಲ್: ಈ ರಾಜ್ಯದಲ್ಲಿ ಯಾರ ಬಗ್ಗೆ ಯಾರು ಸಂಶಯ ಪಡುತ್ತಿದ್ದಾರೆಂದು ಎಲ್ಲರಿಗೂ ಗೊತ್ತಿದೆ.

(ಗೊಂದಲ)

ಡಾ|| ಶರಣಪ್ರಕಾಶ್ ಆರ್. ಪಾಟೀಲ್: ಜವಾಬ್ದಾರಿಯಿಂದ ಕೆಲಸ ಮಾಡುವುದು ಗೊತ್ತಿದೆ. ನಿಮ್ಮಿಂದ ಪಾಠ ಹೇಳಿಸಿಕೊಳ್ಳಬೇಕಿಲ್ಲ ನಾನು.

(ಗೊಂದಲ)

ಅಧ್ಯಕ್ಷರು: ಸ್ವಲ್ಪ ತಾಳಿರಿ. ಅಶ್ವತ್ಥ್ ನಾರಾಯಣ್ ನೀವು ಮಾತನಾಡುವ ಸಂದರ್ಭದಲ್ಲಿ ನಿಮ್ಮ ಇಲಾಖೆ ಹೀಗೆ ನಡೆಯುತ್ತಿದೆ. ಇದರ ಬಗ್ಗೆ ನೀವು ಗಮನ ಹರಿಸಿಲ್ಲ, ಗಮನ ಹರಿಸಬೇಕು, ತನಿಖೆ ಮಾಡಬೇಕೆಂದು ಒತ್ತಾಯ ಮಾಡಿ ಹೇಳಿ. ಆದರೆ ನಿಮ್ಮ ಭಾಷೆಯ ಧೋರಣೆ ಹೇಗಿತ್ತು ಎಂದರೆ . . .

ಒಬ್ಬರು ಮಾನ್ಯ ಸದಸ್ಯರು: ಸರಿಯಲ್ಲ ಅದು, ಸರಿಯಲ್ಲ.

ಶ್ರೀ ಜೆ.ಹೆಚ್. ಶ್ರೀನಿವಾಸ: ಕಡತ ತೆಗೆದು ನೋಡಲಿ. ನೇರವಾಗಿ ಮಂತ್ರಿಗಳ ಮೇಲೆ ಆಪಾದನೆ ಮಾಡಿದ್ದು ಅವರು. ಕಡತದಲ್ಲಿ ನೋಡಿ ಬೇಕಾದರೆ.

ಅಧ್ಯಕ್ಷರು: ಇದರ ಬಗ್ಗೆ ಏನೋ ಶಾಮೀಲು ಆಗಿದ್ದಾರೆ ಎನ್ನುವ ಭಾವನೆ ಬರುವ ರೀತಿ ಇತ್ತು. ಹಾಗೆ ಹೇಳಬೇಡಿ. ಲೋಪದೋಷ ಇರಬಹುದು. ಎಲ್ಲರೂ ಭಿಕ್ಷಾತೀತರು. ಅದಕ್ಕೋಸ್ಕರ ನಿಮ್ಮ ಗಮನಕ್ಕೆ ಯಾವುದಾದರೂ ದಾಖಲೆ ಇದ್ದರೆ ಇಂತದ್ದು ಇದೆ, ಇದರ ಮೇಲೆ ತನಿಖೆ ಮಾಡಿ ಕ್ರಮ ಕೈಗೊಳ್ಳಿ ಎಂದು ಒತ್ತಾಯ ಮಾಡಿ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, 2011 ರಲ್ಲಿ 10 ಜನರ ಮೇಲೆ ಏನು ಆರೋಪ ಇತ್ತು. ಈಗಾಗಲೇ ಸಿ.ಓ.ಡಿ ವರದಿ ಕೊಟ್ಟಿದೆ. ವರದಿ ಅವರ ಬಳಿಯಿದೆ, ಅವರು ಕ್ರಮ ಜರುಗಿಸಿದ್ದಾರೆಯೇ? ಈಗ ಕ್ರಮ-

ತೆಗೆದುಕೊಳ್ಳದಿದ್ದರೆ 2011 ರಲ್ಲಿ ಯಾರು involve ಆಗಿದ್ದರೋ ಅವರನ್ನು ಮುಚ್ಚಿ ಹಾಕುವುದು ಕೂಡಾ ಅಪರಾಧವೇ. ಏಕಿನ್ನೂ ಕ್ರಮ ತೆಗೆದುಕೊಂಡಿಲ್ಲ.

ಅಧ್ಯಕ್ಷರು: ಅದನ್ನೇ ಕೇಳ್ರಿ.

ಶ್ರೀ ಸಿ.ಟಿ. ರವಿ: ಅದನ್ನೇ ಅವರು ಹೇಳಿದ್ದು. 2014 ರಲ್ಲಿ marks card tampering Rajiv Gandhi Health University ಯಲ್ಲಿ ನಡೆದಿರುವುದು..

ಅಧ್ಯಕ್ಷರು: ನೋಡಿ ರವಿ. ನೀವು specific ಆಗಿ 2014 ರಲ್ಲಿ ಇಂತಹುದು ನಡೆದಿದೆ, ನೀವೇನು ಕ್ರಮ ಕೈಗೊಂಡಿದ್ದೀರಿ? 2011 ರಲ್ಲಿ ನಡೆದಿದೆ, ಅದರ ವರದಿ ಬಂದಿದೆ, ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಆ ರೀತಿ ಪ್ರಶ್ನೆ ಕೇಳಿ.

ಶ್ರೀ ಸಿ.ಟಿ. ರವಿ: ಅದನ್ನೇ ಹೇಳುತ್ತಿದ್ದಾರೆ. ನೀವು ಹೇಳಿ ಅದನ್ನು. ಕೂಲಾಗಿ ಹೇಳು ಅಷ್ಟೆ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, ಕ್ಷಮಿಸಿ ನಾನು ಅವರು. . .

ಅಧ್ಯಕ್ಷರು: ಏಕೆಂದು ಹೇಳುತ್ತೇನೆ ಕೇಳಿ. ಚರ್ಚೆ ಮಾಡುವಾಗ ಎಲ್ಲರೂ ಕಿವಿಯನ್ನು ಬಿಚ್ಚಿ ಕೇಳುವಂತಹ, ಹೃದಯ ಬಿಚ್ಚಿ ಕೇಳುವಂತಹ ರೀತಿಯಲ್ಲಿ ಮಾತನಾಡಬೇಕು. ಹೇಳಿ ಸಾಕು.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ವೈದ್ಯಕೀಯ ಶಿಕ್ಷಣ ಸಂಬಂಧವಾಗಿ ಏನು ಹೇಳುತ್ತಿದ್ದೇನೆಂದರೆ, ಎಲ್ಲಾ ಗೊತ್ತಿದ್ದು ಅವರ ಇಲಾಖೆಯಲ್ಲಿ ಎಲ್ಲಾ . .

ಅಧ್ಯಕ್ಷರು: ಆ ಭಾಷೆ ಬಳಸಬೇಡಿ. ಗೊತ್ತಿದ್ದು ಎಂದು. ಅವರಿಗೆ ಗೊತ್ತಿದೆ ಎಂದು ನಿಮಗೆ ಗೊತ್ತಿದೆಯೇ? ನಿಮಗೆ ಸುದ್ದಿ ಬಂದಿದೆ. ಅವರಿಗೆ ಗೊತ್ತಿದ್ದು ಎಂದು ಬಳಸಬೇಡಿ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, ವರದಿ ಇದೆ.

ಅಧ್ಯಕ್ಷರು: ಅವರಿಗೆ ಗೊತ್ತಿದೆ ಎಂದು ವರದಿಯಾಗಿದೆಯೇ?

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಹೌದು ಅಧ್ಯಕ್ಷರೆ.

ಅಧ್ಯಕ್ಷರು: ಎಲ್ಲಿ ಓದಿ ಅದನ್ನು.

ಶ್ರೀ ಜೆ.ಹೆಚ್. ಶ್ರೀನಿವಾಸ: ಸಚಿವರಿಗೆ ಗೊತ್ತಿದೆ ಎಂದು ವರದಿಯಲ್ಲಿರಬೇಕು ಡಾಕ್ಟರರೆ.

ಅಧ್ಯಕ್ಷರು: ತಾಳಿ.

ಶ್ರೀ ಜೆ.ಹೆಚ್. ಶ್ರೀನಿವಾಸ: ಅಲ್ಲ. ಅವರು ಮಿಸ್ ಮಾಡಿಕೊಂಡಿದ್ದಾರೆ. ಡಾಕ್ಟರ್ ನೋಡಿದ್ದಾರಾ ಅದನ್ನು.

ಅಧ್ಯಕ್ಷರು: ಸಚಿವರಿಗೆ ಗೊತ್ತಿದೆ ಎನ್ನುವುದಕ್ಕೆ ಏನು ವರದಿಯಾಗಿದೆ ಹೇಳಿ. ಏನು ವರದಿ? ಯಾವುದು ಅದು?

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಪೇಪರ್ ಬೇಡ. ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ order ಅನ್ನೇ ತೆಗೆಯುತ್ತೇನೆ.

ಶ್ರೀ ಜೆ.ಹೆಚ್. ಶ್ರೀನಿವಾಸ: Medical Education Minister ರವರಿಗೆ ಗೊತ್ತಾ ಎಂದು ಅದರಲ್ಲಿ ಇದೆಯೇ?

ಅಧ್ಯಕ್ಷರು: ಯಾವ ವರದಿ ಹೇಳಿ? ವರದಿ ಯಾರದು?

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, ಇದು Cyber Crime Police Stationದು.

Cyber Crime Police Station, Crime No: 34/2011. Under section 66 of IT Act 2000. With reference to the above, I write to state that a case has been registered under the investigation by me. It is requested to provide the following particulars of Sri. Hemanth Rao for the purpose of investigation ಎಂದು ಹಾಕಿದ್ದಾರೆ. ಅದರ next . . .

ಶ್ರೀ ಜೆ.ಹೆಚ್. ಶ್ರೀನಿವಾಸ: Doctor ಹೆಸರು ಎಲ್ಲಿದೆ ಎಂದು ಹೇಳಿ. ಸುಮ್ಮನೆ ಏಕೆ ಉತ್ತರ ಹೇಳುತ್ತೀರಾ?

ಶ್ರೀ ಸಿ.ಟಿ. ರವಿ: ತಡೆಯಿರಿ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಆರಕ್ಷಕ ಮಹಾ ನಿರ್ದೇಶಕರು, ಸಿ.ಐ.ಡಿ. ವಿಶೇಷ ಘಟಕ ಹಾಗೂ ಆರ್ಥಿಕ ಅಪರಾಧ, ಬೆಂಗಳೂರು ಇವರ ಪತ್ರ ಸಂಖ್ಯೆ : 21 ಸಿ.ಆರ್.ಎಂ.ಎಸ್.ಐ ಸಿ.ಐ.ಡಿ 2011, ದಿನಾಂಕ: 21.03.2012.

"ಪ್ರಸ್ತಾವನೆ: ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯದಲ್ಲಿ 2011ರ ಸಾಲಿನಲ್ಲಿ ಸ್ನಾತಕೋತ್ತರ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳಲ್ಲಿ ಪ್ರವೇಶಕ್ಕೆ ದಿನಾಂಕ 30.01.2011 ರಂದು ನಡೆಸಲಾದ ಪ್ರವೇಶ ಪರೀಕ್ಷೆಯಲ್ಲಿ ಅಕ್ರಮಗಳಿಗೆ ಸಂಬಂಧಿಸಿದಂತೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಲಾಗಿದ್ದ ರಿಟ್ ಅರ್ಜಿ ಸಂಖ್ಯೆ 13774/2011ರ ಮೇಲೆ ನ್ಯಾಯಾಲಯವು ನೀಡಿದ ತೀರ್ಪಿನ ಈ ಪ್ರಕರಣ ವಿಚಾರಣೆಗೆ CID ವತಿಯಿಂದ ನಡೆಸಲು ಆದೇಶಿಸಿದ್ದ ಮೇರೆಗೆ CID ಮಹಾ ನಿರ್ದೇಶಕರು ಪ್ರಕರಣವನ್ನು ವಿಚಾರಣೆ ನಡೆಸಿ ಅದರಲ್ಲಿ ಕಂಡು ಬಂದ ಅಂಶಗಳ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ಕೆಳಕಂಡ ನೌಕರರು ಸದರಿ ಪರೀಕ್ಷೆಗಳಲ್ಲಿ ಅಕ್ರಮಗಳಲ್ಲಿ ಭಾಗಿಯಾಗಿರುವುದು ಕಂಡುಬಂದಿರುವುದು. ಕಾರಣ ಅವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸುವಂತೆ ಶಿಫಾರಸ್ಸು ಮಾಡಿದ್ದಾರೆ." ಇದು ಬಹಳ ಹಿಂದೆ ಕಳುಹಿಸಿದ್ದಾರೆ. ಹತ್ತು ಜನದ್ದು. . .

ಶ್ರೀ ಜೆ.ಹೆಚ್. ಶ್ರೀನಿವಾಸ: ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರಿಗೆ ಹೇಳಿದಿವಿ ಎಂದು ಅವರ ಮೇಲೆ ನೇರವಾಗಿ ಆಪಾದನೆ ಮಾಡುತ್ತಿದ್ದಾರೆ ಇವರು.

(ಗೊಂದಲ)

ಶ್ರೀ ಜಿ.ಹೆಚ್. ಶ್ರೀನಿವಾಸ: ಅವರು ಬರೆದುಕೊಳ್ಳುತ್ತಿದ್ದಾರೆ ಅಲ್ಲಿ ಅದು ಕಡತದಲ್ಲಿದೆ.

ಅಧ್ಯಕ್ಷರು: ಯಾವ ದಿನಾಂಕ ಹೇಳಿ ಅದು.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಇವರು 2012ರಲ್ಲಿ ತೆಗೆದುಕೊಂಡಿರುವುದು.

ಅಧ್ಯಕ್ಷರು: ಇವರು ಬರುವುದಕ್ಕಿಂತ ಮುಂಚೆ ಆಗಿರುವುದು. ಆ ವರದಿ ನಿಮ್ಮ ಹತ್ತಿರ ಸರ್ಕಾರದಲ್ಲಿ ಇರಬೇಕು.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಹತ್ತು ಜನದ್ದು departmental enquiry ಮಾಡಬೇಕೆಂದು ಹೇಳಿದ್ದಾರೆ. ಇದುವರೆಗೂ ಏನಾದರೂ ಕ್ರಮ ಜರುಗಿಸಿದ್ದೀರಾ?

ಅಧ್ಯಕ್ಷರು: ಅದು ಕೇಳಿ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ನಾನು ಅವರ ಗಮನಕ್ಕೆ ತಂದೆ. Retired employee ಯನ್ನು enquiry committee ಗೆ ಹಾಕಿದ್ದಾರೆ.

ಅಧ್ಯಕ್ಷರು: ನಿಮಗೆ ಈ ರಿಪೋರ್ಟ್ ಬಂದಿದೆ, ಸರ್ಕಾರಕ್ಕೆ ಕಳುಹಿಸಿದ್ದಾರೆ, ಅದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿ, ಅವರು ಉತ್ತರ ಹೇಳುತ್ತಾರೆ. ಕೆಲವು ಸಾರಿ ನಮ್ಮ ಕಾರ್ಯದರ್ಶಿಗಳು section officer, Deputy secretary ತೆಗೆದುಕೊಂಡು ಒಳಗಡೆ ಹಾಕಿಕೊಂಡು ಕೂತಿರುತ್ತಾರೆ. ನಾಳೆ ತೆಗೆದು ಅದು ಏನೆಂದು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರ ಗಮನಕ್ಕೆ ಬಂದ ಮೇಲೆ ಅವರು ಮುಂದಿನ ಕ್ರಮಗಳನ್ನು ಜರುಗಿಸಿಲ್ಲವೆಂದರೆ ಅದು ಯಾವುದೋ ಅನುಮಾನಕ್ಕೆ ಕಾರಣವಾಗುತ್ತದೆ.

ಅಧ್ಯಕ್ಷರು: ಹಾಗಲ್ಲ ಕಾಗೇರಿಯವರೆ, ಅವರು ಬಂದ ಮೇಲೆ ಎಂದರೆ, ಅವರ ಗಮನಕ್ಕೆ ಬಂದಿದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರಿಗೆ ವಿಷಯ ಗೊತ್ತಿದೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: 2012ರಲ್ಲಿ ಆಗಿರುವುದು ಇದು. ನಾವು ಬಂದಿರುವುದು 2013ರಲ್ಲಿ.

(ಗೊಂದಲ)

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಕಳೆದ ಸಾರಿಯೂ ಈ ವಿಷಯ ಚರ್ಚೆ ಮಾಡಿದ್ದರು. ಅವರ ಗಮನಕ್ಕೆ ಬಂದಿತ್ತು. ಈಗ ನಾನು ಅವರಿಗೆ ಕೇಳುವುದು ಅವರ ಗಮನಕ್ಕೆ ಬಂದಿದೆ, ಕಳೆದ ಸಾರಿ ಡಿಮಾಂಡ್ ಮೇಲೆ ಮಾತನಾಡುವಾಗ ಕೂಡ ಈ ವಿಷಯ ಎತ್ತಿದ್ದಾರೆ. ಡಿಮಾಂಡ್ ಮೇಲೆ ಕಳೆದ ಸಾರಿಯೂ ಮಾತನಾಡಿದ್ದಾರೆ. ನೀವು ಬೇಕಾದರೆ proceedings ತರಿಸಿ ನೋಡಿ. Department ನಲ್ಲಿ enquiry committee appoint ಮಾಡಿದ್ದರಲ್ಲ, committee report ಏನು ಕೊಟ್ಟಿದೆ? ಇವರ ಮೇಲೆ ಏನು action ತೆಗೆದುಕೊಂಡಿದ್ದೀರಿ? COD report ನಲ್ಲಿ ಅವರ ಹೆಸರು mention ಆಗಿದೆ.

ಶ್ರೀ ಸಿದ್ದು ಬಿ. ನ್ಯಾಮಗೌಡ: ತಮ್ಮ ಸರ್ಕಾರದಲ್ಲಿ ಆಗಿದ್ದು ನಿಮ್ಮ ಸರ್ಕಾರದಲ್ಲಿ ಆಗಿದ್ದು ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ?

ಅಧ್ಯಕ್ಷರು: ಬೇಗ ಪೂರೈಸಿ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: ಇವರ ಕಾಲದಲ್ಲಿ marks card tampering ಆಗಿರುವುದು. marks card tampering ಆಗಿ ಎರಡು ವರ್ಷವಾಗಿದೆ. CID report ನಲ್ಲಿ indict ಮಾಡಿದ್ದಾರೆ. ಎಲ್ಲ ಮಾಡಿದರೂ ಇದುವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಆ ಮಕ್ಕಳ ಮೇಲೆ ಮಾತ್ರ ಕ್ರಮ ಜರುಗಿಸಿದ್ದಾರೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, 2014ರಂದು marks card tampering ದು already CID enquiry ಮಾಡುತ್ತಿದೆ. ಇನ್ನೂ ವರದಿ ಕೊಟ್ಟಿಲ್ಲ.

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: 2013 ರದ್ದು ಹೇಳಿ. 2014 ರದ್ದು answer booklet tampering ಬೇರೆ. ಈ ರೀತಿ ಇವರದು ಸತತವಾಗಿ ನಡೆಯುತ್ತಿದೆ. ಈ proceedings ಏನಾದರೂ ಸುಳ್ಳಾಗಿದ್ದರೆ, ಇಲ್ಲೇ ಆಧಾರ ಇದೆ. proceedings ನಲ್ಲಿ ಕೂಡ ಇವತ್ತು ಏನು Linguistic Minority ಮತ್ತು religious miniortiy ಯಲ್ಲಿ ಯಾವ ಒಂದು entrance exam ಇಲ್ಲದೆ ಯಾವ ರೀತಿ ನಿರ್ಭೀತಿಯಾಗಿ ಎಲ್ಲಾ ಸೀಟ್‌ಗಳನ್ನು ಭರ್ತಿ ಮಾಡಿಕೊಳ್ಳುತ್ತಿದ್ದಾರೆ, ಅವ್ಯವಹಾರ ನಡೆಯುತ್ತಿದೆ ಎಂದು ಒಬ್ಬ ಪ್ರಧಾನ ಕಾರ್ಯದರ್ಶಿ ಮೀಟಿಂಗ್‌ನಲ್ಲಿ ಮತ್ತು ವೈಸ್ ಛಾನ್ಸಲರ್ ಕುಳಿತುಕೊಂಡು ನನ್ನದಲ್ಲ ನಿಮ್ಮದಲ್ಲ, ನಿಮ್ಮದಲ್ಲ, ನನ್ನದಲ್ಲ ಎಂದು ಚರ್ಚೆ ಮಾಡುತ್ತಿದ್ದಾರೆ. ಯಾವಾಗ entrance exam ನಡೆದಿದೆ ಎಂದು ಯಾರಿಗೂ ಗೊತ್ತಿಲ್ಲ. ಈ ರೀತಿ ನಾನೇಕೆ ನಿಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೇನೆ ಎಂದರೆ, ಅವರ ಇಲಾಖೆಯಲ್ಲಿ ನಡೆಯುತ್ತಿರುವುದನ್ನು, ಅದು ನನಗೆ ಗೊತ್ತಿಲ್ಲ ಎಂದು ತಳ್ಳಿ ಹಾಕುವುದಕ್ಕೆ ನೋಡಿದರು. ಇಷ್ಟೆಲ್ಲಾ ನಡೆದರೂ ನನಗೆ ಗೊತ್ತಿಲ್ಲ, ನನಗೆ ಗೊತ್ತಿಲ್ಲ ಎಂದು ಹೇಳುವವರು ಆ ಮಕ್ಕಳ ಮೇಲೆ ಹೇಗೆ ಕ್ರಮ ಜರುಗಿಸಿದರು? ಏನೂ indict ಆಗದೆ ಮಕ್ಕಳ ಮೇಲೆ ಹೇಗೆ ಕ್ರಮ ಜರುಗಿಸಿದರು?

ಅಧ್ಯಕ್ಷರು: ನೀವು ಅದಕ್ಕೆ ವ್ಯಾಖ್ಯಾನ ಮಾಡುವುದಕ್ಕೆ ಹೋಗಬೇಡಿ. ನೀವು ಹೇಳಿದ್ದೀರಲ್ಲ, ಅವರ ಗಮನಕ್ಕೆ ತಂದಿದ್ದೀರಿ. ಎರಡು ಅಧಿಕಾರಿಗಳೇ ಪರಸ್ಪರ ವಾದ ವಿವಾದ ಮಾಡಿಕೊಂಡಿದ್ದಾರಲ್ಲ, ಅದರ proceedings ಕಳುಹಿಸಿ ಕೊಡಿ. ಅವರು ನಾಳೆ ಉತ್ತರ ಹೇಳುತ್ತಾರೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಅದು ಯೂನಿವರ್ಸಿಟಿಯಲ್ಲಿ ಆಗಿರುವಂಥದ್ದು, ಅದರ ಬಗ್ಗೆ ನನಗೆ ಮಾಹಿತಿಯೂ ಇಲ್ಲ, ಅದು independent body.

ಅಧ್ಯಕ್ಷರು: ಮಾನ್ಯ ಸಚಿವರೆ, ಯೂನಿವರ್ಸಿಟಿ ಅಂದ ಕೂಡಲೇ ಅವರೇನು ದೇವಲೋಕದವರಲ್ಲ. ನಿಮ್ಮ ನಿಯಂತ್ರಣದಲ್ಲಿ ಇರತಕ್ಕಂಥದ್ದು. ಆ

ರೀತಿ ಇದ್ದರೆ ಯೂನಿವರ್ಸಿಟಿಯಿಂದ ವರದಿ ತರಿಸಿಕೊಳ್ಳಿ. ವರದಿ ತರಿಸಿಕೊಂಡು ಯಾರು ಏನು? ನಮ್ಮ ಗಮನಕ್ಕೆ ಏಕೆ ತರಲಿಲ್ಲ? ಎಂದು ನೋಡಿ. ಅವರು ಮಾಡಿದ ತಪ್ಪಿಗೆ ನೀವೇಕೆ ತಲೆ ಮೇಲೆ ಹಾಕಿಕೊಳ್ಳುತ್ತೀರಿ? ಆಯಿತು, ಕಳುಹಿಸಿಕೊಡಿ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, Linguistic Minority Medical College ಗಳಲ್ಲಿ ಯಾವ entrance exam ಇಲ್ಲದೆ ಬೇಕಾಬಿಟ್ಟಿ. . .

ಅಧ್ಯಕ್ಷರು: ಯಾವ ಕಾಲೇಜಿನಲ್ಲಿ ಎಂದು ಹೇಳಿ.

ಶ್ರೀ ಸಿ.ಟಿ. ರವಿ: ಎಲ್ಲವೂ ಎಂದು ಕಾಮನ್ ಆಗಿ ಹೇಳಬಹುದು. ಒಂದು ತನಿಖೆ ಮಾಡಲಿ. ನನ್ನ ಆಪಾದನೆ ಎಲ್ಲಾ Linguistic Minority Collegeಗಳಲ್ಲಿ entrance exam ನಡೆಸದೆ ಸೀಟುಗಳನ್ನು ವ್ಯಾಪಾರ ಮಾಡುತ್ತಿದ್ದಾರೆ. ಈ ಬಗ್ಗೆ ತನಿಖೆ ಮಾಡಲಿ.

ಅಧ್ಯಕ್ಷರು: ನಿಮ್ಮ ಆಪಾದನೆ specific ಆಗಿರಬೇಕು. ಅಯಿತು, ತನಿಖೆ ಮಾಡಿಸಿ. ದಯವಿಟ್ಟು ಮುಗಿಸುತ್ತೀರೋ ಇಲ್ಲವೋ?

ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ: PGCETಗೆ ಸಂಬಂಧಪಟ್ಟ ನೌಕರರ ಮೇಲೆ ತಕ್ಷಣ ಕ್ರಮ ಜರುಗಿಸಲಿ. 2013ರಲ್ಲಿ ಆದಂತಹ ಘಟನೆಗೆ ಮಕ್ಕಳ ಮೇಲೆ ಮಾತ್ರ ಕ್ರಮ ಜರುಗಿಸಿದ್ದಾರೆ. 2013–14ರಲ್ಲಿ tampering ಆಗಿರುವುದರ ಸಂಬಂಧ ಎಲ್ಲಾ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಿ.

ಅಧ್ಯಕ್ಷರು: ಇದು ಹದಗೆಡುವುದಕ್ಕೆ ಕಾರಣಗಳಿವೆ. ಯಾರ್‍ಯಾರನ್ನೋ ಆರೋಗ್ಯ ಯೂನಿವರ್ಸಿಟಿಗೆ ವೈಸ್ ಛಾನ್ಸಲರ್ ಮಾಡುವುದು. ಸ್ವಲ್ಪ ಅದರ ಬಗ್ಗೆ ನಿಗಾ ವಹಿಸಿ. ನೆಂಟ, ಭಾವ, ಬೇಕಾದವ, ಬೇಡದವ ಇಂತಹವರನ್ನೆಲ್ಲಾ ತೆಗೆದುಕೊಂಡು ಕೂರಿಸಿ ಇದು ಹಾಳಾಗಿರುವುದು.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾವು ಒಳ್ಳೆಯವರನ್ನೇ ಮಾಡಿದ್ದೇವೆ. ಅವರು ಹಿಂದೆ ಸರಿಯಾಗಿ ಮಾಡಿರಲಿಲ್ಲ. ನಾವಂತೂ ಒಳ್ಳೆಯವರಿಗೆ ಮಾಡಿದ್ದೇವೆ. ಅವರು ಯಾರ್‍ಯಾರಿಗೆ ನೇಮಕ

ಮಾಡಿದ್ದಾರೋ, ಅವರೇ ಆತ್ಮಾವಲೋಕನ ಮಾಡಿಕೊಳ್ಳಲಿ. ಅವರು ಯಾರಿಗೆ ನೇಮಕ ಮಾಡಿದ್ದರೋ, ಅವರು ಹಾಳು ಮಾಡಿ ಹೋಗಿದ್ದಾರೆ. ನಾವು ಒಳ್ಳೆಯವರಿಗೆ ನೇಮಕ ಮಾಡಿದ್ದೇವೆ.

ಅಧ್ಯಕ್ಷರು: ಹೌದೌದು, ಇವರೇ ಮಾಡಿದ್ದು. ಬೆಂಗಳೂರು ಯೂನಿವರ್ಸಿಟಿಗೆ ಒಬ್ಬ ಡಾಕ್ಟರ್ ಅನ್ನು ತೆಗೆದುಕೊಂಡು ಹೋಗಿ ಕೂರಿಸಿದ್ದಾರೆ.

ಶ್ರೀ ಸಿ.ಎನ್. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಈಗ ಡಾ|| ರವೀಂದ್ರನಾಥ್ ಎಂದು ಒಳ್ಳೆಯವರನ್ನೇ ನೇಮಕ ಮಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈ ಯೂನಿವರ್ಸಿಟಿಗಳ deterioration ಗೆ ಯಾರ್‍ಯಾರು ಯಾವಾಗ ನೇಮಕ ಮಾಡಿದರು ಎಂಬ ಬಗ್ಗೆ ಬೇಕಾದರೆ ಒಂದು ಚರ್ಚೆ ಮಾಡೋಣ.

ಅಧ್ಯಕ್ಷರು: ಎಲ್ಲರ contribution ಇದೆ. ದಯವಿಟ್ಟು ಎಲ್ಲರೂ ಒಟ್ಟಾಗಿ ಸೇರಿಕೊಂಡು ಇದನ್ನು ಮಾಡಿ. ನಮ್ಮ ಜಾತಿಯವ, ನಮಗೆ ಬೇಕಾದವ ಎಂದು ಮಾಡಿದ್ದು ನಮಗೆ ಗೊತ್ತಿಲ್ಲವೇ? ಎಲ್ಲಾ ಗೊತ್ತಿದೆ. ಇದಕ್ಕೆ ಬಲಿಯಾದರೆ, ಎಲ್ಲರೂ ಒಂದು ದಿವಸ ಅದಕ್ಕೆ ಗುರಿಯಾಗಬೇಕಾಗುತ್ತದೆ. ಅದನ್ನೆಲ್ಲಾ ಬಿಟ್ಟು ಬಿಡೋಣ. ಯಾರಿಗೆ ಅರ್ಹತೆ ಇದೆ, ಏನಿದೆ, ಆ ತರಹ ಮಾಡಿ. ಇವತ್ತು ಯಾವ ಸ್ಥಿತಿಗೆ ಬಂದಿದೆ, ಆಯಿತು ಹೇಳಿ, ಬೇಗ ಪೂರೈಸಿ. Please.

ಡಾ|| ಸಿ.ಎನ್. ಅಶ್ವತ್ಥ ನಾರಾಯಣ: ಮಾನ್ಯ ಅಧ್ಯಕ್ಷರೆ, ನಾನು ಕೇಳುವುದು ಇದು ಅಷ್ಟೇ ಅಲ್ಲ.

ಅಧ್ಯಕ್ಷರು: ನಿಮಗೆ ಹೇಳುವುದಾದರೆ, ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯಕ್ಕೆ ಒಂದು ಕಟ್ಟಡ ಇವತ್ತಿನವರೆಗೆ ಆಗಿಲ್ಲ.

ಮಾನ್ಯ ಸದಸ್ಯರು: ಇರುವುದು ಒಂದೇ ಯೂನಿವರ್ಸಿಟಿ ಅದನ್ನೇ ನೋಡುವುದಕ್ಕಾಗುವುದಿಲ್ಲ ಇವರು.

ಅಧ್ಯಕ್ಷರು: ಹಾಗಲ್ಲ. ಅನೇಕ ತೊಂದರೆಗಳಿವೆ ಅದು ಬೇರೆ ಮಾತು. ನಾನೇ ಕರೆದು ಹೇಳಿದ್ದೇನೆ. ಮಾನ್ಯ ಕುಮಾರಸ್ವಾಮಿಯವರಿಗೆ ಹೇಳಿದೆ, ಏನಾದರೂ ಆ ಜಮೀನಿನ ಸಮಸ್ಯೆಯನ್ನು ಬಗೆಹರಿಸಿ ಕೊಡಿ, ಅದು ಬೇಗ ಆಗುತ್ತದೆ ಎಂದು. ಯಾವುದೋ ಕಟ್ಟಡದಲ್ಲಿ ನಡೆಯುತ್ತಿದೆ.

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ stay ಇದೆ.

ಅಧ್ಯಕ್ಷರು: ಎಂತಹ ಸ್ಟೇ ಇದೆ? Land acquistition problem ಇದೆ. ಹೊಸ ಕಾನೂನು ಪ್ರಕಾರ ಒಂದಕ್ಕೆ ನಾಲ್ಕರಷ್ಟು ಕೊಡಿ, ಎಲ್ಲ ಬಿಟ್ಟು ಕೊಡುತ್ತಾರೆ. ಮತ್ತೇತಕ್ಕೆ? You must take a hard decision, ಲೈಟಾಗಿ ತೆಗೆದುಕೊಳ್ಳಬೇಡಿ. ಒಂದು ಯೂನಿವರ್ಸಿಟಿ ಮಾಡಿಕೊಂಡು, ಅದಕ್ಕೆ ಒಂದು ಕಟ್ಟಡ ಇಲ್ಲ. ಇನ್ನೂ ಕಥೆ ಹೇಳಿಕೊಂಡು ಕಾಲ ಕಳೆಯುತ್ತೀರಾ? ಇವತ್ತು ರೈತರು ಪರಿಹಾರ ಕೊಡಿ ಎಂದು ಕೇಳುತ್ತಾರೆ. contractor ಗೆ ಕೊಟ್ಟುಕೊಂಡು ಹಾಗೆಯೇ ಕಾಲ ಕಳೆಯುತ್ತಾರೆ. ನಾಳೆ ಒಂದು ದಿವಸ ಅವರು claim ಮಾಡಿದರೆ ಆಗ ನೀವೆಲ್ಲಾ ತಲೆ ಬೋಳಿಸಿಕೊಳ್ಳಬೇಕು.

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಅದು 2010 ರಲ್ಲಿ ಕೊಟ್ಟಿದ್ದು. ಅಧ್ಯಕ್ಷರೆ, ನಾವು ಅದನ್ನು ವೆಕೇಟ್ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಾವು ಏನೂ ಮಾಡಿಲ್ಲ.

ಅಧ್ಯಕ್ಷರು: ನೀವು ಮಾಡಿದ್ದು ಎಂದು ಹೇಳುತ್ತಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನೀವು ಎಲ್ಲ ವಿಷಯವನ್ನೂ ಒಂದು ಸಮತೋಲನದಲ್ಲಿ ನೋಡಿ ಸರಿಯಾದ ನಿರ್ಣಯಗಳನ್ನು ಕೊಡುತ್ತೀರಿ. ಈಗ ಇದ್ದ ಜಾಗದಲ್ಲಿ ಅವರು ಪ್ರಾರಂಭ ಮಾಡುವುದಕ್ಕೆ ಅವಕಾಶಗಳು ಇತ್ತು. ಆದರೂ ಮಾಡುತ್ತಿಲ್ಲ ಅವರು.

ಕೋರ್ಟಿನಲ್ಲಿ ಎಷ್ಟು ಜಾಗಕ್ಕೆ ಸ್ಟೇ ಇದೆ? ಇದು ನಮಗೂ ಎಲ್ಲ ಗೊತ್ತಿರುವ ವಿಷಯ. ಮಾಡಬೇಕೆಂಬ ಇಚ್ಛಾ ಶಕ್ತಿ ಇಲ್ಲ.

(ಗೊಂದಲ)

ಅಧ್ಯಕ್ಷರು: close ಮಾಡಿ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಮಾನ್ಯ ಅಧ್ಯಕ್ಷರೆ, ಬೇರೆ ಹೊಸದಾಗಿ ಮೂರು ಕಾಲೇಜುಗಳು ಬಂದಿವೆ, ಅಖಂಡ ಕರ್ನಾಟಕದಲ್ಲಿ ಇವರು ಯಾವ್ಯಾವ ಭಾಗಕ್ಕೆ ಯಾವ ರೀತಿ ಮೂರು ಹೊಸ ಮೆಡಿಕಲ್ ಕಾಲೇಜುಗಳನ್ನು clearance ಆಗಿರುವಂಥದ್ದು. . .

ಅಧ್ಯಕ್ಷರು: ಹಾಗೆ ಹೇಳುವುದಕ್ಕೆ ಬರುವುದಿಲ್ಲ.

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ಇವರು ತಾರತಮ್ಯ ಮಾಡುತ್ತಿದ್ದಾರೆ.

ಅಧ್ಯಕ್ಷರು: ಕೇಳಿ ಇಲ್ಲಿ, ತಾರನೂ ಇಲ್ಲ, ತಮ್ಮನೂ ಇಲ್ಲ. ಪ್ರತಿಯೊಂದು ಜಿಲ್ಲೆಗೆ ಕೊಡುವುದಕ್ಕೆ ಅವರು ತೀರ್ಮಾನ ಮಾಡಿದ್ದಾರೆ.

ಡಾ|| C.N. ಅಶ್ವತ್ಥ್ ನಾರಾಯಣ: ಆ ರೀತಿ ಎಲ್ಲಾ ಕಡೆ ಆಸಕ್ತಿ ಇಟ್ಟು ಇವರು ಕೆಲಸ ಮಾಡುತ್ತಿಲ್ಲ. ಇವರು ತಾರತಮ್ಯ ಮಾಡುತ್ತಿದ್ದಾರೆ.

ಅಧ್ಯಕ್ಷರು: ತಾರನೂ ಇಲ್ಲ, ತಮ್ಮನೂ ಇಲ್ಲ. ಈಗ ಮುಂಚೆ ಹಾಗೆ ಇಲ್ಲ. ಒಂದು ಮೆಡಿಕಲ್ ಕಾಲೇಜು ಮಾಡಬೇಕಾದರೆ, ಜಮೀನು ಬೇಕು, infrastructure ಬೇಕು, ಹಾಸ್ಟೆಲ್ ಬೇಕು.

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಎರಡೇ ವರ್ಷದಲ್ಲಿ ನಾವು ಮೂರು ಹೊಸ ಮೆಡಿಕಲ್ ಕಾಲೇಜುಗಳನ್ನು sanction ಮಾಡಿ, ಪ್ರಾರಂಭವೂ ಮಾಡಿದ್ದೇವೆ. ಇತಿಹಾಸದಲ್ಲಿಯೇ ಆಗಿಲ್ಲ ಇದು. ಖಾಸಗಿಯವರೂ ಮಾಡುವುದಕ್ಕಾಗಲಿಲ್ಲ, ನಾವು ಸರ್ಕಾರದವರು ಮಾಡಿದ್ದೇವೆ. ನೀವು appreciate ಮಾಡುವುದು ಬಿಟ್ಟು,

ಡಾ|| ಸಿ.ಎನ್. ಅಶ್ವತ್ಥ್ ನಾರಾಯಣ: ನೀವು ಆ ರೀತಿ ಕ್ಲೇಮ್ ಮಾಡಿಕೊಳ್ಳುವುದಕ್ಕೆ ನಿಮ್ಮದೇನೂ ಇಲ್ಲ. ಇದು ಮೊದಲೇ ಪ್ರಯತ್ನ ನಡೆದಿರುವುದು.

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನೀವು ಪ್ರಯತ್ನ ಮಾಡಿದ್ದಿರಾ? ಸ್ವಲ್ಪ ಎದೆ ಮುಟ್ಟಿಕೊಂಡು ನೋಡಿ. ನೀವು ಏನೂ ಮಾಡಿರಲಿಲ್ಲ.

ಅಧ್ಯಕ್ಷರು: Please resume.

(ಗೊಂದಲ)

ಅಧ್ಯಕ್ಷರು: ರೀ, ಈಗ ನೀವುಗಳು ಕುಳಿತುಕೊಳ್ಳುತ್ತೀರೋ ಇಲ್ಲವೋ, ಸಾಕು ಬಿಡ್ರಿ. ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಸಭಾಧ್ಯಕ್ಷರೆ, ನಾನು ಐದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು: ಇಲ್ಲ, ಇಲ್ಲ, ಬೇಡ. ಈಗ ರಾತ್ರಿ 8.00 ಗಂಟೆಯಾಗಿದೆ. ದಯವಿಟ್ಟು ಸಹಕರಿಸಿ. ನಾನು ನಮಸ್ಕಾರ ಮಾಡುತ್ತೇನೆ. ಇನ್ನು ಒಂದು ಗಂಟೆಯಾಗುವಷ್ಟು ಬೇರೆ ಬೇರೆ ವಿಷಯಗಳಿವೆ.

ಶ್ರೀ ಎ. ಮಂಜು: ಮಾನ್ಯ ಅಧ್ಯಕ್ಷರೆ, ಈಗ ಶೂನ್ಯ ವೇಳೆ ತೆಗೆದುಕೊಳ್ಳಿ.

ಅಧ್ಯಕ್ಷರು: ಸ್ವಲ್ಪ ತಾಳ್ರಿ. ಅದನ್ನು ನಾಳೆ ತೆಗೆದುಕೊಳ್ಳೋಣ. ಒಂದು ವೇಳೆ ಟೈಂ ಇದ್ದರೆ ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ.

ಶ್ರೀ ಎ. ಮಂಜು: ಆಯಿತು ಅಧ್ಯಕ್ಷರೆ,

ಅಧ್ಯಕ್ಷರು: ಈಗ ನಿಯಮ 69 ರಡಿಯಲ್ಲಿ ಚರ್ಚೆ.

ಅಧ್ಯಕ್ಷರು: ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ, ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮತ್ತು ಇತರರು ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಗೆ ತಯಾರಿಸಲಾಗಿರುವ ನೂತನ ಟೆಂಡರ್ ಅಂದಾಜು

ಪಟ್ಟಿಯಲ್ಲಿನ ಅಕ್ರಮದ ಬಗ್ಗೆ ನಿಯಮ 69ರ ಅಡಿಯಲ್ಲಿ ಪ್ರಸ್ತಾಪಿಸಬೇಕು. ಘನತ್ಯಾಜ್ಯದ ಬಗ್ಗೆ ಯಾರು ಮಾತನಾಡುತ್ತೀರಿ? ಅದರ ಬಗ್ಗೆ ಎರಡು ಮಾತು ಹೇಳಿ. ಈ ಬಗ್ಗೆ ನಾನೇನು ಹೇಳುತ್ತೇನೆ ಎಂದರೆ ನೀವು ನಿಜವಾಗಿಯೂ ಬೆಂಗಳೂರಿನ ಕಸದ ವ್ಯವಸ್ಥೆಯನ್ನು ಸರಿಪಡಿಸಬೇಕು ಎಂಬುದಾದರೆ ದಯವಿಟ್ಟು ಒಂದರಿಂದ ಎರಡು ಗಂಟೆ ಸಮಯವಾದರೂ ಚಿಂತೆಯಿಲ್ಲ. ಸಮಗ್ರವಾಗಿ ಚರ್ಚೆ ಮಾಡಿ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡಿ. ಅದನ್ನು ಬಿಟ್ಟು ಹರಕು ಮುರುಕು ತರಲೆ ಚರ್ಚೆ ಮಾಡಿದರೆ ಅದಕ್ಕೆ ಪರಿಹಾರವೂ ಸಿಗುವುದಿಲ್ಲ, ಏನೂ ಆಗುವುದಿಲ್ಲ.

10. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ: ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಗೆ ತಯಾರಿಸಲಾಗಿರುವ ನೂತನ ಟೆಂಡರ್ ಅಂದಾಜು ಪಟ್ಟಿಯಲ್ಲಿನ ಕ್ರಮದ ಬಗ್ಗೆ.

ಶ್ರೀ ಬಿ.ಎನ್. ವಿಜಯಕುಮಾರ್ (ಜಯನಗರ): ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ನಮ್ಮ revenue ಸಾಧಾರಣ 2500 ಸಾವಿರ ಕೋಟಿ ರೂ.ಗಳಿಗಿಂತ ಜಾಸ್ತಿ ದಾಟಿಲ್ಲ. ಆದರೆ ಘನತ್ಯಾಜ್ಯ ನಿರ್ವಹಣೆಯೊಂದಕ್ಕೇ 1300 ಕೋಟಿ ರೂ.ಗಳ ಬಜೆಟ್‌ನ್ನು ಮಾಡಿ ಟೆಂಡರ್‌ನ್ನು ಕರೆದಿದ್ದಾರೆ. ನಮಗೆ ಬೆಂಗಳೂರಿನ 198 ವಾರ್ಡ್‌ಗಳಲ್ಲಿ ಯಾವ ರೀತಿಯಲ್ಲಿ ನಿರ್ವಹಣೆಯಾಗುತ್ತಿದೆಯೆನ್ನುವುದು ಗೊತ್ತು. ಹೊರಗಡೆ ಜಾಸ್ತಿ ಪ್ರಮಾಣದಲ್ಲಿ ಮಷಿನರಿಯೂ ಬೇಕು, ಜನಗಳು ಬೇಕು ಎನ್ನುವುದು ಗೊತ್ತು. ಇದೊಂದು ಮೂರ್ನಾಲ್ಕು ಅಂಶಗಳನ್ನು ನಿಮ್ಮ ಗಮನಕ್ಕೆ ತರುತ್ತೇವೆ. ಮೊದಲನೆಯದಾಗಿ ಬೆಂಗಳೂರು ಮಹಾನಗರ ಪಾಲಿಕೆ 125 ಲಕ್ಷ ಜನಗಳಿಗೆ ಬೇಕಾಗಿರುವಂಥ 1855 ಕೋಟಿ ರೂ.ಗಳ ಒಂದು ಅಂದಾಜನ್ನು ಮಾಡಿದ್ದಾರೆ.